ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಭಾನುವಾರ, 26 ಏಪ್ರಿಲ್ 2026
ಸಂಪುಟ 16, ಸಂಚಿಕೆ 32, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital



ದಿಲ್ಲಿಯಲ್ಲಿ ಕೆ.ಎಲ್. ರಾಹುಲ್ ದರ್ಬಾರ್

ಐಪಿಎಲ್ ಇತಿಹಾಸದಲ್ಲಿ ಎಂದೂ ಮರೆಯಲಾಗದ ದಾಖಲೆಗಳನ್ನು ಕನ್ನಡಿಗ ಕೆ.ಎಲ್. ರಾಹುಲ್ ಮಾಡಿದರು. ಪಂಜಾಬ್ ಕಿಂಗ್ಸ್ ಹಾಗೂ ದಿಲ್ಲಿ ಕ್ಯಾಪಿಟಲ್ಸ್ ನಡುವೆ ನಡೆದ ಪಂದ್ಯದಲ್ಲಿ ದಿಲ್ಲಿ ಮೊದಲು ಬ್ಯಾಟಿಂಗ್ ಮಾಡಿತು. ಅಲ್ಲಿ ಆರಂಭಿಕ ರಾಹುಲ್ 67 ಬಾಲ್‌ಗಳಲ್ಲಿ 152* ರನ್ ಗಳಿಸಿದರು. ಈ ಇನ್ನಿಂಗ್ಸ್‌ನಲ್ಲಿ 16 ಬೌಂಡರಿ 9 ಸಿಕ್ಸರ್ ಸೇರಿವೆ.

|೧೦

ನೂತನ ಪಕ್ಷ ಸ್ಥಾಪಿಸಿದ ಕೆಸಿಆರ್ ಪುತ್ರಿ ಕೆ.ಕವಿತಾ

|೦೭



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಮಘೆ

ದಿನದ ಮಾತು

ಸತ್ಯವು ಮನುಷ್ಯನ ಘನತೆ, ಗೌರವವನ್ನು ಹೆಚ್ಚಿಸುತ್ತದೆ.
▲ಮಹಾವೀರ

ಕನ್ನಡಾಂಬೆಯ ರಾಗ ರಾ.ಗಣೇಶ್

ವಕ್ರದೃಷ್ಟಿ
◆ಎನ್.ರಾಮನಾಥ್

◆ಪುಟ ೬

ಕಿರುಸುದ್ದಿ

ಇಸ್ರೇಲ್ ದಾಳಿ: 15 ಹೆಜ್ಬೊಲ್ಲಾಗಳ ಹತ್ಯೆ

◆**ಲೆಬನಾನ್:** ಇಸ್ರೇಲ್–ಲೆಬನಾನ್ ಕದನ ವಿರಾಮವನ್ನು 3 ವಾರಗಳ ಕಾಲ ವಿಸ್ತರಣೆ ಮಾಡಿರುವ ಹೊರತಾಗಿಯೂ, ದಕ್ಷಿಣ ಲೆಬನಾನ್‌ನಲ್ಲಿ ಶುಕ್ರವಾರ ಮತ್ತು ಶನಿವಾರಗಳ ನಡುವೆ 15 ಹೆಜ್ಬೊಲ್ಲಾ ಬಂಡುಕೋರರನ್ನು ಇಸ್ರೇಲ್ ರಕ್ಷಣಾ ಪಡೆಗಳು ಹತ್ಯೆಗೈದಿವೆ. ಸಾಮಾಜಿಕ ಮಾಧ್ಯಮದಲ್ಲಿ ನೀಡಿದ ಹೇಳಿಕೆಯಲ್ಲಿ, ದಕ್ಷಿಣ ಲೆಬನಾನ್‌ನಲ್ಲಿ ಶಸ್ತ್ರಾಸ್ತ್ರಗಳೊಂದಿಗೆ ವ್ಯಾನ್‌ನಲ್ಲಿ ಪ್ರಯಾಣಿಸುತ್ತಿದ್ದ 3 ಹೆಜ್ಬೊಲ್ಲಾ ಸದಸ್ಯರನ್ನು ಹೊಡೆದುರುಳಿಸಿದ್ದೇವೆ ಎಂದು ಐಡಿಎಫ್ ಹೇಳಿದೆ. ➡ಪುಟ ೪

ದಾವೂದ್‌ನ ಶಂಕಿತ ಸಹಚರ ಸಲೀಮ್ ಸೆರೆ

◆ಪುಟ ೭

ನೀತಿ ಆಯೋಗವನ್ನು ಪುನರ್ ರಚಿಸಿದ ಸರ್ಕಾರ

◆ಪುಟ ೭

ನುಸುಳುಕೋರರಿಂದ ಜನಸಂಖ್ಯೆ ಹೆಚ್ಚಳ: ಬಿಸ್ವಾ

◆ಪುಟ ೭

ನನ್ನ ಪುಸ್ತಕದ ಅಂತಿಮ ಪ್ರತಿ ನನಗೆ ದೊರಕಿಲ್ಲ

◆ಪುಟ ೭

47 ನಕ್ಸಲರ ಶರಣಾಗತಿ

◆ಪುಟ ೭

ಪಾಲಿಕೆ ಚುನಾವಣೆ ನಡೆಸಲು ಹಣವಿಲ್ಲ: ಸುಪ್ರೀಂಗೆ ಅರ್ಜಿ

◆ಪುಟ ೫

ಬೀಡುಬಿಟ್ಟಿದ್ದ ಆನೆಗಳನ್ನು ಕಾಡಿಗಟ್ಟಿದ ಅರಣ್ಯ ಇಲಾಖೆ

◆ಪುಟ ೫



ದೇಗುಲಗಳು ಸರ್ಕಾರದ ಸುಪರ್ದಿಗೆ: ಸುಪ್ರೀಂ ನಿಲುವೇನು?

◆ಪುಟ ೭

ಸುದ್ದಿ ಸಮಗ್ರ

ವರ್ಷಾರಂಭಕ್ಕೆ ಮೊದಲ ಮಾದರಿ ಬೋಗಿ: ಅಶ್ವಿನಿ ವೈಷ್ಣವ್

ಬುಲೆಟ್ ಬೋಗಿಗಳ ಉತ್ಪಾದನೆಗೆ ಚಾಲನೆ

ಬೆಂಗಳೂರಿನ ಬಿಇಎಂಎಲ್‌ನಲ್ಲಿ ಆದಿತ್ಯ ಹೈಸ್ಪೀಡ್ ಬುಲೆಟ್ ರೈಲು ಬಿ28 ಬೋಗಿ ಉತ್ಪಾದನಾ ಕೇಂದ್ರ ಉದ್ಘಾಟನೆ





◆**ಬೆಂಗಳೂರು:** ಇಂಟಿಗ್ರಲ್ ಕೋಚ್ ಫ್ಯಾಕ್ಟರಿ (ಐಸಿಎಫ್) ಮತ್ತು ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ಸಹಯೋಗದಲ್ಲಿ ಬುಲೆಟ್ ರೈಲು ಬಿ28 ಬೋಗಿಗಳನ್ನು ವಿನ್ಯಾಸಗೊಳಿಸಲಾಗುತ್ತಿದ್ದು, ಇದು ಆತ್ಮನಿರ್ಭರ ಭಾರತದ ಸ್ವದೇಶಿ ಬುಲೆಟ್ ರೈಲು ಆಗಿರಲಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಬೆಂಗಳೂರಿನ ಬಿಇಎಂಎಲ್‌ನಲ್ಲಿ ನಿರ್ಮಿಸಲಾಗಿರುವ ಆದಿತ್ಯ ಹೈಸ್ಪೀಡ್ ಬುಲೆಟ್ ರೈಲು ಬಿ28 ಬೋಗಿ ಉತ್ಪಾದನಾ ಕೇಂದ್ರ ಉದ್ಘಾಟಿಸಿದ ಅವರು, ಬಿಇಎಂಎಲ್‌ನ ಆದಿತ್ಯ ಘಟಕದಲ್ಲಿ ಬುಲೆಟ್ ರೈಲು ಬಿ28 ಬೋಗಿಗಳ ಉತ್ಪಾದನೆ ನಡೆಯಲಿದೆ. ಮುಂದಿನ ವರ್ಷದ ಆರಂಭದಲ್ಲಿ ಮೊದಲ ಮಾದರಿ (ಪ್ರೊಟೊಟೈಪ್) ನಿರೀಕ್ಷಿಸಲಾಗಿದ್ದು, 2027ರ ಅಂತ್ಯಕ್ಕೆ ಸಂಪೂರ್ಣವಾಗಿ ಸಿದ್ಧಗೊಳ್ಳಲಿದೆ ಎಂದರು.

ಹೈಸ್ಪೀಡ್ ರೈಲುಗಳು ದೊಡ್ಡ ಪರಿವರ್ತನೆ ತರಲಿದ್ದು, ಈಗಾಗಲೇ ಘೋಷಣೆಯಾಗಿರುವ ಬೆಂಗಳೂರು–ಚೆನ್ನೈ ರೈಲು ಪ್ರಯಾಣದ ಸಮಯ ಕೇವಲ 73 ನಿಮಿಷವಾಗಿರಲಿದೆ. ಇದು ಎರಡು ನಗರಗಳ ನಡುವಿನ ಸಂಪರ್ಕದ ಜಾಲವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಇದರ ಜೊತೆಗೆ ಬೆಂಗಳೂರು–ಮುಂಬೈ ಮಾರ್ಗದಲ್ಲಿ ಎರಡು ಸೂಪರ್ ಫಾಸ್ಟ್ ರೈಲುಗಳ ಕಾರ್ಯಾರಂಭ ಪ್ರಗತಿಯಲ್ಲಿದೆ. ಒಂದು ಹುಬ್ಬಳ್ಳಿ–ಧಾರವಾಡ ಮಾರ್ಗವಾಗಿ ಸಂಚರಿಸಲಿದ್ದು, ಇದು ಸೂಪರ್ ಫಾಸ್ಟ್ ಸೇವೆಯಾಗಿರಲಿದೆ. ಮತ್ತೊಂದು ವಂದೇ ಭಾರತ್ ಸ್ಲೀಪರ್ ರೈಲು ಸಂಚಾರ ಆರಂಭಿಸಲು ಸಹ ಕ್ರಮ ಕೈಗೊಳ್ಳಲಾಗಿದೆ ಎಂದು ವಿವರಿಸಿದರು. ➡ಪುಟ ೪

ಬೆಂಗಳೂರು–ಮಂಗಳೂರು ವಂದೇ ಭಾರತ್ ಶೀಘ್ರ

ಬೆಂಗಳೂರಿನಿಂದ ಮಂಗಳೂರು ಮಾರ್ಗವಾಗಿ ಮಡಗಾಂವ್‌ವರೆಗೆ ರೈಲು ಸೇವೆಯನ್ನು ಯೋಜಿಸಲಾಗಿದೆ. ಪ್ರಸ್ತುತ ಹಾಸನ–ಮಂಗಳೂರು ರೈಲ್ವೆ ಮಾರ್ಗದ ವಿದ್ಯುದ್ದೀಕರಣ ಪ್ರಕ್ರಿಯೆ ನಡೆಯುತ್ತಿದ್ದು, ಅತಿ ಶೀಘ್ರದಲ್ಲಿ ವಂದೇ ಭಾರತ್ ರೈಲು ಸಂಚರಿಸಲಿದೆ. ಈ ಮೂಲಕ ಕರಾವಳಿ ಪ್ರದೇಶಕ್ಕೆ ವಂದೇ ಭಾರತ್ ರೈಲು ಸೇವೆ ಲಭಿಸಲಿದೆ ಎಂದು ಅಶ್ವಿನಿ ವೈಷ್ಣವ್ ಹೇಳಿದರು. ಪ್ರಸ್ತುತ ಸೇವೆಯಲ್ಲಿರುವ ವಂದೇ ಭಾರತ ಸ್ಲೀಪರ್ ರೈಲಿನ ಕುರಿತು ಪ್ರತಿಕ್ರಿಯಿಸಿದ ಸಚಿವರು, ಗುವಾಹಟಿ–ಕೊಲ್ಕತಾ ನಡುವೆ ಸಂಚರಿಸುತ್ತಿರುವ ವಂದೇ ಭಾರತ್ ಸ್ಲೀಪರ್ ರೈಲಿಗೆ ಪ್ರತಿದಿನ ಶೇ.80–90 ಅತ್ಯುತ್ತಮ ಪ್ರತಿಕ್ರಿಯೆ ಪ್ರಯಾಣಿಕರಿಂದ ವ್ಯಕ್ತವಾಗುತ್ತಿದೆ ಎಂದು ಕೇಂದ್ರ ಸಚಿವರು ತಿಳಿಸಿದರು.

> ಬೆಂಗಳೂರು ಉಪನಗರ ರೈಲು ಯೋಜನೆಯ ಕೆಲಸಗಳು ಸಹ ಪ್ರಗತಿಯಲ್ಲಿವೆ. ರಾಜ್ಯ ಸರ್ಕಾರದಿಂದ ಯೋಜನೆಗೆ ಸಂಬಂಧಿಸಿದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಉತ್ತಮ ಪ್ರಗತಿ ಕಂಡುಬಂದಿದೆ. ಪ್ರಧಾನಿ ಮೋದಿಯವರು ಈ ಯೋಜನೆಯ ಪ್ರಗತಿ ಪರಿಶೀಲಿಸಿ, ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.
> ■ **ಅಶ್ವಿನಿ ವೈಷ್ಣವ್,** ಕೇಂದ್ರ ಸಚಿವ

ಸರ್ಕಾರದ ನಿರ್ಧಾರಕ್ಕೆ ಬಿಜೆಪಿ ಟೀಕೆ

ಒಳಮೀಸಲು: ಜಗಳ ಹಚ್ಚುವ ತೀರ್ಮಾನ



◆**ಬೆಂಗಳೂರು:** ಒಳಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೈಗೊಂಡಿರುವ ನಿರ್ಧಾರವನ್ನು ವಿಪಕ್ಷ ಬಿಜೆಪಿ ಟೀಕಿಸಿದ್ದು, ಸರ್ಕಾರದ ಈ ತೀರ್ಮಾನ ಒಳಜಾತಿಗಳ ನಡುವೆಯೇ ಜಗಳ ಹಚ್ಚುವ ತೀರ್ಮಾನವಾಗಿದೆ ಎಂದು ಹರಿಹಾಯ್ದಿದೆ. ನ್ಯಾ. ನಾಗಮೋಹನ್ ದಾಸ್ ಹಾಗೂ ಮುಖ್ಯ ಕಾರ್ಯದರ್ಶಿ ನೀಡಿರುವ ವರದಿ ಅವೈಜ್ಞಾನಿಕ ಎಂದು ಒಪ್ಪಿಕೊಂಡಿದ್ದೀರಾ ಎಂದು ಬಿಜೆಪಿ ಮುಖಂಡರು ಪ್ರಶ್ನಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ನಾಯಕರು ಸರ್ಕಾರದ ತೀರ್ಮಾನವನ್ನು ಟೀಕಿಸಿದ್ದಾರೆ. ಸಿದ್ದರಾಮಯ್ಯ ಅವರೇ ನೀವೇ ನೇಮಿಸಿದ ನ್ಯಾ.ನಾಗಮೋಹನ್‌ದಾಸ್ ಅವರ ವರದಿ ಅವೈಜ್ಞಾನಿಕ ಎಂಬ ಕಾರಣಕ್ಕೆ ತಿರಸ್ಕರಿಸಿದ್ದೀರಾ ಎಂದು ಪ್ರಶ್ನಿಸಿರುವ ಸಂಸದ ಗೋವಿಂದ ಕಾರಜೋಳ ಅವರು, ನೀವೇ ರಚಿಸಿದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ವರದಿ ವೈಜ್ಞಾನಿಕ ಎಂದು ಒಪ್ಪಿಕೊಂಡಿದ್ದೀರಾ ಎಂದು ಸ್ಪಷ್ಟಪಡಿಸಲು ಒತ್ತಾಯಿಸಿದರು.



ನ್ಯಾ. ನಾಗಮೋಹನ್‌ದಾಸ್ ಅವರ ವರದಿಯಲ್ಲಿ ಶೇ.17 ಎಂದಿದ್ದರೂ ಶೇ.15ಕ್ಕೆ ಸೀಮಿತ ಮಾಡಿ ಕೊಡಬಹುದಾಗಿತ್ತು. ಯಾಕೆ ಕೊಟ್ಟಿಲ್ಲ? ಶುಕ್ರವಾರ ಬೆಟ್ಟ ಅಗೆದು ಇಲಿ ಹುಡುಕಿದಂತೆ ಸಿದ್ದರಾಮಯ್ಯ ಅವರು ಒಳಮೀಸಲಾತಿಯನ್ನು ಜಾರಿ ನಿರ್ಧಾರ ಪ್ರಕಟಿಸಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡಿದ್ದಾರೆ ಎಂದು ಟೀಕಿಸಿದರು.

ಸಾವಿರಾರು ಕೋಟಿ ಖರ್ಚು ಮಾಡಿ ವರದಿ ಈ ವರದಿಯನ್ನು ತಯಾರಿಸಿದ್ದೀರಿ. ಕಾಂತರಾಜ್ ವರದಿ, ಜಯಪ್ರಕಾಶ್ ಹೆಗ್ಡೆ ಅವರ ವರದಿ ಮೂಲೆಗುಂಪಾಗಿದೆ. ಮಧುಸೂದನ ನಾಯಕ್ ವರದಿ ಹೊರಗೆ ಬರಲೇ ಇಲ್ಲ ಎಂದು ಆಕ್ಷೇಪಿಸಿದರು. ಎಸ್‌ಸಿ ಉಪ ಜಾತಿಗಳಲ್ಲಿ ಹೊಡೆದಾಟ ಹಚ್ಚುವುದು, ಕೋರ್ಟಿನಲ್ಲಿ ಬಿದ್ದು ಹೋಗಬೇಕೆಂಬ ಉದ್ದೇಶ ನಿಮ್ಮದು. ನಾನು ಮಾಡಿದ್ದೆ; ಕೋರ್ಟಿನಲ್ಲಿ ನಿಲ್ಲಲಿಲ್ಲ ಮುನಿಯಪ್ಪ; ಮಹದೇವಪ್ಪ ಎನ್ನುವುದು. ಇಂಥ ಮೋಸದಾಟವನ್ನು ಅವರು ಬಿಡಲಿ ಎಂದು ಒತ್ತಾಯಿಸಿದರು. ➡ಪುಟ ೪


> ಹಿಂದೆ ನಮ್ಮ ಸರ್ಕಾರವಿದ್ದಾಗ ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಿಸಿದ್ದೆವು. ಅಲ್ಲಿಂದ 4 ಶೈಕ್ಷಣಿಕ ವರ್ಷಗಳಲ್ಲಿ ಎಸ್‌ಸಿ, ಎಸ್‌ಟಿ ಮಕ್ಕಳಿಗೆ ಇಂಜಿನಿಯರಿಂಗ್, ಮೆಡಿಕಲ್ ಸೀಟುಗಳು ಹೆಚ್ಚುವರಿ ಮೀಸಲಾತಿ ಆಧಾರದಲ್ಲಿ ಲಭಿಸಿವೆ ಎಂದು ಗಮನಕ್ಕೆ ತಂದರು. ಉದ್ಯೋಗ ಮೀಸಲಾತಿಗೆ ಇದ್ದ ತಡೆಯಾಜ್ಞೆ ತೆರವಿಗೆ ನೀವೇನು ಪ್ರಯತ್ನ ಮಾಡಿದ್ದೀರಿ.
> ■ **ಎನ್. ಮಹೇಶ್,** ರಾಜ್ಯ ಉಪಾಧ್ಯಕ್ಷ

> ಒಳ ಮೀಸಲಾತಿಗೆ ಸಂಬಂಧಿಸಿದಂತೆ ಎಲ್ಲರನ್ನೂ ಬೀದಿಯಲ್ಲಿ ನಿಲ್ಲಿಸಿ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾಕೆಂಬ ರೀತಿಯ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ.
> ■ **ಛಲವಾದಿ ನಾರಾಯಣಸ್ವಾಮಿ,** ಪರಿಷತ್ ಪ್ರತಿಪಕ್ಷ ನಾಯಕ

ದ್ವಿಪಕ್ಷೀಯ ಸಂಬಂಧ, ಶಾಂತಿ ಸಭೆ ಅನಿಶ್ಚಿತತೆ ಕುರಿತು ಸಭೆ

ಅರಾಘ್ಚಿ–ಷರೀಫ್ ಶಾಂತಿಗಾಗಿ ಚರ್ಚೆ

◆**ಇಸ್ಲಾಮಾಬಾದ್:** ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಶನಿವಾರ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ರನ್ನು ಭೇಟಿಯಾಗಿ ಅಮೆರಿಕ ಜತೆಗಿನ ದ್ವಿತೀಯ ಸುತ್ತಿನ ಶಾಂತಿ ಮಾತುಕತೆ ಅನಿಶ್ಚಿತತೆ ಬಗ್ಗೆ ಚರ್ಚೆ ನಡೆಸಿದ್ದಾರೆ. ಈ ಸಭೆಯಲ್ಲಿ ಪಾಕ್ ಉಪಪ್ರಧಾನಿ ಇಶಾಕ್ ದಾರ್ ಮತ್ತು ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ಸಹ ಇದ್ದರು.



ಪಾಕ್ ಪ್ರಧಾನಿ ಭೇಟಿಗೂ ಮುನ್ನ ಆಸಿಮ್ ಮುನೀರ್ ಮತ್ತು ಇಶಾಕ್ ದಾರ್ ಅವರನ್ನು ಅರಾಘ್ಚಿ ಭೇಟಿಯಾಗಿದ್ದರು. ಸಭೆಯಲ್ಲಿ ಇರಾನ್–ಪಾಕ್ ನಡುವಿನ ದ್ವಿಪಕ್ಷೀಯ ಸಂಬಂಧ ಹಾಗೂ ಮಧ್ಯಪ್ರಾಚ್ಯ ಪ್ರಾದೇಶಿಕ ಅಸ್ಥಿರತೆಯ ಕುರಿತು ಚರ್ಚೆ ನಡೆಸಲಾಗಿದೆ.

ಶಾಂತಿ ಸಭೆ ಕುರಿತು ಚರ್ಚೆ: ಅಮೆರಿಕದೊಂದಿಗಿನ ಶಾಂತಿ ಮಾತುಕತೆ ಕುರಿತಾಗಿ ಪಾಕ್ ಸೇನಾ ಮುಖ್ಯಸ್ಥ ಮುನೀರ್‌ರೊಂದಿಗೆ ಇರಾನ್ ವಿದೇಶಾಂಗ ಸಚಿವ ಅರಾಘ್ಚಿ ಚರ್ಚಿಸಿದ್ದಾರೆ. ➡ಪುಟ ೪

ಶಾಂತಿ ಮಾತುಕತೆ ಸದ್ಯಕ್ಕಿಲ್ಲ

ವಾಷಿಂಗ್ಟನ್ ಮತ್ತು ಟೆಹ್ರಾನ್ ನಡುವೆ ನೇರ ಮಾತುಕತೆ ಯಾವಾಗ ನಡೆಯಲಿದೆ ಎಂಬ ಬಗ್ಗೆ ಯಾವುದೇ ಸ್ಪಷ್ಟತೆಯಿಲ್ಲ. ಅಮೆರಿಕ ಮತ್ತು ಇರಾನ್ ನಡುವಿನ ಶಾಂತಿ ಮಾತುಕತೆ ಯೋಜನೆ ಇರಲಿಲ್ಲ ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘಾಯ್ ಹಮಾನೆ ಶನಿವಾರ ಸ್ಪಷ್ಟಪಡಿಸಿದ್ದಾರೆ. ಅಮೆರಿಕ ನಿಯೋಗವು ಪಾಕಿಸ್ತಾನಕ್ಕೆ ತೆರಳುತ್ತಿರುವ ಸಂದರ್ಭ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ನೇತೃತ್ವದ ಇರಾನ್ ನಿಯೋಗವು ಶನಿವಾರ ಇಸ್ಲಾಮಾಬಾದ್‌ನಿಂದ ಮಸ್ಕತ್‌ನತ್ತ ಪ್ರಯಾಣ ಬೆಳೆಸಿದ್ದು, ಅಮೆರಿಕ–ಇರಾನ್ ನಡುವಿನ ದ್ವಿತೀಯ ಸುತ್ತಿನ ಸಭೆ ಸದ್ಯಕ್ಕಿಲ್ಲ ಎಂಬುದು ಸ್ಪಷ್ಟವಾಗಿದೆ. ಅರಾಘ್ಚಿ ಪಾಕ್ ಭೇಟಿಗೂ ಮುನ್ನ ಮಸ್ಕತ್ ಮತ್ತು ಮಾಸ್ಕೋ ಭೇಟಿ ನೀಡುವುದಾಗಿ ಈ ಮೊದಲೇ ತಿಳಿಸಿದ್ದರು.

ಸ್ಥಳೀಯ ಸಂಸ್ಥೆ ಚುನಾವಣೆಗೆ ಅನ್ವಯ | ಚು.ಆಯೋಗ ಆದೇಶ

ಪ್ರಮಾಣಪತ್ರ ಸಲ್ಲಿಕೆ ಅಭ್ಯರ್ಥಿಗೆ ಕಡ್ಡಾಯ

▸ಅರವಿಂದ ಬಿರಾದಾರ

◆**ಬೆಂಗಳೂರು:** ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇನ್ನು ಮುಂದೆ ನಾಮಪತ್ರ ಜತೆಗೆ ಪ್ರಮಾಣಪತ್ರ ಸಲ್ಲಿಸುವುದನ್ನು ಕಡ್ಡಾಯಗೊಳಿಸಿದ್ದು, ಪ್ರಮುಖವಾಗಿ ಪ್ರಮಾಣಪತ್ರವು ಪ್ರಥಮ ದರ್ಜೆ ನ್ಯಾಯಾಧೀಶರು, ನೋಟರಿ, ಉಪ ವಿಭಾಗಾಧಿಕಾರಿ ಹಾಗೂ ತಹಸೀಲ್ದಾರ್ ಅವರ ಸಹಿ ಹಾಗೂ ಮೊಹರುಗಳನ್ನು ಒಳಗೊಂಡಿರಬೇಕು ಎಂದು ಆದೇಶಿಸಿದೆ. ರಾಜ್ಯ ಚುನಾವಣಾ ಆಯೋಗ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಪಟ್ಟಂತೆ ಅಭ್ಯರ್ಥಿಗಳು ಸಲ್ಲಿಸುವ ಪ್ರಮಾಣಪತ್ರದಲ್ಲಿ ಕೆಲವು ಆಮೂಲಾಗ್ರ ಬದಲಾವಣೆ ಹಾಗೂ ಕೆಲವು ಅಂಶಗಳನ್ನು ಸೇರ್ಪಡೆ ಮಾಡಿ ಆದೇಶಿಸಿದೆ. ಯಾವುದೇ ಶಾಸನಬದ್ಧ ಪ್ರಾಧಿಕಾರ/ ಸ್ಥಳೀಯ ಪ್ರಾಧಿಕಾರವು ಹೊರಡಿಸಿದ ಯಾವುದೇ ಆದೇಶದ ಅಡಿಯಲ್ಲಿ ನಾನು ಅನರ್ಹಗೊಂಡಿಲ್ಲ ಅಥವಾ ಅನರ್ಹಗೊಂಡಿದ್ದು ಅನರ್ಹತಾ ಅವಧಿಯೂ ಪೂರ್ಣಗೊಂಡಿರುತ್ತದೆ ಎನ್ನುವ ಅಂಶಗಳನ್ನು ಪ್ರಮಾಣ ಪತ್ರದಲ್ಲಿ ಸಲ್ಲಿಸಲು ಸೂಚಿಸಿದೆ. ➡ಪುಟ ೪

ದಿಗಂತ ವಿಶೇಷ

ವಿವರಗಳು ಈ ಕೆಳಕಂಡಂತಿವೆ

ಅ) ಯಾವ ಕಾಯ್ದೆಯ ಪ್ರಕರಣದ ಅಡಿಯಲ್ಲಿ ಅನರ್ಹಗೊಳಿಸಲಾಗಿತ್ತು, ಪ್ರಕರಣದ ದಾಖಲಾತಿ, ಅನರ್ಹತೆ ವಿವರ,
ಆ) ಅನರ್ಹಗೊಳಿಸಲಾದ ಪ್ರಾಧಿಕಾರದ ವಿವರ
ಇ) ಪ್ರಕರಣ ಸಂಖ್ಯೆ



ಈ) ಹೊರಡಿಸಿದ ಅನರ್ಹತೆ ಆದೇಶದ ದಿನಾಂಕ

ಈ ಮೇಲಿನ ನಾಲ್ಕು ಪ್ರಮುಖ ಅಂಶಗಳನ್ನು ಪ್ರಮಾಣಪತ್ರದಲ್ಲಿ ಸೇರ್ಪಡೆ ಮಾಡಿ ಆದೇಶಿಸಿದೆ.

ಅಲ್ಲದೇ, ಅಭ್ಯರ್ಥಿಯು ನಾನು ಯಾವುದೇ ಶಾಸನಬದ್ಧ ಪ್ರಾಧಿಕಾರ/ ಸ್ಥಳೀಯ ಪ್ರಾಧಿಕಾರ ಹೊರಡಿಸಿರುವ ಆದೇಶದ ಅಡಿಯಲ್ಲಿ ಅನರ್ಹಗೊಂಡಿಲ್ಲ ಅಥವಾ ಯಾವುದೇ ಅನರ್ಹತೆಯ ಆದೇಶವನ್ನು ಅನುಭವಿಸಿಲ್ಲ ಎಂಬುದನ್ನು ನಮೂದಿಸಬೇಕಾಗಿದೆ.

ಹರಿದ ಪ್ಯಾಂಟ್‌ನ ಕೇಜ್ರಿ 100 ಕೋಟಿ ಒಡೆಯ!

ಟೀಕಾ ಪ್ರಹಾರಗೈದ ಸ್ವಾತಿ ಮಲಿವಾಲ್

◆**ಹೊಸದಿಲ್ಲಿ:** ಒಂದು ಕಾಲದಲ್ಲಿ ಹರಿದ ಪ್ಯಾಂಟ್ ಧರಿಸುತ್ತಿದ್ದ ಮಾಜಿ ಸಿಎಂ ಅರವಿಂದ ಕೇಜ್ರಿವಾಲ್, ಮುಖ್ಯಮಂತ್ರಿಯಾದ ನಂತರ 100 ಕೋಟಿ ರೂ. ಮೌಲ್ಯದ ಶೀಶ್‌ಮಹಲ್ ಕಟ್ಟಿದರು ಎಂದು ಶುಕ್ರವಾರ ಆಪ್‌ನ ಇತರ ಆರು ಸಂಸದರೊಂದಿಗೆ ಬಿಜೆಪಿ ಸೇರಿರುವ ಆಪ್‌ನ ಮಾಜಿ ಸಂಸದೆ ಸ್ವಾತಿ ಮಲಿವಾಲ್ ಆರೋಪಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ಗುಣಗಾನ ಮಾಡಿರುವ ಸಂಸದೆ, ತಾನು ಸ್ವಯಂಪ್ರೇರಣೆಯಿಂದ ಬಿಜೆಪಿ ಸೇರಲು ನಿರ್ಧರಿಸಿದೆ. ರಚನಾತ್ಮಕ ರಾಜನೀತಿ ಬಯಸುವ ಪ್ರತಿಯೊಬ್ಬರಿಗೂ ಬಿಜೆಪಿ ಸೂಕ್ತ ಪಕ್ಷವೆಂದು ಹೊಗಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ಪ್ರತಿ ನಿರ್ಧಾರವೂ ಚಾರಿತ್ರಿಕ. ➡ಪುಟ ೪



ಮಾನವರಹಿತ, ಟ್ಯಾಂಕ್ ನಿರೋಧಕ ಕ್ಷಿಪಣಿ | ಡಿಆರ್‌ಡಿಒ ಉತ್ಪನ್ನ

ಶಸ್ತ್ರಸಜ್ಜಿತ 2 ಟ್ಯಾಂಕ್ ಲೋಕಾರ್ಪಣೆ

◆**ಹೊಸದಿಲ್ಲಿ:** ಮಾನವರಹಿತ, ಟ್ಯಾಂಕ್ ನಿರೋಧಕ ಕ್ಷಿಪಣಿ ದಾಳಿ ಹಾಗೂ ನೆಲ–ಜಲ ಸಂಚಾರ ಸಾಮರ್ಥ್ಯದ ಎರಡು ಹೊಸ ಶಸ್ತ್ರಸಜ್ಜಿತ ಸೇನಾ ವಾಹನಗಳನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಅನಾವರಣಗೊಳಿಸಿದೆ. ಇವುಗಳು ಟ್ರ್ಯಾಕ್‌ಗಳು ಮತ್ತು ಚಕ್ರಗಳಿರುವ ಅತ್ಯಾಧುನಿಕ ಶಸ್ತ್ರಸಜ್ಜಿತ ಸೇನಾ ವಾಹನಗಳಾಗಿವೆ.

ಮಹಾರಾಷ್ಟ್ರದ ಅಹಿಲ್ಯಾನಗರ್‌ನಲ್ಲಿನ ಡಿಆರ್‌ಡಿಒ ಘಟಕದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಿಆರ್‌ಡಿಒ ವಾಹನ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗ ಅಭಿವೃದ್ಧಿಪಡಿಸಿದ ಎರಡು ಹೊಸ ಶಸ್ತ್ರಸಜ್ಜಿತ ಸೇನಾ ವಾಹನಗಳನ್ನು ರಕ್ಷಣಾ ಇಲಾಖೆ (ಸಂಶೋಧನೆ ಮತ್ತು ಅಭಿವೃದ್ಧಿ) ಕಾರ್ಯದರ್ಶಿ ಮತ್ತು ಡಿಆರ್‌ಡಿಒ ಅಧ್ಯಕ್ಷ ಡಾ.ಸಮೀರ್ ವಿ ಕಾಮತ್ ಅನಾವರಣಗೊಳಿಸಿದ್ದಾರೆ.

ಅತ್ಯಾಧುನಿಕ ಬಂದೂಕು, ಕ್ಷಿಪಣಿ ವ್ಯವಸ್ಥೆ: ಹೊಸ ಶಸ್ತ್ರಸಜ್ಜಿತ ಸೇನಾ ವಾಹನಗಳಲ್ಲಿ 30 ಎಂ.ಎಂ. ಮಾನವರಹಿತವಾಗಿ ಕಾರ್ಯಾಚರಿಸಬಲ್ಲ ಬಂದೂಕು ಮತ್ತು 7.62 ಎಂಎಂ ಪಿಕೆಟಿ ಬಂದೂಕು ಹೊಂದಿರಲಿದ್ದು, ಇದು ಟ್ಯಾಂಕ್ ನಿರೋಧಕ ಕ್ಷಿಪಣಿಗಳನ್ನು ಉಡಾವಣೆ ಮಾಡುವ ಸಾಮರ್ಥ್ಯ ಹೊಂದಿದೆ. ➡ಪುಟ ೪



ಅತ್ಯುನ್ನತ ಕಾರ್ಯಕ್ಷಮತೆ, ತಡೆರಹಿತ ಸಂಚಾರ!

ಅತ್ಯುನ್ನತ ಶಕ್ತಿ, ಕಾರ್ಯಕ್ಷಮತೆಯ ಎಂಜಿನ್ ಮತ್ತು ಸ್ವಯಂಚಾಲಿತ ಗಿಯರ್ ವ್ಯವಸ್ಥೆ ಜೊತೆಗೆ ಸಂಯೋಜಿಸಲ್ಪಟ್ಟಿರುವ ಸೇನಾ ವಾಹನವು ಹೆಚ್ಚಿನ ಶಕ್ತಿ–ತೂಕ ಅನುಪಾತ ಹೊಂದಿದೆ. ಅತಿ ವೇಗದ ಸಂಚಾರ ಸಾಮರ್ಥ್ಯ, ಅತಿ ಎತ್ತರದ ಭೂಪ್ರದೇಶಗಳಲ್ಲೂ, ಯಾವುದೇ ರೀತಿಯ ಅಡೆತಡೆಗಳನ್ನು ದಾಟಿ ಸಂಚರಿಸುವ ಸಾಮರ್ಥ್ಯವನ್ನು ಹೊಂದಿವೆ. ನೆಲ–ಜಲ ಎರಡರಲ್ಲೂ ಚಲಿಸುವ ಸಾಮರ್ಥ್ಯ, ಹೈಡ್ರೋ ಜೆಟ್‌ಗಳನ್ನು ಬಳಸುವುದರಿಂದ ನೀರಿನ ಅಡೆತಡೆಗಳ ಮಧ್ಯೆಯೂ ಸುಲಲಿತ ಸಂಚಾರ ಸಾಮರ್ಥ್ಯ ಹೊಂದಿವೆ.

ಕಿರುಸುದ್ದಿ

ಉತ್ತಮ ಸಾಧನೆ



◆**ಹುಬ್ಬಳ್ಳಿ:** ಶಿರಗುಪ್ಪಿ ಗ್ರಾಮದ ಪಂಡಿತ ನೆಹರು ಪ್ರೌಢ ಶಾಲೆಯ ವಿದ್ಯಾರ್ಥಿನಿ ಶಕುಂತಲಾ ಹಸಬಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 613 ಅಂಕ (ಶೇ. 98.08)ಪಡೆದು ಉತ್ತಮ ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿನಿ ಚಾಲಕ ವೃತ್ತಿ ನಿರ್ವಹಿಸುತ್ತಿರುವ ಚಂದ್ರಶೇಖರ ಅವರ ಪುತ್ರಿಯಾಗಿದ್ದು, ಕನ್ನಡ 125, ಸಮಾಜ ವಿಜ್ಞಾನ 100, ಹಿಂದಿ 100, ಇಂಗ್ಲಿಷ್ 96, ವಿಜ್ಞಾನ 97, ಗಣಿತ 95 ಅಂಕ ಪಡೆಯುವ ಮೂಲಕ ಒಟ್ಟು 613 ಅಂಕ ಪಡೆದಿದ್ದಾಳೆ.

ಶೇ.96.32ರಷ್ಟು ಫಲಿತಾಂಶ



◆**ಧಾರವಾಡ:** ಪ್ರಸಂಟೇಷನ್ ಪ್ರೌಢ ಶಾಲೆಯ ವಿದ್ಯಾರ್ಥಿನಿ ವೈಷ್ಣವಿ ವಿ. ಜೋಶಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.96.32ರಷ್ಟು ಅಂಕ ಗಳಿಸಿ ಸಾಧನೆ ಮಾಡಿದ್ದಾಳೆ.

ವೈಷ್ಣವಿ ವಿ. ಜೋಶಿ ಒಟ್ಟು 60.2 ಅಂಕಗಳನ್ನು ಪಡೆದಿದ್ದು, ಇಂಗ್ಲಿಷ್‌ನಲ್ಲಿ 123, ಕನ್ನಡದಲ್ಲಿ 100, ಹಿಂದಿಯಲ್ಲಿ 99, ಗಣಿತದಲ್ಲಿ 95, ವಿಜ್ಞಾನದಲ್ಲಿ 92 ಹಾಗೂ ಸಮಾಜವಿಜ್ಞಾನದಲ್ಲಿ 93 ಅಂಕವನ್ನು ಪಡೆದಿದ್ದಾಳೆ.

ಶೇ.98ರಷ್ಟು ಫಲಿತಾಂಶ



◆**ನವಲಗುಂದ:** ಮಾ.ಎ. ಬೋರ್ಡಿನ ಬಾಲಕಿಯರ ಪ್ರೌಢ ಶಾಲೆ ನವಲಗುಂದ ಶಾಲೆಯ 2025-26 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ಕ್ಕೆ 72 ವಿದ್ಯಾರ್ಥಿನಿಯರು ಹಾಜರಾಗಿದ್ದರು. ಅದರಲ್ಲಿ 71 ವಿದ್ಯಾರ್ಥಿನಿಯರು ಪಾಸಾಗಿದ್ದಾರೆ.

ಶಾಲೆಯ ಒಟ್ಟು ಫಲಿತಾಂಶ ಶೇ.98ರಷ್ಟಾಗಿದೆ. ಚಿನ್ನವ್ವ ಸಂಗಟಿ (95. 20%) ಪ್ರಥಮ, ವಿನುತಾ ತಳವಾರ (93.12%) ದ್ವಿತೀಯ, ರಕ್ಷಿತಾ ಸಾಳೊಂಕೆ (92.80%) ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಹಾಗೂ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

ಸಂಗೀತ ಸಂಜೆ ಇಂದು



◆**ಧಾರವಾಡ:** ಭಾರತೀಯ ಸಂಗೀತ ವಿದ್ಯಾಲಯದಿಂದ ಗಾಯನ-ವಾದನಗಳ ಆವಾನ್ ಬೈಠಕ್ ಸಂಗೀತ ಸಂಜೆ ಏ.26ರಂದು ಸಂಜೆ 5.30ಕ್ಕೆ ನಗರದ ಆಲೂರು ವೆಂಕಟರಾವ್ ಭವನದಲ್ಲಿ ಹಮ್ಮಿಕೊಂಡಿದೆ ಎಂದು ಗಾಯಕ ಶಫೀಖಾನ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಕಾರ್ಯಕ್ರಮಕ್ಕೆ ಸಂತೂರ ಹಾಗೂ ಸಿತಾರ ವಾದನಗಳ ಜುಗಲಬಂದಿಯೊಂದಿಗೆ ಚಾಲನೆ ದೊರೆಯಲಿದೆ. ಬಳಿಕ ಸುಮಾ ಹೆಗಡೆ ಸಂತೂರ ಮತ್ತು ಸೃಷ್ಟಿ ಸುರೇಶ ತಂತು ವಾದನ ಜರುಗಲಿದೆ. ಇವರಿಗೆ ಯುವ ತಬಲಾ ವಾದಕ ಹೇಮಂತ ಜೋಶಿ ತಬಲಾ ಸಾಥ್ ನೀಡಲಿದ್ದು, ನಂತರ ಗ್ವಾಲಿಯರ್ ಕಿರಾಣಾ ಹಾಗೂ ಜೈಪುರ-ಅತ್ರೌಲಿ ಘರಾಣೆಯ ವಿದೂಷಿ ಮುಂಬೈನ ಗೌರಿ ಪಠಾರೆ ಅವರ ಗಾನಸುಧೆ ಹರಿದು ಬರಲಿದೆ ಎಂದರು. ಶ್ರೀಧರ ಮಾಂಡ್ರೆ ತಬಲಾ ಮತ್ತು ಸತೀಶ ಭಟ್ಟ ಹೆಗ್ಗಾರ ಹಾರ್ಮೋನಿಯಂ ಸಾಥ್ ನೀಡಲಿದ್ದು, ಧಾರವಾಡದ ಪ್ರಶಾಂತ ಆಸ್ಪತ್ರೆ, ಕನ್ನಡ-ಸಂಸ್ಕೃತಿ ಇಲಾಖೆ ಹಾಗೂ ನ್ಯೂಯಾರ್ಕ್ ರವಿ ಮತ್ತು ಜಯಾ ಭೂಪಲಾಪುರ ಫೌಂಡೇಶನ್ ಕೈಜೋಡಿಸಿವೆ ಎಂದರು. ಸುದ್ದಿಗೋಷ್ಠಿಯಲ್ಲಿ ದೀಪಕ ಪಾಟೀಲ್, ಪ್ರವೀಣ ಹೂಗಾರ ಇದ್ದರು.

ಪದಗ್ರಹಣ ಸಮಾರಂಭ



◆**ಧಾರವಾಡ:** ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಸ್ಕೃತಿ-ಸಾಹಿತ್ಯ ಪರಿಷತ್ ರಾಜ್ಯ ಘಟಕ ಮತ್ತು ಜಿಲ್ಲಾ ಘಟಕದ ಪದಾಧಿಕಾರಿಗಳ ಪದಗ್ರಹಣ, ಕಾಯಕರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಏ.26ರ ಬೆಳಗ್ಗೆ 9.30ಕ್ಕೆ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಹಮ್ಮಿಕೊಳ್ಳಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಂಘಟನೆ ರಾಜ್ಯಾಧ್ಯಕ್ಷೆ ರಮಾ ಆರ್., ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರು ಉದ್ಘಾಟನೆ ಮಾಡಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಮಾಜಿ ಸಂಸದ ಪ್ರೊ. ಐ.ಜಿ.ಸನದಿ, ಅಖಿಲ ಭಾರತ ಶಿಕ್ಷಕರ ಫೆಡರೇಶನ್ ಅಧ್ಯಕ್ಷ ಬಸವರಾಜ ಗುರಿಕಾರ, ಜಿಪಂ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಎನ್.ವೈ.ಬಸರಿಗಿಡದ ಮತ್ತು ವಿನಯಕುಮಾರ ಸಿ ಪಾಲ್ಗೊಳ್ಳಲಿದ್ದಾರೆ. ತಹಶೀಲ್ದಾರ್ ಎಸ್.ಎ.ಪ್ರಸಾದ, ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ, ಜಿಲ್ಲಾಧ್ಯಕ್ಷ ಎಸ್.ಎಫ್. ಸಿದ್ದನಗೌಡರ, ಕವಿಸಂ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಮಹಿಳಾ ನೌಕರರ ಸಂಘದ ರಾಜ್ಯಾಧ್ಯಕ್ಷೆ ಲತಾ ಬಿರಾದಾರ ಪಾಲ್ಗೊಳ್ಳುವುದಾಗಿ ತಿಳಿಸಿದರು. ಡಾ.ಭಾರತಿ ಗಾಣಿಗೇರ, ಬಿಇಒ ಕೆ.ಸಿ.ಸರೇಶ, ಕಲಾವಿದ ಡಾ.ರಾಮು ಮೂಲಗಿ, ಅನುಪಾ ಹಿರೇಮಠ ಭಾಗವಹಿಸಲಿದ್ದು, ವಿವಿಧ ಕ್ಷೇತ್ರಗಳ 30 ಜಿಲ್ಲೆಯ ಸಾಧಕ ಗಣ್ಯರು ಮತ್ತು ಸಂಸ್ಥೆಗಳಿಗೆ ಕಾಯಕರತ್ನ ಪ್ರಶಸ್ತಿ ನೀಡಿ ಗೌರವಿಸಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪರ್ವಿನಬಾನು ಬುಳ್ಳಣ್ಣವರ, ಎಲ್.ಐ.ಲಕ್ಕಮ್ಮನವರ, ಗೀತಾ ಪ್ರದಾನಿ, ಶ್ರೀಕಾಂತ, ಬಸವರಾಜ ಬಾಗಲ ಇದ್ದರು.



ಹುಬ್ಬಳ್ಳಿ: ನಗರದ ಮಹಾನಗರ ಪಾಲಿಕೆಯ ಚಿಟಗುಪ್ಪಿ ಉದ್ಯಾನವನದಲ್ಲಿ ಸರ್. ಸಿದ್ದಪ್ಪ ಕಂಬಳಿ ಅವರ ಪುತ್ಥಳಿ ಮರುಸ್ಥಾಪಿಸಬೇಕು ಎಂದು ಆಗ್ರಹಿಸಿ ವಿವಿಧ ಕನ್ನಡ, ದಲಿತ ಹಾಗೂ ಆಟೋ ಚಾಲಕರ ಸಂಘಟನೆಯ ಸದಸ್ಯರು ಪಾಲಿಕೆ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಅಶೋಕ ನಾಡಿಗೇರಗೆ ಸ್ವರನಿಧಿ ಪ್ರಶಸ್ತಿ ಪ್ರದಾನ

◆**ಧಾರವಾಡ:** ನಗರದ ಕರ್ನಾಟಕ ಆಲೂರು ವೆಂಕಟರಾವ್ ಭವನದಲ್ಲಿ ಪಂಡಿತ ಭೀಮಸೇನೆ-ಮಾಧವ ಸಂಗೀತೋತ್ಸವ ಹಾಗೂ ಸ್ವರನಿಧಿ ರಾಷ್ಟ್ರೀಯ ಸಂಗೀತ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಿತು. ಪದ್ಮಶ್ರೀ ಸಂಗೀತ ಪ್ರತಿಷ್ಠಾನ ಮತ್ತು ಕಿರಾಣಾ ಸಂಗೀತ ಅಕಾಡೆಮಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರೂ.10 ಸಾವಿರ ನಗದು ಒಳಗೊಂಡ ಪ್ರಶಸ್ತಿ ಪಂ. ಅಶೋಕ ನಾಡಿಗೇರ ಅವರಿಗೆ ಪ್ರದಾನ ಮಾಡಲಾಯಿತು. ಪ್ರಶಸ್ತಿ ಪ್ರದಾನಿಸಿದ ಕೆ.ಇ.ಬೋರ್ಡ್ ಶಾಲೆಯ ನಿವೃತ್ತ ಶಿಕ್ಷಕ ಎನ್.ಜಿ.ಗಲಗಲಿ, ಮಾಧವ ಗುಡಿ ಅವರು, ಭಾರತರತ್ನ ಪಂ.ಭೀಮಸೇನ ಜೋಶಿ ಅವರ ಶಿಷ್ಯರಾಗಿ ಅಪಾರ ವಿದ್ವತ್ ಸಾಧಿಸಿದ್ದಾಗಿ ಸ್ಮರಿಸಿದರು. ಭೀಮಸೇನೆ ಜೋಶಿ ಅವರ ಗಾಯನದ ಸಂಪೂರ್ಣ ಛಾಯೆ ಬೆಳೆಸಿಕೊಂಡಿದ್ದ ಮಾಧವ ಗುಡಿ ಅವರು ಕೂಡ ಅಪಾರ ಶಿಷ್ಯರನ್ನು ಹಿಂದೂಸ್ತಾನಿ ಕ್ಷೇತ್ರಕ್ಕೆ ನೀಡಿದ ಶ್ರೇಯಸ್ಸು ಹೊಂದಿದ್ದಾರೆ ಎಂದರು. ರಂಗಕರ್ಮಿ ಡಾ.ಶಶಿಧರ ನರೇಂದ್ರ ಮಾತನಾಡಿ, ಭೀಮಸೇನ ಜೋಶಿ ಅವರು ಬಹಳ ಕಷ್ಟಪಟ್ಟು, ಕಠಿಣ ಪರಿಶ್ರಮದಿಂದ ಸಂಗೀತ ಸಿದ್ಧಿಸಿಕೊಂಡು, ಸಂಗೀತ ಲೋಕದಲ್ಲಿ ಗುರು-ಶಿಷ್ಯ ಪರಂಪರೆ ಹುಟ್ಟು ಹಾಕಿದ್ದಾಗಿ ಎಂದರು. ಪಂ.ಪ್ರಸನ್ನ ಗುಡಿ ಸೇರಿದಂತೆ ಅನೇಕರು ಇದ್ದರು. ಮೈಸೂರಿನ ರಾಮಚಂದ್ರಾಚಾರ್ಯ ಅವರು ಪ್ರಸ್ತುಪಡಿಸಿದ ದಾಸವಾಣಿ ಸಂಗೀತ ಸಭಾಂಗಣದಲ್ಲಿ ಸೇರಿದ ಪ್ರೇಕ್ಷಕರಿಗೆ ಮುದ ನೀಡಿತು. ಪಂ. ಅಶೋಕ ನಾಡಿಗೇರ, ವಿದೂಷಿ ಗಾಯತ್ರಿ ಟೋಣಪಿ, ಪಂ.ಶೇಷಗಿರಿ ಗುಡಿ ಗಾಯನಕ್ಕೆ ಪ್ರಕಾಶ ಹೆಗಡೆ ಹಾರ್ಮೋನಿಯಂ, ಮಳೆಮಲ್ಲೇಶ ಹೂಗಾರ ಮತ್ತು ಶ್ರೀನಿವಾಸ ಸವಾಯಿ ತಬಲಾ ಸಾಥ್ ನೀಡಿದರು. ಅನುಪಮಾ ಮಂಗಳವೇಡೆ ಪ್ರಾಸ್ತಾವಿಸಿದರು. ವಿದೂಷಿ ಭಾರ್ಗವಿ ಕುಲಕರ್ಣಿ ಸ್ವಾಗತಿಸಿದರು. ರವಿ ಕುಲಕರ್ಣಿ ನಿರೂಪಿಸಿದರು. ಪಂ.ಪ್ರಸನ್ನ ಗುಡಿ ವಂದಿಸಿದರು.



ಧಾರವಾಡ: ನಗರದ ಕರ್ನಾಟಕ ಆಲೂರು ವೆಂಕಟರಾವ್ ಭವನದಲ್ಲಿ ಪಂಡಿತ ಭೀಮಸೇನೆ-ಮಾಧವ ಸಂಗೀತೋತ್ಸವ ಹಾಗೂ ಸ್ವರನಿಧಿ ರಾಷ್ಟ್ರೀಯ ಸಂಗೀತ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಿತು.

ಮೇ 1ಕ್ಕೆ ಮಹಿಳಾ ಜನಾಕ್ರೋಶ ಸಭೆ

◆**ಹುಬ್ಬಳ್ಳಿ:** ಶಾಸನ ಸಭೆಯಲ್ಲಿ ಮಹಿಳೆಯರ ಮೀಸಲು ವಿಧೇಯಕ ವಿರೋಧಿಸಿದ ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳ ನೀತಿ ಖಂಡಿಸಿ ಮೇ 1 ರಂದು ಸಂಜೆ 4 ಗಂಟೆಗೆ ನಗರದ ನೆಹರು ಮೈದಾನದಲ್ಲಿ ಮಹಿಳಾ ಜನಾಕ್ರೋಶ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಮಹಾನಗರ ಜಿಲ್ಲಾ ಅಧ್ಯಕ್ಷ ತಿಪ್ಪಣ್ಣಾ ಮಜ್ಜಗಿ ತಿಳಿಸಿದರು.



ಇಲ್ಲಿಯ ಅರವಿಂದ ನಗರದ ಬಿಜೆಪಿ ಕಚೇರಿಯಲ್ಲಿ ಸಭೆ ನಡೆಸಿ ಮಾತನಾಡಿದ ಅವರು, ಮಹಿಳಾ ವಿಧೇಯಕ ತಂದಾಗ ಅದನ್ನು ಪಾಸ್ ಆಗದಂತೆ ವಿರೋಧ ಪಕ್ಷದ ಒಕ್ಕೂಟಗಳು ತಡೆದವು. ಮಹಿಳೆಯರಿಗೆ ಅಧಿಕಾರ ಸಿಗದಂತೆ ನೋಡಿಕೋಳ್ಳುತ್ತಿದ್ದಾರೆ. ಪ್ರತಿಯೊಂದು ಹಂತದಲ್ಲಿಯೂ ನಾವು ಮಹಿಳೆಯರನ್ನು ಕಾಣಬಹುದು ಮಹಿಳೆಯರು ಬಂದರೆ ನಾವು ಮೂಲೆಗುಂಪಾಗಬಹುದೆಂಬ ಆತಂಕದಿಂದ ಕಾಂಗ್ರೆಸ್ ಮತ್ತು ಉಳಿದ ವಿರೋಧ ಪಕ್ಷಗಳು ಬಿಲ್ ಪಾಸಗದಂತೆ ತಡೆದು ವಿರೋಧ ವ್ಯಕ್ತಪಡಿಸಿದರು. ಈಗಲಾದರೂ ಮಹಿಳೆಯರು ಕಾಂಗ್ರೆಸ್‌ನ ವಿರೋಧಿ ನೀತಿಯನ್ನು ಖಂಡಿಸಿ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಬೇಕು. ನಮ್ಮ ದೇಶದಲ್ಲಿ ಮಹಿಳೆಯರಿಗೆ ಹೆಚ್ಚು ಪ್ರಾತಿನಿಧ್ಯವಿದೆ. ದೊಡ್ಡ ಪ್ರಮಾಣದಲ್ಲಿ ನಮ್ಮ ನಗರದಲ್ಲಿ ಹೋರಾಟ ಮಾಡಿ ಮಹಿಳೆಯರ ಶಕ್ತಿ ತೋರಿಸಲಾಗುವುದು. ಮಹಿಳಾ ಮೀಸಲು ಹಕ್ಕನ್ನು ಪಡೆಯಲು ಮಹಿಳೆಯರು ಸಾವಿರ ಸಾವಿರ ಸಂಖ್ಯೆಯಲ್ಲಿ ಆಗಮಿಸಬೇಕೆಂದು ತಿಳಿಸಿದರು.

ಕಾರ್ಯದರ್ಶಿ ವಸಂತ ನಾಡಜೋಶಿ, ಶಿವು ಮೆಣಸಿನಕಾಯಿ, ಬಸವರಾಜ ಗರಗ, ಲಿಂಗರಾಜ ಪಾಟೀಲ್, ಮಹಾಪೌರ ಜ್ಯೋತಿ ಪಾಟೀಲ್, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಸೀಮಾ ಲದವಾ, ಅಕ್ಕಮಹಾದೇವಿ ಹೆಗಡೆ, ನಾಗರತ್ನಾ ಬಳ್ಳಾರಿ, ರೂಪಾ ಚೌಧರಿ, ಪುಷ್ಪಾ ನವಲಗುಂದ ಉಪಸ್ಥಿತರಿದ್ದರು.

ಸೋಲು ದೇಶಕ್ಕೆ

ಸೋಲು ನಮಗಲ್ಲಾ ದೇಶಕ್ಕೆ, ದೇಶದ ಮಹಿಳೆಯರಿಗಾಗಿದೆ. ಮುಂದೆ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಶಾಸಕರಾಗುವ ಅವಕಾಶವನ್ನು ವಿರೋಧ ಪಕ್ಷ ಕಾಂಗ್ರೆಸ್ ಹಾಳು ಮಾಡಿದೆ ಎಂದ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ, ಜನಸಾಮಾನ್ಯ ಮಹಿಳೆಯರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಅಧಿಕಾರ ನೀಡಬೇಕೆನ್ನುವ ನಿರ್ಧಾರ ವಿರೋಧ ಪಕ್ಷ ಕಸಿದುಕೊಂಡಿದೆ ಎಂದರು.

ಕಾಂಗ್ರೆಸ್‌ನಿಂದ ಅಭಿವೃದ್ಧಿಗೆ ಸಹಕಾರ

◆**ಕುಂದಗೋಳ:** ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಬಡವರ, ದೀನ ದಲಿತರ, ಅಲ್ಪಸಂಖ್ಯಾತರ ಒಳಗೊಂಡಂತೆ ಎಲ್ಲಾ ಸಮಾಜದ ಅಭಿವೃದ್ಧಿ ಸಹಕಾರ ನೀಡುತ್ತಿದೆ. ಹಾಗೆಯೇ ಇಲ್ಲಿನ ಹೈದರಶಾವಲಿ ದರ್ಗಾ ಅಭಿವೃದ್ಧಿಗೆ ರೂ.25 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಹೆಸ್ಕಾಂ ಹುಬ್ಬಳ್ಳಿ ವಿಭಾಗದ ಅಧ್ಯಕ್ಷ ಸಯ್ಯದ್ ಅಜ್ಜಮ್ ಪೀರ್ ಖಾದ್ರಿ ಹೇಳಿದರು.

ಅವರು ಪಟ್ಟಣದ ಹಜರತ್ ಸಯ್ಯದ್ ಶಾ ದರ್ಗಾ ಆವರಣದಲ್ಲಿ ದರ್ಗಾದ ಜೀರ್ಣೋದ್ಧಾರ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಯೊಂದಿಗೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಸ್ಪಂದಿಸುವ ಮೂಲಕ ಜನಪರ ಕಾಳಜಿವುಳ್ಳ ಸರ್ಕಾರವಾಗಿದೆ ಎಂದರು.

ಪಂಚ ಗ್ಯಾರಂಟಿ ಸಮಿತಿ ಮಾಜಿ ಅಧ್ಯಕ್ಷ ಶಿವಾನಂದ ಬೆಂತೂರ ಮಾತನಾಡಿ, ಸಚಿವ ಜಮೀರ್ ಅಹ್ಮದ ಅವರು ಒಟ್ಟಾರೆ ಕುಂದಗೋಳ ಮತಕ್ಷೇತ್ರದ ಸಂಶಿ, ಮಳಲಿ, ಕುಂದಗೋಳ ಸೇರಿದಂತೆ ಅನೇಕ ಹಳ್ಳಿಗಳಲ್ಲಿ ಸುಮಾರು ರೂ. 3 ಕೋಟಿಗೂ ಅಧಿಕ ಹಣ ಮಂಜೂರು ಮಾಡಿದ್ದಾರೆ. ಇದರಲ್ಲಿ ಸಂಶಿಯಲ್ಲಿ ಶಾದಿಮಹಲ್ ಕೂಡ ಸಿದ್ಧವಾಗುತ್ತಿದೆ ಎಂದರು. ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಜಗದೀಶ ಉಪ್ಪಿನ, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಚಂದ್ರಶೇಖರ ಜುಟ್ಟಲ್, ಧರ್ಮ ಗುರುಗಳಾದ ಅಬ್ದುಲ್ ಹಸನಶಾ ಖಾದ್ರಿ, ಸುಲ್ತಾನ್ ನೂರ ಭರಪೂರ ಅಲಿಶಾ ಜಾಪರಿ ಸಾನ್ನಿಧ್ಯ ವಹಿಸಿದ್ದರು. ಕಾಂಗ್ರೆಸ್ ಮುಖಂಡ ಗೌಡಪ್ಪಗೌಡ ಪಾಟೀಲ, ಕಾಂಗ್ರೆಸ್ ಕಿಸಾನ್ ಘಟಕದ ಜಿಲ್ಲಾಧ್ಯಕ್ಷ ರಮೇಶ ಕೊಪ್ಪದ, ಅಂಜುಮನ್ ಸಂಸ್ಥೆಯ ಅಧ್ಯಕ್ಷ ಖೈಯಿಮ್ ನಾಲಬಂದ, ಪ.ಪಂ.ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಕಿರೇಸೂರ, ನಗರ ಕಾಂಗ್ರೆಸ್ ಘಟಕದ ಅಧ್ಯಕ್ಷ ಸಲೀಂ ಕ್ಯಾಲಕೊಂಡ, ದರ್ಗಾ ಕಮಿಟಿ ಅಧ್ಯಕ್ಷ ಎಂ.ಎಂ. ಮಾಕಾಂದಾರ್, ಹಜರತ್ ಕರ್ಜಗಿ, ಬಾಬಾಸಾಬ್ ಜಂಗಲಿ, ಛಾಯಪ್ಪ ಹೊಸಮನಿ, ಹಾಲಪ್ಪ ತಡಹಾಳ, ಮಲ್ಲೇಶ ಬೆಳವಡಿ ದರ್ಗಾ ಕಮಿಟಿ ಸದಸ್ಯರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಸೇಂಟ್ ಜಾನ್ಸ್ ಸಮರಿಟನ್ ಪ್ರೌಢ ಶಾಲೆ ಸಾಧನೆ



◆**ಹುಬ್ಬಳ್ಳಿ:** ಇಲ್ಲಿನ ಹಳೇಹುಬ್ಬಳ್ಳಿ ನೇಕಾರ ನಗರದ ಸೇಂಟ್ ಜಾನ್ಸ್ ಸಮರಿಟನ್ ಪ್ರೌಢ ಶಾಲೆಯು ಎಸ್ಸೆಸ್ಸೆಲ್ಸಿ ಪರೀಕ್ಷೆ-1ರಲ್ಲಿ ಉತ್ತಮ ಫಲಿತಾಂಶ ಗಳಿಸಿದೆ.

ಶಾಲೆಯ ಅಪೇಕ್ಷಾ ಕೊಟ್ರಣ್ಣವರ (ಶೇ .98), ಸೃಷ್ಟಿ ಕುಂಬಾರ (ಶೇ. 95), ಐಶ್ವರ್ಯ ಪಟ್ಟಣಶೆಟ್ಟಿ (ಶೇ.93) ಅಂಕಗಳಿಸಿದ್ದಾರೆ. ಈ ವರ್ಷ ಶಾಲೆಯ ಗರಿಷ್ಠ ಅಂಕ 98% ಆಗಿದ್ದು, ಅನೇಕ ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಸಾಧನೆಗೆ ಶಾಲೆಯ ಮಾಡಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಶಾಲಾ ಅಧ್ಯಕ್ಷರಾದ ಬಲವತ್ ಕುಮಾರ್ ಜಾನ್ ಗುಂಡಮಿ ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರು ಅಭಿನಂದಿಸಿದ್ದಾರೆ.



ಹುಬ್ಬಳ್ಳಿ: ಸಹನ ಸಾಧನ ಕಲಾ ಸಂಸ್ಕೃತಿ ಸಂಸ್ಥೆ, ಹುಬ್ಬಳ್ಳಿ ಇವರ ಸಹಯೋಗದಲ್ಲಿ 2026ನೇ ಸಾಲಿನ ಬಸವೇಶ್ವರ ಜಯಂತಿ ಅಂಗವಾಗಿ ಹುಬ್ಬಳ್ಳಿಯ ಮೂರುಸಾವಿರ ಮಠದ ಸಭಾಭವನದಲ್ಲಿ ಜರುಗಿದ ಸನ್ಮಾನ ಹಾಗೂ ಶರಣ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸರ್ವಧರ್ಮ ಸಮಾಜ ಸೇವಕ ಡಾ.ರಮೇಶ ಅವರಿಗೆ ಶರಣ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸದಾಶಿವ ಚೌಶೆಟ್ಟಿ, ಮಂಜುಳಾ ಮಜುತಿ ಹಾಗೂ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಇದ್ದರು.


ಸಂಸ್ಕಾರಯುತ ಜೀವನ ನಡೆಸಿ: ಸ್ವಾಮೀಜಿ

◆**ನವಲಗುಂದ:** ಸನಾತನ ಧರ್ಮದಲ್ಲಿ ಗೃಹಸ್ಥಾಶ್ರಮಕ್ಕೆ ವಿಶೇಷಸ್ಥಾನಮಾನಗಳಿದ್ದು ಸತಿ, ಪತಿಗಳು ಸುಖವಾಗಿ ಬಾಳುವೆ ನಡೆಸುವುದರ ಜೊತೆಗೆ ಸಮಾಜದ ಚಿಂತನೆ, ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡು ಗುರುಗಳ ಮಾರ್ಗದರ್ಶನದಲ್ಲಿ ಸಂಸ್ಕಾರಯುತ ಜೀವನ ನಡೆಸಬೇಕೆಂದು ಅಗಡಿ,ಗುತ್ತಲ ಪ್ರಭುಸ್ವಾಮಿ ಮಠದ ಗುರುಸಿದ್ಧ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ಗವಿಮಠದಲ್ಲಿ ಶ್ರೀ ಯಡೆಯೂರು ಸಿದ್ಧಲಿಂಗೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಆಯೋಜಿಸಿದ್ದ ಸರ್ವಧರ್ಮ ಸಾಮೂಹಿಕ ವಿವಾಹ ಹಾಗೂ ಸರ್ವಧರ್ಮ ಸಮನ್ವಯ ಪ್ರಶಸ್ತಿ ಪ್ರದಾನ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಹುಬ್ಬಳ್ಳಿ ರುದ್ರಾಕ್ಷಿಮಠದ ಬಸವಲಿಂಗ ಸ್ವಾಮೀಜಿ ಮಾತನಾಡಿ, ಗವಿಮಠದ ಲಿಂ. ಶ್ರೀಗಳು ನಡೆದು ಬಂದ ಹಾದಿಯಲ್ಲಿಯೇ ಈಗಿನ ಶ್ರೀಗಳು ಮಠದಲ್ಲಿ ನಿರಂತರವಾಗಿ ಸರ್ವಧರ್ಮ ಸಮ್ಮೇಳ, ಮಹಿಳಾ ವಿಚಾರಗೋಷ್ಠಿ, ಜಾನುವಾರು ಜಾತ್ರೆಗಳನ್ನು ಆಯೋಜಿಸುತ್ತಾ, ತ್ರಿವಿಧ ದಾಸೋಹದ ಮೂಲಕ ಎಲ್ಲ ಭಕ್ತರನ್ನೊಳಗೊಂಡು ಮಠವನ್ನು ಮುನ್ನಡೆಸುತ್ತಿರುವುದು ಈ ಭಾಗದಲ್ಲಿ ಜನತೆಯಲ್ಲಿ ಸಂತಸ ಮೂಡಿಸಿದೆ ಎಂದರು.

ಜಾನಪದ ತಜ್ಞ ರಾಮು ಮೂಲಗಿ ಅವರಿಗೆ ಮಠದಿಂದ ಸರ್ವಧರ್ಮ ಸಮನ್ವಯ ಪ್ರಶಸ್ತಿ ಜತೆಗೆ 11 ಸಾವಿರ ರೂ.ಗಳ ನಗದು ನೀಡಿ ಸತ್ಕರಿಸಲಾಯಿತು. ವಿಶೇಷ ಸಾಧನೆಗೈದ ರೈತರು, ನಿವೃತ್ತ ಸೈನಿಕರು ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯರಾದ ಎಸ್. ಎಂ. ಪಟ್ಟಣಶೆಟ್ಟಿ, ಪ್ರೊ. ಎಸ್.ಕೆ.ದೂಟಿಕಲ್ ಎಂ.ಸಿ. ಶಿರಕೋಳ, ಸಾಹಿತ್ಯ ಕ್ಷೇತ್ರದಲ್ಲಿ ಎ.ಬಿ.ಕೊಪ್ಪದ ಅವರನ್ನು ಗೌರವಿಸಲಾಯಿತು. ಗುಡ್ಡದನ್ವೇರಿಯ ಶಿವಯೋಗಿ ಸ್ವಾಮೀಜಿ, ಬಾದಾಮಿಯ ನವಗ್ರಹ ಹಿರೇಮಠದ ಶಿವಪೂಜೆ ಸ್ವಾಮೀಜಿ, ಅಕ್ಕಿಆಲೂರಿನ ಶಿವಬಸವ ಸ್ವಾಮೀಜಿ, ಜೀಗೇರಿ-ವೆಂಕಟಾಪೂರದ ಗುರುಸಿದ್ದೇಶ್ವರ ಸ್ವಾಮೀಜಿ, ಸಾಲೋಟಗಿ ಸಿದ್ದೇಶ್ವರ ಆಶ್ರಮದ ಸಂಗಮೇಶ್ವರ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರು ನವ ವಧು-ವರರನ್ನು ಆಶೀರ್ವದಿಸಿದರು. ನವಲಗುಂದ ಗವಿಮಠದ ಬಸವಲಿಂಗ ಸ್ವಾಮೀಜಿ ನೇತೃತ್ವದಲ್ಲಿ ಏ.19ರಿಂದ 23ರ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಅಣ್ಣಪ್ಪ ಬಾಗಿ, ಸಿದ್ದಲಿಂಗಯ್ಯ ಹಿರೇಮಠ, ಎಸ್.ಎಸ್.ಅಂಗಡಿ, ಈರಣ್ಣ ಚವಡಿ, ಶಂಭು ಶಿದ್ರಾಮಶೆಟ್ಟರ, ಸಂತೋಷ ನಾವಳ್ಳಿ, ನಿಂಗಪ್ಪ ಕುಂಬಾರ, ಬಸವರಾಜ ಹೂಗಾರ ಮಾಸ್ತರ, ಸಂಜು ಹಿರೇಮಠ, ಸಿದ್ದು ಪೂಜಾರ, ಮಹಾಂತೇಶ ಜಿನಗಾ ಮತ್ತಿತರರಿದ್ದರು.



ಐಎಎಸ್-ಕೆಎಎಸ್, ಸಿಎ ಪರೀಕ್ಷೆ: ಮಹಿಳೆಯರಿಗೆ ಉಚಿತ ತರಬೇತಿ

◆**ಧಾರವಾಡ:** ಬೆಂಗಳೂರಿನ ಸ್ಪರ್ಶ ಟ್ರಸ್ಟ್ ಯುವಿಕೆ ಕೇಂದ್ರ ವತಿಯಿಂದ ರಾಜ್ಯದ ಯುವತಿಯರಿಗೆ ಐಎಎಸ್-ಕೆಎಎಸ್ ಮತ್ತು ಸಿಎ ಪರೀಕ್ಷೆಗೆ ಉಚಿತ ತರಬೇತಿ ನೀಡಲಿದೆ ಎಂದು ಟ್ರಸ್ಟ್ ಸದಸ್ಯ ಗೋಪಿನಾಥ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ಮೊದಲ ಬಾರಿಗೆ ಆರಂಭಿಸಿದ ಈ ತರಬೇತಿಗೆ 'ಇಂಡಿಯಾ ಫಾರ್ ಐಎಎಸ್' ಸಂಸ್ಥೆಯೂ ಸಹ ಸ್ಪರ್ಶ ಟ್ರಸ್ಟ್‌ನೊಂದಿಗೆ ಕೈಜೋಡಿಸಿದೆ. 21 ರಿಂದ 27 ವರ್ಷದ ಪೋಷಕರಿಲ್ಲದ, ಏಕಪೋಷಕ, ಬಿಪಿಎಲ್ ಪಡಿತರ ಚೀಟಿ ಹೊಂದಿದ, ಸರ್ಕಾರಿ ಮತ್ತು ಸರ್ಕಾರೇತರ ಮಕ್ಕಳ ಪಾಲನಾ ಸಂಸ್ಥೆಯ ಹೆಣ್ಣು ಮಕ್ಕಳಿಗೆ ಈ ತರಬೇತಿ ನೀಡಲಾಗುವುದು. ಐಎಎಸ್-ಕೆಎಎಸ್, ಸಿಎ ಪರೀಕ್ಷೆಗಳಿಗೆ 3 ವರ್ಷಗಳ ಉಚಿತ ವಸತಿ, ಊಟದ ಜೊತೆಗೆ ತರಬೇತಿ ನೀಡಲಿದೆ. ಅವರಿಗೆ ಉದ್ಯೋಗ ದೊರೆಯುವವರೆಗೂ ತನಕ ಹೆಣ್ಣು ಮಕ್ಕಳಿಗೆ ಅಗತ್ಯ ಬೆಂಬಲ ನೀಡುವುದಾಗಿಯೂ ತಿಳಿಸಿದರು. ಯಾವುದೇ ಶುಲ್ಕವಿಲ್ಲದೆ, ಪ್ರವೇಶ ಪರೀಕ್ಷೆ ಮತ್ತು ಸಂದರ್ಶನದಡಿ ತರಬೇತಿಗೆ ಹೆಣ್ಣು ಮಕ್ಕಳನ್ನು ಆಯ್ಕೆ ಮಾಡಲಿದೆ. ಉನ್ನತ ಹುದ್ದೆಗಳಲ್ಲಿ ಇರುವ ಅನೇಕರು ಈ ಕಾರ್ಯಕ್ಕೆ ಕೈಜೋಡಿಸಿದ್ದಾರೆ. ಇದೇ ವರ್ಷ ತರಬೇತಿ ಆರಂಭಿಸಿದ್ದರಿಂದ ಮೊದಲ ಬ್ಯಾಚ್‌ಗೆ 50 ಜನರಿಗೆ ಮಾತ್ರವೇ ಅವಕಾಶ ನೀಡಿದ್ದು, ಈಗಾಗಲೇ 150 ಅರ್ಜಿಗಳು ಬಂದಿದ್ದು, ಈ ಪೈಕಿ 25 ಜನರನ್ನು ಆಯ್ಕೆ ಮಾಡಿದ್ದಾಗಿ ಮಾಹಿತಿ ನೀಡಿದರು.



ತರಬೇತಿ ಪಡಯಲಿಚ್ಛಿಸುವ ಮಕ್ಕಳು ಮಾಹಿತಿಗಾಗಿ ಮೊ: 8660096834, 8296526507 ಮತ್ತು 8431471590ಕ್ಕೆ ಸಂಪರ್ಕಿಸಬೇಕು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅಜೇಯ ಥಿಟೆ, ಅಶೋಕ ಯರಗಟ್ಟಿ, ರವಿಕುಮಾರ ಇದ್ದರು.

ಕಪ್ಪುಪಟ್ಟಿ ಧರಿಸಿ ಮೌನ ಮೆರವಣಿಗೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು

◆**ಧಾರವಾಡ:** ಶಾಸಕ ವಿನಯ ಕುಲಕರ್ಣಿ ಅವರ ವಿರುದ್ಧ ರಾಜಕೀಯ ಪಿತೂರಿ ಮತ್ತು ಷಡ್ಯಂತ್ರದಿಂದ ಬಲಿಪಶು ಮಾಡುತ್ತಿದ್ದಾರೆ ಎಂದು ಆರೋಪಿಸಿ ಅವರ ಅಭಿಮಾನಿಗಳು ಮತ್ತು ಕಾಂಗ್ರೆಸ್ ಕಾರ್ಯಕರ್ತರು ಕೈಗೆ ಕಪ್ಪುಪಟ್ಟಿ ಧರಿಸಿ, ಮೌನ ಮೆರವಣಿಗೆ ನಡೆಸಿದರು.

ನಗರದ ಕಡಪಾ ಮೈದಾನದಿಂದ ಆರಂಭವಾದ ಮೌನ ಮೆರವಣಿಗೆಯು ಜ್ಯುಬ್ಲಿ ವೃತ್ತ, ಆಝಾದ್ ಪಾರ್ಕ್, ರಾಣಾ ಪ್ರತಾಪ್ ವೃತ್ತ, ಹಳೆಯ ಬಸ್ ನಿಲ್ದಾಣ, ಸ್ವಾಮಿ ವಿವೇಕಾನಂದ ವೃತ್ತ, ಸುಭಾಷ ರಸ್ತೆಯಲ್ಲಿ ಸಾಗಿ ಕೆಸಿಸಿ ಬ್ಯಾಂಕ್ ವೃತ್ತದಲ್ಲಿ ಸಂಪನ್ನಗೊಂಡಿತು. ವಿನಯ್ ಕುಲಕರ್ಣಿ ಅವರ ಜನಪ್ರಿಯತೆ ಸಹಿಸದ ವಿರೋಧ ಪಕ್ಷಗಳು, ತನಿಖಾ ಸಂಸ್ಥೆಗಳನ್ನು ದುರ್ಬಳಸಿಕೊಂಡು ಅವರನ್ನು ಈ ಕೊಲೆಯ ಪ್ರಕರಣದಲ್ಲಿ ಸಿಲುಕಿಸಿವೆ. ಇದು ಶುದ್ಧ ರಾಜಕೀಯ ಪ್ರೇರಿತ ಷಡ್ಯಂತ್ರ ಎಂದು ಬೆಂಬಲಿಗರು ಆರೋಪಿಸಿದರು. ಪ್ರತಿಭಟನಾಕಾರರ ಪ್ರಕಾರ, ಈ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಅವರ ಮೇಲೆ ಯಾವುದೇ ನೇರ ಸಾಕ್ಷ್ಯಗಳಿಲ್ಲದಿದ್ದರೂ ಅವರನ್ನು ಗುರಿ ಮಾಡಲಾಗುತ್ತಿದೆ. ತನಿಖೆ ನಿಷ್ಪಕ್ಷಪಾತವಾಗಿ ನಡೆಯಬೇಕು ಮತ್ತು ಶಾಸಕರಿಗೆ ನ್ಯಾಯ ಸಿಗಬೇಕು ಎಂದು ಒತ್ತಾಯಿಸಿದರು.

ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರವಿಂದ ಏಗನಗೌಡರ ಮಾತನಾಡಿ, ನಮ್ಮ ನಾಯಕರನ್ನು ರಾಜಕೀಯವಾಗಿ ಮುಗಿಸಲು ಈ ಪ್ರಯತ್ನ ನಡೆಯುತ್ತಿದೆ. ತನಿಖೆ ನಿಷ್ಪಕ್ಷಪಾತವಾಗಿ ನಡೆಯಬೇಕು ಮತ್ತು ಶಾಸಕರಿಗೆ ನ್ಯಾಯ ಸಿಗಬೇಕು ಎಂದರು.



ವಿಪ ಮಾಜಿ ಸದಸ್ಯ ಮೋಹನ ಲಿಂಬಿಕಾಯಿ, ಕಾಂಗ್ರೆಸ್ ಗ್ರಾಮೀಣ ಜಿಲ್ಲಾಧ್ಯಕ್ಷ ಅನಿಲಕುಮಾರ ಪಾಟೀಲ, ಮಹಾನಗರ ಅಧ್ಯಕ್ಷ ಅಲ್ತಾಫ್ ಹಳ್ಳೂರ, ಸದಾನಂದ ಡಂಗನವರ, ಪ್ರಕಾಶ ಘಾಟಗೆ, ರಾಜು ಕಮತಿ, ಬಸವರಾಜ ಜಾಧವ ಅನೇಕರಿದ್ದರು.

ಮಂಜುನಾಥೇಶ್ವರ ಶಾಲೆಗೆ ಅತ್ಯುತ್ತಮ ಫಲಿತಾಂಶ

◆**ಧಾರವಾಡ:** ಕಳೆದ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ಸ್ಥಳೀಯ ವಿದ್ಯಾಗಿರಿ ಹತ್ತಿರದ ಜನತಾ ಶಿಕ್ಷಣ ಸಮಿತಿಯ ಶ್ರೀ ಮಂಜುನಾಥೇಶ್ವರ ಆಂಗ್ಲಮಾಧ್ಯಮ ಶಾಲೆ ಈ ಸಲವೂ ಶೇ.100ರಷ್ಟು ಸಾಧನೆ ಮಾಡಿದೆ.

ಪರೀಕ್ಷೆ ಬರೆದ 137 ವಿದ್ಯಾರ್ಥಿಗಳ ಪೈಕಿ 77 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 60 ಪ್ರಥಮ ಶ್ರೇಣಿ ಪಡೆದಿದ್ದು, ಅವನಿ ಮತ್ತು ಶ್ರೀನಿಧಿ ಹಿರೇಮಠ ಶೇ.98.72, ಮಧು ಗುಡದಿನ್ನಿ ಶೇ.98.40 ದ್ವಿತೀಯ, ರವಿ ಪವಾರ ಶೇ.98.08 ತೃತೀಯ ಸ್ಥಾನ ಪಡೆದಿದ್ದಾರೆ. ವಿಶ್ವನಾಥ ಮೆಣಸಗಿ ಶೇ.97.44, ಸ್ವಸ್ತಿಕ್ ಎನ್. ಶೇ.97.28 ಫಿಜಾ ಮುತವಲ್ಲಿ ಶೇ.96.96, ಜೆಸ್ಸಿಕಾ ಚಿತ್ರಾಲಾ ಶೇ.96.96, ಸ್ವಾತಿ ನವಲಗುಂದ ಶೇ.96.96, ಸಿದ್ಧಾಂತ ಗುರೆಡ್ಡಿ ಶೇ.96.8, ಶ್ರೇಯಸ್ ಮಹಾಲೆ ಶೇ.96.64 ಅಂಕಗಳನ್ನು ಗಳಿಸಿದ್ದಾರೆ. ಪೂಜಾ ಕಮ್ಮಾರ ಶೇ.96.32, ಪೂರ್ವಿ ಪಟೇದ್ ಶೇ.96.16, ಮುಸ್ತಕೀಮ್ ಅಬ್ಬಿಹಾಳ ಶೇ.96, ಯಶಸ್ ಬಿ.ಆರ್ ಶೇ.96, ಪ್ರತೀಕ್ಷಾ ತಿಮ್ಮಾಪುರ 95.84, ಸಿದ್ಧಾರ್ಥ ಅಲ್ದಿ ಶೇ.95.84, ತೇಜಸ್ವಿನಿ ಕಾಂಬ್ರೇಕರ ಶೇ.95.84 ಅಂಗಳನ್ನು ಪಡೆದಿದ್ದಾರೆ. ವರ್ಷಾ ಇನಾಮತಿ ಶೇ.95.68, ಪ್ರತೀಕ ಬಿಲ್ಕಾರ್ ಶೇ.95.52, ಶ್ರೇಯಸ್ ದಿಬ್ಬದಮನಿ ಶೇ.95.52, ಅಮೋಘ್ ಬಮ್ಮನಗೌಡರ ಶೇ.95.36, ಶಿವಪ್ರಸಾದ ಪಾಟೀಲ ಶೇ.95.36, ಪ್ರಜ್ವಲ್ ಹಿರೇಲಿಂಗಪ್ಪನವರ ಶೇ.94.88 ಅಂಗಳನ್ನು ಗಳಿಸಿದ್ದಾರೆ. ಅಮಿತ್ ಜಾಧವ ಶೇ.94.4, ಶ್ರೇಯಾ ಜಕ್ಕಲಿ ಶೇ.94.24, ಪುರುಷೋತ್ತಮ ಮಲಕಾರಿ ಶೇ.93.92, ವಿಜಯ್ ಯಾವಗಲಮಠ ಶೇ.93.92, ಹೇಮಂತ ಮರದಬುಡಕಿನ ಶೇ.93.6, ಯಶಸ್ವಿನಿ ಕಾಂಬ್ರೇಕರ್ ಶೇ.93.12 ಅಂಗಳು ಪಡೆದಿದ್ದಾರೆ. ಅಮೃತಾ ಮಿರಜ್ಕರ್ ಶೇ.92.96, ಶ್ರಾವಣಿ ಕುಲಕರ್ಣಿ ಶೇ.92.96, ತರುಣ್ ಮಹಾರಡ್ಡಿ ಶೇ.92.8, ಅನುಷ್ಕಾ ಕುರಕುರಿ ಶೇ.92.48, ಅದಿತಿ ಹುದ್ದಾರ್ ಶೇ. 92.32, ಅಮೋಘ ಕುಂಬಾರ ಶೇ.92.16, ಕಾರ್ತಿಕ ಶೇ.92.16 ಅಂಕಗಳು ಗಳಿಸಿದ್ದಾರೆ. ಬಿ.ಮನೀಷ ಶೇ.92, ಅನ್ವೇಷ ಶೇ.91.84, ಅನುಶ್ರೀ ಸವಣೂರ ಶೇ.91.52, ಸಮರ್ಥ ಅಲ್ದಿ ಶೇ.91.36, ಭುವನ್ ಫಾಳಿ ಶೇ.91.04, ಗಗನ್ ಶಿಂಧೆ ಶೇ. 91.04, ರಮ್ಯಾ ನರಗುಂದಕರ ಶೇ.91.04 ಅಂಕಗಳು ಪಡೆದು ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ಅರ್ಪಿತಾ ಬಾಸುತ್ಕರ್ ಶೇ.90.72, ಪ್ರೇರಣಾ ಶೇ.90.72, ದಿಶಾ ಪುರೋಹಿತ್ ಶೇ.90.4, ಜೀವನ್ ಪಿ. ಶೇ.90.4, ಯಶವಂತ ಕೇಸರಿ ಶೇ.90.4, ಶ್ರದ್ಧಾ ದಳವಿ ಶೇ.90.08 ಅಂಕ ಗಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಜೆಎಸ್ಸೆಸ್ ಅಧ್ಯಕ್ಷ ಉಡುಪಿ ಪೇಜಾವರ ವಿಶ್ವಪ್ರಸನ್ನ ತೀರ್ಥರು, ಕಾರ್ಯಾಧ್ಯಕ್ಷ ರಾಜರ್ಷಿ ಡಾ. ಡಿ.ವೀರೇಂದ್ರ ಹೆಗ್ಗಡೆ, ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಪ್ರಾಚಾರ್ಯೆ ರೇಣು ಪಾಟೀಲ, ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.



ಐದು ಶಾಲೆಗೆ ನೂರರಷ್ಟು ಸಾಧನೆ

ಜನತಾ ಶಿಕ್ಷಣ ಸಮಿತಿ ಸಂಸ್ಥೆಗಳಾದ ಜೆಎಸ್ಸೆಸ್ ಶ್ರೀ ಮಂಜುನಾಥೇಶ್ವರ ಎರಡು ಸಿಬಿಎಸ್‌ಇ ಶಾಲೆ, ಎರಡು ಆಂಗ್ಲ ಮಾಧ್ಯಮ ಶಾಲೆ ಮತ್ತು ಕನ್ನಡ ಮಾಧ್ಯಮ ಶಾಲೆ ಶೇ.100ರಷ್ಟು ಸಾಧನೆ ಮಾಡಿದೆ.

ಎಸ್‌ಎಸ್‌ಎಲ್‌ಸಿ: ಜೆಎಸ್ಸೆಸ್ ಕನ್ನಡ ಶಾಲೆ ಉತ್ತಮ ಸಾಧನೆ

◆**ಧಾರವಾಡ:** ಕಳೆದ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಗರದ ವಿದ್ಯಾಗಿರಿಯ ಜನತಾ ಶಿಕ್ಷಣ ಸಮಿತಿ ಕನ್ನಡ ಮಾಧ್ಯಮ ಶಾಲೆ ಶೇ.100ರಷ್ಟು ಫಲಿತಾಂಶ ದಾಖಲಿಸಿದೆ. ಪರೀಕ್ಷೆ ಬರೆದ 108 ಮಕ್ಕಳು ಉತ್ತೀರ್ಣರಾಗಿದ್ದಾರೆ.

ಪರೀಕ್ಷೆ ಬರೆದ 108 ವಿದ್ಯಾರ್ಥಿಗಳ ಪೈಕಿ 15 ವಿದ್ಯಾರ್ಥಿಗಳು ಶೇ.90ರಷ್ಟು ಅಂಕಗಳ ಸಾಧನೆ ಮಾಡಿದ್ದಾರೆ. ಶ್ರೀರಕ್ಷಾ ಕೆಳಗಿನಮನಿ ಶೇ.95.04, ಅಂಕಿತಾ ಬಾಂಬಡಕರ ಶೇ. 95.04 ಅತೀ ಹೆಚ್ಚು ಅಂಕಗಳು ಪಡೆದಿದ್ದಾರೆ.

ದೀಪಾ ಬಡಿಗೇರ ಶೇ.94.56, ಶ್ವೇತಾ ಹೂಗಾರ ಶೇ.94.4, ಲಿಖಿತಾ ನಾಯ್ಕ ಶೇ.94.24, ಸಾಕ್ಷಿ ಕೊಟಬಾಗಿ ಶೇ.92.48, ದಿವ್ಯಾ ಮದಗುಣಕಿ ಶೇ.92.48, ಶುಭಂ ಹುಲ್ಲೆಪ್ಪನವರ ಶೇ.92, ಶ್ರೀಲಕ್ಷ್ಮೀ ಬಿಳೆಕಲ್ ಶೇ.91.36 ಅಂಕಗಳನ್ನು ಪಡೆದಿದ್ದಾರೆ. ಶ್ವೇತಾ ಬಡಿಗೇರ ಶೇ.91.2, ಬಸವರಾಜ ಲೋಕುರ ಶೇ.91.04, ಸನಾ ಕುಡಚಿ ಶೇ.91.04, ಭೂಮಿಕಾ ಕಲಬಾವಿ ಶೇ.90.88, ಪ್ರಿಯಾರಾಯಚೂರ ಶೇ. 90.72, ವೇದಾ ಡಂಬಳ ಶೇ.90.56 ಅಂಕ ಪಡೆದು ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಜೆಎಸ್ಸೆಸ್ ಅಧ್ಯಕ್ಷ ಉಡುಪಿ ಪೇಜಾವರ ವಿಶ್ವಪ್ರಸನ್ನ ತೀರ್ಥರು, ಕಾರ್ಯಾಧ್ಯಕ್ಷ ರಾಜರ್ಷಿ ಡಾ. ಡಿ.ವೀರೇಂದ್ರ ಹೆಗ್ಗಡೆ, ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಪ್ರಾಚಾರ್ಯೆ ಮೈನಾವತಿ ದಿವಟೆ ಹರ್ಷವ್ಯಕ್ತಪಡಿಸಿದ್ದಾರೆ.



ಅಭಿವೃದ್ಧಿಯತ್ತ ಭಾರತ: ಸಚಿವ ಜೋಶಿ

ಹುಬ್ಬಳ್ಳಿ: ಯುದ್ಧ ಪರಿಣಾಮವಾಗಿ ಇಡೀ ವಿಶ್ವ ಜಾಗತಿಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಆದರೆ, ಭಾರತ ಎಲ್ಲವನ್ನೂ ಸೂಕ್ತವಾಗಿ ಎದುರಿಸುವ ಮೂಲಕ ಅಭಿವೃದ್ಧಿಯತ್ತ ಸಾಗುತ್ತಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತಿಳಿಸಿದರು.

ನಗರದ ಎಪಿಎಂಸಿ ಆವರಣದ ವಿವಿಧೋದ್ದೇಶ ಕೈಗಾರಿಕಾ ಮತ್ತು ವಾಣಿಜ್ಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಹಮ್ಮಿಕೊಂಡಿರುವ 'ಇನ್‌ಕಾಮೆಕ್ಸ್‌-2026 ಬೃಹತ್ ವಸ್ತು ಪ್ರದರ್ಶನ ಕಾರ್ಯಕ್ರಮಕ್ಕೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

ದೇಶ ದೇಶಗಳ ನಡುವೆ ಯುದ್ಧಗಳು ನಡೆಯುತ್ತಿದ್ದು, ಎಲ್ಲಿಯೂ ಶಾಂತಿ ಹಾಗೂ ನೆಮ್ಮದಿ ಇಲ್ಲವಾಗಿದೆ. ಕೆಲವು ದೇಶಗಳಲ್ಲಿ ಇಂಧನ, ವಿದ್ಯುತ್ ಸೇರಿದಂತೆ ಅಗತ್ಯ ವಸ್ತುಗಳ ಕೊರತೆ ಎದುರಿಸುವಂತಾಗಿದೆ. ಭಾರತದಲ್ಲಿ ಪೆಟ್ರೋಲ್ ಸೇರಿದಂತೆ ಎಲ್ಲವೂ ದೊರೆಯುತ್ತಿದೆ ಎಂದರು.

ನವೀಕರಿಸಬಹುದಾದ ಇಂಧನ, ಹೈಡ್ರೋಜನ್ ಶೇಖರಣೆ ಮಾಡಲಾಗಿದೆ. ಭಾರತ ವಿಶ್ವದಲ್ಲಿಯೇ ಅತ್ಯಂತ ರೈಲ್ವೆ ಸಂಪರ್ಕ ಹೊಂದಿದೆ. ರೈಲ್ವೆ ವಿದ್ಯುತೀಕರಣ ಮಾಡಿದ ಎರಡನೇ ದೇಶವಾಗಿದೆ. 2040ರಲ್ಲಿ ಭಾರತ ವಿಕಸಿತವಾಗಬೇಕು. ದೇಶ ಉತ್ಪನ್ನಗಳು ಹಾಗೂ ಸರ್ವಿಸ್ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಯಾಗುತ್ತಿವೆ. ಎಲೆಕ್ಟ್ರಾನಿಕ್

'ಇನ್‌ಕಾಮೆಕ್ಸ್‌-2026 ಬೃಹತ್ ವಸ್ತು ಪ್ರದರ್ಶನಕ್ಕೆ ಚಾಲನೆ



ಉಪಕರಣಗಳಿಗೆ ಭಾರಿ ಬೇಡಿಕೆ ಬಂದಿದೆ ಎಂದು ಹೇಳಿದರು.

ಭಾರತ ಅತೀ ಹೆಚ್ಚು ಯುವಕರ ಹೊಂದಿದ ದೇಶವಾಗಿದ್ದು, ಜಾಗತಿಕ ಮಟ್ಟದಲ್ಲಿ ವಿಶ್ವಾಸ ಹೆಚ್ಚಾಗುತ್ತಿವೆ. ಬೇರೆ ದೇಶಕ್ಕೆ ಹೋಗುವ ಮಾರುಕಟ್ಟೆ ಭಾರತಕ್ಕೆ ಬರುತ್ತಿವೆ. ಸಮ್ಮಿಕಂಡಕ್ಟರ್ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ದೇಶ ಮ್ಯಾನಿಪೆಕ್ಚರಿಂಗ್ ಹಬ್ ಆಗುತ್ತಿದೆ. ರೈಲ್ವೆ, ಬಂದರು, ರಸ್ತೆ ಹಾಗೂ ವಿಮಾನ ನಿಲ್ದಾಣ ಅಭಿವೃದ್ಧಿಯಾಗುತ್ತಿದ್ದು, ಕೈಗಾರಿಕೋದ್ಯಮಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಹುಬ್ಬಳ್ಳಿ-ಅಂಕೋಲಾ ರೈಲ್ವೆ ಅಭಿವೃದ್ಧಿ ಶೀಘ್ರದಲ್ಲಿ ಅನುಮತಿ ಸಿಗಲಿದ್ದು, ಈ ಭಾಗದ ಉದ್ಯಮಿಗಳಿಗೆ ಅನುಕೂಲವಾಗಲಿದೆ. ಹೈಸ್ಪೀಡ್ ರೈಲುಗಳ ಹೆಚ್ಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಮಾತನಾಡಿ, ದೇಶದಲ್ಲಿ ಸಣ್ಣ ಕೈಗಾರಿಗಳು ಉಳಿದರೆ ಮಾತ್ರ ದೇಶ ಉಳಿಯಲು ಸಾಧ್ಯ. ದೊಡ್ಡ ಕೈಗಾರಿಕೆಗಳಿಂದ ಸ್ಥಳೀಯರಿಗೆ ಉದ್ಯೋಗ ದೊರೆಯುವುದಿಲ್ಲ. ಅದು ಸಣ್ಣ ಉದ್ಯಮಗಳಿಂದ ಮಾತ್ರ ಸಾಧ್ಯ. ವಾಣಿಜ್ಯೋದ್ಯಮ ಸಂಸ್ಥೆ ಈ ನಿಟ್ಟಿನಲ್ಲಿ ಯೋಚಿಸಿ ಅದಕ್ಕೆ ಬೇಕಾದ ಮೂಲಸೌಕರ್ಯ ಪಡೆಯಲು ಧ್ವನಿ ಎತ್ತಬೇಕು ಎಂದು ತಿಳಿಸಿದರು.

ಸಣ್ಣ ಉದ್ಯಮಗಳ ಪ್ರೋತ್ಸಾಹಿಸಲು ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗೂ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆಯುತ್ತೇನೆ. 4 ಟ್ರೀಲಿನ್ ಯಾವ ಪ್ರಧಾನಿ ದೇಶದಲ್ಲಿ ಇದ್ದರು ಆಗುತ್ತಿತ್ತು. ಆರ್ಥಿಕವಾಗಿ ನಾಲ್ಕನೇ ಸ್ಥಾನದಲ್ಲಿದ್ದ ಭಾರತ ಈಗ 6 ನೇಸ್ಥಾನಕ್ಕೆ ಇಳಿದಿದೆ. ಈ ಬಗ್ಗೆ ಯಾರು ಮಾತನಾಡಲ್ಲ ಎಂದು ಪ್ರಶ್ನಿಸಿದರು.

> **ನಾನು ಸಿಎಂ ಇದ್ದಾಗ ಬೆಂಗಳೂರು ಹೊರತು ಪಡಿಸಿ ಉಳಿದ ನಗರಗಳ ಕೈಗಾರಿಕಾಭಿವೃದ್ಧಿ 6 ಟೌನ್ ಶಿಪ್ ಯೋಜನೆ ರೂಪಿಸಿದ್ದೆ. ಅದು ಹಾಗೇ ಉಳಿದಿದೆ. ಈ ಕುರಿತು ಸರ್ಕಾರದ ಮೇಲೆ ಒತ್ತಡ ತಂದು ಕಾರ್ಯ ರೂಪಕ್ಕೆ ಬರುವಂತೆ ನೀವು ಶ್ರಮಿಸಿ ಇದಕ್ಕೆ ನನ್ನ ಸಹಕಾರವಿದೆ.**
> ■ **ಬಸವರಾಜ ಬೊಮ್ಮಾಯಿ, ಸಂಸದ**

ಕೆಎಲ್ ಸಂಸ್ಥೆಯ ಪ್ರಭಾಕರ ಕೋರೆ, ಟಾಟಾ ಪ್ರೊಜೆಕ್ಟ್ ಎಂ.ಡಿ ವಿನಾಯಕ ಪೈ, ಜೆಎಸ್ ಡಬ್ಲ್ಯೂ ಸಜ್ಜನ ಜಿಂದಾಲ ಅನುಪಸ್ಥಿತಿಯಲ್ಲಿ ಮುರ್ಗನ್ ಅವರಿಗೆ ಜೀವನ ಸಾಧನೆ ಪ್ರಶಸ್ತಿ ಗೌರವಿಸಲಾಯಿತು.

ರಾಜ್ಯ ಸಭಾ ಸದಸ್ಯ ನಾರಾಯಣಸಾ ಬಾಂಡಗೆ, ಶಾಸಕ ಮಹೇಶ ಟೆಂಗಿನಕಾಯಿ, ಎನ್.ಎಚ್. ಕೋನರಡ್ಡಿ, ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ, ಇನ್ ಕಾಮೆಕ್ಸ್ ಅಧ್ಯಕ್ಷ ಮಹಾದೇವ ಕರಮರಿ, ಪ್ರವೀಣ ಅಗಡಿ, ಪ್ರಕಾಶ ಶೃಂಗೇರಿ, ಸಿದ್ದೇಶ್ವರ ಕಮ್ಮಾರ, ಉದಯ ರೇವಣಕರ, ವೀರಣ್ಣ ಕಲ್ಲೂರ, ಪಿ.ಕೆ.ಮುದಗಲ್, ಜಯಪ್ರಕಾಶ ಟೆಂಗಿನಕಾಯಿ, ಎಂ.ಸಿ.ಹಿರೇಮಠ, ಮೋಹನ ಲಿಂಬಿಕಾಯಿ, ವಿನಾಯಕ ಪೈ, ಎಸ್ .ವಿ.ಸಂಕನೂರ, ವಿನಯ ಜವಳಿ ಇದ್ದರು.

ಮರಳು ಸಾಗಾಣಿಕೆ ಮೇಲೆ ದಾಳಿ: 2 ವಾಹನ ಜಪ್ತಿ

ರಬಕವಿ-ಬನಹಟ್ಟಿ: ತಾಲೂಕಿನ ಮಾರಾಪುರ ಗ್ರಾಮದ ವ್ಯಾಪ್ತಿಯ ಘಟಪ್ರಭಾ ನದಿ ಪಾತ್ರದಲ್ಲಿ ನಡೆಯುತ್ತಿದ್ದ ಅಕ್ರಮ ಮರಳು ಸಾಗಾಣಿಕೆಯ ವಿರುದ್ಧ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿದ್ದಾರೆ.

ಖಚಿತ ಮಾಹಿತಿಯ ಮೇರೆಗೆ ಶನಿವಾರ ದಾಳಿ ನಡೆಸಿದ ಅಧಿಕಾರಿಗಳ ತಂಡವು, ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ಎರಡು ವಾಹನಗಳನ್ನು ಜಪ್ತಿ ಮಾಡಿದೆ. ನಿಯಮ ಬಾಹಿರವಾಗಿ ಮರಳು ಸಾಗಣೆ ಮಾಡುತ್ತಿದ್ದ ಹಿನ್ನೆಲೆಯಲ್ಲಿ ಅಧಿಕಾರಿಗಳು ಒಟ್ಟು 1,01,560 ರೂ. ದಂಡ ವಿಧಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ತನಿಖೆ ಮುಂದುವರಿದಿದ್ದು, ಆರೋಪಿಗಳ ವಿರುದ್ಧ ಬಿ.ಎನ್.ಎಸ್.ಎಸ್. ಕಲಂ 223, ಎಂ.ಎಂ.ಆರ್.ಡಿ ಕಾಯ್ದೆ 1957 ಹಾಗೂ ಕೆ.ಎಂ. ಎಂ.ಸಿ.ಆರ್. ನಿಯಮಗಳ ಅಡಿಯಲ್ಲಿ ಮಾನ್ಯ ಜೆ.ಎಂ. ಎಫ್.ಸಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.



ನದಿ ಮೂಲಗಳಿಂದ ನೈಸರ್ಗಿಕ ಸಂಪನ್ಮೂಲಗಳ ಲೂಟಿಯನ್ನು ತಡೆಯಲು ಕಂದಾಯ ಮತ್ತು ಗಣಿ ಇಲಾಖೆಗಳು ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿವೆ. ಅಕ್ರಮ ಗಣಿಗಾರಿಕೆ ಮತ್ತು ಮರಳು ಸಾಗಾಣಿಕೆಯಲ್ಲಿ ತೊಡಗುವವರ ವಿರುದ್ಧ ಮುಂದಿನ ದಿನಗಳಲ್ಲೂ ಇಂತಹ ಕಠಿಣ ಕ್ರಮಗಳು ಮುಂದುವರಿಯಲಿವೆ ಎಂದು ಅಧಿಕಾರಿಗಳ ತಂಡವು ಎಚ್ಚರಿಸಿದೆ.

ಆದರ್ಶ ಮಹಾವಿದ್ಯಾಲಯದಲ್ಲಿ ಉಚಿತ ಬ್ರಿಜ್ ಕೋರ್ಸ್

ಹುಬ್ಬಳ್ಳಿ: 2026ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳಿಗಾಗಿ ಆದರ್ಶ ಪಿಯು ಸೈನ್ಸ್ ಕಾಲೇಜಿನಲ್ಲಿ ದಿನಾಂಕ 27/04/2026ರ ಸೋಮವಾರದಿಂದ ಬೆಳಗ್ಗೆ 10 ಗಂಟೆಗೆ ವಿಜ್ಞಾನ ವಿಷಯಗಳಿಗೆಹಾಗೂಪ್ರ್ಯಾಕ್ಟಿಕಲ್‌ಗಳಿಗೆಸಂಬಂಧಪಟ್ಟಂತೆ ಬ್ರಿಜ್ ಕೋರ್ಸ್‌ನ್ನು ನಡೆಸಲಾಗುತ್ತದೆ.

ಆಸಕ್ತ ವಿದ್ಯಾರ್ಥಿಗಳು ಉಚಿತವಾಗಿ ನೋಂದಣಿ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಆದರ್ಶ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯ ಲಿಂಗರಾಜನಗರ ಹುಬ್ಬಳ್ಳಿ-580031, ಮೊಬೈಲ್ ನಂ.7204593475, 9741130029 ಸಂಪರ್ಕಿಸಬಹುದು.

ಕಿರುಸುದ್ದಿ

ಇಬ್ಬರ ಮೇಲೆ ಮಾರಣಾಂತಿಕ ಹಲ್ಲೆ

ಕಲಬುರಗಿ: ರಸ್ತೆ ಮೇಲೆ ನಿಲ್ಲಿಸಿದ್ದ ಆಟೋವನ್ನು ಪಕ್ಕಕ್ಕೆ ಹಾಕುವಂತೆ ಕೇಳಿದ ವಿಚಾರಕ್ಕೆ ಗಲಾಟೆ ಉಂಟಾಗಿ, ಇಬ್ಬರ ಮೇಲೆ ಮಾರಣಾಂತಿಕ ಹಲ್ಲೆ ನಡೆದ ಘಟನೆ ಕಲಬುರಗಿ ತಾಲೂಕಿನ ಭೀಮಳ್ಳಿ ಗ್ರಾಮದಲ್ಲಿ ನಡೆದಿದೆ.

ಚಿತ್ತಾಪುರ ತಾಲೂಕಿನ ನಾಲವಾರ ಗ್ರಾಮದ ನಿವಾಸಿಗಳಾದ ತೋಟೆಂದ್ರ ಮತ್ತು ಸುನೀಲ್ ಎಂಬ ಸಹೋದರರು ತಮ್ಮ ಸಹೋದರಿಯ ಮನೆಯಲ್ಲಿ ನಡೆದ ಕಾರ್ಯಕ್ರಮಕ್ಕೆ ಭೀಮಳ್ಳಿ ಗ್ರಾಮಕ್ಕೆ ತೆರಳಿದ್ದರು. ಕಾರ್ಯಕ್ರಮ ಮುಗಿಸಿಕೊಂಡು ಸಹೋದರಿಯನ್ನು ಮನೆಗೆ ಬಿಡಲು ಕಾರಿನಲ್ಲಿ ವಾಪಸ್ ತೆರಳುತ್ತಿದ್ದ ವೇಳೆ ಈ ಘಟನೆ ನಡೆದಿದೆ.

ರಸ್ತೆಯ ಮಧ್ಯೆ ಆಟೋ ನಿಲ್ಲಿಸಿದ್ದರಿಂದ ಅದನ್ನು ಪಕ್ಕಕ್ಕೆ ಹಾಕುವಂತೆ ಕೇಳಿದಾಗ ಮಾತಿನ ಚಕಮಕಿ ಉಂಟಾಗಿ, ಬಳಿಕ ಗಲಾಟೆಗೆ ತಿರುಗಿದೆ. ಈ ವೇಳೆ ಆರೋಪಿಗಳು ಕಟ್ಟಿಗೆ ದೊಣ್ಣೆಯಿಂದ ತೋಟೆಂದ್ರ ಮತ್ತು ಸುನೀಲ್ ಮೇಲೆ ಮನಸೋಇಚ್ಛೆ ಹಲ್ಲೆ ನಡೆಸಿದ್ದಾರೆ.ಹಲ್ಲೆಯಿಂದ ಇಬ್ಬರು ಸಹೋದರರಿಗೆ ಗಾಯಗಳಾಗಿದ್ದು, ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಈ ಕುರಿತು ಸಬ್ ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ನದಿಯಲ್ಲಿ ಮುಳುಗಿ ಯುವಕ ಸಾವು

ಕಲಾದಗಿ: ತುಳಸಿಗೇರಿಯ ಮಾರುತೇಶ್ವರ ದೇವರ ಓಕುಳಿ ಏ.27ರಂದು ನಡೆಯಲಿದ್ದು, ಇದಕ್ಕೂ ಮುನ್ನ ಸಂಪ್ರದಾಯದಂತೆ ಓಕುಳಿ ಹೊಂಡಕ್ಕೆ ನೀರು ಹಾಕಲು ಕೃಷ್ಣಾ ನದಿಗೆ ನೀರು ತರಲು ಹೋಗಿದ್ದ ಸಮೀಪದ ತುಳಸಿಗೇರಿಯ ಯುವಕನೋರ್ವ ನದಿಯ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ದುರ್ಘಟನೆ ಶನಿವಾರ ಮುಂಜಾನೆ ಸಂಭವಿಸಿದೆ.



ವಿಜಯಪುರ ಜಿಲ್ಲೆಯ ಕೊಲ್ಹಾರ ಸಮೀಪದ ಕೃಷ್ಣಾ ನದಿಯಲ್ಲಿ ಈ ದುರ್ಘಟನೆ ನಡೆದಿದ್ದು, ಸಮೀಪದ ತುಳಸಿಗೇರಿಯ ಮಹಾಂತೇಶ ಲೋಕೂರ(19) ಎಂಬ ಯುವಕ ಮೃತಪಟ್ಟಿದ್ದಾನೆ.

ಶನಿವಾರದಂದು ಕೊಲ್ಹಾರದ ಸಮೀಪದ ಕೃಷ್ಣಾ ನದಿಯ ನೀರು ತಗೆದುಕೊಂಡ ಹೋಗಲು ಊರವರೊಂದಿಗೆ ಈತ ಬಂದಿದ್ದ. ಈ ಸಂದರ್ಭದಲ್ಲಿ ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ ಎಂದು ತಿಳಿದು ಬಂದಿದ್ದು, ಪ್ರಕರಣ ಬೀಳಗಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಜೆಎಸ್ಸೆಸ್ ಆಂಗ್ಲಶಾಲೆ ನೂರರಷ್ಟು ಸಾಧನೆ





ಧಾರವಾಡ: ಕಳೆದ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ನಗರದ ಜನತಾ ಶಿಕ್ಷಣ ಸಮಿತಿಯ ಸವದತ್ತಿ ರಸ್ತೆಯಲ್ಲಿನ ಶ್ರೀ ಮಂಜುನಾಥೇಶ್ವರ ಆಂಗ್ಲ ಮಾಧ್ಯಮ ಶಾಲೆ ಶೇ.100ರಷ್ಟು ಫಲಿತಾಂಶ ದಾಖಲಿಸಿದೆ.

ಪ್ರೀತಂ ಕಟಗೇರಿ ಶೇ.98.08, ಪ್ರಜ್ವಲ ಮಹಾಲೆ ಶೇ.97.6, ಅಮೃತ ಹೊನ್ನಪ್ಪಗೌಡ್ರ ಶೇ.97.28, ಐಶ್ವರ್ಯ ಹೊನ್ನಪ್ಪಗೌಡ್ರ ಶೇ.97.12, ಸೌಮ್ಯಾ ವಾಲಿಸುಂಕದ ಶೇ.96.64 ಹಾಗೂ ಸ್ಫೂರ್ತಿ ಬೂಸನ್ನವರ ಶೇ.96.16 ಅಂಗಳನ್ನು ಪಡೆದಿದ್ದಾರೆ. ತಸ್ನಿಮ ಮಿರಜಕರ ಶೇ.96.16, ಪ್ರೀಯಾಂಕಾ ಕೊಳ್ಳಿ ಶೇ.96 ಹಾಗೂ ಚೈತ್ರಾ ಗರ್ಜೂರ ಶೇ.95.84, ಚೈತ್ರಾ ಸತ್ಯನ್ನವರ ಶೇ.95.02, ಇಂದ್ರಜೀತ ಹೂಗಾರ ಶೇ.94.24, ಮಂಜುನಾಥ ಗುಡಿಸಾಗರ ಶೇ.93.76 ಅಂಕ ಪಡೆದಿದ್ದಾರೆ. ರಶ್ವೀನ್ ಶೆಟ್ಟಿ ಶೇ.93.76, ತರುಣಗೌಡ ಪಾಟೀಲ ಶೇ.93.60, ಮೊಹಮ್ಮದ್ ನುಮಾನ್ ಬೆಣ್ಣೆ ಶೇ.93.28, ಪ್ರೀಶಾ ಅಸ್ವಗಿ ಶೇ.93.28, ಸನತ ಸವಾಯಿ ಶೇ.93.12ರಷ್ಟು ಅಂಕಗಳು ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಜೆಎಸ್ಸೆಸ್ ಅಧ್ಯಕ್ಷ ಉಡಪಿ ಪೇಜಾವರ ವಿಶ್ವಪ್ರಸನ್ನ ತೀರ್ಥರು, ಕಾರ್ಯಾಧ್ಯಕ್ಷ ರಾಜರ್ಷಿ ಡಾ. ಡಿ.ವೀರೇಂದ್ರ ಹೆಗ್ಗಡೆ, ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಪ್ರಾಚಾರ್ಯೆ ತ್ರಿವೇಣಿ ಆರ್, ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

ರಾಮಲಿಂಗೇಶ್ವರ ಪ್ರೌಢ ಶಾಲೆ ವಿದ್ಯಾರ್ಥಿಗಳ ಸಾಧನೆ



ಬೀಳಗಿ : ತಾಲೂಕಿನ ಕುಂದರಗಿ ಗ್ರಾಮದ ಶ್ರೀ ರಾಮಲಿಂಗೇಶ್ವರ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಠ್ಠಲ ಪ್ರಕಾಶ ಭಜಂತ್ರಿ ಶೇ.95.20 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ, ಅನನ್ಯ ಮಲ್ಲಪ್ಪ ಮಮದಾಪುರ ಶೇ.92.96 ದ್ವಿತೀಯ ಮತ್ತು ಸುನಿತಾ ತಿಮ್ಮಣ್ಣ ದೇಶಭಾಗ ಶೇ.91.68 ತೃತೀಯ ಸ್ಥಾನ ಪಡೆದಿದ್ದು, ಡಿಸ್ಟಿಂಕ್ಷನ್ 13, ಫಸ್ಟ್ ಕ್ಲಾಸ್ 46, ಸೆಕೆಂಡ್ ಕ್ಲಾಸ್ 27 ಮತ್ತು 29 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆಂದು ಮುಖ್ಯೋಪಾಧ್ಯಾಯ ಜಿ.ಬಿ. ಗುಳೇದ ತಿಳಿಸಿದ್ದಾರೆ.

ಸಂಸ್ಥೆಯ ಅಧ್ಯಕ್ಷರು ವೀರಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಚೇರ್ಮನ್‌ರಾದ ಬಿ. ಬಿ.ಖೋತ, ಪ್ರೌಢ ಶಾಲಾ ಚೇರ್ಮನ್‌ರಾದ ಬಿ.ಟಿ.ಪಾಟೀಲ, ಕಾರ್ಯದರ್ಶಿಗಳು, ನಿರ್ದೇಶಕರು, ಆಡಳಿತ ಮಂಡಳಿಯ ಸರ್ವಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಶುಭ ಹಾರೈಸಿದ್ದಾರೆ.

ಸನ್ಮಾನ: ಸಾಧಕ ವಿದ್ಯಾರ್ಥಿಗಳಾದ ವಿಠ್ಠಲ ಭಜಂತ್ರಿ, ಅನನ್ಯ ಮಮದಾಪುರ, ಸುನಿತಾ ದೇಶಭಾಗ ಅವರನ್ನು ಶ್ರೀ ರಾಮಲಿಂಗೇಶ್ವರ ವಿದ್ಯಾವರ್ಧಕ ಸಂಘದ ಚೇರಮನ್ ಬಸವರಾಜ ಖೋತ ಸನ್ಮಾನಿಸಿದರು. ವಿದ್ಯಾ ಸಂಸ್ಥೆ ನಿರ್ದೇಶಕ ಗಿರಿಯಪ್ಪ ಕಟಗಿ, ಪಾಂಡು ತಳವಾರ, ಮುಖ್ಯೋಪಾಧ್ಯಾಯ ಜಿ.ಬಿ.ಗುಳೇದ, ಶಿಕ್ಷಕ ರಾಜಕುಮಾರ ಜಾಧವ, ಪ್ರಕಾಶ ಭಜಂತ್ರಿ, ಬಸಲಿಂಗಪ್ಪ ಮಮದಾಪೂರ ಮತ್ತಿತರಿದ್ದರು.

'ಇಂಡಿಯನ್ ಜೇಮ್ಸ್ ಬಾಂಡ್ ಅಜಿತ್ ದೋವಲ್' ಕೃತಿ ಬಿಡುಗಡೆ

ಹುಬ್ಬಳ್ಳಿ: ಪತ್ರಕರ್ತ ರವೀಂದ್ರ ಜೋಶಿ ಬರೆದಿರುವ 'ಇಂಡಿಯನ್ ಜೇಮ್ಸ್ ಬಾಂಡ್ ಅಜಿತ್ ದೋವಲ್' ಕೃತಿಯನ್ನು ವಿಆರ್‌ಎಲ್ ಸಮೂಹ ಸಂಸ್ಥೆಗಳ ಚೇರ್ಮನ್ ಡಾ.ವಿಜಯ ಸಂಕೇಶ್ವರ ಅವರು ಶನಿವಾರ ಬಿಡುಗಡೆಗೊಳಿಸಿದರು.

ಇಲ್ಲಿಯ ಬೈಲಪ್ಪನವರ ನಗರದ ಪೇಬಲ್ಸ್ ಬೈ ಡೋಪೇಜ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಡಾ.ವಿಜಯ ಸಂಕೇಶ್ವರ ಅವರು, ಓದುವ ಅಭಿರುಚಿ ಕಡಿಮೆಯಾಗುತ್ತಿರುವ ದಿನಗಳಲ್ಲಿ ರವೀಂದ್ರ ಜೋಶಿ ಅವರು ಹೊಸ ಸಾಹಸ ಮಾಡಿದ್ದಾರೆ. ಇದಕ್ಕೆ ಸಾಹಿತ್ಯ ಪ್ರಕಾಶನ ಮುಖ್ಯಸ್ಥ ಎಂ.ಎ. ಸುಬ್ರಹ್ಮಣ್ಯ ಅವರು ಸಾಥ್ ನೀಡಿದ್ದಾರೆ. ಪುಸ್ತಕ ಚಿಕ್ಕದಾದರೂ ಸಂಗ್ರಹಯೋಗ್ಯ ಹಾಗೂ ದೋವಲ್ ಸಾಹಸದ ಕುರಿತ ಪುಸ್ತಕವಿದು ಎಂದರು.

ಚೆಂದದ ಭಾಷೆ ಬಳಕೆಯಾಗಿದೆ. ಖಡಕ್ ಮತ್ತು ನಿರ್ಭೀಡೆ ಬರವಣಿಗೆ ಇದೆ. ದೇಶದ ಹಿತಾಸಕ್ತಿ ಬಗ್ಗೆ ಗಮನ ಸೆಳೆದಿದ್ದಾರೆ. ಬರೆಯುವವರೂ ಕಡಿಮೆಯಾಗಿದ್ದಾರೆ. ರವೀಂದ್ರ ಜೋಶಿ ಅವರ ಬರವಣಿಗೆ ಅದ್ಭುತವಾಗಿ ಮೂಡಿ ಬಂದಿದೆ. ಈ ಪುಸ್ತಕ ಓದುವ ಅಭಿರುಚಿ ಬೆಳೆಸುತ್ತದೆ ಎಂದರು.

ಪುಸ್ತಕ ಕರ್ತೃ ರವೀಂದ್ರ ಜೋಶಿ ಮಾತನಾಡಿ, ಡಾ.ವಿಜಯ ಸಂಕೇಶ್ವರ ಅವರು ಪುಸ್ತಕ ಬಿಡುಗಡೆ ಮಾಡಬೇಕೆಂಬ ಇಚ್ಛೆ ಇತ್ತು. ಅವರು ಪುಸ್ತಕ ಬಿಡುಗಡೆಗೆ ಒಪ್ಪಿ ಲೋಕಾರ್ಪಣೆ ಮಾಡಿದ್ದಾರೆ. ಇದು ನನಗೆ ಸಂತಸದ ದಿನ. ರಾಜಕಾರಣಿ ಅಲ್ಲದಿದ್ದರೂ ಅಜಿತ್ ದೋವಲ್ ಅವರು ದೇಶದ ಹಿತಾಸಕ್ತಿಗಾಗಿ ದುಡಿಯುತ್ತಿದ್ದಾರೆ. ಈ ಕುರಿತಾದ ವಿಸ್ತೃತ ಬರಹ ಪುಸ್ತಕದಲ್ಲಿ ಇದೆ ಎಂದರು.



ಸಾಹಿತ್ಯ ಪ್ರಕಾಶನದ ಮುಖ್ಯಸ್ಥ ಎಂ.ಎ.ಸುಬ್ರಹ್ಮಣ್ಯ ಮಾತನಾಡಿ, ಪತ್ರಕರ್ತ ರವೀಂದ್ರ ಜೋಶಿ ಅವರು ಅಜಿತ್ ದೋವಲ್ ಕುರಿತು ಬರೆದ ಪ್ರತಿಯನ್ನು ನನ್ನ ಕೈಗಿಟ್ಟರು. ಇದನ್ನು ಪ್ರಕಟಿಸಿದ ಮೊದಲ ಆವೃತ್ತಿಯ ಪುಸ್ತಕಗಳು ಮಾರಾಟವಾದವು. ಇದು ಎರಡನೇ ಆವೃತ್ತಿ. ಈ ಪುಸ್ತಕ ಅಪಾರ ಪ್ರಮಾಣದಲ್ಲಿ ಓದುಗರ ಮೆಚ್ಚುಗೆ ಗಳಿಸಿದೆ ಎಂದರು.

ಪೇಬಲ್ಸ್ ಬೈ ಡೋಪೇಜ್ ಮಾಲೀಕ ಋತ್ವಿಕ್ ಸುಬ್ರಹ್ಮಣ್ಯ ಇತರರಿದ್ದರು.

ಝುರಾಕ್ಸ್ ಅಂಗಡಿ ನಡೆಸುವ ದಂಪತಿ ಪುತ್ರ ರಾಜ್ಯಕ್ಕೆ 8ನೇ ರ್‍ಯಾಂಕ್

▸ **ಸಂಜೀವ ಮೂ.ಬ್ಯಾಕುಡೆ**

ಕುಡಚಿ: ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಶಿಕ್ಷಣ ಸಂಸ್ಥೆಯ ಹೊಸ ಪ್ರೌಢಶಾಲೆ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶತಪ್ರತಿಶತ ಫಲಿತಾಂಶ ದಾಖಲಿಸಿ ಗಮನ ಸೆಳೆದಿದೆ. ಶಾಲೆಯ 66 ವಿದ್ಯಾರ್ಥಿಗಳಲ್ಲಿ 66 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಮತ್ತೊಮ್ಮೆ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದೆ.

ಈ ಸಾಧನೆಯ ನಡುವೆ, ಪಟ್ಟಣದ ಝುರಾಕ್ಸ್ ಅಂಗಡಿ ನಡೆಸುವ ದಂಪತಿಯ ಏಕೈಕ ಪುತ್ರ ಶಿವಂ ಮೇಣಸಿನಕಾಯಿ 625ರಲ್ಲಿ 618 ಅಂಕಗಳನ್ನು ಪಡೆದು ರಾಜ್ಯಕ್ಕೆ 8ನೇ ರ್‍ಯಾಂಕ್, ತಾಲೂಕಿಗೆ 5ನೇ ಸ್ಥಾನ ಹಾಗೂ ಕುಡಚಿ ಪಟ್ಟಣ ಮತ್ತು ಶಾಲೆಗೆ ಪ್ರಥಮ ಸ್ಥಾನಗಳಿಸಿ ಹೆಮ್ಮೆಯ ಸಾಧನೆ ಮಾಡಿದ್ದಾನೆ.

ಶಿವಂನ ತಂದೆ ರಾಜು ಮೇಣಸಿನಕಾಯಿ ಮತ್ತು ತಾಯಿ ಶೈಲಾ ಮೇಣಸಿನಕಾಯಿ ಕುಡಚಿ ಪಟ್ಟಣದಲ್ಲಿ ಝುರಾಕ್ಸ್ ಅಂಗಡಿ ನಡೆಸುತ್ತಾ ಬಂದ ಆದಾಯದಲ್ಲೇ ಕುಟುಂಬದ ಖರ್ಚು ನಿರ್ವಹಿಸುತ್ತಿದ್ದಾರೆ. ಆರ್ಥಿಕ ಸವಾಲುಗಳ ನಡುವೆಯೂ ಮಗನ ವಿದ್ಯಾಭ್ಯಾಸವೇ ಮುಖ್ಯ ಗುರಿ ಎಂದು ಮನಸ್ಸು ಮಾಡಿಕೊಂಡ ದಂಪತಿ, ಅವನನ್ನು ಉನ್ನತ ಸ್ಥಾನದಲ್ಲಿ ನೋಡುವ ಕನಸನ್ನು ಸಾಕಾರಗೊಳಿಸುವ ದಾರಿಯಲ್ಲಿ ಮಹತ್ವದ ಹೆಜ್ಜೆ ಇಟ್ಟಿದ್ದಾರೆ.



ಶಿವಂ ಈಗಾಗಲೇ ಜಮಖಂಡಿಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ತುಂಗಳ ಕಾಲೇಜಿನ ಪ್ರವೇಶ ಪರೀಕ್ಷೆಯಲ್ಲಿ 200ಕ್ಕೆ 149 ಅಂಕಗಳನ್ನು ಪಡೆದು, ವಿಜ್ಞಾನ ವಿಭಾಗಕ್ಕೆ ರಿಯಾಯಿತಿ ಶುಲ್ಕದಲ್ಲಿ ಪ್ರವೇಶ ಪಡೆಯುವ ಮೂಲಕ ಮುಂದಿನ ಶೈಕ್ಷಣಿಕ ಹಾದಿಗೂ ಭದ್ರ ಅಡಿಪಾಯ ಹಾಕಿದ್ದಾನೆ.

ಶಾಲೆಯ ಒಟ್ಟು ಫಲಿತಾಂಶದಲ್ಲಿ 05 ಡಿಸ್ಟಿಂಕ್ಷನ್, 32 ಪ್ರಥಮ ಶ್ರೇಣಿ ಹಾಗೂ 29 ದ್ವಿತೀಯ ಶ್ರೇಣಿ ಫಲಿತಾಂಶ ದಾಖಲಾಗಿದ್ದು, ಶಾಲೆಯ ಶಿಕ್ಷಕ ವೃಂದದ ಪರಿಶ್ರಮಕ್ಕೆ ಇದು ಸಾಕ್ಷಿಯಾಗಿದೆ.

ಸಾಧನೆ ಮಾಡಿದ ವಿದ್ಯಾರ್ಥಿಗೆ ಶಾಲಾ ಮುಖ್ಯೋಪಾಧ್ಯಾಯ ಎ.ಎಸ. ಟೊಣ್ಣೆ, ಶಿಕ್ಷಕರಾದ ಆರ್.ಎ. ಭಾವಿ, ಎಸ್.ಎಂ. ಭಾವಿ, ಬಿ.ಆರ್. ಹೊನ್ನಕಟ್ಟಿ ಸೇರಿದಂತೆ ಸಿಬ್ಬಂದಿ ವರ್ಗ ಶಿವಂ ಮನೆಗೆ ಭೇಟಿ ನೀಡಿ ಹರ್ಷ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಮಹಿಳಾ ವಿರೋಧಿ: ಜೋಶಿ ಆಕ್ರೋಶ

ಹುಬ್ಬಳ್ಳಿ: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಒಬಿಸಿ ಮೀಸಲಾತಿಯನ್ನು ಹಿಂದಿನ ಪ್ರಧಾನಿಗಳಾದ ನೆಹರೂ ಹಾಗೂ ರಾಜೀವ ಗಾಂಧಿ ವಿರೋಧಿಸಿದ್ದರು. ಈಗ ಮಹಿಳಾ ಮೀಸಲಾತಿಯನ್ನು ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರು ಧಿಕ್ಕರಿಸುವ ಮೂಲಕ ಕಾಂಗ್ರೆಸ್ ಮೀಸಲಾತಿ ಮತ್ತು ಮಹಿಳಾವಿರೋಧಿ ಎಂಬುದು ಮತ್ತೊಮ್ಮೆ ಸಾಬೀತಾಗಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹರಿಹಾಯ್ದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 2011ರ ಜನಗಣತಿ ಆಧಾರಿತವಾಗಿ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಶೇ.33ರ ಮಹಿಳಾ ಮೀಸಲಾತಿ ಎರಡನ್ನೂ ಕೇಂದ್ರ ಸರ್ಕಾರ ಒಟ್ಟೊಟ್ಟಿಗೆ ತೆಗೆದುಕೊಂಡಿದೆ. ಆದರೆ, ಕಾಂಗ್ರೆಸ್ ಜನರ ವಿಶ್ವಾಸ ಕಳೆದುಕೊಂಡ ಭಯದಲ್ಲಿ ವಿರೋಧಿಸುತ್ತಿದೆ ಎಂದು ಆರೋಪಿಸಿದರು. ಕಾಂಗ್ರೆಸ್ ಜನಗಣತಿ ಆಧಾರಿತವಾಗಿ ಕ್ಷೇತ್ರ ಪುನರ್ ವಿಂಗಡಣೆ ಮಾಡಿದರೆ ದಕ್ಷಿಣ ರಾಜ್ಯಗಳಿಗೆ, ಸಣ್ಣ ರಾಜ್ಯಗಳಿಗೆ ಅನ್ಯಾಯ ಆಗುತ್ತದೆ ಎಂಬುದು ಮೊಂಡವಾದವಾಗಿದೆ. ಪದೇ ಪದೆ

ದಕ್ಷಿಣ ಭಾರತ, ಉತ್ತರ ಭಾರತ ಎಂದೆಣಿಸುತ್ತ, ಈಗ ಡಿಲಿಮಿಟೇಷನ್ ವಿಚಾರದಲ್ಲೂ ಅದೇ ವರ್ತನೆ ತೋರುತ್ತಿದೆ. ಡಿಲಿಮಿಟೇಷನ್ ವಿಚಾರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಮಸ್ಯೆ ಇದ್ದದ್ದೇ ನಿಜವಾದರೆ, ಬಿಬಿಎಂಪಿಯನ್ನೇಕೆ ಡಿಲಿಮಿಟೇಷನಗ್ ಮಾಡಿದ್ದೀರಿ ಎಂದು ಪ್ರಶ್ನಿಸಿದರು. ಲೋಕಸಭೆ ಸ್ಥಾನಗಳು 543 ಇರಲಿ, 850 ಆಗಲಿ ಮತದಾರರು ಮಾತ್ರ ಅವರೇ ಇರುತ್ತಾರೆ. ಒಂದೊಂದು ಕ್ಷೇತ್ರದಲ್ಲಿ 40-50 ಲಕ್ಷ ಮತದಾರರಿದ್ದಾರೆ. ಇಷ್ಟು ಜನಸಂಖ್ಯೆಗೆ ಒಬ್ಬ ಸಂಸದರು ಎಲ್ಲರನ್ನೂ ತಲುಪಲು ಸಾಧ್ಯವಿಲ್ಲ, ಕಾಂಗ್ರೆಸ್ ಇದರ ಅರಿವಿಲ್ಲವೇ. ಇದೇನು



ಖರ್ಗೆಯಿಂದ ಕೆಳಮಟ್ಟದ ಹೇಳಿಕೆ

ಮಲ್ಲಿಕಾರ್ಜುನ ಖರ್ಗೆ ತಮ್ಮ ಇಡೀ ರಾಜಕೀಯ ಜೀವನವನ್ನೇ ವಿಧಾನಸಭೆ, ರಾಜ್ಯಸಭೆ ಹಾಗೂ ಲೋಕಸಭೆಯಲ್ಲಿ ಕಳೆದಿದ್ದಾರೆ. ಹೀಗಿದ್ದರೂ ತೀರ ಕೆಳಮಟ್ಟಕ್ಕಿಳಿದಿರುವ ಖರ್ಗೆ, ಮೋದಿ ಅವರನ್ನು ಭಯೋತ್ಪಾದಕ ಎಂದು ಕರೆದಿದ್ದಾರೆ ಎಂದು ಜೋಶಿ ಬೇಸರ ವ್ಯಕ್ತಪಡಿಸಿ, 2011ರ ಜನಗಣತಿ ಆಧಾರಿತವಾಗಿ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಶೇ.33ರ ಮಹಿಳಾ ಮೀಸಲಾತಿ ಎರಡನ್ನೂ ಕೇಂದ್ರ ಸರ್ಕಾರ ಒಟ್ಟೊಟ್ಟಿಗೆ ತೆಗೆದುಕೊಂಡಿದೆ. ಆದರೆ, ಕಾಂಗ್ರೆಸ್ ಜನರ ವಿಶ್ವಾಸ ಕಳೆದುಕೊಂಡ ಭಯದಲ್ಲಿ ವಿರೋಧಿಸುತ್ತಿದೆ ಎಂದು ಆರೋಪಿಸಿದರು.

ಮುಂದಿನ ಹೋರಾಟದ ಬಗ್ಗೆ ಚರ್ಚೆ ನಡೆಯುತ್ತಿದೆ. ವಿಶೇಷ ಅವಕಾಶ ನೀಡಲು, ಮೀಸಲಾತಿ ಅವಶ್ಯ. ಡಿಲಿಮಿಟೇಷನ್ ಏನೇ ಆದರೂ ಕಾಂಗ್ರೆಸ್ ಸೋಲುವುದು ಖಚಿತ ಎಂದು ಹೇಳಿದರು. ಮೇಯರ್ ಜ್ಯೋತಿ ಪಾಟೀಲ್, ಜಿಲ್ಲಾ ಅಧ್ಯಕ್ಷೆ ಸೀಮಾ ಲದ್ವಾ, ಅಕ್ಕಮ್ಮ ಹೆಗಡೆ, ಉಮಾ, ನಾಗರತ್ನ ಬಳ್ಳಾರಿ, ಶಾಂತಾ ನಿರವಣೆ ಇದ್ದರು.

ಹರಿದ ಪ್ಯಾಂಟ್‌ನ ಕೇಜ್ರಿ 100 ಕೋಟಿ ಒಡೆಯ!

ಪುಟ ೧➔ ಮೋದಿಯವರ ನಾಯಕತ್ವದಲ್ಲಿ ತನಗೆ ತುಂಬು ನಂಬಿಕೆ ಮತ್ತು ತಾನು ಬಿಜೆಪಿ ಸೇರಲು ಕೂಡ ಇದೇ ಪ್ರೇರಣೆಯೇ ವಿನಾ ಯಾರ ಒತ್ತಡದಿಂದಲ್ಲ. 2024ರಲ್ಲಿ ಕೇಜ್ರಿವಾಲ್ ತಮ್ಮ ಆಪ್ತ ಸಹಾಯಕ ಬಿಭವ್ ಕುಮಾರ್‌ರಿಂದ ತನಗೆ ಹೊಡೆಸಿದ ಬಗ್ಗೆ ಉಲ್ಲೇಖಿಸಿ, ತಾನು ಬಿಜೆಪಿ ಸೇರಲು ಆ ನೋವಿನ ಹಿನ್ನೆಲೆ ಕೂಡ ಕಾರಣ ಎಂದರು.

ಪಂಜಾಬ್ ಆಪ್‌ನ ವೈಯಕ್ತಿಕ ಎಟಿಎಂ: ಆಪ್ ಈಗ ಅಧಿಕಾರದಲ್ಲಿರೋದು ಪಂಜಾಬ್‌ನಲ್ಲಿ ಮಾತ್ರ. ಆ ರಾಜ್ಯವನ್ನು ತನ್ನ ವೈಯಕ್ತಿಕ ಎಟಿಎಂ ಆಗಿ ಆಪ್ ಬಳಸಿಕೊಳ್ಳುತ್ತಿದೆ. ಯಾರು ಪಕ್ಷದ ವಿರುದ್ಧ ಧ್ವನಿ ಎತ್ತುವರೋ ಅವರು ಎಫ್‌ಐಆರ್ ಎದುರಿಸಬೇಕಾಗುತ್ತೆ. ಕೇಜ್ರಿವಾಲ್ ಬರೇ ಭ್ರಷ್ಟಾಚಾರ ಮತ್ತು ಗೂಂಡಾಗಿರಿಗೆ ಕುಖ್ಯಾತರು. ಇದೇ ವೇಳೆ ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರು ಜಗತ್ತಿನಲ್ಲೇ ಜನಪ್ರಿಯ ನಾಯಕ. ಶತ್ರುಗಳ ನೆಲೆಗಳಿಗೇ ನುಗ್ಗಿ ಅವರನ್ನು ಸಾಯಿಸಿದ ಆಪರೇಶನ್ ಸಿಂದೂರ್ ಇರಲಿ, ದೇಶವನ್ನು ಕಾಡಿದ್ದ ನಕ್ಸಲ್ ಪಿಡುಗಿನ ಅಂತ್ಯವಿರಲಿ ಅಥವಾ ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆ ಮಂಡನೆಯೇ ಆಗಿರಲಿ, ದೇಶದ ಅಭಿವೃದ್ಧಿಗಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ತಳೆದ ನಿರ್ಧಾರಗಳು ಐತಿಹಾಸಿಕ ಎಂದು ಮಲಿವಾಲ್ ಪ್ರಶಂಸೆಯ ನುಡಿಯಾಡಿದ್ದಾರೆ.

ಕೇಜ್ರಿವಾಲ್ ದೇಶದ್ರೋಹಿ: ತಾನು ಹಾಗೂ ತನ್ನ ಜತೆ ಬಿಜೆಪಿ ಸೇರಿರುವ ಆಪ್‌ನ ಇತರ ಆರು ಸಂಸದರಲ್ಲ, ಬದಲಾಗಿ ಕೇಜ್ರಿವಾಲ್ ಸ್ವಯಂ ನೈಜ ದೇಶದ್ರೋಹಿ ಎಂದು ಮಲಿವಾಲ್ ಆಪ್‌ನ ಪ್ರಸ್ತುತ ಆರೋಪಗಳಿಗೆ ತಿರುಗೇಟು ನೀಡಿದರು. 2011ರಲ್ಲಿ ಕೇಜ್ರಿವಾಲ್ ಭ್ರಷ್ಟಾಚಾರ ವಿರೋಧಿ ಆಂದೋಲನಕ್ಕೆ ನಾಂದಿ ಹಾಡುವ ಸಂದರ್ಭದಲ್ಲಿ ಹರಿದ ಪ್ಯಾಂಟ್ ಧರಿಸುತ್ತಿದ್ದರು. 2ರೂ. ಮೌಲ್ಯದ ಪೆನ್ ಬಳಸುತ್ತಿದ್ದರು ಮತ್ತು ತೀರಾ ಗುಜರಿಯಾದ ಕಾರಿನಲ್ಲಿ ಅಡ್ಡಾಡುತ್ತಿದ್ದರು. ಈಗ ಅವರದು ಐಷಾರಾಮಿ ಜೀವನ ಎಂದು ಮಲಿವಾಲ್ ಸರಣಿಯೋಪಾದಿಯಲ್ಲಿ ಆರೋಪಿಸಿದರು.

ಅಧಿಕಾರ ಸಿಕ್ಕಾಗ ವೈಭವೋಪೇತ ಜೀವನ: ಕೇಜ್ರಿವಾಲ್‌ರಿಂದ ದೇಶದಲ್ಲಿ ಪರಿವರ್ತನೆಯಾಗುವುದೆಂದು ನಾವೆಲ್ಲ ನಿರೀಕ್ಷೆ ಹೊಂದಿದ್ದೆವು. ಆಂದೋಲನ ಸಂದರ್ಭ ಇಡೀ ದೇಶಕ್ಕೆ ಭಾರೀ ಭರವಸೆಗಳು, ಸುಂದರ ಕನಸು ನೀಡಿ ಎಲ್ಲರೂ ಪ್ರಭಾವಿತರಾಗುವಂತೆ ಮಾಡಿದ್ದರು. ಆದರೆ ಅವರು ಮಾಡಿದ್ದೇನು? ಅಧಿಕಾರ ಕುರ್ಚಿ ದೊರೆಯುತ್ತಲೇ ಒಂದೆರಡಲ್ಲ, ಬರೋಬ್ಬರಿ ನೂರು ಕೋಟಿ ರೂ.ಮೌಲ್ಯದ ಅತ್ಯಾಧುನಿಕ ಬಂಗಲೆ ನಿರ್ಮಿಸಿಕೊಂಡರು. ಜತೆಗೊಂದು ಬಾರ್ ಸೇರ್ಪಡೆಯಾಯಿತು. ಕೋಟಿಗಟ್ಟಲೆ ಮೌಲ್ಯದ ಕಾರ್ಪೆಟ್‌ಗಳನ್ನು ಅಳವಡಿಸಿದರು. ಲಕ್ಷಾಂತರ, ಕೋಟ್ಯಂತರ ಮೌಲ್ಯದ ರೆಫ್ರಿಜರೇಟರ್, ವೈಭವದ ಪ್ರತೀಕವಾದ ಸೋಫಾ ಹೀಗೆ ವೈಭವೋಪೇತ ಜೀವನಕ್ಕೆ ಬೇಕಾದ ಸೌಲಭ್ಯಗಳನ್ನು ಸ್ವಂತಕ್ಕೆ ಮಾಡಿಕೊಂಡರು ಎಂದು ಮಲಿವಾಲ್ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದಾರೆ.

ಕೇಜ್ರಿ ಜತೆ ಯಾರೂ ಕೆಲಸ ಮಾಡಲಾಗದು: ಕೇಜ್ರಿವಾಲ್ ಜತೆ ಯಾರಿಗೂ ಕೆಲಸ ಮಾಡಲಾಗದು. ಆಪ್ ಹಿಂದಿನ ಆಪ್ ಆಗಿ ಉಳಿದಿಲ್ಲ, ಮಾಜಿ ಸಿಎಂ ಅರವಿಂದ ಕೇಜ್ರಿವಾಲ್ ಕೂಡ ಹಿಂದಿನ ಕೇಜ್ರಿವಾಲ್ ಅಲ್ಲ ಎಂದು ಟೀಕಾಪ್ರಹಾರ ಮಾಡಿರುವ ಆಪ್‌ನ ಮಾಜಿ ಸಂಸದೆ ಸ್ವಾತಿ ಮಲಿವಾಲ್, ಪ್ರಧಾನಿ ನರೇಂದ್ರ ಮೋದಿಯವರ ಗುಣಗಾನ ಮಾಡಿದ್ದಾರೆ. ಆಮ್ ಆದ್ಮಿ ಪಕ್ಷವೀಗ ಸುಳ್ಳು, ಭ್ರಷ್ಟಾಚಾರ ಮತ್ತು ಗೂಂಡಾಗಿರಿಗೆ ಕುಖ್ಯಾತವಾಗಿದೆ. ಆಪ್ ಪಕ್ಷವು ತನ್ನ ಹಿಂದಿನ ಎಲ್ಲಾ ಸಿದ್ಧಾಂತಗಳಿಗೆ ತಿಲಾಂಜಲಿ ಹೇಳಿದೆ. ನಾನು ನನ್ನ ಮನೆ ತೊರೆದು ಸುಮಾರು ಏಳು ವರ್ಷ ಕೊಳಗೇರಿಗಳಲ್ಲಿ ಜೀವಿಸಿದ್ದೆ. ನನ್ನ ಹುದ್ದೆ ತೊರೆದು ಆಪ್‌ನ ಪ್ರತಿ ಹೋರಾಟಗಳಿಗೆ ಕೈಜೋಡಿಸಿದ್ದೆ. ಪ್ರತಿಫಲವಾಗಿ ಸಿಎಂ ಕೇಜ್ರಿವಾಲ್ ನಿವಾಸದಲ್ಲೇ ಅವರ ಗೂಂಡಾಗಳು ನನ್ನನ್ನು ತಾರಾಮಾರ ಥಳಿಸಿಬಿಟ್ಟರು ಎಂದು ದೂರಿದರು.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಮಘೆ

ದಿನದ ಮಾತು

ಸತ್ಯವು ಮನುಷ್ಯನ ಘನತೆ, ಗೌರವವನ್ನು ಹೆಚ್ಚಿಸುತ್ತದೆ.
▲ಮಹಾವೀರ

ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

◆ ಗುಜರಾತ್ ಜನಗಳು ಅನಕ್ಷರಸ್ಥರು, ಹೀಗಾಗಿ ನರೇಂದ್ರ ಮೋದಿಯವರು ಅವರನ್ನು ಸುಲಭವಾಗಿ ಮೂರ್ಖರನ್ನಾಗಿಸುತ್ತಾರೆ
- ಮಲ್ಲಿಕಾರ್ಜುನ ಖರ್ಗೆ
- **ಅನಕ್ಷರಸ್ಥರೆಲ್ಲ ಅಜ್ಞಾನಿಗಳಲ್ಲ, ಅಕ್ಷರಸ್ಥ ಅಹಂಕಾರಿಗಳಿಗೆ ದೃಷ್ಟಿದೋಷದಿಂದ ಹಾಗೆ ಕಂಡರೆ ಅನಕ್ಷರಸ್ಥರು ಜವಾಬ್ದಾರಿಯಲ್ಲ!**

ದಿನ ಭವಿಷ್ಯ

ಮೇಷ ವೈಯಕ್ತಿಕ ಗುರಿ ಸಾಧಿಸಲು ಹೆಚ್ಚು ಆದ್ಯತೆ ಕೊಡುವಿರಿ. ಆದರೆ ಆಂಶಿಕ ಸಫಲತೆ. ಸ್ವಲ್ಪ ಮಟ್ಟಿನ ಹತಾಶೆ, ಅಸಹನೆ ಉಂಟಾದೀತು.

ವೃಷಭ ಸಾಧನೆಯ ದಿನ. ಯೋಚಿಸಿದ ಕಾರ್ಯದಲ್ಲಿ ಸಫಲತೆ. ಕೌಟುಂಬಿಕ ಇಷ್ಟಾರ್ಥ ಪೂರ್ತಿಸಲಿದೆ. ಆದರೆ ಗೆಳೆತನದಲ್ಲಿ ಮುನಿಸು ಮೂಡೀತು.

ಮಿಥುನ ಸಂಬಂಧದಲ್ಲಿ ನಿಮ್ಮ ತಾಳ್ಮೆ ಪರೀಕ್ಷಿಸುವ ಬೆಳವಣಿಗೆ. ಕ್ಷುಲ್ಲಕ ವಿಷಯವೆಂದು ಕಡೆಗಣನೆ ಬೇಡ. ಸಂಘರ್ಷಕ್ಕೆ ಇಳಿಯಬೇಡಿ.

ಕಟಕ ಕ್ಲಿಷ್ಟಕರ ಪರಿಸ್ಥಿತಿ ಉದ್ಭವಿಸಿದರೂ ಬಳಿಕ ಶಮನವಾಗಲಿದೆ. ಶ್ಲಾಘನೆ ಪಡೆಯುವಿರಿ. ಪ್ರೀತಿಯಲ್ಲಿ ಯಶಸ್ಸು. ಬಂಧುವೊಬ್ಬರು ಮುನಿಸಿಕೊಳ್ಳಬಹುದು.

ಸಿಂಹ ಇತರರ ಜತೆ ವ್ಯವಹರಿಸುವಲ್ಲಿ ತೊಡಕು ಕಾಣಿಸಲಿದೆ. ಇದರಿಂದ ಮನಸ್ತಾಪ ಸಂಭವ. ಲಘು ಅನಾರೋಗ್ಯ ಕಾಡಬಹುದು.

ಕನ್ಯಾ ದಿನವಿಡೀ ಕೆಲಸದ ಒತ್ತಡ. ಸಣ್ಣ ವಿಷಯಕ್ಕೂ ಹೆಚ್ಚು ಗಮನ ಕೊಡಿ. ಸಣ್ಣ ಲೋಪ ಗಂಭೀರ ಪರಿಣಾಮ ಬೀರೀತು. ಕೌಟುಂಬಿಕ ಒತ್ತಡ.

ತುಲಾ ಸಂತೋಷದ ದಿನ. ಖಾಸಗಿ ಬದುಕಿನಲ್ಲಿ ಪ್ರೀತಿ, ಸಾಮರಸ್ಯ. ವೃತ್ತಿ ವ್ಯವಹಾರ ಸುಲಲಿತ. ಇಂದು ಸಾಲ ಕೊಟ್ಟ ಹಣ ಮರಳಿ ಸಿಗದು.

ವೃಶ್ಚಿಕ ವೈಯಕ್ತಿಕ ವಿಚಾರದಲ್ಲಿ ಕೆಲವು ಚಿಂತೆ ಕಾಡುವುದು. ಬೆಂಬಲದ ಕೊರತೆ. ಅನ್ಯರ ಮೇಲಿನ ದ್ವೇಷ ಬಿಡಿ, ಸಹಕಾರಕ್ಕೆ ಮನ ಮಾಡಿ. ಧನವ್ಯಯ.

ಧನು ನಿರಾಳ ಮನಸ್ಸು. ಹೊಸ ಯೋಜನೆಗೆ ಕೈಹಚ್ಚಲು ಕಾಲ ಸೂಕ್ತ. ಕೆಲಸದಲ್ಲಿ ಬಡ್ತಿ ಸಂಭವ. ಹಣದ ವಿಚಾರದಲ್ಲಿ ಪೂರಕ ಬೆಳವಣಿಗೆ.

ಮಕರ ಯಾರದೋ ಜಗಳ ಸರಿಪಡಿಸಲು ಹೋಗಿ ನೀವು ಕಷ್ಟಕ್ಕೆ ಸಿಲುಕಬಹುದು. ಎಚ್ಚರ ಇರಲಿ. ಕೌಟುಂಬಿಕ ಸಹಕಾರ ಕಡಿಮೆ.

ಕುಂಭ ಕೆಲಸ ಸುಗಮವಾಗಿ ಸಾಗದು. ಅಡ್ಡಿಗಳು, ಮಾನಸಿಕ ಒತ್ತಡ, ಅಸಹನೆ ಕಾಡುವುದು. ಹಣದ ವಿಷಯದಲ್ಲಿ ಪ್ರಮುಖ ನಿರ್ಧಾರ ತಾಳದಿರಿ.

ಮೀನ ಖಾಸಗಿ ಬದುಕಲ್ಲಿ ಒತ್ತಡ ನಿವಾರಣೆ. ಯಾವುದೇ ಸಮಸ್ಯೆ ತಾತ್ಕಾಲಿಕ ಎಂಬುದು ಅರಿವಿರಲಿ. ಮುಖದಲ್ಲಿ ಸದಾ ನಗುವಿರಲಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 6,2,5,8

ಇಂದು ರೋಡ್ ಶೋ

ಬೆಂಗಳೂರು: ರಾಜಸ್ಥಾನವನ್ನು ಕೃಷಿ ನಾವೀನ್ಯತೆ ಮತ್ತು ಕೃಷಿ ತಂತ್ರಜ್ಞಾನ ವಲಯದ ಹೂಡಿಕೆ ತಾಣವಾಗಿಸುವ ನಿಟ್ಟಿನಲ್ಲಿ ರಾಜಸ್ಥಾನ ಸರ್ಕಾರದ ಕೃಷಿ ಇಲಾಖೆಯಿಂದ ಆಯೋಜಿಸಲಿರುವ ಗ್ಲೋಬಲ್ ರಾಜಸ್ಥಾನ ಅಗ್ರಿಟೆಕ್ ಮೀಟ್-2026ರ ರೋಡ್ ಶೋ ಏ.26ರಂದು ಮಧ್ಯಾಹ್ನ 12 ಗಂಟೆಯಿಂದ ನಗರದ ಹೋಟೆಲ್ ಲಲಿತ್ ಅಶೋಕದಲ್ಲಿ ಆಯೋಜಿಸಲಿದೆ. ಮುಖ್ಯ ಅತಿಥಿಯಾಗಿ ರಾಜಸ್ಥಾನದ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಈ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಕೃಷಿ ಮತ್ತು ತೋಟಗಾರಿಕೆ ಸಚಿವ ಡಾ. ಕಿರೋಡಿ ಲಾಲ್ ಮೀನಾ ಭಾಗವಹಿಸಲಿದ್ದಾರೆ. ತಂತ್ರಜ್ಞಾನ ಆಧಾರಿತ ಕೃಷಿಯ ಮೂಲಕ ಹೂಡಿಕೆ ಸ್ನೇಹಿ ಪರಿಸರ ಸೃಷ್ಟಿಸುವ ಜತೆಗೆ ವಲಯದ ಮುಂದಿನ ಬೆಳವಣಿಗೆಯ ಹಾದಿಯನ್ನು ರಾಜಸ್ಥಾನದ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಕರ್ನಾಟಕದ ಉದ್ಯಮಿಗಳಿಗೆ ವಿವರಿಸಲಿದ್ದಾರೆ.

ಕ್ರೈಸ್: ಎಸ್ಸೆಸ್ಸೆಲ್ಸಿ ಫಲಿತಾಂಶ ಕಳೆದ ವರ್ಷಕ್ಕಿಂತ ಈ ಬಾರಿ ಹೆಚ್ಚು

ಶೇ.8.37 ಹೆಚ್ಚಳ: ಸಚಿವ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ಶಾಲೆಗಳ ಎಸ್‌ಎಸ್‌ಎಲ್‌ಸಿ ಫಲಿತಾಂಶ ಕಳೆದ ವರ್ಷಕ್ಕಿಂತ ಶೇ.8.37 ರಷ್ಟು ಹೆಚ್ಚಳವಾಗಿದೆ, ರಾಜ್ಯದ ಫಲಿತಾಂಶಕ್ಕಿಂತ ಶೇ.5.31 ರಷ್ಟು ಹೆಚ್ಚಳವಾಗಿದೆ ಎಂದು ಸಚಿವ ಡಾ.ಎಚ್.ಸಿ ಮಹದೇವಪ್ಪ ತಿಳಿಸಿದ್ದಾರೆ.

ಫಲಿತಾಂಶದ ಕುರಿತು ಶನಿವಾರ ತಮ್ಮ ನಿವಾಸದಲ್ಲಿ ಮಾಧ್ಯಮಗಳೊಂದಿಗೆ ಮಾಹಿತಿ ಹಂಚಿಕೊಂಡ ಅವರು, 788 ವಸತಿ ಶಾಲೆಗಳಲ್ಲಿ ಒಟ್ಟು 35,014 ವಿದ್ಯಾರ್ಥಿಗಳು ಹಾಜರಾಗಿದ್ದು, ಶೇ.99.41ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 655 ಶಾಲೆಗಳಲ್ಲಿ ಶೇ.100ರಷ್ಟು ಫಲಿತಾಂಶ ಬಂದಿದೆ ಎಂದು ಹೇಳಿದರು.

ಶೇ.89ಕ್ಕಿಂತಹೆಚ್ಚುವಿದ್ಯಾರ್ಥಿಗಳು ಡಿಸ್ಟಿಂಗ್ಷನ್ ಮತ್ತು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು, ಕೇವಲ 5 ವಿದ್ಯಾರ್ಥಿ ಗಳು ಶೇ.33 ರಿಂದ 35 ರಷ್ಟು ಫಲಿತಾಂಶ ಪಡೆದಿದ್ದಾರೆ. ಪರೀಕ್ಷೆಗೆ ಹಾಜರಾದ 14,836 ಗಂಡು ಮಕ್ಕಳಲ್ಲಿ 14,734 ಉತ್ತೀರ್ಣರಾಗಿದ್ದು, ಪರೀಕ್ಷೆ ಬರೆದ 20,178 ಹೆಣ್ಣು ಮಕ್ಕಳಲ್ಲಿ 20,075 ಮಕ್ಕಳು ಉತ್ತೀರ್ಣರಾಗಿದ್ದಾರೆ. ಒಟ್ಟು ಶೇ.99.41ರಷ್ಟು ಫಲಿತಾಂಶವಾಗಿದೆ ಎಂದು ತಿಳಿಸಿದರು.

ಕ್ರೈಸ್‌ನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಅಟಲ್ ಬಿಹಾರಿ ವಾಜಪೇಯಿ, ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಇಂದಿರಾ ಗಾಂಧಿ ವಸತಿ ಪದವಿ ಪೂರ್ವ ಕಾಲೇಜುಗಳು ಸೇರಿದಂತೆ ಒಟ್ಟು 104 ಆಂಗ್ಲ ಮಾಧ್ಯಮ ವಸತಿ ಕಾಲೇಜುಗಳಲ್ಲಿ ಪ್ರವೇಶಕ್ಕೆ ಚಾಲನೆ ನೀಡಲಾಗಿದೆ. ಪ್ರತಿ ತರಗತಿಗೆ 80 ರಂತೆ, ಒಟ್ಟು 8,320 ಸೀಟುಗಳು ಲಭ್ಯವಿವೆ. ಅರ್ಜಿಗಳನ್ನು ವೆಬ್‌ಸೈಟ್ ಮೂಲಕ www.kreis.karnataka.gov.in ಸಲ್ಲಿಸಬಹುದೆಂದು ತಿಳಿಸಿದರು.

ಮಕ್ಕಳ ಕಲಿಕಾ ಸಮಸ್ಯೆಗಳನ್ನು ಪತ್ತೆ ಮಾಡಿ ಗುಣಮಟ್ಟದ ಶಿಕ್ಷಣ ನೀಡುತ್ತಿರುವುದರಿಂದ ಉತ್ತಮ ಫಲಿತಾಂಶ ಬಂದಿದೆ. ವಸತಿ ಶಾಲೆಗಳ ಮೂಲಸೌಕರ್ಯ ಉತ್ತಮವಿದ್ದು, ಪರಿಶೀಲನೆಗೆ ತಂಡ ರಚಿಸಲಾಗಿದೆ. ಕರ್ನಾಟಕ ವಸತಿ ಶಾಲೆಗಳು ದೇಶದಲ್ಲೇ ನಂ.1 ಇದೆ. ಪ್ರವೇಶ ಸಂಖ್ಯೆಯನ್ನು ಹೆಚ್ಚಳ ಮಾಡುವುದಿಲ್ಲ ಎಂದು ತಿಳಿಸಿದರು.

600ಕ್ಕಿಂತ ಹೆಚ್ಚು ಅಂಕ ಗಳಿಸಿದ 1,274 ವಿದ್ಯಾರ್ಥಿಗಳು



625ಕ್ಕೆ 622 ಅಂಕಗಳನ್ನು 7 ವಿದ್ಯಾರ್ಥಿಗಳು, 621 ಅಂಕಗಳನ್ನು 5 ವಿದ್ಯಾರ್ಥಿಗಳು 620 ಅಂಕಗಳನ್ನು 8 ವಿದ್ಯಾರ್ಥಿಗಳು ಹಾಗೂ ಒಟ್ಟಾರೆ 1274 ವಿದ್ಯಾರ್ಥಿಗಳು 600ಕ್ಕಿಂತ ಹೆಚ್ಚು ಅಂಕಗಳಿಸಿದ್ದಾರೆ. 6803 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ನೂರಕ್ಕೆ ನೂರು ಅಂಕ ಪಡೆದಿದ್ದಾರೆ. ಕ್ರೈಸ್‌ನ ಎಲ್ಲಾ ವಿದ್ಯಾರ್ಥಿಗಳು ಶೇ.78 ರಷ್ಟು ಸರಾಸರಿ ಅಂಕ ಪಡೆದಿದ್ದಾರೆ ಎಂದು ವಿವರಿಸಿದರು.

ಪ್ರಮಾಣಪತ್ರ ಸಲ್ಲಿಕೆ ಅಭ್ಯರ್ಥಿಗೆ ಕಡ್ಡಾಯ

ಪುಟ ೧➔ **ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿ ಪ್ರಮಾಣೀಕರಣ:** 1. ಪ್ರಮಾಣ ಪತ್ರವನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಸೃಷ್ಟಿಸಲಾಗಿರುವ 05 ನಗರ ಪಾಲಿಕೆ /ಮಹಾನಗರ ಪಾಲಿಕೆ/ ನಗರಸಭೆ / ಪುರಸಭೆ / ಪಟ್ಟಣ ಪಂಚಾಯಿತಿ / ಜಿಲ್ಲಾ ಪಂಚಾಯಿತಿ / ತಾಲ್ಲೂಕು ಪಂಚಾಯಿತಿಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ಪ್ರಮಾಣಪತ್ರ ಶುಲ್ಕ ನೀಡಿ ಬ್ಯಾಂಕುಗಳಿಂದ ಪಡೆದ ದಸ್ತಾವೇಜು ಹಾಳೆಯಲ್ಲಿ ಪ್ರಮಾಣೀಕರಿಸುವುದು.

2. ಗ್ರಾ.ಪಂ.ಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳು ಬಿಳಿ ಹಾಳೆಯ ಮೇಲೆ ಮಾಹಿತಿಗಳನ್ನು ಸಿದ್ಧಪಡಿಸಿ ಚುನಾವಣೆ ಅಧಿಕಾರಿ ಮುಂದೆ ಸಹಿ ಹಾಕುವುದು. ಇದಕ್ಕೆ ಯಾವುದೇ ಶುಲ್ಕವಿರುವುದಿಲ್ಲ.

3. ಪೂರ್ಣ ವಿವರಗಳನ್ನು ಖುದ್ದಾಗಿ ಓದಿ/ಓದಿಸಿಕೊಂಡು, ಅರ್ಥ ಮಾಡಿಕೊಂಡು, ಸಮುಚಿತವಾದ ವಿವರಗಳನ್ನು ಮಾತ್ರ ಸಿದ್ಧಪಡಿಸಿ ಪ್ರಮಾಣೀಕರಿಸುವುದು ಅಥವಾ ಘೋಷಣೆ ಮಾಡುವುದು.

ಚುನಾವಣಾ ಆಯೋಗ ಹೊರಡಿಸಿರುವ ಈ ಆದೇಶವನ್ನು ಕಡ್ಡಾಯವಾಗಿ ಸ್ಥಳೀಯ ಚುನಾವಣೆಗೆ ಸ್ಪರ್ಧಿಸುವ ಎಲ್ಲ ಅಭ್ಯರ್ಥಿಗಳು ಕಡ್ಡಾಯವಾಗಿ ಪಾಲನೆ ಮಾಡಬೇಕಾಗಿರುವುದು ಕರ್ತವ್ಯ. ಈ ಹಿಂದೆ ಕೆಲವರು ತಮ್ಮ ಮೇಲಿನ ಕೆಲವು ಕ್ರಿಮಿನಲ್ ಆರೋಪಗಳನ್ನು ಮುಚ್ಚಿಟ್ಟು ಚುನಾವಣೆಗೆ ಸ್ಪರ್ಧಿಸಿರುವ ಉದಾಹರಣೆಗಳಿವೆ.
■ **ಕೆ. ಶ್ರೀನಿವಾಸಾಚಾರಿ, ನಿವೃತ್ತ ಆಯುಕ್ತರು, ರಾಜ್ಯ ಚುನಾವಣಾ ಆಯೋಗ**

ಅಲ್ಲದೆ, ಪ್ರಮುಖವಾಗಿ ನ್ಯಾಯಾಲಯವು ಅಪಾದನೆ ಹೊರಿಸಿ/ದಾಖಲಿಸಿ ಹೊರಡಿಸಿದ ಆದೇಶದ ದಿನಾಂಕ, ಅಪಾದನೆ ಹೊರಿಸಿದ/ ದಾಖಲಿಸಿದ ಆದೇಶದ ವಿರುದ್ಧ ದಾಖಲಾದ ಅಪೀಲು / ಪುನರ್ ಪರಿಶೀಲನೆ ಅರ್ಜಿ ಸಲ್ಲಿಸಿದ್ದಲ್ಲಿ ಅವುಗಳ ಸಂಪೂರ್ಣ ವಿವರ ಒದಗಿಸಲು ಆದೇಶಿಸಿದೆ.

ಇಸ್ರೇಲ್ ದಾಳಿ: 15 ಹೆಜ್ಬೊಲ್ಲಾಗಳ ಹತ್ಯೆ

ಪುಟ ೧➔ ಐಡಿಎಫ್ ಪಡೆಗಳು ಆಕ್ರಮಿಸಿಕೊಂಡಿರುವ ಇಸ್ರೇಲ್ ಗಡಿಯಲ್ಲಿರುವ ಲೆಬನಾನಿನ ಭೂಪ್ರದೇಶದ ಆಳವಾದ ಪ್ರದೇಶವಾದ ಫಾರ್ವರ್ಡ್ ಡಿಫೆನ್ಸ್ ಲೈನ್‌ನಲ್ಲಿ ದಕ್ಷಿಣಕ್ಕೆ ಮೋಟಾರ್ ಸೈಕಲ್‌ನಲ್ಲಿ ಸವಾರಿ ಮಾಡುತ್ತಿದ್ದ ಮತ್ತೋರ್ವ ಹೆಜ್ಬೊಲ್ಲಾ ಸದಸ್ಯನನ್ನು ಕೊಂದಿದೆ ಎಂದು ಐಡಿಎಫ್ ಹೇಳಿದೆ. ಲಿಟಾನಿ ಪ್ರದೇಶದಲ್ಲಿ ವಾಯುದಾಳಿಯಲ್ಲಿ ಇನ್ನೂ ಇಬ್ಬರು ಹೆಜ್ಬೊಲ್ಲಾ ಸದಸ್ಯರು ಮೃತಪಟ್ಟಿದ್ದಾರೆ ಎಂದು ಐಡಿಎಫ್ ಹೇಳಿದೆ. ಶುಕ್ರವಾರವೂ ದಾಳಿಯಲ್ಲಿ ಹಲವು ಹೆಜ್ಬೊಲ್ಲಾ ಬಂಡುಕೋರರನ್ನು ಹತ್ಯೆ ಮಾಡಲಾಗಿದೆ. ಈ ಮೂಲಕ ಕಳೆದ ಎರಡು ದಿನಗಳಲ್ಲಿ ಒಟ್ಟು 15 ಹೆಜ್ಬೊಲ್ಲಾಗಳ ಹತ್ಯೆಯಾಗಿದೆ.

ಅರಾಘ್ಚಿ-ಷರೀಫ್ ಶಾಂತಿಗಾಗಿ ಚರ್ಚೆ

ಪುಟ ೧➔ **ಫಲಪ್ರದ ಭೇಟಿ, ಪಾಕ್ ಪ್ರಧಾನಿ:** ಪರಸ್ಪರ ಹಿತಾಸಕ್ತಿ ವಿಚಾರಗಳು, ಪಾಕಿಸ್ತಾನ-ಇರಾನ್ ನಡುವಿನ ದ್ವಿಪಕ್ಷೀಯ ಸಂಬಂಧ ಬಲಗೊಳಿಸುವ ನಿಟ್ಟಿನಲ್ಲಿ ಸ್ನೇಹಮಯ ಮತ್ತು ಫಲಪ್ರದವಾದ ಮಾತುಕತೆ ನಡೆಸಿದ್ದೇವೆ ಎಂದು ಪಾಕ್ ಪ್ರಧಾನಿ ಷರೀಫ್ ಎಕ್ಸ್‌ನಲ್ಲಿ ಹಂಚಿಕೊಂಡಿದ್ದಾರೆ.

ಶಾಂತಿ, ಸ್ಥಿರತೆ ಮರುಸ್ಥಾಪನೆಗೆ ಯತ್ನ: ಪಶ್ಚಿಮ ಏಷ್ಯಾದಲ್ಲಿ ಶಾಂತಿ ಮತ್ತು ಪ್ರಾದೇಶಿಕ ಸ್ಥಿರತೆ ಮರುಸ್ಥಾಪನೆಗಾಗಿ ಅಮೆರಿಕ-ಇರಾನ್ ನಡುವೆ ಎರಡನೇ ಸುತ್ತಿನ ಶಾಂತಿ ಮಾತುಕತೆಯ ಆತಿಥ್ಯ ವಹಿಸಲು ಪಾಕಿಸ್ತಾನ ತನ್ನೆಲ್ಲಾ ರಾಜತಾಂತ್ರಿಕ ಪ್ರಯತ್ನಗಳನ್ನು ಮಾಡಲಿದೆ ಎಂದು ಪಾಕ್ ಉಪಪ್ರಧಾನಿ ಇಶಾಕ್ ದಾರ್ ಶನಿವಾರ ಹೇಳಿದ್ದಾರೆ.

ವಿಟ್ಕಾಫ್, ಕುಶ್ನರ್ ಪಾಕ್ ಪ್ರವಾಸ ರದ್ದು: ಟ್ರಂಪ್

ಅಮೆರಿಕ ನಿಯೋಗದ ಪಾಕ್ ಭೇಟಿಗೂ ಮುನ್ನ ಇರಾನ್ ನಿಯೋಗವು ಇಸ್ಲಾಮಾಬಾದ್ ತೊರೆದಿರುವ ಹಿನ್ನೆಲೆಯಲ್ಲಿ ಯುಎಸ್ ಸಂಧಾನಕಾರ ಸ್ಟೀವ್ ವಿಟ್ಕಾಫ್ ಮತ್ತು ಅಳಿಯ ಜರೇಡ್ ಕುಶ್ನರ್ ನೇತೃತ್ವದ ನಿಯೋಗದ ಪಾಕ್ ಪ್ರವಾಸವನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರದ್ದುಗೊಳಿಸಿದ್ದಾರೆ. ಇರಾನ್ ಜತೆ ಮಾತುಕತೆ ನಡೆಯುವುದಿಲ್ಲ ಎಂದಾದರೆ 18 ಗಂಟೆ ವಿಮಾನ ಪ್ರಯಾಣ ನಡೆಸಿ ಪಾಕಿಸ್ತಾನಕ್ಕೆ ತೆರಳಬೇಕಾದ ಅಗತ್ಯವಿಲ್ಲ. ಇರಾನಿಯನ್ನರು ಅಗತ್ಯ ಮಾತನಾಡಬೇಕೆಂದರೆ ಅಮೆರಿಕಕ್ಕೆ ಯಾವುದೇ ಕ್ಷಣದಲ್ಲಿ ದೂರವಾಣಿ ಕರೆ ಮಾಡಬಹುದು ಎಂದು ಅಧ್ಯಕ್ಷ ಟ್ರಂಪ್ ಹೇಳಿದ್ದು, ಪಾಕ್ ಮಧ್ಯಸ್ಥಿಕೆಯ ಪಾತ್ರವನ್ನು ನೇರವಾಗಿ ಕಡೆಗಣಿಸಿದ್ದಾರೆ. ನಮ್ಮ ನಿಯೋಗದ ಸದಸ್ಯರು ಪಾಕ್‌ಗೆ ತೆರಳುವವರಿದ್ದರು, ನಾನೇ ತಡೆದಿದ್ದೇನೆ ಎಂದು ಟ್ರಂಪ್ ಹೇಳಿದ್ದಾರೆ.

ಬುಲೆಟ್ ಬೋಗಿಗಳ ಉತ್ಪಾದನೆಗೆ ಚಾಲನೆ

ಪುಟ ೧➔ ಬಿಇಎಂಎಲ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಚಿವರು ಬಿಇಎಂಎಲ್‌ನ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಯೊಂದಿಗೆ ಸಂವಾದ ನಡೆಸಿ, ರೈಲ್ವೆ ಬೋಗಿ, ಮೆಟ್ರೋ ರೈಲುಗಳ ಉತ್ಪಾದನೆ, ಕಾರ್ಯಪ್ರಗತಿಯ ಕುರಿತು ಮಾಹಿತಿ ಪಡೆದುಕೊಂಡರು. ಈ ವೇಳೆ ರೈಲ್ವೆ ಬೋರ್ಡ್‌ನ ಅಧ್ಯಕ್ಷ ಸತೀಶ್ ಕುಮಾರ್, ಬಿಇಎಂಎಲ್‌ನ ವ್ಯವಸ್ಥಾಪಕ ನಿರ್ದೇಶಕ ಶಾಂತನು ರಾಯ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

2 ಟ್ಯಾಂಕ್ ಲೋಕಾರ್ಪಣೆ

ಪುಟ ೧➔ **ಶೇ.65 ಆತ್ಮನಿರ್ಭರ:** ರಕ್ಷಣಾ ಕ್ಷೇತ್ರದ ಉತ್ಪಾದನೆಯಲ್ಲಿ ಆತ್ಮನಿರ್ಭರತೆ (ಸ್ವಾವಲಂಬನೆ) ಸಾಧಿಸುವ ಪ್ರಧಾನಿ ನರೇಂದ್ರ ಮೋದಿಯವರ ಕನಸಿನ ಗುರಿಯನ್ನು ಬೆನ್ನಟ್ಟುವ ಭಾರತ ಹೊಸ ಶಸ್ತ್ರಸಜ್ಜಿತ ಸೇನಾ ವಾಹನಗಳಲ್ಲಿ ಶೇ.65ರಷ್ಟು ದೇಸಿ ಉಪಕರಣಗಳನ್ನೇ ಅಳವಡಿಸಿಕೊಂಡಿದೆ. ಮುಂದಿನ ದಿನಗಳಲ್ಲಿ ಇವುಗಳಲ್ಲಿ ಶೇ.90ರಷ್ಟು ದೇಸಿ ಉಪಕರಣಗಳನ್ನೇ ಅಳವಡಿಸಿಕೊಂಡು ವಿಸ್ತೃತ ಆವೃತ್ತಿ ಪರಿಚಯಿಸುವುದು ಡಿಆರ್‌ಡಿಒ ಮತ್ತು ರಕ್ಷಣಾ ಇಲಾಖೆಯ ಗುರಿಯಾಗಿದೆ.

ಒಳಮೀಸಲು: ಜಗಳ ಹಚ್ಚುವ ತೀರ್ಮಾನ

ಪುಟ ೧➔ ಇದೇ ವೇಳೆ ಮಾತನಾಡಿದ ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಒಳ ಮೀಸಲಾತಿಗೆ ಸಂಬಂಧಿಸಿದಂತೆ ಎಲ್ಲರನ್ನೂ ಬೀದಿಯಲ್ಲಿ ನಿಲ್ಲಿಸಿ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾಕೆಂಬ ರೀತಿಯ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ ಎಂದು ವಾಗ್ದಾಳಿ ನಡೆಸಿದರು. ಈ ಒಂದು ತೀರ್ಮಾನಕ್ಕೆ ಬರಲು ಇವರಿಗೆ 3 ವರ್ಷ ಬೇಕಾಗಿದೆ. ಮೂರೇ ತಿಂಗಳಲ್ಲಿ ಮಾಡಬಹುದಿತ್ತಲ್ಲವೇ? ನಾಲ್ಕು ಲಕ್ಷ ಹುದ್ದೆ ತುಂಬಲು ಒಳ ಮೀಸಲಾತಿ ಆಗಬೇಕಿತ್ತು. ಎರಡು ಗಂಡಾಂತರಕ್ಕೆ ಸರ್ಕಾರ ಸಿಕ್ಕಿಹಾಕಿಕೊಂಡಿತ್ತು. ಒಂದು ಖಾಜಿ ನ್ಯಾಯದ ತೀರ್ಮಾನ ಇದು; ಪರಿಶಿಷ್ಟ ಜಾತಿಗಳು ಬೀದಿಗೆ ಬಿದ್ದ ಹಾಗಾಗಿದೆ ಎಂದರು.

ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ ಮಾತನಾಡಿ, ಸಿದ್ದರಾಮಯ್ಯ ಅವರು ಅನೇಕ ಆಯೋಗ ರಚಿಸಿ, ವರದಿ ಪಡೆದು ಅವೆಲ್ಲವನ್ನೂ ತಿರಸ್ಕರಿಸಿದ ದಾಖಲೆ ಬರೆದ ಮುಖ್ಯಮಂತ್ರಿ. ಯಾವುದೇ ನ್ಯಾಯಮೂರ್ತಿಗಳು ಈ ಸರ್ಕಾರದ ಆಯೋಗದ ಹುದ್ದೆಯನ್ನು ಸ್ವೀಕರಿಸಬಾರದು. ಒಳ ಮೀಸಲಾತಿ ವಿಚಾರಕ್ಕೆ ಕೊನೆ ಮೊಳೆಯನ್ನು 3 ವರ್ಷಗಳ ಬಳಿಕ ಹೊಡೆದಿದ್ದಾರೆ. ದಲಿತರ ದಿಕ್ಕು ತಪ್ಪಿಸುವ ತೀರ್ಮಾನ ಮಾಡಿದ್ದಾರೆ. ಇದನ್ನು ವಿರೋಧಿಸಿ ಬಿಜೆಪಿ ಹೋರಾಟ ಮಾಡಲಿದೆ ಎಂದು ತಿಳಿಸಿದರು.

ನಟ ರಣವೀರ್ ಸಿಂಗ್ ಅರ್ಜಿ ವಿಲೇವಾರಿ

ಬೆಂಗಳೂರು: ಕಾಂತಾರ ಚಾಪ್ಟರ್-1ರ ಚಿತ್ರದ ದೈವಪಾತ್ರದ ಬಗ್ಗೆ ಅಪಮಾನಕಾರಿಯಾಗಿ ಮಾತನಾಡಿದ ಆರೋಪಕ್ಕೆ ಗುರಿಯಾಗಿರುವ ಬಾಲಿವುಡ್ ನಟ ರಣವೀರ್ ಸಿಂಗ್ ಅವರು ಒಂದು ತಿಂಗಳಲ್ಲಿ ಮೈಸೂರಿನ ಚಾಮುಂಡಿ ಬೆಟ್ಟ ದೇವಸ್ಥಾನಕ್ಕೆ ಭೇಟಿ ನೀಡಲು ನಿರ್ದೇಶಿಸಲಾಗುವುದು ಎಂದ ಹೈಕೋರ್ಟ್ ಶನಿವಾರ ಅರ್ಜಿ ವಿಲೇವಾರಿ ಮಾಡಿದೆ.

ಗೋವಾದಲ್ಲಿ ನಡೆದಿದ್ದ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕಾಂತಾರ ಚಾಪ್ಟರ್-1ರ ಚಿತ್ರದ ಚಾಮುಂಡಿ ದೈವಕ್ಕೆ ಅಪಮಾನ ಮಾಡಿದ ಆರೋಪದ ಸಂಬಂಧ ದಾಖಲಾಗಿರುವ ಖಾಸಗಿ ದೂರು ಮತ್ತು ಅದರ ಮುಂದುವರಿದ ಭಾಗವಾಗಿ ನಗರದ ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ರಣವೀರ್ ಸಿಂಗ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ನಡೆಸಿತು.

ರಣವೀರ್ ಸಿಂಗ್ ಪ್ರತಿನಿಧಿಸಿದ್ದ ಹಿರಿಯ ವಕೀಲ ಸಜನ್ ಪೂವಯ್ಯ ಅವರು ರಣವೀರ್ ಬೇಷರತ್ ಕ್ಷಮೆಯಾಚಿಸಿರುವ ಅಫಿಡವಿಟ್ ಹಾಕಿದ್ದೇವೆ. ದೇವಸ್ಥಾನಕ್ಕೆ ರಣವೀರ್ ಸಿಂಗ್ ಭೇಟಿ ನೀಡುತ್ತಾರೆ ಎಂದು ಹೇಳಲಾಗಿದೆ. ದಿನಾಂಕ ಹಾಕಿಲ್ಲ, ಪೀಠವೇ ನಿರ್ದಿಷ್ಟ ದಿನ ನಿಗದಿ ಮಾಡಬಹುದು ಎಂದರು.

ಇದಕ್ಕೆ ದೂರುದಾರರ ಪರ ವಕೀಲ ಸಿಜಿ ಮಲೆಯಾಳ್ ಅವರು, ಸಜನ್ ಪೂವಯ್ಯ ಅವರಿಗೆ ಇದೊಂದು ಪ್ರಕರಣವಷ್ಟೆ, ನಮಗೆ ಇದು ನಂಬಿಕೆಯ ವಿಚಾರ ಎಂದರು.

ಈ ನಡುವೆ ಸಜನ್ ಪೂವಯ್ಯ ಅವರು, ಈ ವಾದದಲ್ಲಿ ನಾವು ಭಾಗಿಯಾಗಲ್ಲ. ಜನರ ಭಾವನೆಗಳು ನಮಗೆ ಅರ್ಥವಾಗುತ್ತವೆ. ಅದೇ ಕಾರಣಕ್ಕಾಗಿ ಪ್ರಕರಣದ ಮೆರಿಟ್ ಮೇಲೆ ವಾದಿಸಲಿಲ್ಲ. ಪ್ರಕರಣದ ಸೂಕ್ಷ್ಮತೆ ಅರ್ಥವಾಗಿದ್ದು, ರಣವೀರ್ ವಿಷಾದ ವ್ಯಕ್ತಪಡಿಸಿದ್ದಾರೆ ಎಂದರು. ರಾಜ್ಯ ಹೆಚ್ಚುವರಿ ಸರ್ಕಾರಿ ಅಭಿಯೋಜಕ ಬಿ.ಎನ್. ಜಗದೀಶ್ ಅವರು, ರಣವೀರ್ ಬರುವ ಮಾಹಿತಿಯನ್ನು ಮುಂಚಿತವಾಗಿ ನೀಡಲು ಆದೇಶಿಸಬೇಕು ಎಂದು ತಿಳಿಸಿದರು. ವಾದ-ಪ್ರತಿವಾದ ಆಲಿಸಿದ ಪೀಠವು ರಣವೀರ್ ಅಫಿಡವಿಟ್ ಸ್ವೀಕರಿಸಿ, ಅರ್ಜಿ ಇತ್ಯರ್ಥಪಡಿಸಲಾಗಿದೆ ಎಂದು ಆದೇಶಿಸಿತು.

ಜನಿವಾರ, ಮೂಗುತಿ ತೆಗೆಸಿದ ಹೀನ ಕ್ರಮ: ಖಂಡನೆ

ಪೊಲೀಸರು ಕಠಿಣ ಕ್ರಮ ಕೈಗೊಳ್ಳಲಿ

ಬೆಂಗಳೂರು: ಸಿಇಟಿ ಪರೀಕ್ಷೆ ವೇಳೆ ಪರೀಕ್ಷಾರ್ಥಿಗಳ ಜನಿವಾರ, ಮೂಗುತಿ ತೆಗೆಸಿದ ಅಧಿಕಾರಿಗಳ ಕಾರ್ಯಕ್ಕೆ ಜೆಡಿಎಸ್ ಹಿರಿಯ ನಾಯಕ, ವಿಧಾನ ಪರಿಷತ್ ಶಾಸಕ ಟಿ.ಎ.ಶರವಣ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಇದು ಮಾನ, ಮರ್ಯಾದೆ ಇರುವ ಸರ್ಕಾರ ನಡೆದುಕೊಳ್ಳುವ ರೀತಿಯಲ್ಲ. ಜನಿವಾರ, ಮೂಗುತಿ ಇವೆಲ್ಲ ಭಾವನಾತ್ಮಕ ಧಾರ್ಮಿಕ ಸಂಕೇತಗಳು. ಇದಕ್ಕೂ ಪರೀಕ್ಷೆಗೂ ಸಂಬಂಧವಿಲ್ಲ. ಜನಿವಾರದ ಒಳಗೆ, ಮೂಗುತಿ ಒಳಗೆ ಏನಾದರೂ ಬಚ್ಚಿಟ್ಟುಕೊಂಡು ಬಂದು ಪರೀಕ್ಷೆಯಲ್ಲಿ ಕಾಪಿ ಹೊಡೆಯಲು ಸಾಧ್ಯವೇ? ಎಂದು ಶರವಣ ಪ್ರಶ್ನಿಸಿದ್ದಾರೆ. ಸಿಇಟಿ ಪರೀಕ್ಷೆ ಬರೆಯಲು ಬಂದ ವಿದ್ಯಾರ್ಥಿಗಳ ಜನಿವಾರ ಬಲವಂತದಿಂದ ತೆಗೆದು ಹಾಕಿರುವುದು, ವಿದ್ಯಾರ್ಥಿನಿಯರ ಮೂಗುತಿ ತೆಗೆದು ಪ್ಲಾಸ್ಟರ್ ಅಂಟಿಸಿರುವುದು ಖಂಡನೀಯ.

ಭಾವನಾತ್ಮಕ ದೌರ್ಜನ್ಯ



ಕಾಂಗ್ರೆಸ್ ಸರ್ಕಾರ ಇದ್ದಾಗ ಯಾವಾಗಲೂ ಇದೇ ಗೋಳು. ಪರೀಕ್ಷೆ ಬರೆಯಲು ಹೋಗುವ ವಿದ್ಯಾರ್ಥಿಗಳಿಗೆ ಮಾನಸಿಕವಾಗಿ ಹಿಂಸೆ ಕೊಡುವುದು ಜತೆಗೆ ಅಧೀರರನ್ನಾಗಿಸುವುದು. ಗಲಿಬಿಲಿ ಮಾಡುವುದು ನಡೆದು ಬಂದಿದೆ. ಇದೊಂದು ನೀಚ, ಹೇಯ, ಅಮಾನವೀಯ ಸರ್ಕಾರ. ಈ ಸರ್ಕಾರದ ಅಧಿಕಾರಿಗಳು ಪರೀಕ್ಷೆ ಬರೆಯಲು ಬಂದ ಮಕ್ಕಳ ಮೇಲೆ ಧಾರ್ಮಿಕ, ಭಾವನಾತ್ಮಕ ದೌರ್ಜನ್ಯ ಎಸಗಿದ್ದಾರೆ ಎಂದು ಕಿಡಿ ಕಾರಿದ್ದಾರೆ.

ಕ್ರಮವಾಗಲಿ

ಈಗಾಗಲೇ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ದೂರುಗಳು ದಾಖಲಾಗಿವೆ. ಮತ್ತೆ ಕೆಲವು ವಿದ್ಯಾರ್ಥಿಗಳು, ಪೋಷಕರು ಹೆದರಿ ದೂರು ಕೊಟ್ಟಿಲ್ಲ. ತಕ್ಷಣವೇ ಸರ್ಕಾರ ನ್ಯಾಯಸಮ್ಮತ ತನಿಖೆ ನಡೆಸಿ, ಅಸಂಬದ್ಧವಾಗಿ ವರ್ತಿಸಿದ ಅಧಿಕಾರಿಯನ್ನು ಅಮಾನತು ಮಾಡಬೇಕು. ಭಾವನಾತ್ಮಕವಾಗಿ ವಿದ್ಯಾರ್ಥಿಗಳಿಗೆ ಮನಸ್ಸಿಗೆ ನೋವಾಗುವಂತೆ ಮಾಡಿದ್ದಕ್ಕೆ ಈ ಅಧಿಕಾರಿಗಳ ಮೇಲೆ ಪೊಲೀಸ್ ಕ್ರಮ ಜರುಗಿಸಬೇಕು ಎಂದು ಶರವಣ ಆಗ್ರಹ ಪಡಿಸಿದ್ದಾರೆ.

ವಿನಯ ಹೈಕೋರ್ಟ್ ಮೊರೆ

ಬೆಂಗಳೂರು: ಧಾರವಾಡ ಜಿಲ್ಲಾ ಪಂಚಾಯತ್ ಸದಸ್ಯ ಯೋಗೇಶ್‌ಗೌಡರ್ ಕೊಲೆ ಪ್ರಕರಣದಲ್ಲಿ ಅಪರಾಧಿಯಾಗಿರುವ ಧಾರವಾಡ ಶಾಸಕ ವಿನಯ ಕುಲಕರ್ಣಿ ಹೈಕೋರ್ಟ್‌ಗೆ ಮೊರೆ ಹೋಗಿದ್ದಾರೆ. ನಗರದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಕಳೆದ ವಾರ ಯೋಗೇಶ್‌ಗೌಡರ್ ಕೊಲೆ ಪ್ರಕರಣದಲ್ಲಿ ನೀಡಿದ್ದ ತೀರ್ಪು ಮತ್ತು ಶಿಕ್ಷೆಯ ಪ್ರಮಾಣವನ್ನು ಪ್ರಶ್ನಿಸಿ, ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಕರ್ನಾಟಕ ರಾಜ್ಯ ಡೀಪ್ ಟೆಕ್ ತಂತ್ರಜ್ಞಾನ ಧಾರೆಗಳ ತಾಣ

ಕುಪ್ಪಂ: ಕರ್ನಾಟಕವು ಇದುವರೆಗೂ ಐಟಿ ಹಬ್ ಆಗಿತ್ತು. ಈಗ ನಮ್ಮ ರಾಜ್ಯವು ಡೀಪ್ ಟೆಕ್ ತಂತ್ರಜ್ಞಾನ ಧಾರೆಗಳ ತಾಣವಾಗಿದೆ. ಭಾರತದಲ್ಲಿರುವ ಅಗಾಧ ಜನಸಂಖ್ಯೆಯನ್ನು ಸಂಶೋಧನೆ ಮತ್ತು ಆವಿಷ್ಕಾರಗಳಿಗಾಗಿ ಸದ್ಬಳಕೆ ಮಾಡಿಕೊಳ್ಳುವುದು ಪ್ರತಿಭಾವಂತ ಯುವಜನರ ಕೈಯಲ್ಲಿದೆ ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದರು. ವಿಜ್ಞಾನಿ ರಾಮಜಿ ರಾಘವನ್ ಸ್ಥಾಪಿಸಿರುವ ಅಗಸ್ತ್ಯ ಇಂಟರ್ನ್ಯಾಷನಲ್ ಫೌಂಡೇಶನ್ ಪ್ರತಿಷ್ಠಾನವು ಏರ್ಪಡಿಸಿದ್ದ ವಾರ್ಷಿಕ ಸಭೆ ಪ್ರೇರಣಾ-2026ರಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕರ್ನಾಟಕವು ತಂತ್ರಜ್ಞಾನ, ಇಎಸ್‌ಡಿಎಂ, ಏರೋಸ್ಪೇಸ್ ಮುಂತಾದ ವಲಯಗಳಲ್ಲಿ ಇಡೀ ದೇಶದಲ್ಲೇ ಅಗ್ರಸ್ಥಾನದಲ್ಲಿದೆ. ಬೆಂಗಳೂರು ನಗರವೊಂದರಲ್ಲೇ 900 ಜಿಸಿಸಿ ಕೇಂದ್ರಗಳಿವೆ. ಬಂಡವಾಳ ಹೂಡಿಕೆಗೆ ಅಗತ್ಯವಾದ ಸರಿಯಾದ ಕಾರ್ಯ ಪರಿಸರ ನಮ್ಮಲ್ಲಿದೆ ಎಂದು ಹೇಳಿದರು.

ಸಮಕಾಲೀನ ಜಗತ್ತಿನ ಜಟಿಲತೆ ಮತ್ತು ಅದು ಒಡ್ಡುತ್ತಿರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಬೌದ್ಧಿಕ ಧೈರ್ಯ ಅತ್ಯಗತ್ಯವಾಗಿದೆ. ವಿಜ್ಞಾನಿ ರಾಮಜಿ ರಾಘವನ್ ಇಲ್ಲಿ ಸ್ಥಾಪಿಸಿರುವ ಅಗಸ್ತ್ಯ ಇಂಟರ್ನ್ಯಾಷನಲ್ ಫೌಂಡೇಶನ್ ಈ ಕೆಲಸವನ್ನು ಸಮರ್ಥವಾಗಿ ಮಾಡುತ್ತಿದೆ. ನಮ್ಮ ದೇಶದಲ್ಲಿ ನಿಜವಾದ ಬೌದ್ಧಿಕ ಆಸ್ತಿಯ ನಿರ್ಮಾಣ ಗ್ರಾಮೀಣ ಪ್ರದೇಶದಲ್ಲಿ ಸಂಭವಿಸುತ್ತಿದೆ ಎಂದು ಹೇಳಿದರು. 172 ಎಕರೆ ವಿಶಾಲವಾದ ಜಾಗದಲ್ಲಿ ಅಸ್ತಿತ್ವಕ್ಕೆ ಬಂದಿರುವ ಅಗಸ್ತ್ಯ ಇಂಟರ್ನ್ಯಾಷನಲ್ ಫೌಂಡೇಶನ್ ಜ್ಞಾನವನ್ನು ಸೃಷ್ಟಿಸುತ್ತ, ಗ್ರಾಮಾಂತರ ಪ್ರದೇಶದೊಂದಿಗೆ ಬೆಸೆದುಕೊಂಡಿದೆ. ಡೇಟಾ ಮತ್ತು ಬದಲಾವಣೆ ತರಬಲ್ಲ ನವೀನ ತಂತ್ರಜ್ಞಾನ, ಹಾಗೂ ಸಂಕೀರ್ಣ ಸವಾಲುಗಳು ಇಂದು ಮಹತ್ತರ ಪಾತ್ರ ವಹಿಸುತ್ತಿವೆ ಎಂದರು.



ವಿಜಯಪುರ ಜಿಲ್ಲೆಯಲ್ಲಿ ನಾನು ಕೋಟಿ ವೃಕ್ಷ ಅಭಿಯಾನವನ್ನು ಶುರು ಮಾಡಿದ್ದು ಹೀಗೆ. ಈಗ ನಾವು ಐದು ಕೋಟಿ ಗಿಡ ನೆಟ್ಟು, ಪೋಷಿಸಿದ್ದೇವೆ. ಮುಂದಿನ ಹತ್ತು ವರ್ಷಗಳಲ್ಲಿ ಈ ಸಂಖ್ಯೆ ಹತ್ತು ಕೋಟಿ ತಲುಪಲಿದೆ. ಇದರಿಂದಾಗಿ ಬರಪೀಡಿತ ಪ್ರದೇಶದಲ್ಲಿ ಹಸಿರು ಹೊದಿಕೆ ಸೃಷ್ಟಿಯಾಗಿ, ಈಗ ಎಲ್ಲರನ್ನು ಸೆಳೆಯುತ್ತಿದೆ. ಹಿಂದೆ ನೀರಾವರಿ ಸಚಿವನಾಗಿದ್ದಾಗ ಇದೇ ರೀತಿಯಲ್ಲಿ 3,000ಕ್ಕೂ ಹೆಚ್ಚು ಕೆರೆಗಳಿಗೆ ನೀರು ತುಂಬಿಸುವ ಕೆಲಸ ಮಾಡಿದೆ' ಎಂದು ಅವರು ವಿವರಿಸಿದರು. ಪ್ರತಿಷ್ಠಾನದ ಸಂಸ್ಥಾಪಕ ರಾಮಾಜಿ ರಾಘವನ್, ಟಿ.ಎಸ್. ಸುರೇಶ್ ಮತ್ತು ಸಾವಿರಾರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸಚಿವರು ಕ್ಯಾಂಪಸ್‌ನಲ್ಲಿ ಇರುವ ಅನ್ವೇಷಣಾ ಕೇಂದ್ರ, ಗುರುಗೃಹ ಮತ್ತು ಮಾನವಿಕ ಹಾಗೂ ಮಾಧ್ಯಮ ಕೇಂದ್ರಗಳನ್ನು ವೀಕ್ಷಿಸಿ, ಅಲ್ಲಿಯ ಚಟುವಟಿಕೆಗಳ ಬಗ್ಗೆ ತಿಳಿದುಕೊಂಡರು.

ಒಳಮೀಸಲಾತಿ ಘೋಷಣೆ ಐತಿಹಾಸಿಕ ನಿರ್ಧಾರ: ಸತೀಶ


ಬೆಳಗಾವಿ: ದಶಕಗಳ ಬೇಡಿಕೆಯಾಗಿದ್ದ ಒಳಮೀಸಲಾತಿಯನ್ನು ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಘೋಷಿಸಿದ್ದು, ಇದೊಂದು ಐತಿಹಾಸಿಕ ನಿರ್ಧಾರ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಶನಿವಾರ ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಎಲ್ಲ ಸಚಿವರ, ಸಮುದಾಯದ ಸಚಿವರ ಸಮ್ಮುಖದಲ್ಲಿಯೇ ಒಳ ಮೀಸಲಾತಿಯನ್ನು ಘೋಷಿಸಿದ್ದೇವೆ. ಎಲ್ಲಾ ಸಮುದಾಯದವರು ಖುಷಿ ಇದ್ದಾರೆ. ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ಸರ್ವಾನುಮತ ದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದರು.



ಒಳಮೀಸಲಾತಿ ಹಂಚಿಕೆ ಬಗ್ಗೆ ಬಿಜೆಪಿಯವರು ವಿರೋಧಿಸುತ್ತಿರುವ ಕುರಿತು ಪ್ರತಿಕ್ರಿಯಿಸಿದ ಸಚಿವರು, ವಿರೋಧ ಪಕ್ಷಗಳು ಸರ್ಕಾರದ ಪ್ರತಿಯೊಂದು ನಿರ್ಧಾರದಲ್ಲೂ ಲೋಪದೋಷ ಹುಡುಕುವುದು ಸಹಜ. ಆದರೆ, ಜನಹಿತಕ್ಕಾಗಿ ತೆಗೆದುಕೊಂಡ ಈ ಐತಿಹಾಸಿಕ ನಿರ್ಧಾರಕ್ಕೆ ಜನರ ಬೆಂಬಲವಿದೆ ಎಂಬುದು ಸರ್ಕಾರದ ನಿಲುವು. ಆದರೆ, ವಿರೋಧ ಪಕ್ಷದವರು ತಮ್ಮ ಅಸ್ತಿತ್ವಕ್ಕಾಗಿ ಇಂತಹ ಹೇಳಿಕೆಗಳನ್ನು ನೀಡುತ್ತಾರೆಂದು ತಿರುಗೇಟು ನೀಡಿದರು. ಕಾಂಗ್ರೆಸ್ ಪಕ್ಷದ ಒಳಗಿನ ನಾಯಕತ್ವ ಗೊಂದಲ ಬಗ್ಗೆ ಮಾಧ್ಯಮಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು, ಪಕ್ಷದ ಒಳಗಿನ ಗೊಂದಲಗಳಿಗೆ ಹೈಕಮಾಂಡ್ ಶೀಘ್ರದಲ್ಲೇ ತೆರೆ ಎಳೆಯಲಿದೆ ಎಂದು ಹೇಳಿದ್ದಾರೆ.

ಡಿಕೆಶಿ ದೆಹಲಿಗೆ ಹೋಗುವುದು ಹೊಸದಲ್ಲ: ಡಿ.ಕೆ.ಶಿವಕುಮಾರ ಅವರು ಎರಡು ಪ್ರಮುಖ ಖಾತೆಗಳನ್ನು ಹೊಂದಿದ್ದಾರೆ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿದ್ದಾರೆ. ದೆಹಲಿ ಭೇಟಿಯನ್ನೇ ನಾಯಕತ್ವ ಬದಲಾವಣೆಯ ಸೂಚನೆ ಎಂದು ಅರ್ಥೈಸುವುದು ಸರಿಯಲ್ಲ, ಪ್ರತಿ ಭೇಟಿಗೂ ರಾಜಕೀಯ ಉದ್ದೇಶ ಕಲ್ಪಿಸಬಾರದು ಎಂದು ತಿಳಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಕಾಂಗ್ರೆಸ್ ಹಿರಿಯ ನಾಯಕ ರೆಹಮಾನ್ ಖಾನ್ ಅವರನ್ನು ಜಯನಗರದ ಅವರ ನಿವಾಸದಲ್ಲಿ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ಸಚಿವರಾದ ಜಮೀರ್ ಅಹಮದ್, ಭೈರತಿ ಸುರೇಶ್ ಇದ್ದರು.

ಪಾಲಿಕೆ ಚುನಾವಣೆ ನಡೆಸಲು ಹಣವಿಲ್ಲ: ಸುಪ್ರೀಂಗೆ ಅರ್ಜಿ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ 5 ನಗರ ಪಾಲಿಕೆಗಳಿಗೆ ಚುನಾವಣೆ ನಡೆಸಲು ತಮ್ಮ ಬಳಿ ಹಣವಿಲ್ಲ ಮತ್ತು ಸಿಬ್ಬಂದಿ ಕೊರತೆ ಇದೆ ಎಂದು ರಾಜ್ಯ ಚುನಾವಣಾ ಆಯೋಗ ಸುಪ್ರೀಂಗೆ ಅರ್ಜಿ ಸಲ್ಲಿಸಿದೆ. ಈ ಹಿಂದೆ ಪ್ರಕರಣದ ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್, 2026ರ ಜನವರಿ 12ರಂದು ಮಹತ್ವದ ಆದೇಶ ನೀಡಿತ್ತು. ಯಾವುದೇ ಕಾರಣಕ್ಕೂ 2026ರ ಜೂ. 30ರೊಳಗೆ 5 ನಗರ ಪಾಲಿಕೆಗಳ ಚುನಾವಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕೆಂದು ರಾಜ್ಯ ಚು.ಆಯೋಗಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿತ್ತು. ಅಲ್ಲದೆ, ಮಾರ್ಚ್ 16ರೊಳಗೆ ಅಂತಿಮ ಮತದಾರರ ಪಟ್ಟಿ ಪ್ರಕಟಿಸುವುದಾಗಿ ಆಯೋಗ ನೀಡಿದ್ದ ಭರವಸೆಯನ್ನೂ ನ್ಯಾಯಾಲಯ ದಾಖಲಿಸಿಕೊಂಡಿತ್ತು.

ಸರ್ಕಾರದ ಅಸಹಕಾರ ಮತ್ತು ವಿಳಂಬದ ಕಾರಣಗಳು: ಚುನಾವಣಾ ಆಯೋಗವು ಏಪ್ರಿಲ್ 18ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಿ ಸಜ್ಜಾಗಿದ್ದರೂ, ರಾಜ್ಯ ಸರ್ಕಾರವು ಚುನಾವಣೆಯನ್ನು ಮುಂದೂಡುವಂತೆ ಒತ್ತಡ ಹೇರುತ್ತಿದೆ. ಅಲ್ಲದೆ ಚುನಾವಣೆ ನಡೆಸಲು ತಮ್ಮ ಬಳಿ ಹಣವಿಲ್ಲ, ಸಿಬ್ಬಂದಿಯ ಕೊರತೆ ಇದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಎಲ್ಲಾ ಆಡಳಿತಾತ್ಮಕ ಸಿಬ್ಬಂದಿ ಇದರಲ್ಲಿ ಕಾರ್ಯನಿರತರಾಗಿರುತ್ತಾರೆ ಎಂದಿದೆ.

ಮುಂದೇನು? ಸ್ವತಃ ಆಯೋಗವೇ ಕಾಲಾವಕಾಶ ಕೋರಿದರೆ ನ್ಯಾಯಾಲಯದ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಆದ್ದರಿಂದ, ಸರ್ಕಾರದ ನಿಲುವನ್ನು ನ್ಯಾಯಾಲಯಕ್ಕೆ ತಿಳಿಸಿ, ಸೂಕ್ತ ನಿರ್ದೇಶನ ನೀಡುವಂತೆ ಆಯೋಗವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ರಾಜ್ಯ ಸರ್ಕಾರವು ಚುನಾವಣೆಗೆ ಸಹಕರಿಸಲು ಹಿಂಜರಿಯುತ್ತಿರುವುದು ಮತ್ತು ನಿಧಿಯ ಬಿಡುಗಡೆಗೆ ವಿಳಂಬ ಮಾಡುತ್ತಿರುವುದು ಚುನಾವಣಾ ಪ್ರಕ್ರಿಯೆಗೆ ಅಡ್ಡಿಯಾಗಿದೆ ಎಂದು ಆಯೋಗ ಹೇಳಿದೆ. ಈಗ ಸುಪ್ರೀಂ ಕೋರ್ಟ್ ಈ ಅರ್ಜಿಯನ್ನು ಕೈಗೆತ್ತಿಕೊಳ್ಳುವ ಸಾಧ್ಯತೆ ಇದ್ದು, ಜೂನ್ 30ರ ಗಡುವನ್ನು ವಿಸ್ತರಿಸುತ್ತದೆಯೇ ಅಥವಾ ನಿಗದಿತ ಸಮಯದಲ್ಲಿ ಚುನಾವಣೆ ನಡೆಸುವಂತೆ ಸರ್ಕಾರಕ್ಕೆ ಚಾಟಿ ಬೀಸುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ.


ಕಿರುಸುದ್ದಿ

ಜಲಮಂಡಲಿ ಹುದ್ದೆಗೆ ನಾಳೆಯಿಂದ ಲಿಖಿತ ಪರೀಕ್ಷೆ

ಬೆಂಗಳೂರು: ಕೆಎಸ್ಎಸ್ಐಡಿಸಿ ಮತ್ತು ಬೆಂಗಳೂರು ಜಲಮಂಡಲಿಯಲ್ಲಿ ಖಾಲಿ ಇರುವ ಸಹಾಯಕ ಇಂಜಿನಿಯರ್, ವ್ಯವಸ್ಥಾಪಕರು ಮತ್ತು ಸಹಾಯಕ ವ್ಯವಸ್ಥಾಪಕರ ಹುದ್ದೆಗಳಿಗೆ ಏ.26 ಮತ್ತು 27ರಂದು ಲಿಖಿತ ಪರೀಕ್ಷೆ ನಡೆಯಲಿದ್ದು, ಇದಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಬಿಗಿ ಕ್ರಮಗಳನ್ನು ಮಾಡಿದೆ. ಉಳಿಕ ಮೂಲ ವೃಂದದ ಅಭ್ಯರ್ಥಿಗಳಿಗೆ ಏ.26ರಂದು ಬೆಂಗಳೂರಿನ 11 ಮತ್ತು ಕಲಬುರಗಿಯ ಮೂರು ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಕಲ್ಯಾಣ ಕರ್ನಾಟಕ ವೃಂದದ ಅಭ್ಯರ್ಥಿಗಳಿಗೆ ಏ.27ರಂದು ಕಲಬುರಗಿಯ ಮೂರು ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ವೆಬ್‌ಕಾಸ್ಟಿಂಗ್ ಮೂಲಕ ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿನ ಚಲನವಲನಗಳನ್ನು ಬೆಂಗಳೂರಿನ ಕೆಇಎ ಕಚೇರಿಯಲ್ಲಿ ಸ್ಥಾಪಿಸಿರುವ ಕಮಾಂಡ್ ಸೆಂಟರ್‌ನಿಂದಲೇ ನಿಗಾ ವಹಿಸಲಾಗುವುದು. ಅಕ್ರಮಗಳಿಗೆ ಅವಕಾಶ ಇಲ್ಲದಂತೆ ಪಾರದರ್ಶಕವಾಗಿ ಪರೀಕ್ಷೆ ನಡೆಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಶಿಕ್ಷಕರ ಕೊರತೆಯಿದ್ದರೂ 94% ಬಂದಿದ್ದು ಹೇಗೆ?: ವಿಶ್ವನಾಥ್

ಮೈಸೂರು: ರಾಜ್ಯದ ಅನೇಕ ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ, ಆದರೂ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.94 ಫಲಿತಾಂಶ ಬಂದಿದ್ದು ಹೇಗೆ?. ಹಠಕ್ಕೆ ಬಿದ್ದು ಸರ್ಕಾರವೇ ಈ ಪರಿಯಾಗಿ ವಿದ್ಯಾರ್ಥಿಗಳನ್ನು ಪಾಸ್ ಮಾಡಿದೆ ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಆರೋಪಿಸಿದರು. ಶನಿವಾರ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ರಾಜ್ಯದ ಬಹಳಷ್ಟು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ. ಯಾದಗಿರಿ ಜಿಲ್ಲೆಯಲ್ಲಿ 41%, ಬಳ್ಳಾರಿ 31%, ಬೀದರ್ 21% ಶಿಕ್ಷಕರ ಕೊರತೆ ಇದೆ. ಹೀಗೆ ಎಲ್ಲಾ ಜಿಲ್ಲೆಗಳಲ್ಲೂ ಶಿಕ್ಷಕರ ಕೊರತೆ ಇದೆ. ಆದರೂ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.94ರಷ್ಟು ಫಲತಾಂಶ ಬಂದಿದೆ. ಇದು ಹೇಗೆ ಸಾಧ್ಯ, ಇದು ಯಾವ ರೀತಿಯ ಸಾಧನೆ? ಸಾಮೂಹಿಕ ನಕಲು ಮಾಡಿಸಲಾಗಿದೆ. ಹಠಕ್ಕೆ ಬಿದ್ದು ಪಾಸ್ ಮಾಡಿದ್ದಾರೆ. ಮಕ್ಕಳಿಗೆ ಗುಣಮಟ್ಟದ ಬೋಧನೆ, ಶಿಕ್ಷಕರ ನೇಮಕಾತಿ, ಶಾಲೆಗಳಿಗೆ ಸೌಲಭ್ಯ ಒದಗಿಸುವುದರಲ್ಲಿ ಈ ಹಠ ಇರಬೇಕಿತ್ತು ಎಂದು ಕಿಡಿಕಾರಿದರು.



ಮಹಿಳಾ ಮೀಸಲಾತಿಗೆ ಸೋಲು ದುರ್ದೈವ: ಬಸವ ಮಹಾಂತ ಶ್ರೀ

ಬೆಳಗಾವಿ: ಬಸವಣ್ಣನವರು ಅನುಭವ ಮಂಟಪದಲ್ಲಿ 12 ನೂರು ವರ್ಷಗಳ ಹಿಂದೆಯೇ ಮಹಿಳೆಯರಿಗೆ ಸಮಾನ ಮೀಸಲಾತಿ ನೀಡಿ ಜಗತ್ತಿಗೆ ಮಾದರಿಯಾಗಿದ್ದರು. ಅಂತಹ ನಾಡಿನ ಸಂಸತ್ತಿನಲ್ಲಿ ಮಹಿಳಾ ಮೀಸಲಾತಿಗೆ ಸೋಲಾಗಿದ್ದು ದುರ್ದೈವದ ವಿಚಾರ ಎಂದು ಶಿರಸಂಗಿ ಮಹಾಲಿಂಗೇಶ್ವರ ಮಠದ ಶ್ರೀ ಬಸವ ಮಹಾಂತ ಮಹಾಸ್ವಾಮೀಜಿ ಖೇದ ವ್ಯಕ್ತಪಡಿಸಿದರು. ಅವರು ಜಾಗತಿಕ ಲಿಂಗಾಯಿತ ಮಹಾ ಸಭಾ ಜಿಲ್ಲಾ ಘಟಕವು ನಾಗನೂರು ರುದ್ರಾಕ್ಷಿ ಮಠದ ಸಹಯೋಗದೊಂದಿಗೆ ವಿಶ್ವಗುರು ಬಸವಣ್ಣನವರ ಜಯಂತಿ ಉತ್ಸವ ಅಂಗವಾಗಿ ಎರಡು ದಿನಗಳ ವಚನ ದರ್ಶನ ಪ್ರವಚನ, ಇಷ್ಟ ಲಿಂಗಪೂಜೆ, ಪ್ರಾತ್ಯಕ್ಷಿಕೆ, ಹಾಗೂ ವಚನ ಪಠಣ ಕಾರ್ಯಕ್ರಮ ಉದ್ಘಾಟಿಸಿ ಪ್ರವಚನ ನೀಡಿದರು. ಫ.ಗು.ಹಳಕಟ್ಟಿಯವರ ಕ್ರಿಯಾಶೀಲ ವ್ಯಕ್ತಿತ್ವ ಅವರು ಸಮಸ್ತ ಸಮಾಜಕ್ಕೆ ನೀಡಿದ ಕೊಡುಗೆಗಾಗಿ ಅವರಿಗೆ ಕೃತಜ್ಞರಾಗಿರಬೇಕು ಎಂದು ಹೇಳಿದರು.

ಒಳ ಮೀಸಲಾತಿ ಹಂಚಿಕೆ ಉತ್ತಮ ನಿರ್ಧಾರ: ಸಚಿವ ಮಹದೇವಪ್ಪ

ಯಾವುದೇ ಗೊಂದಲವಿಲ್ಲ

ಬೆಂಗಳೂರು: ಒಳ ಮೀಸಲಾತಿ ಹಂಚಿಕೆ ಉತ್ತಮ ನಿರ್ಧಾರವಾಗಿದ್ದು, ಎಲ್ಲಾ ಸಮುದಾಯಗಳು ಸಂತೋಷ ಪಡದೆ ಇದ್ದರೂ ಕೂಡಾ ಅಸಮಾಧಾನ ಉಂಟು ಮಾಡಿಲ್ಲ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ.

ತಮ್ಮ ನಿವಾಸದಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ಬಿಜೆಪಿಗರಿಗೆ ರಾಜಕೀಯ ಬೇಕು, ಮತ ಬೇಕು ಸಾಮಾಜಿಕ ನ್ಯಾಯಕ್ಕೆ ಬದ್ಧರಿಲ್ಲ, 17ರಷ್ಟು ಮೀಸಲಾತಿ ಶೆಡ್ಯೂಲ್-9 ತಿದ್ದುಪಡಿ ಪಡಿಸಲಿ, ದಲಿತರನ್ನು ಇಬ್ಭಾಗ ಮಾಡಲು ಯತ್ನಿಸುತ್ತಿದ್ದಾರೆ. ಸರ್ಕಾರದಲ್ಲಿ ಸದ್ಯಕ್ಕೆ ಯಾವುದೇ ಗೊಂದಲವಿಲ್ಲ, ಸಂಪುಟ ವಿಸ್ತರಣೆ ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ. ಡಿ.ಕೆ. ಶಿವಕುಮಾರ್ ದಿಲ್ಲಿಗೆ ಹೋಗಿದ್ದಾರೆ, ವರಿಷ್ಠರನ್ನು ಭೇಟಿ ಮಾಡಿದರೆ ತಪ್ಪೇನು ಎಂದು ಹೇಳಿದರು.

ಒಳ ಮೀಸಲಾತಿ ಹಂಚಿಕೆ ಸ್ವಾಗತ: ಒಳ ಮೀಸಲಾತಿ ಹಂಚಿಕೆಯನ್ನು ಸ್ವಾಗತಿಸಿರುವ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ನೇತೃತ್ವದ ನಿಯೋಗವು ಶನಿವಾರ ಕಾವೇರಿ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಕೃತಜ್ಞತೆ ಅರ್ಪಿಸಿತು. ಬಳಿಕ ಮಾತನಾಡಿದ ಅವರು, ಮುಖ್ಯಮಂತ್ರಿಗಳು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಸರ್ವ ಜನಾಂಗ ಒಪ್ಪುವಂತೆ ಮಾಡಿ, ಎಲ್ಲಾ ಸಂಪುಟ ಸಚಿವರ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಈ ಮೂಲಕ ನಮ್ಮ ಸಮುದಾಯಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದು ತಿಳಿಸಿದರು.

ಚಿತ್ರದುರ್ಗದ ಪರಿಶಿಷ್ಟ ಜಾತಿಯ ಮಹಾ ಸಮಾವೇಶದಲ್ಲಿ ತೆಗೆದುಕೊಂಡ ನಿರ್ಣಯದಂತೆ ಹಾಗೂ 2023ರ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷ ನೀಡಿದ ಮಾತಿನಂತೆ ಇಂದು ಆ ಭರವಸೆ ಈಡೇರಿದೆ. ಮಾತು ಕೊಟ್ಟರೆ ನೆರವೇರಿಸುವುದು ಕಾಂಗ್ರೆಸ್ ಪಕ್ಷದ ಸಂಸ್ಕೃತಿ, ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಗ್ರೂಪ್‌ಎಗೆ ಶೇ. 5.25ರಷ್ಟು, ಗ್ರೂಪ್ ಬಿಗೆ ಶೇ.5.25ರಷ್ಟು ಹಾಗೂ ಗ್ರೂಪ್ ಸಿಗೆ ಶೇ.4.5 ರಷ್ಟು ಒಳಮೀಸಲಾತಿ ಹಂಚಿಕೆ ಮಾಡುವ ಮೂಲಕ ಸರ್ಕಾರ ಸಾಮಾಜಿಕ ನ್ಯಾಯದ ದಾರಿಯಲ್ಲಿ ಮಹತ್ವದ ಹೆಜ್ಜೆ ಇಟ್ಟಿದೆ. ಇದು ಮಾದಿಗ ಸಮುದಾಯ ಸೇರಿದಂತೆ ಪರಿಶಿಷ್ಟ ಜಾತಿಯ ಎಲ್ಲಾ 101 ಸಮುದಾಯಗಳ ಬಹುದಿನದ ಬೇಡಿಕೆಗೆ ನ್ಯಾಯ ಒದಗಿಸಿದ ಐತಿಹಾಸಿಕ ನಿರ್ಧಾರವಾಗಿದೆ ಎಂದು ಅವರು ಹೇಳಿದ್ದಾರೆ.



ಶನಿವಾರ ಕಾವೇರಿ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಸಚಿವ ಆರ್.ಬಿ ತಿಮ್ಮಾಪುರ ನೇತೃತ್ವದ ನಿಯೋಗವು ಒಳಮೀಸಲಾತಿ ಹಂಚಿಕೆಯನ್ನು ಸ್ವಾಗತಿಸಿ ಅಭಿನಂದನೆ ಸಲ್ಲಿಸಿದರು.

> ನಮ್ಮ ಇಡೀ ಸಮುದಾಯ ಸಿದ್ದರಾಮಯ್ಯ ಅವರನ್ನ ನೆನಪಿಟ್ಟುಕೊಳ್ಳಲಿದೆ. ಇಡೀ ಸಮುದಾಯ ಅವರಿಗೆ ಕೃತಜ್ಞರಾಗಲಿದೆ.
> ■ ಆರ್.ಬಿ.ತಿಮ್ಮಾಪುರ, ಅಬಕಾರಿ ಸಚಿವ

40 ವರ್ಷಗಳ ನೋವು, ಹೋರಾಟದ ಗೆಲುವು: ಮುನಿಯಪ್ಪ

ರಾಜ್ಯ ಸರ್ಕಾರವು ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ಒಳಮೀಸಲಾತಿ ಅನುಷ್ಠಾನದ ತೀರ್ಮಾನವನ್ನು ಸಚಿವ ಕೆ.ಎಚ್. ಮುನಿಯಪ್ಪ ಸ್ವಾಗತಿಸಿದ್ದಾರೆ. ಇದು ಕೇವಲ ಒಂದು ತೀರ್ಮಾನ ಅಲ್ಲ ಇದು 40 ವರ್ಷಗಳ ನೋವು, ಹೋರಾಟದ ಗೆಲುವು ಎಂದು ತಿಳಿಸಿದ್ದಾರೆ.

101 ಜಾತಿಗಳಿಗೂ ಅನ್ಯಾಯ: ರಾಜೀವ್

ಬೆಂಗಳೂರು: ಮೀಸಲಾತಿ ವಿಚಾರದಲ್ಲಿ ಪರಿಶಿಷ್ಟ ಜಾತಿಯ 101 ಜಾತಿಗಳಿಗೂ ಕಾಂಗ್ರೆಸ್ ಸರ್ಕಾರ ಅನ್ಯಾಯ ಮಾಡಿದೆ ಎಂದು ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಆರೋಪಿಸಿದ್ದಾರೆ.



ಈ ಸರ್ಕಾರವು 50 ಸಾವಿರಕ್ಕೂ ಹೆಚ್ಚು ಹುದ್ದೆಗಳಿಗೆ ನೇಮಕಾತಿ ಆಗಬಾರದೆಂಬ ದುರುದ್ದೇಶದಿಂದ ಮೇಲಿಂದ ಮೇಲೆ ತಪ್ಪು ಮಾಡುತ್ತಿದೆ ಎಂದು ದೂರಿದರು. ಸರ್ಕಾರ ನೇಮಕಾತಿ ಮಾಡಲು ಸಿದ್ಧವಿತ್ತು. ಆದರೆ, ಕೋರ್ಟಿನ ತಡೆಯಾಜ್ಞೆ ಇದ್ದುದರಿಂದ ನೇಮಕಾತಿ ಆಗಿಲ್ಲ ಎಂದು ಯುವ ಜನತೆಗೆ ತಿಳಿಸಲು ಸರ್ಕಾರ ಯೋಜಿಸಿದಂತಿದೆ. 50 ಸಾವಿರಕ್ಕೂ ಹೆಚ್ಚು ಹುದ್ದೆಗೆ ನೇಮಕಾತಿ ಪ್ರಕಟಿಸಿದ್ದರೂ ವೇತನ ಕೊಡಲು ಹಣವನ್ನು ಬಜೆಟ್‌ನಲ್ಲಿ ಇಟ್ಟಿಲ್ಲ ಎಂದು ಆಕ್ಷೇಪಿಸಿದರು.

ಮಧ್ಯಂತರ ತಡೆಯಾಜ್ಞೆ ಇದ್ದಾಗಲೇ ಅಧಿವೇಶನದಲ್ಲಿ ಮಸೂದೆ ಅಂಗೀಕಾರ ಮಾಡಿದ್ದಾರೆ. ಆಗ ಇವರ ತಲೆಯಲ್ಲಿ ಮೆದುಳು ಇರಲಿಲ್ಲವೇ? ಶೇ.17 ಮೀಸಲಾತಿ ಮಾಡುವುದಾಗಿ ಹೇಳಿದ್ದರು. ಶುಕ್ರವಾರ ಶೇ.15ಕ್ಕೆ ಇಳಿಸಿದ್ದಾರೆ. ಹಾಗಿದ್ದರೆ ಸದನದ ಗೌರವ ಏನು ಉಳಿಯಿತು ಎಂದು ರಾಜೀವ್ ಪ್ರಶ್ನಿಸಿದರು.

ಬಸವರಾಜ ಬೊಮ್ಮಾಯಿ ಅವರ ಸರ್ಕಾರವು ಮಾಧುಸ್ವಾಮಿ ನೇತೃತ್ವದ ಉಪ ಸಮಿತಿ ವರದಿಯನ್ನು ಆಧರಿಸಿ ವೈಜ್ಞಾನಿಕವಾಗಿ ಹಂಚಿಕೆ ಮಾಡಿತ್ತು. ಅವೆಲ್ಲವನ್ನೂ ಕಡಿಮೆ ಮಾಡಿದ್ದಾರೆ. ಎಡ, ಬಲ ಸೇರಿ ಎಲ್ಲರಿಗೂ ಅನ್ಯಾಯ ಮಾಡಿದ್ದಾರೆ. ಬೊಮ್ಮಾಯಿ ಅವರ ಸರ್ಕಾರವು ಅಲೆಮಾರಿಗಳ ಪ್ರತ್ಯೇಕ ಗುಂಪು ಮಾಡಿದ್ದರು. ಇಲ್ಲಿ ಆ ಪ್ರತ್ಯೇಕ ಗುಂಪನ್ನು ಉಳಿಸಿಲ್ಲ. ನೇಮಕಾತಿ ಪ್ರಕ್ರಿಯೆಯನ್ನು ಶೀಘ್ರವೇ ಮಾಡಿ ಮುಗಿಸಬೇಕೆಂದು ಒತ್ತಾಯಿಸಿದರು. ಪತ್ರಕಾಗೋಷ್ಠಿಯಲ್ಲಿ ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್, ಶಾಸಕ ಮಾನಪ್ಪ ಡಿ.ವಜ್ಜಲ್ ಇದ್ದರು.

ಸರ್ಕಾರದ ತೀರ್ಮಾನ ಒಪ್ಪಲು ಅಸಾಧ್ಯ

ಸರ್ಕಾರದ ನಿರ್ಣಯದಿಂದ ಪರಿಶಿಷ್ಟ ಜಾತಿ, ಪಂಗಡಗಳ ಮೇಲೆ ಪೆಟ್ಟು ಬೀಳಲಿದೆ. ಭೋವಿ, ಬಂಜಾರ ಸಮುದಾಯಕ್ಕೂ ಅನ್ಯಾಯ ಆಗಲಿದೆ. ಬೋವಿ, ಬಂಜಾರ, ಕೊರಮ, ಕೊರಚ ಸಮುದಾಯದ ಜಿಲ್ಲಾ ಮುಖಂಡರು ಮುಂದಿನ ಪೀಳಿಗೆಗೂ ಇದರಿಂದ ಅನ್ಯಾಯ ಆಗಲಿದ್ದು, ಕಾಂಗ್ರೆಸ್ ಸರ್ಕಾರದ ವಿರುದ್ಧ ರಾಜ್ಯಾದ್ಯಂತ ಹೋರಾಟ ಮಾಡುವುದಾಗಿ ತಿಳಿಸಿದ್ದಾರೆ. ನಮ್ಮದೂ ಇದಕ್ಕೆ ಬೆಂಬಲವಿದೆ ಎಂದು ಶಾಸಕ ಮಾನಪ್ಪ ವಜ್ಜಲ್ ತಿಳಿಸಿದರು. ಕಾಂಗ್ರೆಸ್ ಸರ್ಕಾರದ ತೀರ್ಮಾನವನ್ನು ಒಪ್ಪಲು ಸಾಧ್ಯವಿಲ್ಲ. ಕೋರ್ಟ್ ಆದೇಶವನ್ನೂ ಬದಿಗಿಟ್ಟು ಸರ್ಕಾರ ತೀರ್ಮಾನ ಮಾಡಿದೆ ಎಂದು ಟೀಕಿಸಿದರು.

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ

ನಾಳೆ ಶಿಕ್ಷೆ ಪ್ರಮಾಣ ಪ್ರಕಟ

ಬೆಂಗಳೂರು: ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ (ಐಇಡಿ) ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ವಿಶೇಷ ನ್ಯಾಯಾಲಯ ಏ.27ರಂದು ಶಿಕ್ಷೆಯ ಪ್ರಮಾಣ ಪ್ರಕಟಿಸಲಿದೆ.



ಈ ಪ್ರಕರಣದ ಪ್ರಮುಖ ಆರೋಪಿ ಮೊಹಮ್ಮದ್ ಶಾರೀಕ್ ವಿರುದ್ಧ ಶನಿವಾರ ನಡೆದ ವಿಚಾರಣೆಯಲ್ಲಿ ವಿಶೇಷ ಸರ್ಕಾರಿ ಅಭಿಯೋಜಕ ಪ್ರಸನ್ನಕುಮಾರ್ ಅವರು, ಆರೋಪಿಗೆ ಅಂತಿಮವಾಗಿ ಕಠಿಣ ಶಿಕ್ಷೆ ವಿಧಿಸುವಂತೆ ನ್ಯಾಯಾಲಯದಲ್ಲಿ ವಾದ ಮಂಡಿಸಿದರು. ವಾದ ಆಲಿಸಿದ ನ್ಯಾಯಾಲಯ ಏ.27ಕ್ಕೆ ಶಿಕ್ಷೆಯ ಪ್ರಮಾಣ ಪ್ರಕಟಿಸುವುದಾಗಿ ತಿಳಿಸಿತು.

ಕಳೆದ 3 ತಿಂಗಳ ಹಿಂದೆಯೇ ಆರೋಪಿ ಶಾರೀಕ್ ತಾನು ಕೃತ್ಯ ಎಸಗಿದ್ದಾಗಿ ತಪ್ಪೊಪ್ಪಿಕೊಂಡು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಕೂಡ ಸಲ್ಲಿಸಿದ್ದನು. ಈ ಅರ್ಜಿಯನ್ನು ನ್ಯಾಯಾಲಯ ಪುರಸ್ಕರಿಸಿದ್ದು, ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ ಸಂಬಂಧ ಎನ್‌ಐಎ ಅಧಿಕಾರಿಗಳು ತನಿಖೆ ನಡೆಸಿ, 2024ರಲ್ಲಿ ಆರೋಪಿಗಳಾದ ಶಾರೀಕ್ ಮತ್ತು ಸೈಯದ್ ಯಾಸೀನ್ ವಿರುದ್ಧ ದೋಷಾರೋಪಪಟ್ಟಿ ಸಲ್ಲಿಸಿದ್ದರು.

ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2022ರ ನ.19ರಂದು ಸಂಜೆ 4.40 ಸುಮಾರಿಗೆ ಶಾರೀಕ್ ಆಟೋದಲ್ಲಿ ತೆರಳುವಾಗ ಕುಕ್ಕರ್ ಸ್ಫೋಟಗೊಂಡಿತ್ತು. ಪ್ರಕರಣದಲ್ಲಿ ಶಂಕಿತ ಉಗ್ರ ಶಾರೀಕ್ ಬಂಧನದಲ್ಲಿದ್ದು, ತನಿಖೆಯನ್ನು ಎನ್‌ಐಎ ನಡೆಸಿತ್ತು. ಆರೋಪಿಗಳು ದೇಶದ ಭದ್ರತೆಗೆ ಧಕ್ಕೆಯುಂಟು ಮಾಡುವ ಉದ್ದೇಶದಿಂದ ಸ್ಫೋಟಕ್ಕೆ ಸಂಚು ರೂಪಿಸಿದ್ದರು ಎಂಬುದು ತನಿಖೆಯಲ್ಲಿ ಬಹಿರಂಗವಾಗಿದೆ.

ತಾಪಮಾನ ಪರಿಣಾಮ ತಡೆಗೆ ಕ್ರಮ

ಬೆಂಗಳೂರು: ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಅದರಲ್ಲಿಯೂ ಉತ್ತರ ಕರ್ನಾಟಕ ಭಾಗದಲ್ಲಿ ಅತ್ಯಧಿಕ ತಾಪಮಾನ ದಾಖಲಾಗುತ್ತಿದ್ದು, ತಾಪಮಾನದ ಪ್ರತಿಕೂಲ ಪರಿಣಾಮಗಳನ್ನು ತಡೆಗಟ್ಟಲು ಮತ್ತು ತಗ್ಗಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಜಿಲ್ಲಾ ಪಂಚಾಯಿತಿಗಳ ಸಿಇಒ, ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ತಾಪಮಾನದ ಪ್ರತಿಕೂಲ ಪರಿಣಾಮಗಳನ್ನು ತಡೆಗಟ್ಟಲು ಮತ್ತು ತಗ್ಗಿಸಲು ಅನುಸರಿಸಬೇಕಾದ ಕ್ರಮಗಳ ಕುರಿತು ಜನರಲ್ಲಿ ವ್ಯಾಪಕವಾದ ಅರಿವು ಮೂಡಿಸಬೇಕು. ತಿಳುವಳಿಕೆ ಭಿತ್ತಿಪತ್ರಗಳನ್ನು ಎಲ್ಲಾ ಗ್ರಾಮ ಪಂಚಾಯಿತಿಗಳು ದೊಡ್ಡ ಅಳತೆಯಲ್ಲಿ ಮುದ್ರಿಸಿ, ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುವ ಮೂಲಕ ಸಾರ್ವಜನಿಕರಲ್ಲಿ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಅರಿವು ಮೂಡಿಸಬೇಕು ಎಂಬ ನಿರ್ದೇಶನವನ್ನು ನೀಡಿದ್ದಾರೆ.

ಅಂಗನವಾಡಿ ಮತ್ತು ಕೂಸಿನ ಮನೆಗಳಲ್ಲಿ ಮಕ್ಕಳಿಗೆ ಬಿಸಿಲಿನ ತಾಪಮಾನದ ದುಷ್ಪರಿಣಾಮಗಳನ್ನು ಕಡಿಮೆ ಮಾಡಲು ಆವರಣವು ತಂಪಾಗಿರುವಂತೆ ನೋಡಿಕೊಳ್ಳಬೇಕು ಸೂಚಿಸಿದ್ದಾರೆ. ಜಿಲ್ಲೆ, ತಾಲೂಕು ಮತ್ತು ಗ್ರಾಪಂಗಳಿಗೆ ತಮ್ಮ ಕೆಲಸಗಳಿಗಾಗಿ ಭೇಟಿ ನೀಡುವ ಜನರಿಗೆ ಹಾಗೂ ಗ್ರಾಪಂ ಅರಿವು ಕೇಂದ್ರಗಳಿಗೆ ಭೇಟಿ ನೀಡುವ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು ಹಾಗೂ ಆಸನ ವ್ಯವಸ್ಥೆ ಮಾಡಬೇಕು, ಸರ್ಕಾರಿ ಶಾಲೆಗಳು, ಅಂಗನವಾಡಿ, ಕೂಸಿನ ಮನೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರು ಲಭ್ಯವಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು ಎಂದು ಸಚಿವರು ಸೂಚಿಸಿದ್ದಾರೆ.

ತುರ್ತು ನೀರಿನ ಅಭಾವಕ್ಕೆ ₹4.5 ಕೋಟಿ

2026-27ನೇ ಸಾಲಿನ ರಾಜ್ಯ ಯೋಜನೆಯಲ್ಲಿ ಗ್ರಾಮೀಣ ಪ್ರದೇಶಗಳ ಜನರಿಗೆ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಅಭಾವ ಎದುರಾದಲ್ಲಿ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲು ಹಾಗೂ ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆ ಪಡೆಯಲು ಹಾಗೂ ಇತರೆ ತುರ್ತು ಕ್ರಮಗಳಿಗೆ 45 ಕೋಟಿ ರೂ. ಅನುದಾನವನ್ನು ವಿವಿಧ ಜಿಲ್ಲೆಗಳಿಗೆ ಅಗತ್ಯಾನುಸಾರ ಹಂಚಿಕೆ ಮಾಡಲಾಗಿದೆ ಎಂದರು.



ಮೀಸಲಾತಿ ನಿಗದಿಯಲ್ಲೂ ಮೋಸ: ಕೆ.ಎಸ್.ಈಶ್ವರಪ್ಪ

ಶಿವಮೊಗ್ಗ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದಾಗಿನಿಂದಲೂ ಹಿಂದುಳಿದವರು, ದಲಿತರಿಗೆ ಮೋಸ ಮಾಡುತ್ತಲೇ ಬಂದಿದ್ದು, ಈಗ ಒಳಮೀಸಲಾತಿ ನಿಗದಿ ಮಾಡಿರುವುದರಲ್ಲಿಯೂ ಮತ್ತೊಂದು ಮೋಸವಾಗಿದೆ ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಹೇಳಿದರು.



ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಒಳ ಮೀಸಲಾತಿ ನಿಗದಿಯಲ್ಲಿ ನ್ಯಾಯಾಲಯ ಹೇಳಿದಂತೆಯೂ ಮಾಡಿಲ್ಲ, ತಜ್ಞರ ಸಮಿತಿ ಶಿಫಾರಸನ್ನು ಪಾಲಿಸಿಲ್ಲ, ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮದೇ ಒಂದು ಸೂತ್ರದಲ್ಲಿ ಒಳ ಮೀಸಲಾತಿ ನಿಗದಿ ಮಾಡಿದ್ದಾರೆ. ಯಾರಾದರೂ ನ್ಯಾಯಾಲಯದಲ್ಲಿ ಇದನ್ನು ಪ್ರಶ್ನಿಸಿದರೆ ಉಳಿಯುವುದಿಲ್ಲ ಎಂದರು.

ಅನೇಕ ದಲಿತ ಮುಖಂಡರು ಒಳಮೀಸಲಾತಿ ವಿರುದ್ಧ ದನಿ ಎತ್ತಿದ್ದಾರೆ. ತಮ್ಮ ಅವಧಿಯಲ್ಲಿ ಒಳಮೀಸಲಾತಿಯ ಘೋಷಣೆ ಮಾಡಿದ್ದೇನೆಂದು ತೋರ್ಪಡಿಕೆಗೆ ಕ್ರೆಡಿಟ್ ಪಡೆಯಲು ಸರಿಯಾದ ಮಾನದಂಡ ಇಲ್ಲದ ಇದನ್ನು ಘೋಷಣೆ ಮಾಡಿ ಮುಖ್ಯಮಂತ್ರಿಗಳು ಸಿಹಿ ತಿಂದಿದ್ದಾರೆ. ಅವರೇ ನಾಲ್ಕು ಜನ ಕುಳಿತುಕೊಂಡು ಮಾಡಿದ ಈ ಘೋಷಣೆಯನ್ನು ದಲಿತ ಮುಖಂಡರೇ ಸ್ವೀಕಾರ ಮಾಡುತ್ತಿಲ್ಲ ಎಂದು ದೂರಿದರು.

ಸರ್ಕಾರಿ ಕಚೇರಿಯಲ್ಲಿ ಜ್ಞಾನ ದಾಸೋಹ | ಸಮಾಜ ಕಲ್ಯಾಣ ಇಲಾಖೆಯ ಅಪರೂಪದ ಕಾರ್ಯಕ್ಕೆ ಮೆಚ್ಚುಗೆ

ಕಚೇರಿಗೆ ಬರುವ ಜನರಿಗೆ ಸಿಗುತ್ತಿದೆ ತಂಪು ಮಜ್ಜಿಗೆ!

ಪರಶುರಾಮ ಶಿವಶರಣ

ವಿಜಯಪುರ: ರಣಭಯಂಕರ ಬಿಸಿಲಿನಲ್ಲಿ ಬಸವಳಿದು ಬರುವ ಸಾರ್ವಜನಿಕರ ಉದರಕ್ಕೆ ತಂಪು, ಮಸ್ತಕಕ್ಕೆ ಅಕ್ಷರದ ಕಂಪು ಹರಿಸುವ ಕಾರ್ಯಕ್ಕೆ ಗುಮ್ಮಟ ನಗರದ ಸರ್ಕಾರಿ ಕಚೇರಿಯೊಂದರ ಅಧಿಕಾರಿಗಳು ಮುಂದಾಗಿರುವುದು ಅಪರೂಪದ ಸಂಗತಿ.

ಬಯಲು ಸೀಮೆಯ ಬಿಸಿಲೂರಿನಲ್ಲಿ ಸದ್ಯ ಪ್ರಖರ ಬಿಸಿಲಿಗೆ ಜನರು ತತ್ತರಿಸುವಂತಾಗಿದ್ದು, ಸರ್ಕಾರಿ ಕಚೇರಿಗಳ ಕೆಲಸದ ಅವಧಿ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಮಾತ್ರ ಸೀಮಿತಗೊಳಿಸಲಾಗಿದೆ. ಏತನ್ಮಧ್ಯೆ ಸಾರ್ವಜನಿಕರು ತಮ್ಮ ಕೆಲಸ, ಕಾರ್ಯಕ್ಕಾಗಿ ನಗರದ ಸಮಾಜ ಕಲ್ಯಾಣ ಇಲಾಖೆಗೆ ತೆರಳಿದಲ್ಲಿ, ಸಾರ್ವಜನಿಕರ ಮೈಮನ ತಣಿಸಲು ಅಧಿಕಾರಿಗಳು ತಂಪು ಮಜ್ಜಿಗೆ ವಿತರಿಸುವ ವಿಶೇಷ ಸೇವೆಗೆ ಮುಂದಾಗಿದ್ದಾರೆ.

ಪ್ರತಿದಿನ 40 ಲೀಟರ್ ಮಜ್ಜಿಗೆ: ಇಲ್ಲಿನ ಸಮಾಜ ಕಲ್ಯಾಣ ಇಲಾಖೆ ಕಚೇರಿಗೆ ಬರುವ ಸಾರ್ವಜನಿಕರಿಗಾಗಿಯೇ ಉಚಿತವಾಗಿ ತಂಪು ಮಜ್ಜಿಗೆಯನ್ನು ವಿತರಿಸಲಾಗುತ್ತಿದ್ದು, ಸಾರ್ವಜನಿಕರು ಯಾರೇ ಕಚೇರಿಗೆ ಬರಲಿ, ಇಲ್ಲಿನ ಜವಾನರು ತಂಪು ಮಜ್ಜಿಗೆ ನೀಡಿ, ಸೇವಿಸುವಂತೆ ಕೋರುತ್ತಾರೆ. ಪ್ರಖರ ಬಿಸಿಲಿನಲ್ಲಿ ಬಸವಳಿದು ಬಂದ ವ್ಯಕ್ತಿಯ ಹೊಟ್ಟೆಯೊಳಗೆ ತಂಪು ಮಜ್ಜಿಗೆ ಇಳಿದಾಗ, ಮೈಮನ ತಂಪುಗೊಂಡು, ಕ್ಷಣಹೊತ್ತು ಆ ವ್ಯಕ್ತಿ ಆರಾಮದಿಂದ ಕೂಡುವಂತಾಗುತ್ತದೆ. ಕಚೇರಿಗೆ ಬರುವ ಸಾರ್ವಜನಿಕರಿಗಾಗಿ ಪ್ರತಿ ದಿನ 40 ಲೀಟರ್ ಮಜ್ಜಿಗೆ ವಿತರಿಸಲಾಗುತ್ತಿದ್ದು, ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ನಿಮಿತ್ತ ಏಪ್ರಿಲ್ ತಿಂಗಳ ಆರಂಭದಿಂದಲೂ ಮಜ್ಜಿಗೆ ವಿತರಿಸುವ ಸೇವೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಅಧಿಕಾರಿಗಳ ಮಾದರಿಯ ಈ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ತುಂಬಾ ಮೆಚ್ಚುಗೆ ವ್ಯಕ್ತವಾಗಿದೆ.



ದಿಗಂತ ವಿಶೇಷ

> ಸುಡುವ ಬಿಸಿಲಿನಲ್ಲಿ ನಮ್ಮ ಕಚೇರಿಗೆ ಬರುವ ಸಾರ್ವಜನಿಕರನ್ನು ತಣಿಸಲು ತಂಪು ಮಜ್ಜಿಗೆ ವಿತರಣೆ ಸೇವೆ ಮಾಡಲಾಗುತ್ತಿದೆ. ಈ ಕಾರ್ಯಕ್ಕೆ ಜನರು ತುಂಬಾ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಡಾ.ಬಿ.ಆರ್. ಅಂಬೇಡ್ಕರ್ ಹೆಸರಲ್ಲಿ ಸಣ್ಣದೊಂದು ಗ್ರಂಥಾಲಯ ಮಾಡಿದ್ದು, ಪುಸ್ತಕಗಳ ಜೊತೆಗೆ ದಿನಪತ್ರಿಕೆಗಳು ಕೂಡ ಸಿಗುವಂತೆ ಮಾಡಲಾಗಿದೆ.
> ■ ಮಹೇಶ ಪೋದ್ದಾರ, ಉಪ ನಿರ್ದೇಶಕ, ಸಮಾಜ ಕಲ್ಯಾಣ ಇಲಾಖೆ ವಿಜಯಪುರ

ಅಂಬೇಡ್ಕರ್ ಹೆಸರಲ್ಲಿ ಗ್ರಂಥಾಲಯ ಸ್ಥಾಪನೆ: ನಗರದ ಸಮಾಜ ಕಲ್ಯಾಣ ಇಲಾಖೆ ಕಚೇರಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಹೆಸರಿನಲ್ಲಿ ಪುಟ್ಟದೊಂದು ಗ್ರಂಥಾಲಯ ಸ್ಥಾಪಿಸಲಾಗಿದೆ. ಸಾರ್ವಜನಿಕರು ತಮ್ಮ ಕೆಲಸ, ಕಾರ್ಯದ ನಿಮಿತ್ತ ಕಚೇರಿಗೆ ಬಂದಾಗ, ಅಧಿಕಾರಿಗಳ ಭೇಟಿಗೆ ತಡವಾದಲ್ಲಿ ಇಲ್ಲಿನ ಗ್ರಂಥಾಲಯದ ಪುಸ್ತಕಗಳನ್ನು ಹಾಗೂ ಪತ್ರಿಕೆಗಳನ್ನು ಓದಬಹುದಾಗಿದೆ.



ಸಾರ್ವಜನಿಕರು, ವಿದ್ಯಾರ್ಥಿಗಳು ಸರ್ಕಾರಿ ಕಚೇರಿಗೆ ತೆರಳಿದ್ದ ಸಂದರ್ಭ, ತಮ್ಮ ಅಮೂಲ್ಯ ಸಮಯವನ್ನು ಓದಿನೊಂದಿಗೆ ಕಳೆಯುವಂತಹ ವ್ಯವಸ್ಥೆ ಕಲ್ಪಿಸಿದ ಇಲ್ಲಿನ ಸರ್ಕಾರಿ ಕಚೇರಿಯ ಅಧಿಕಾರಿಗಳ ಕಾರ್ಯ ಶ್ಲಾಘನೀಯ ಎಂದು ಜನರು ಸಂತಸ ವ್ಯಕ್ತಪಡಿಸುತ್ತಾರೆ. ಈ ಗ್ರಂಥಾಲಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಬರಹ ಮತ್ತು ಭಾಷಣಗಳ ಪುಸ್ತಕ, ಬಸವಾದಿ ಶರಣರ ಕೃತಿಗಳು, ನಾಡಿನ ಹಿರಿಯ ಸಾಹಿತಿಗಳ ಕಥೆ, ಕಾದಂಬರಿ ಸೇರಿದಂತೆ ಹಲವು ಪ್ರಕಾರದ ಪುಸ್ತಗಳನ್ನು ಸಂಗ್ರಹಿಸಲಾಗಿದೆ. ಅಲ್ಲದೆ ರಾಜ್ಯಮಟ್ಟದ ದಿನಪತ್ರಿಕೆ ಸೇರಿದಂತೆ ಸ್ಥಳೀಯ ದಿನಪತ್ರಿಕೆಗಳು ಇಲ್ಲಿ ಸಿಗುವುದು ವಿಶೇಷ.

ಬೀಡುಬಿಟ್ಟಿದ್ದ ಆನೆಗಳನ್ನು ಕಾಡಿಗಟ್ಟಿದ ಅರಣ್ಯ ಇಲಾಖೆ

ಮಡಿಕೇರಿ: ವೀರಾಜಪೇಟೆ ತಾಲೂಕಿನ ಮಾಲ್ದಾರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಾಡಗ ಬಾಣಂಗಾಲ ಗ್ರಾಮದಲ್ಲಿ ಕಾಣಿಸಿಕೊಂಡಿದ್ದ ಕಾಡಾನೆಗಳ ಹಿಂಡನ್ನು ಅರಣ್ಯ ಇಲಾಖೆ ಶುಕ್ರವಾರ ಯಶಸ್ವಿಯಾಗಿ ಕಾಡಿಗೆ ಮರಳಿಸಿತು.

ಗ್ರಾಮದ ಸುತ್ತಮುತ್ತಲಿನ ಅರಣ್ಯ ಪ್ರದೇಶದಿಂದ ಹೊರಬಂದು ಬೆಳೆ ಹೊಲಗಳತ್ತ ಚಲಿಸುತ್ತಿದ್ದ ಒಟ್ಟು 9 ಕಾಡಾನೆಗಳ ಹಿಂಡಿನಲ್ಲಿ ಎರಡು ಮರಿ ಆನೆಗಳೂ ಇದ್ದವು. ಈ ಘಟನೆ ಗ್ರಾಮಸ್ಥರಲ್ಲಿ ಭಯ ಮತ್ತು ಆತಂಕ ಉಂಟುಮಾಡಿತ್ತು. ಸ್ಥಿತಿ ಗಂಭೀರವಾಗುತ್ತಿರುವುದನ್ನು ಗಮನಿಸಿದ ಅರಣ್ಯ ಇಲಾಖೆ ಸಿಬ್ಬಂದಿ ತಕ್ಷಣ ಕಾರ್ಯಪ್ರವೃತ್ತರಾಗಿ, ಕಾಡಾನೆಗಳನ್ನು ಸುರಕ್ಷಿತವಾಗಿ ಮರಳಿ ಅರಣ್ಯ ಪ್ರದೇಶದತ್ತ ಓಡಿಸುವಲ್ಲಿ ಯಶಸ್ವಿಯಾದರು. ಕಾರ್ಯಾಚರಣೆ ವೇಳೆ ಶಬ್ಧ ಬಾಂಬ್‌ಗಳು ಸೇರಿದಂತೆ ವಿವಿಧ ಸುರಕ್ಷತಾ ಕ್ರಮಗಳನ್ನು ಬಳಸಲಾಯಿತು. ಕಾಡಾನೆಗಳ ಹಿಂಡು ಗ್ರಾಮ ಪ್ರದೇಶದಿಂದ ದೂರ ಸರಿದ ಹಿನ್ನೆಲೆಯಲ್ಲಿ ಸ್ಥಳೀಯರು ನಿಟ್ಟುಸಿರು ಬಿಟ್ಟಿದ್ದಾರೆ. ಆದರೆ ಇಂತಹ ಘಟನೆಗಳು ಮರುಕಳಿಸದಂತೆ ಶಾಶ್ವತ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಅರಣ್ಯ ಇಲಾಖೆಯನ್ನು ಆಗ್ರಹಿಸಿದ್ದಾರೆ. ಈ ಕಾರ್ಯಾಚರಣೆಯನ್ನು ಚೆನ್ನಂಗಿ ಭಾಗದ ಉಪವಲಯ ಅರಣ್ಯಾಧಿಕಾರಿ ಪಿ.ಟಿ. ಶಶಿ ನೇತೃತ್ವದಲ್ಲಿ ಆರ್‌ಆರ್‌ಟಿ ಸಿಬ್ಬಂದಿ ಯಶಸ್ವಿಯಾಗಿ ನಡೆಸಿದರು.



ಪ್ರಶ್ನೋತ್ತರ ರತ್ನಮಾಲಿಕೆ



• ವಿದ್ವಾನ್ ನರಸಿಂಹ ಭಟ್

ಈ ಜಗತ್ತು ಯಾರ ವಶದಲ್ಲಿದೆ?

ಧರ್ಮದಲ್ಲಿ ಪ್ರೀತಿ ಮತ್ತು ಪ್ರಿಯವೂ ಹಿತವೂ ಆದ ಮಾತನ್ನು ಆಡುವವನ.

ಈ ಪ್ರಶ್ನೆಯನ್ನು ಕೇಳಿದ ಆ ಕ್ಷಣದಲ್ಲಿ ಅನೇಕ ಉತ್ತರಗಳು ತಮ್ಮ ಮನಸ್ಸಿನಲ್ಲಿ ಗೋಚರವಾಗುತ್ತವೆ. ಈ ಜಗತ್ತು ಭಗವಂತನ ವಶದಲ್ಲಿ ಇದೆ. ಅಥವಾ ಈ ಜಗತ್ತು ಮಾನವನ ವಶದಲ್ಲಿ ಇದೆ. ಅಥವಾ ಈ ಜಗತ್ತು ಒಬ್ಬ ಪರಾಕ್ರಮಿ ಆದ ರಾಜನ ವಶದಲ್ಲಿದೆ ಎಂಬುದಾಗಿ. ಆದರೆ ಇಲ್ಲಿ ಹೇಳುವ ಉತ್ತರ ಇದಾವುದೂ ಅಲ್ಲ. ಏಕೆಂದರೆ ಈ ಜಗತ್ತು ಇವರಾರಿಂದಲೂ ವಶದಲ್ಲಿ ಇಟ್ಟುಕೊಳ್ಳಲು ಸಾಧ್ಯವಾದುದಲ್ಲ. ಆದರೆ ಭಗವಂತ ಅಂದರೆ ಈ ಪ್ರಪಂಚದ ಮೂಲ ಶಕ್ತಿ. ಇದು ತಾನೇ ತನ್ನ ವಶದಲ್ಲಿ ಇಟ್ಟುಕೊಳ್ಳಲು ಸಾಧ್ಯ ಎಂಬುದಾಗಿ ಅನ್ನಿಸಬಹುದು. ಹೌದು. ಒಂದರ್ಥದಲ್ಲಿ ಇದು ಉತ್ತರವಾಗಿ ಅನ್ನಿಸಲು ಅವಕಾಶ ಇದೆ. ಭಗವಂತನ ಮೂರು ಚೈತನ್ಯಗಳು ಬ್ರಹ್ಮ, ವಿಷ್ಣು, ಮಹೇಶ್ವರ. ಇವರಿಂದ ಸೃಷ್ಟಿ, ಸ್ಥಿತಿ ಮತ್ತು ಲಯವೆಂಬ ಮೂರು ವ್ಯಾಪಾರಗಳು ನಡೆಯುತ್ತವೆ. ಇವರೇ ಈ ಸೃಷ್ಟಿಯ ನಿಯಾಮಕರು ಎಂಬುದಾಗಿ ತಿಳಿಯಬಹುದು. ಆದರೆ ಇಲ್ಲಿ ಬರುವ ಉತ್ತರ ಇವೆಲ್ಲಕ್ಕೂ ಮೂಲವಾದದ್ದು. ಹಾಗಾದರೆ ಈ ಉತ್ತರ ಅದು ಹೇಗೆ ಸಮರ್ಪಕ? ಅಂದರೆ ಧರ್ಮದಲ್ಲಿ ಪ್ರೀತಿ ಇದ್ದು, ಅದನ್ನು ಮಾತಿನಲ್ಲಿ ಆಡುವವನು ಈ ಜಗತ್ತನ್ನು ವಶದಲ್ಲಿ ಇಟ್ಟುಕೊಳ್ಳಲು ಸಾಧ್ಯ ಎಂಬ ಉತ್ತರ.

ಒಂದು ಮಾತು ಪ್ರಿಯವಾದದ್ದಾಗಿ ಇದ್ದು, ಆ ಮಾತು ಧರ್ಮದಿಂದ ಕೂಡಿದ್ದು, ಧರ್ಮದಲ್ಲಿ ಪ್ರೀತಿ ಉಳ್ಳದ್ದಾಗಿದ್ದರೆ, ಅಂತಹ ಮಾತು ಈ ಜಗತ್ತನ್ನು ವಶದಲ್ಲಿ ಇಟ್ಟುಕೊಳ್ಳಬಹುದು. ಅಂದರೆ ಮಾತಿಗೆ ಅದೆಷ್ಟು ಸಾಮರ್ಥ್ಯವಿದೆ ಎಂದು ಅರ್ಥ. ಮಾತಿಗೆ ಸಾಮರ್ಥ್ಯ ಬರುವುದಕ್ಕೆ ಕಾರಣ ಧರ್ಮವೇ ಆಗಿದೆ. ಹಾಗಾದರೆ ಧರ್ಮದಿಂದ ಮಾತಿಗೆ ಸಾಮರ್ಥ್ಯ ಹೇಗೆ ಬಂತು? ಧರ್ಮ ಎಂದರೇನು? ಶ್ರೀರಂಗ ಮಹಾಗುರುಗಳು ಹೇಳಿದಂತೆ ಈ ಜಗತ್ತನ್ನು ಧರಿಸಿರುವುದೇ ಧರ್ಮ. ಅದು ಒಂದು ಚೈತನ್ಯಶಕ್ತಿ ಆಗಿರಬಹುದು ಅಥವಾ ಆ ಚೈತನ್ಯಶಕ್ತಿಯಿಂದ ವಿಸ್ತರಗೊಂಡ ಅನೇಕ ಚೇತನ್ಯಶಕ್ತಿಗಳಿರಬಹುದು. ಅವೆಲ್ಲವೂ ಧರ್ಮವೇ. ಈ ಶಕ್ತಿಯನ್ನು ಅಂತೆಯೇ ಉಳಿಸುವುದಕ್ಕೆ ಬೇಕಾದ ಯಾವೆಲ್ಲ ಕ್ರಿಯಾ ಕಲಾಪಗಳಿವೆಯೋ ಅವೆಲ್ಲವನ್ನೂ ಧರ್ಮವೆಂದು ಕರೆಯಬಹುದು ಎಂದು. ಮಾತು ಕೂಡ ಧರ್ಮದಿಂದಲೇ, ಧರ್ಮದ ಮೂಲದಿಂದಲೇ ವಿಕಾಸಗೊಂಡದ್ದು. ಮಾತು ಧರ್ಮವನ್ನು ಉಳಿಸುತ್ತದೆ. ಒಂದು ವೇಳೆ ಮಾತು ಸರಿಯಾಗಿಲ್ಲದಿದ್ದರೆ ಧರ್ಮವನ್ನು ಹಾಳು ಮಾಡುತ್ತದೆ. ಅದಕ್ಕೆ ಒಂದು ಸುಭಾಷಿತವು ಹೀಗೆ ಹೇಳುತ್ತದೆ. ಯಾವ ರೀತಿಯಾದ ಮಾತನ್ನು ಹೇಳಬೇಕು ಎಂದು. ಸತ್ಯವಾದದ್ದನ್ನು ಪ್ರಿಯವಾದದ್ದನ್ನು ಹೇಳಬೇಕು. ಅಪ್ರಿಯವಾದ ಸತ್ಯವನ್ನು ಹೇಳಬಾರದು. ಪ್ರಿಯವಾಗುತ್ತದೆಂದು ಸುಳ್ಳನ್ನು ಹೇಳಬಾರದು ಎಂದು. ಇಂತಹ ಮಾತು ಧರ್ಮವನ್ನು ಉಳಿಸುತ್ತದೆ. ಹೇಗೆ ಆಡಿದರೆ ಅದು ಧರ್ಮವನ್ನು ಉಳಿಸುತ್ತದೆ ಎಂಬುದನ್ನು ಅರಿತು ಮಾತನಾಡಬೇಕು. ಹೀಗೆ ಮಾತನಾಡುವ ಒಬ್ಬ ವ್ಯಕ್ತಿ ಧರ್ಮವನ್ನು ಕಾಪಾಡಬಲ್ಲ. ತನ್ಮೂಲಕ ಜಗಚ್ಚಕ್ರಿಯಾದ ಈ ಚೈತನ್ಯವನ್ನು ಈ ಮಾತಿನ ಮೂಲಕ ಬಲಗೊಳಿಸಬಲ್ಲ. ಹಾಗಾಗಿ ಇಂತಹ ಮಾತಿಗೆ ಜಗತ್ತನ್ನು ಆಳುವ, ವಶದಲ್ಲಿಟ್ಟುಕೊಳ್ಳುವ ಅದ್ಭುತ ಸಾಮರ್ಥ್ಯವಿದೆ ಎಂಬ ವಿಶಿಷ್ಟವಾದ ಪರಿಕಲ್ಪನೆಯ ಉತ್ತರ ಇಲ್ಲಿದೆ.

ವ್ಯಾಸ ವೀಕ್ಷಿತ





• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಭೀಮನಿಂದ ಜರಾಸಂಧ ವಧೆ

ಶ್ರೀಕೃಷ್ಣನು ಜರಾಸಂಧವಧೆಯು ಬೇಗನೆ ಆಗಲೆಂದು ಬಯಸಿ ಭೀಮನಿಗೆ ಹೇಳಿದನು: "ಭೀಮನೇ, ಯಾವ ಪರದೈವದ ಸತ್ತ್ವವು ನಿನ್ನಲ್ಲುಂಟೋ, ಹಾಗೆಯೇ ವಾಯುದೇವನ ಸತ್ತ್ವವೆಂಬುದು ಯಾವುದು ನಿನ್ನಲ್ಲುಂಟೋ, ಅದನ್ನೀಗ ನಮಗೆ ನೀನು ಬೇಗನೆ ತೋರಿಸು. ನಿನ್ನಿಂದಲ್ಲದೆ ಮತ್ತಾರಿಂದಲೂ ಈತನಿಗೆ ಸಾವಿಲ್ಲ. ವಾಯುವನ್ನು ಸ್ಮರಿಸಿ, ಈ ಮಗಧರಾಜನನ್ನು ಕೊಲ್ಲುಲಿ

ಕೃಷ್ಣನು ಹೀಗೆ ಹೇಳಲು, ಅರಿಂದಮನಾದ ಭೀಮಸೇನನು ಜರಾಸಂಧನನ್ನು ಮೇಲಕ್ಕೆತ್ತಿ ತಿರುಗಿಸಿದನು. ಆಗ ಕೃಷ್ಣನು, ಭೀಮಸೇನನತ್ತ ನೋಡುತ್ತಾ ಹುಲ್ಲುಕಡ್ಡಿಯೊಂದನ್ನು ಮುರಿದನು. ಅದಕ್ಕೆ ಸರಿಯಾಗಿ ಭೀಮನು ನೂರುಬಾರಿ ಜರಾಸಂಧನನ್ನು ತಿರುಗಿಸಿ, ಆತನ ಬೆನ್ನನ್ನು ಹಿಸುಕಿ ಮುದ್ದೆ ಮಾಡಿ, ತನ್ನ ಮಂಡಿಗಳ ಮೇಲೆ ಅಪ್ಪಳಿಸಿ ಬೆನ್ನನ್ನು ಮುರಿದನು ಹಾಗೂ ಗರ್ಜಿಸಿದನು. ಆತನೊಂದು ಕಾಲನ್ನು ಹಿಡಿದುಕೊಂಡು ಮತ್ತೊಂದನ್ನು ಮೆಟ್ಟಿ ಶರೀರವನ್ನು ಇಬ್ಭಾಗವಾಗಿಸಿದನು. ಆಗ ಜರಾಸಂಧನ ಆ ಶರೀರಭಾಗಗಳೆರಡು ಮತ್ತೆ ಸೇರಿಕೊಂಡವು ಹಾಗೂ ಜರಾಸಂಧನು ಮತ್ತೆ ಬಾಹುಯುದ್ಧಕ್ಕೆ ಆರಂಭಮಾಡಿಕೊಂಡನು. ಈಗ ಯುದ್ಧವು ತುಮುಲವೂ ರೋಮಹರ್ಷಣವೂ ಆಗಿದ್ದಿತು. ಅದು ಸರ್ವಲೋಕ-ಕ್ಷಯಕರವೂ ಸರ್ವಜೀವಗಳಿಗೂ ಭಯಾವಹವೂ ಆಗಿತ್ತು. ಮತ್ತೆ ಕೃಷ್ಣನು ಆ ಕಡ್ಡಿಯನ್ನು ಮುರಿದು ವ್ಯತ್ಯಸ್ತಮಾಡಿ ಬಿಸುಟನು. ಅದರ ಅರ್ಥವನ್ನು ಅರಿತುಕೊಂಡ ಭೀಮಸೇನನು ಜರಾಸಂಧನನ್ನು ಸೀಳಿ, ಶರೀರದ ಆ ಎರಡು ಭಾಗಗಳನ್ನು ಕಾಲಿನಿಂದ ವ್ಯತ್ಯಾಸಮಾಡಿ ಒದ್ದೆಸೆದನು. ಜರಾಸಂಧನು ಆಗ ಶವರೂಪವಾದನು. ಆತನ ಮಾಂಸವೊಣಗಿತು, ಮೂಳೆ ಮುರಿಯಿತು, ಚರ್ಮ ಹರಿಯಿತು, ಮಸ್ತಿಷ್ಕವು ಮುದ್ದೆಯಾಯಿತು. ಆಗ ಜರಾಸಂಧನು ಪಿಂಡೀಭೂತನಾಗಿ ಕಂಡನು.

ಭೀಕರವಾಗಿ ಗರ್ಜಿಸುತ್ತಾ ಭೀಮನು ಜರಾಸಂಧನನ್ನು ಜಜ್ಜುತ್ತಿರಲು ಉಂಟಾದ ನಾದವು ಎಲ್ಲ ಪ್ರಾಣಿಗಳಿಗೂ ಭಯಂಕರವಾಗಿತ್ತು. ಮಗಧದೇಶದ ಪ್ರಜೆಗಳು ಬಹುವಾಗಿಯೇ ತ್ರಾಸಗೊಂಡರು. ಗರ್ಭಿಣಿಯರಿಗೆ ಗರ್ಭಸ್ರಾವವಾಯಿತು. ಏಕೆಂದರೆ ಭೀಮಸೇನ-ಜರಾಸಂಧರ ಗರ್ಜನ-ನಾದಗಳು ಹಾಗಿದ್ದವು. "ಇದೇನು ಹಿಮಾಲಯವೇ ಒಡೆದುಹೋಯಿತೇ? ಅಥವಾ ಭೂಮಿಯೇ ಸೀಳುತ್ತಿದೆಯೇ?" ಎಂದೆಲ್ಲಾ ಮಾಗಧರು ಯೋಚನೆ ಮಾಡಹತ್ತಿದರು. ನಿದ್ದೆ ಮಾಡುತ್ತಿರುವಂತೆ ಬಿದ್ದಿದ್ದ ಆ ಸತ್ತ ರಾಜನನ್ನು ಆ ರಾಜದ್ವಾರದಲ್ಲಿಯೇ ಬಿಟ್ಟವರಾಗಿ, ಆ ಮೂರೂ ವೀರರು ಆ ರಾತ್ರಿಯಲ್ಲೇ ಹೊರಹೊರಟರು. ಪತಾಕೆಯಿಂದ ಮಂಡಿತವಾದ ಜರಾಸಂಧ ರಥವನ್ನೇ ಶ್ರೀಕೃಷ್ಣನು ಸಿದ್ಧಪಡಿಸಿಕೊಂಡನು. ಭೀಮಾರ್ಜುನರನ್ನು ರಥಕ್ಕೆ ಹತ್ತಿಸಿಕೊಂಡು ತಾನೇ ಸಾರಥಿಯಾದನು.

ಅಲ್ಲಿಂದ ಹೊರಹೊರಟು, ಸೆರೆಯಾಗಿದ್ದ ತನ್ನೆಲ್ಲ ಬಂಧುಗಳನ್ನು ಮೊದಲು ಸೆರೆಯಿಂದ ಬಿಡಿಸಿದನು. ರತ್ನಗಳಿಗೆ ಅರ್ಹರೆನಿಸಿದ್ದ ಆ ರಾಜರುಗಳು, ಜರಾಸಂಧನೆಂಬ ಮಹತ್ತಾದ ಭಯದಿಂದ ಬಿಡುಗಡೆ ಪಡೆದವರಾಗಿ, ಶ್ರೀಕೃಷ್ಣನಿಗೆ ತಮ್ಮ ರತ್ನಗಳನ್ನೇ ಸಮರ್ಪಿಸಿದರು. ಕೃಷ್ಣನಿಗಂತೂ ಯಾವ ಗಾಯವೂ ಆಗಿರಲಿಲ್ಲ. ಅವನ ಬಳಿ ಶಸ್ತ್ರಗಳೆಲ್ಲವೂ ಇದ್ದವು. ಶತ್ರುವನ್ನಂತೂ ಗೆದ್ದಾಯಿತು. ಈಗ ಆ ರಾಜರುಗಳೊಂದಿಗೆ ಆತನು ಆ ದಿವ್ಯರಥವನ್ನೇರಿ ಗಿರಿವ್ರಜದಿಂದ ಹೊರಹೊರಟನು. ಆ ರಥದ ಹೆಸರೇ ಸೋದರ್ಯವಾನ್ ಎಂಬುದಾಗಿ. ಅದರಲ್ಲೀಗ ಇಬ್ಬರು ಯೋಧರು. ಎಂದರೆ ಭೀಮಾರ್ಜುನರು ಕುಳಿತಿದ್ದರು. ಕೃಷ್ಣನೇ ಸಾರಥಿ. ಅನೇಕ ಬಾರಿ ಶತ್ರುಗಳಿಂದ ಆಘಾತಗಳನ್ನು ಎದುರಿಸಿದರೂ ಅದು ಮತ್ತೆ ಮತ್ತೆ ನೋಡಬೇಕೆನ್ನುವಂತೆಯೇ ಇತ್ತು.

ಕನ್ನಡಾಂಬೆಯ ರಾಗ ರಾ.ಗಣೇಶ್

ವಕ್ರದೃಷ್ಟಿ



• ಎನ್.ರಾಮನಾಥ್
anakuramanath@gmail.com

ಸಾರಂಗಾಸ್ತೇ ಜಲಲವಮುಚಃ ಸೂಚಯಿಷ್ಯಂತಿ ಮಾರ್ಗಂ ।
(ನೀರು-ಲವಣಗಳಿಂದ ಕೂಡಿರುವ ಮೋಡವೇ, ಸಾರಂಗಗಳು ನಿನಗೆ ದಾರಿತೋರಿಸುತ್ತವೆ.)

'ಮೇಘದೂತ'ದ ಮೋಡಗಳಿಗೆ ಆ ಜಿಂಕೆಗಳು (ಆನೆಗಳು, ದುಂಬಿಗಳು) ಮಾರ್ಗವನ್ನು ಸೂಚಿಸಿದವೋ, ಬಿಟ್ಟವೋ ತಿಳಿಯದು. ಆದರೆ ಸಾಹಿತ್ಯ ಲೋಕದ ದಿಗ್ಗಜರೂ, ವಿವಿಧವಿಷಯಪುಷ್ಪಗಳ ಮಕರಂದಮಂ ಪೀರ್ವ ದುಂಬಿಯೂ, ಆಲೋಚನೆಯವೇಗದಲ್ಲಿಹರಿಣಸದೃಶರೂಆದಗಣೇಶರು ಮೇಘದೂತದಕಾವ್ಯಾರ್ಥವೆಂಬಕ್ಲಿಷ್ಟಾರೋಹಣಪಥಕ್ಕೆಮಾರ್ಗಸೂಚಿಯಾಗಿ ದೊರೆತಿರುವುದು ಕನ್ನಡದ ಪುಣ್ಯ.

ಸಾಹಿತ್ಯಪ್ರಕಾರದಲ್ಲೇವಿಶಿಷ್ಟವೆನಿಸುವಅವಧಾನಕಲೆಯಲ್ಲಿಶತಾವಧಾನದ ಪಡಿಗಳನ್ನೇರಿದ ಈ ಮುಂದಾಳ ಕರ್ಣಗಳಿಗೆ ಹಿಂದೋಳ ಅತ್ಯಂತ ಪ್ರಿಯವಂತೆ. ಎಂದೂ ಯಾವ ಭಾಮೆಯನ್ನೂ ನೋಡಲುಹೋಗದಇವರಿಗೆ 'ಭಾಮೆಯ ನೋಡಲು ತಾ ಬಂದ' ಹಾಡು ಪ್ರಿಯವಾದುದು. ಅಂತೆಯೇ 'ಚಂದ್ರಮುಖಿಪ್ರಾಣಸಖಿ'ಹಾಗೂಹಿಂದಿಯಬೈಜುಬಾವರಾಚಿತ್ರದ'ಮನ ತಡಪತ' ಗೀತೆಗಳಿವರಿಗೆಕರ್ಣಾನಂದಕರ. "ಹಿಂದೋಳವೆಂದರೆ ಉಯ್ಯಾಲೆ ಎಂದರ್ಥ. ಇಲ್ಲಿಯೇ ತೂಗಿ ತೊನೆಯುತ್ತೇನೆ. ಮತ್ತೂ ಮುಂದುವರೆಯುವ ಬಯಕೆಯಾಗುತ್ತದೆ" ಎನ್ನುತ್ತಾರೆ ಶತಾವಧಾನಿ ಗಣೇಶರು.

ಹಲವಾರು ಭಾಷೆಗಳನ್ನು ಪಾಂಡಿತ್ಯಪೂರ್ಣವಾಗಿಮಂಡಿಸುವ ಗಣೇಶರು "ಸಂಸ್ಕೃತಕ್ಕೆಪದ್ಯ-ಗದ್ಯ-ಗೀತೆಗಳಿಗೆಬೇಕಾದನೈಸರ್ಗಿಕವಾದಸಾಮರ್ಥ್ಯ ವಿದ್ದರೂ,ನಮ್ಮರಾಷ್ಟ್ರದಸಂಸ್ಕೃತಿಸಾರವನ್ನೆಲ್ಲಹಿಡಿದಿಡಬಲ್ಲಬಲ್ಮೆಯಿದ್ದರೂ, ಇಂದಿನ ನಮ್ಮ ಪ್ರಾಂತೀಯ ಭಾಷೆಗಳಿಗೆಲ್ಲ ಇರುವಂಥ ಸಮಸಾಮಯಿಕವಾದ ನುಡಿಗಟ್ಟಿನ ಸೌಲಭ್ಯವಿಲ್ಲ. ಆಡುನುಡಿಯ ಅನುಕೂಲತೆಯಿಲ್ಲ. ಜಾಗತಿಕ ಭಾಷೆಯೆಂದೂ,ಎಲ್ಲ ಬಗೆಯಜ್ಞಾನ-ವಿಜ್ಞಾನಗಳಹೆಬ್ಬಾಗಿಲೆಂದೂ ಹೆಸರಾದ ಇಂಗ್ಲಿಷನ್ನು ಗಮನಿಸುವುದಾದರೆ, ಅದು ನಮ್ಮ ನೆಲದ ಅನುದಿನದ ಜೀವನವನ್ನೂ, ಅಂತರಾತ್ಮದ ಸಂಜೀವನವನ್ನೂ ಬಿಂಬಿಸುವಲ್ಲಿ ಶೋಚನೀಯ ವಾಗಿ ಸೋಲುತ್ತದೆ. ಆದರೆ ಇತ್ತ ಸಂಸ್ಕೃತದ ವಾಗರ್ಥ ಸಂಪತ್ತಿಯನ್ನೂ, ಇಂಗ್ಲಿಷಿನ ವಿಚಾರ-ವ್ಯವಹಾರ ಸಮೃದ್ಧಿಯನ್ನೂ ಅವಲೀಲೆಯಾಗಿ ತಮ್ಮಲ್ಲಿ ಮೈಗೂಡಿಸಿಕೊಳ್ಳಬಲ್ಲ ನಮ್ಮ ದೇಶಭಾಷೆಗಳಿಗೆ ಇವೆರಡು ನುಡಿಗಳಿಂದಲೂ ಸಾಧ್ಯವಾಗದ, ನಮ್ಮ ಜನತೆಗೆ ಬೇಕಾಗಬಲ್ಲ ಭಾವ-ಬುದ್ಧಿಗಳ ಅಭಿವ್ಯಕ್ತಿಯನ್ನು ಹವಣಿಸಿಕೊಡಬಲ್ಲ ಶಕ್ತಿಗಳುಂಟು" ಎನ್ನುತ್ತಾರೆ. ಪ್ರಾಂತೀಯ ಭಾಷೆಗಳ ಪ್ರಾಮುಖ್ಯತೆಯನ್ನು ಈನಿಟ್ಟಿನಲ್ಲಿ ಕಂಡ ಭಾಷಾಪ್ರೇಮಿಗಳು ವಿರಳ.

ಅವಧಾನಿಗಳಹಳಗನ್ನಡಪ್ರಯೋಗದಸ್ವಾದಕ್ಕೆಇಂದಿನಯಾವುದೇಸ್ವೀಟ್ ಸ್ಟಾಲ್‌ನಲ್ಲಿದೊರೆಯುವಯಾವುದೇಸಿಹಿತಿನಿಸುಸಮವಲ್ಲ. ಒತ್ತೊತ್ತಾಗಿರುವ ತರುಗಳನ್ನುಳ್ಳ ಕಾನನದ ಸೊಗದಂತೆಯೇ ಒತ್ತಕ್ಷರಗಳ ಸಾಲುಸಾಲುಗಳಿಂದ ಶ್ರೀಮಂತವೆನಿಸುವ, ಲಯಬದ್ಧವಾಗಿ ಮುನ್ನಡೆಯುವಹಳಗನ್ನಡದ ಓಟದ ಸವಿಯು ಕರ್ಣರಸಾಯನವೂ ಹೌದು, ಚಿತ್ತರಸಾಯನವೂ ಹೌದು. ಇಂತಹ ಸ್ವಾದಿಷ್ಟ ರಸಾಯನವನ್ನು ಮೊಗೆಮೊಗೆದು ಉಣಬಡಿಸಬಲ್ಲ ಉದ್ದಾಮರು ವಿರಳರಾಗುತ್ತಿರುವ ಈ ಕಾಲದಲ್ಲಿ ಗಣೇಶರು ನಮಗೆ ಮರಳುಗಾಡಿನ ಓಯಸಿಸ್‌ನಂತೆ ಕಾಣಬರುತ್ತಾರೆ.

ಗಣೇಶರು ಅನೇಕ ಬಾರಿ ಹಾಸ್ಯ ಮತ್ತು ಚಮತ್ಕಾರಗಳನ್ನು ವಿಷಯಗಳನ್ನು ಪ್ರೇಕ್ಷಕರಿಗೆತಲುಪಿಸುವವಾಹನಗಳನ್ನಾಗಿಬಳಸಿದ್ದಾರೆ. ಅಂತಹವಾಹನಗಳಿಗೆ ಸುಭಾಷಿತಗಳಲ್ಲಿ ದೊರೆಯುವ ಚಮತ್ಕಾರಗಳು ಇಂಧನವಾಗಿವೆ. ಇದೋ ಗಣೇಶರು ಮೆಚ್ಚಿದ ಒಂದು ಸಂಸ್ಕೃತ ಸುಭಾಷಿತ ಮತ್ತು ಪಾ.ವೆಂ. ಆಚಾರ್ಯರು ಅದನ್ನು 'ಕನ್ನಡಿಸಿದ' ಪರಿ:

ರೇ ರೇ ರಾಸಭ ವಸ್ತ್ರಭಾರವಹನಾತ್ಕುಗ್ರಾಸಮಶ್ನಾಸಿ ಕಿಂ
ರಾಜಾಶ್ವಾವಸಥಾನ್ ಪ್ರಯಾಹಿ ಚಣಕಾಭ್ಯೂಷಂ ಸುಖಂ ಭಕ್ಷಯ ।
ಸರ್ವಾನ್ ಪುಚ್ಛವತೋ ಹಯಾ ಇತಿ ವದಂತ್ಯತ್ರಾಧಿಕಾರೇ ಸ್ಥಿತಾ
ರಾಜಾ ತೈರುಪದಿಷ್ಟಮೇವ ಮನುತೇ ಸತ್ಯಂ ತಟಸ್ಥಾಃ ಪರೇ ॥

ಇದೋ ಪಾ.ವೆಂ. ಮಂಡಿಸಿರುವ ಅನುವಾದ:

ಎಲವೆಲವೋ ಕತ್ತೆ, ತಿನ್ನಲೇಕೆ ತರಗ
ಕೊಳೆಬಟ್ಟೆಯೇಕೆ ಹೊರುವೆ?
ಅರಸುಲಾಯವ ಸೇರು, ಸುಖವಾಗಿ ನೀ ಬಾಳು
ಮೆಲ್ಲುತ್ತ ಹುರುಳಿ-ಕಡಲೆ.
ಅಂಜದಿರು; ಬಾಲವಿದ್ದದ್ದೆಲ್ಲ ಕುದುರೆಯೆಂ-
ಬಧಿಕಾರಿವರ್ಗವಿಲ್ಲಿ;
ಅರಸಗವರಂದದ್ದೆ ಪದವಾಕ್ಯ, ಮಿಕ್ಕವರು
ತೆಗೆಯುವವರಲ್ಲ ತರಲೆ!

ಗಣೇಶರನ್ನು ನಾನು ಮೊದಲ ಬಾರಿ ಕಂಡದ್ದು ಹಾಸ್ಯೋತ್ಸವದಲ್ಲಿ. ಜನರು ನೀಡಿದ ದತ್ತಪದಿಗಳನ್ನು ಬಳಸಿ ಅವರು ರಚಿಸಿದ ಕವನಗಳು ನನ್ನನ್ನು ನಿಬ್ಬೆರಗಾಗಿಸಿದ್ದವು. ಆನಂತರ ಅವರ ಅನೇಕ ದತ್ತಪದಿಪ್ರಯೋಗಗಳನ್ನು ಆಸ್ವಾದಿಸಿದ್ದೇನೆ. ಪಾಪಿ, ನೀಚ, ಚೋರ, ಜಾರ; ಈ ಪದಗಳನ್ನು ಬಳಸಿ ಮಾಡಿರುವ ಆಂಜನೇಯಸ್ತುತಿಯನ್ನು ಕಾಣಿರಿ:

ಹನುಮ! ಪಾಪೆಯೆನ್ನನೆ ಕಾಪಿಡಯ್ ।
ಜನಿತನೀಚತೆಯಿಂದಿದೊ ನೊಂದೆನಾಂ ।
ಜನಕಜಾತೆಯ ಚೋರನ ಸೈನ್ಯಸೂ-
ದನನೆ! ಜಾರದವೊಲ್ ಪಿಡಿದೆನ್ನನೋ ।

ಗಣೇಶರು ಅನ್ಯಭಾಷೆಯ ಪದಗಳನ್ನು ಕನ್ನಡದಲ್ಲಿ ಸೇರಿಸುವ ಚಮತ್ಕಾರವು ಅನನ್ಯವಾದುದು. ಟ್ರಿಗ್ನಾಮೆಟ್ರಿಯ ಸೈನ್, ಕೋಸೈನ್, ಟ್ಯಾನ್, ಕಾಟ್‌ಶೀಟಾಗಳನ್ನುಬಳಸಿಯುದ್ಧವರ್ಣನೆಮಾಡಿಸಬೇಕೆನ್ನುವುದು ಪೃಚ್ಛಕನೊಬ್ಬನಿಗೆಹತ್ತಿದ ತೀಟೆ. ಇದೋ ಗಣೇಶರು ಅದಕ್ಕೆಕೊಟ್ಟಪರಿಹಾರ:

ರಿಪುಸೈನ್ಯಂಗಳ್ ಕಲೆಯಲ್
ವಿಪುಲಂ ಮೃತಿ, ಆರ ದಾಹಕೋ ಸೈನ್ಯಮಿ-
ತ್ತಪನಂ! ವೈಕಟ್ಯಾಂತರ-
ಮುಪಮಿಸಲಿಲ್ಲಂ ಸೊಗಕ್ಕೆ ಶನಿಕಾಟಮಿದೇ ।

ಸಾಮಾಜಿಕ ಕಳಕಳಿಯನ್ನು ಗಣೇಶರು ತಮ್ಮ ಪದ್ಯಗಳಲ್ಲಿ ತೋರುವುದು ವಿಶಿಷ್ಟ ರೀತಿಯಲ್ಲಿಯೇ. ಅಸಲಿಗೆ ಪರಿಸರರಕ್ಷೆಯನ್ನು ಕಡೆಗಣಿಸುವುದನ್ನು ಆನೆಗಳಘೀಳುಸ್ವರದಲ್ಲಿಯೋ,ಸಿಂಹನಾದದಲ್ಲಿಯೋಅಬ್ಬರಿಸುವಅನೇಕರು ಹಾದಿಗಳಲ್ಲಿ ದೊರೆತಾರು. ಗಣೇಶರು ಈ ವಿಧವನ್ನು ಮಂಡಿಸಲು ಬಳಸಿದ್ದು 'ನಿಧಾನವಾಗಿ ಮುಂದುವರೆಯುವ' ಮಂದಾಕ್ರಾಂತವನ್ನು:

ಪಾಲೆಲ್ಲಿ ದೊರೆಯುವುದು? 'ಬೃಹದ್ ಬಾಟಲಿಯಿಂದಂ' ಫಲಗಳ್
ಪೇಟ್! ಎಲ್ಲಿಂದಂ? 'ದೊರೆವುವು ದಲ್ ಫ್ರೂಟ್ ಸಲಾಡೊಳ್'
'ಸುಮಂಗಳ್?'
'ಲೀಲಾಗುಚ್ಛಂಗಳೊಳೊಲವಿನೊಳ್, ಪಾರ್ಟಿಯೊಳ್' 'ಕಾಟ್ಜಿಗಂಗಳ್?'
ಖೇಲೋದ್ಯಾನಂಗಳೊಳ್ ಎನ್ನುವ ನವ್ಯರ್ಗಧೀನಂ ಸಮಸ್ತಂ.

(ಹಾಲು ಬಾಟಲಿಯಲ್ಲಿ, ಹಣ್ಣು ಫ್ರೂಟ್ ಸಲಾಡಿನಲ್ಲಿ, ಹೂಗಳು ಬೊಕೆಯಲ್ಲಿ, ಪಾರ್ಟಿಗಳಲ್ಲಿ; ಕಾಡುಮೃಗಗಳು ಝೂಗಳಲ್ಲಿ ಸಿಗುತ್ತವೆ ಎನ್ನುವ ಜನರ ಕೈಗೆ ಪರಿಸರ ಸಂರಕ್ಷಣೆಯ ಜವಾಬ್ದಾರಿಯನ್ನು ಹೊರಿಸಲಾಗಿದೆ ಎಂಬುದು ಇದರ ಅರ್ಥ. ಇದು Blinkit gives us vegetable, swiggy gives us food, dairy gives us milk, chatgpt gives us education ಎನ್ನುವ ಮಂದಿಯಿರುವ ಈ ಕಾಲದ ಚಿತ್ರಣವಮಲ್ತೆ!)

ಗಣೇಶರು ಅಪ್ರಸ್ತುತಪ್ರಸಂಗಿಗಳಿಗೆನೀಡುವಉತ್ತರಗಳುಪ್ರಶ್ನೋತ್ತರದಲ್ಲೇ ತೊಡಗಿರುವ ನನಗೆ ಬಹಳ ಪ್ರಿಯವಾದವು. "ನಾನೂ ಹದಿನಾರು ಸಾವಿರ ಸ್ತ್ರೀಯರನ್ನು ವರಿಸಲೆ?" ಎಂದೊಬ್ಬರು ನನ್ನನ್ನು ಪ್ರಶ್ನಿಸಿದಾಗ, 'ಮೊದಲು ಕಿರುಬೆರಳಲ್ಲಿ ಬೆಟ್ಟವನ್ನು ಎತ್ತಿ, ಆನಂತರ ಆಗಿ' ಎಂದುತ್ತರಿಸಿದ್ದೆ. ಗಣೇಶರು ಅದಕ್ಕೂ ಒಂದುಹೆಜ್ಜೆಮೀರಿ, 'ಮೊದಲುಪೂತನಿಯವಿಷಕುಡಿದುಬದುಕಿರಿ, ನಂತರ ವರಿಸುವ ವಿಚಾರ' ಎಂದಿದ್ದರು. ಅವರ 'ಕನ್ನಡದಲ್ಲಿ ಅವಧಾನ ಕಲೆ' ಪುಸ್ತಕದಲ್ಲಿರುವ ಕೆಲವು ಪ್ರಶ್ನೋತ್ತರಗಳು ಇಂತಿವೆ:

- **ಅವಧಾನಪದ್ಯಗಳ ರಸ ಯಾವುದು?**

'ಬಿಸಿನೀರಸ'. (ಇದನ್ನು ಬಿಸಿ, ನೀರಸ ಎಂದೂ ಓದಬಹುದು; ಬಿಸಿನೀ ರಸ ಎಂದೂ ಓದಬಹುದು. ಬಿಸಿನೀ ರಸ ಎಂದರೆ ಮಕರಂದ ಎಂದರ್ಥ.)

- **ಶ್ರೀಕೃಷ್ಣನು ಗೋಪಿಯರ ಸೀರೆ ಕದ್ದ. ಆದರೆ ದ್ರೌಪದಿಯೊಬ್ಬಳ ಸೀರೆ ಸುಲಿದ ದುಃಶಾಸನನೇಕೆ ಕೆಟ್ಟವನಾದ?**

ಕೆಟ್ಟ ಕೆಲಸವನ್ನು ವಿಪುಲವಾಗಿ ಮಾಡಿದರೆ ಲೋಕ ಮೆಚ್ಚುತ್ತದೆ. ಒಬ್ಬರನ್ನು ಕೊಂದದ್ದು ಕೊಲೆ, ಲಕ್ಷಾಂತರ ಜನರನ್ನು ಕೊಂದರೆ ಮಹಾಯುದ್ಧ.

(ಶ್ರೀಕೃಷ್ಣನು ಗೋಪಿಯರ ಸೀರೆಕದ್ದದ್ದೇಕೆ ಎಂದು ನನ್ನನ್ನು ಪ್ರಶ್ನಿಸಿದ್ದರು. 'ರೀಟೇಯ್ಲ್‌ನಲ್ಲಿಕಲೆಕ್ಟ್‌ಮಾಡಿ ಹೋಲ್‌ಸೇಲಲ್ಲಿ ದ್ರೌಪದಿಗೆ ಸಪ್ಲೈ ಮಾಡಕ್ಕೆ' ಎಂದುತ್ತರಿಸಿದ್ದೆ.)

- **ಕಾಗೆಬಂಗಾರ ಎಂದರೇನು?**

ಬಂಗಾರಕ್ಕಾಗಿ ಕಾಗೆಗಳಂತೆ ಕಚ್ಚಾಡುವುದು.

- **ಮ್ಯಾರೇಜಿಗೂ, ಗ್ಯಾರೇಜಿಗೂ ವ್ಯತ್ಯಾಸವೇನು?**

ಸರಿಯಾದದ್ದು ಹಾಳಾಗಲು ಮ್ಯಾರೇಜ್; ಹಾಳಾದದ್ದು ಸರಿಯಾಗಲು ಗ್ಯಾರೇಜ್.

ಮುಕ್ತಛಂದಸ್ಸಿನಲಕ್ಷಣವೇಅವಲಕ್ಷಣವೆಂದು ಒಮ್ಮೆ ಉತ್ತರಿಸಿದ್ದ ಗಣೇಶರು 'ಮುಕ್ತಛಂದಸ್ಸುತಪ್ಪೇನು?' ಎಂದಾಗ, 'ಹೂರಣವನ್ನು ಆಸ್ವಾದಿಸುವವರು ಕೆಲವರು. ಒಬ್ಬಟ್ಟನ್ನು ಆಸ್ವಾದಿಸುವವರು ಹಲವರು. ಮುಕ್ತಛಂದಸ್ಸು ಹೂರಣ. ಆದಿಪ್ರಾಸವನ್ನು ಹಿಡಿದಾಗ ಅದು ಕಣಕದಲ್ಲಿರುವ ಹೂರಣ ಅರ್ಥಾತ್ ಒಬ್ಬಟ್ಟು. ಮಾತ್ರೆಗಳು ಸುಪ್ರಮಾಣದಲ್ಲಿದ್ದರೆ ಒಬ್ಬಟ್ಟಿನೊಡನೆ ತುಪ್ಪವಿದ್ದಂತೆ. ಒಂದು ಬಂಧಕ್ಕನುಗುಣವಾಗಿ ನಡೆದರೆ ಹಾಲು-ತುಪ್ಪದೊಡನೆಯ ಸವಿದ ಒಬ್ಬಟ್ಟಿನಂತೆ. ನಿಮಗೆ ಹೂರಣವಷ್ಟೇ ಪ್ರಿಯವಾದರೆ ಮುಕ್ತಛಂದಸ್ಸನ್ನೇ ಬಳಸಿ' ಎಂದಿದ್ದರು.

ಅಗಣಿತ ವಿದ್ಯೆಗಳ ಗಣಿಯಾದ ಗಣೇಶರ ಮಾತುಗಳಿಗೆ ಕಿವಿಯಾಗುವುದು ನನ್ನಂತಹ ಸಾಹಿತ್ಯಗಮಾರರಿಗೆ ಹಸಿದವನಿಗೆ ಮೃಷ್ಟಾನ್ನವಿದ್ದಂತೆ. ಸ್ವಯಂ ಪಾಂಡಿತ್ಯವಾರಿಧಿಯಾದ ಇವರು ಇತರರ ಸಣ್ಣಪುಟ್ಟ ವೈನೋದಿಕ ಮಾತುಗಳನ್ನು ಆಸ್ವಾದಿಸುವುದು ವಿಶೇಷವೆನಿಸುತ್ತದೆ. ಕೆಲವು ದಿನಗಳ ಹಿಂದೆ ಗೋಖಲೆಸಂಸ್ಥೆಯಲ್ಲಿಡಿವಿಜಿಯವರಸೋದರಳಿಯಚಂದ್ರಮೌಳಿಯವರು ತಮ್ಮ ಭಗಿನಿಯು 1942 ರಲ್ಲಿಯೇ ಗತಿಸಿದ ಸಂದರ್ಭವನ್ನು ಉಲ್ಲೇಖಿಸಿದಾಗ ನಾನು, "ಆಕೆ ಕ್ವಿಟ್ ಇಂಡಿಯಾ ಚಳುವಳಿಯನ್ನು ಅಷ್ಟು ಗಂಭೀರವಾಗಿ ಸ್ವೀಕರಿಸಬಾರದಾಗಿತ್ತು" ಎಂದಾಗ ಗಣೇಶರು ಅದನ್ನು ಮನಸಾರೆ ಆಸ್ವಾದಿಸಿದ್ದು, 'ಸೀನಿಯರ್ ಸಿಟಿಜನ್‌ಗಳಲ್ಲಿ ಮೂರುವಿಧ; senior by age, 'seenear' by virtue of not being able to see far; sea near by virtue of living near the sea shore' ಎಂದುದನ್ನು ಇತರರೊಡನೆಯೂ ಹಂಚಿಕೊಂಡು ಸಂಭ್ರಮಿಸಿದ್ದು ಅವರ ಸರಳತೆಯ ಪ್ರತೀಕವೇ ಸೈ. ವಿನಯತೆಯೇಮೂರ್ತಿವೆತ್ತ ಗಣೇಶರ ಸಾಮೀಪ್ಯ ನನಗೆ ವಿರಳವಾದುದೂ, ಅಮೂಲ್ಯವಾದುದೂ ಆಗಿದೆ.

'ನಾನು ವರಿಸೆ' ಎಂದರು ಗಣೇಶರು. ದೇವಿ ಸರಸ್ವತಿ ಅವರಿಗೆ 'ಪದ್ಮ'ಳನ್ನು ಗಂಟು ಹಾಕಿದ್ದಾಳೆ. ಇನ್ನವರು ಪದ್ಮಭೂಷಣರಾಗಿಯೇ ಬಾಳಬೇಕು. ಅವಧಾನಕಲೆಯ ಮೂಲಕ ಯುವಕರನ್ನೂ ಪದ್ಯರಚನೆಯತ್ತ, ಕನ್ನಡದೊಲುಮೆಯತ್ತ ಆಕರ್ಷಿಸಿದ ಗಣೇಶರ ಸಾಹಿತ್ಯಮಾರ್ಗ ನಿತ್ಯಸುತ್ತ್ಯ.

'ಕಾರ್ಪೋರೇಟ್ ಜಿಹಾದ್' ಎತ್ತುವ ಪ್ರಶ್ನೆಗಳು

• ಪೂರ್ಣಿಮಾ

ನಾಸಿಕ್‌ನ ಟಿಸಿಎಸ್ ಕಂಪೆನಿಯಲ್ಲಿ ಬಯಲಾದ 'ಕಾರ್ಪೋರೇಟ್ ಜಿಹಾದ್' ಇಡೀ ದೇಶವನ್ನೇ ಆಘಾತಕ್ಕೆ ತಳ್ಳಿರುವುದು ಸುಳ್ಳಲ್ಲ. ಇಂತಹುದೊಂದು ಬೆಳವಣಿಗೆ ನಡೆಯುತ್ತಿದೆ ಎಂಬುದನ್ನು ಯಾರೂ ಊಹಿಸಿರಲಾರರು. ಇಂತಹ ಮತಾಂತರ ಕೃತ್ಯಗಳು ಇನ್ನೂ ಅನೇಕ ಕಂಪೆನಿಗಳಲ್ಲಿ ನಡೆಯುತ್ತಿದೆ ಎಂಬ ವರದಿಗಳೂ ಈಗ ಕೇಳಿ ಬರುತ್ತಿದ್ದು, ಇದಂತೂ ಉದ್ಯೋಗಿಗಳಲ್ಲಿ ಮತ್ತು ಅವರ ಕುಟುಂಬಗಳಲ್ಲಿ ಭಯಾತಂಕವನ್ನು ಉಂಟು ಮಾಡಿದೆ.

ಕಂಪೆನಿಯಲ್ಲಿನ ಕೆಲವು ವ್ಯಕ್ತಿಗಳು ಇತರರ ಗಮನಕ್ಕೆ ಬಾರದಂತೆ ಒತ್ತಡ ತಂತ್ರದ ಮೂಲಕ ಹಾಗೂ ದೌರ್ಜನ್ಯದ ಮೂಲಕ ಕೆಲವು ಮಹಿಳೆಯರನ್ನು ಶೋಷಣೆಮಾಡುತ್ತಿದ್ದರು ಮತ್ತು ಅವರನ್ನು ಮತಾಂತರಕ್ಕೆ ಪ್ರೇರೇಪಿಸುತ್ತಿದ್ದರು ಎಂಬ ವಿಷಯವು ಕಳವಳಕಾರಿಯಾದುದು.

ನಾಸಿಕ್‌ನ ಘಟನೆಯು ಬೆಳಕಿಗೆ ಬಂದ ಬಳಿಕ ಇನ್ನೂ ಕೆಲವು ಕಂಪೆನಿಗಳಲ್ಲಿ ಇಂತಹುದೇ ಹಿಂದು ವಿರೋಧಿ ನಿಯಮಗಳನ್ನು ಹೇರಿರುವುದು ಬೆಳಕಿಗೆ ಬರಲಾರಂಭಿಸಿದೆ. ಲೆನ್ಸ್‌ಕಾರ್ಟ್ ಕಂಪೆನಿಯಲ್ಲೂ ಹಿಂದುಗಳಿಗೆ ತಮ್ಮ ಸಾಂಪ್ರದಾಯಿಕ ಆಚರಣೆಗೆ ನಿರ್ಬಂಧ ಹಾಕಿರುವುದು, ಇನ್ನು ಕೆಲವು ಕಂಪೆನಿಗಳಲ್ಲಿ ಹಿಂದು ಸಾಂಪ್ರದಾಯಿಕ ಉಡುಗೆಗಳಿಗೆ ನಿರ್ಬಂಧ ಹಾಕಿರುವುದು ತಿಳಿದು ಬಂದಿದೆ. ಇವೆಲ್ಲದರ ಕುರಿತಂತೆ ಈಗ ತನಿಖೆ ನಡೆಯುತ್ತಿದೆ.

ಇದೇವೇಳೆ, ಕಂಪೆನಿಗಳಲ್ಲಿ ವ್ಯವಸ್ಥಿತವಾಗಿ ಮತಾಂತರ ಪ್ರಕ್ರಿಯೆಯು ನಡೆಯುತ್ತಿರುವುದರಿಂದಾಗಿ ಜನರು ಒಂದು ಸಮುದಾಯವನ್ನೇ ಸಂಶಯದಿಂದ ನೋಡುವಂತಾಗಿರುವುದು ಸುಳ್ಳಲ್ಲ. ಈ ವಿಚಾರದಲ್ಲಿ ಕಂಪೆನಿಗಳ ಮ್ಯಾನೇಜ್‌ಮೆಂಟ್‌ನ ನಿರ್ಲಕ್ಷ್ಯ ಕೂಡಾ ಅಕ್ಷಮ್ಯವಾಗಿದೆ.

ನಾಸಿಕ್‌ನಲ್ಲಿ ಈ ಮತಾಂತರ ಜಾಲವು ನಡೆಯುತ್ತಿರುವುದಕ್ಕೆ ಬಹಳಷ್ಟು ಪುರಾವೆಗಳು ದೊರಕಿವೆ. ಇಲ್ಲವಾಗಿದ್ದರೆ ಈ ಚುನಾವಣಾ ಸಮಯದಲ್ಲಿ ಇಂತಹ ವಿವಾದವನ್ನು ಉದ್ದೇಶಪೂರ್ವಕವಾಗಿಯೇ ಸೃಷ್ಟಿಸಲಾಗಿದೆ ಎಂಬ ಆರೋಪ ಕೇಳಿಬರುತ್ತಿತ್ತು. ಇದೆಲ್ಲ ಕಪೋಲಕಲ್ಪಿತ ಎಂಬುದಾಗಿ ಅದನ್ನು ತಳ್ಳಿ ಹಾಕಲಾಗುತ್ತಿತ್ತು. 9 ಮಂದಿ ಮಹಿಳಾ ಉದ್ಯೋಗಿಗಳು ದೂರು ನೀಡಿದ್ದರ ಹಿನ್ನೆಲೆಯಲ್ಲಿ, ಮಹಿಳಾ ಪೊಲೀಸರು ಕಂಪೆನಿಯೊಳಗೆ ಸೇರಿಕೊಂಡು ರಹಸ್ಯ ಕಾರ್ಯಾಚರಣೆ ನಡೆಸಿ ಪುರಾವೆಗಳನ್ನು ಸಂಗ್ರಹಿಸಿದ್ದರು. ಆ ನಂತರವೇ ಆರೋಪಿಗಳನ್ನು ಬಂಧಿಸಲಾಗಿದೆ.

ಕಂಪೆನಿಗಳಲ್ಲಿ ಉದ್ಯೋಗಿಗಳು ಎದುರಿಸುವ ಸಮಸ್ಯೆಗಳನ್ನು ಮತ್ತು ಕಿರುಕುಳದ ಆರೋಪಗಳನ್ನು ಪರಿಹರಿಸಲು ಆಂತರಿಕ ಸಮಿತಿ ನೇಮಿಸುವಂತೆ ದಶಕದ ಹಿಂದೆಯೇ ಆದೇಶ ಹೊರಡಿಸಲಾಗಿದೆ. ಆದರೆ ಬಹಳಷ್ಟು ಕಂಪೆನಿಗಳು ಈನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕಾರ್ಯಾಚರಿಸುತ್ತಿಲ್ಲ. ಮಹಿಳೆಯರು ಆರೋಪ ಮಾಡಿದರೂ ಅಂತಹ ಆರೋಪಗಳನ್ನು ಅಲ್ಲಿಯೇ ಮುಚ್ಚಿ ಹಾಕಲಾಗುತ್ತದೆ. ಧೈರ್ಯವಂತ ಉದ್ಯೋಗಿಗಳು ಹಠ ಬಿಡದೆ ಮುಂದುವರಿದಾಗ ಮಾತ್ರ ಇಂತಹ ಪ್ರಸಂಗಗಳು ಬೆಳಕಿಗೆ ಬರುತ್ತವೆ.

ಕಂಪೆನಿಗಳ ಆಂತರಿಕ ವ್ಯವಸ್ಥೆಯು ಉದ್ಯೋಗಿಗಳಲ್ಲಿ ದೌರ್ಜನ್ಯದ ವಿರುದ್ಧ ಹೋರಾಡುವಲ್ಲಿ ಆತ್ಮವಿಶ್ವಾಸ ತುಂಬಲು ವಿಫಲವಾಗಿದೆ.

ಕಂಪೆನಿಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡುತ್ತಿರುವ ಆರೋಪ ಮೊದಲಿನಿಂದಲೂ ಇತ್ತು. ಅದೀಗ ಹೊಸ ಆಯಾಮ ಪಡೆದುಕೊಂಡಿರುವುದು ಗಂಭೀರವಾಗಿದೆ. ಬಲವಂತದ ಮತ್ತು ಆಮಿಷದ ಮತಾಂತರವೂ ಅದರಲ್ಲಿ ಸೇರಿಕೊಂಡಿದೆ. ಏಳು ಮಂದಿ ಮುಸ್ಲಿಮ್ ಯುವಕರು ಮತ್ತು ಓರ್ವ ಮುಸ್ಲಿಂ ಮಹಿಳೆ ಟಿಸಿಎಸ್ ಕಂಪೆನಿಯಲ್ಲಿ ಇಂತಹ ಮತಾಂತರ ಕೃತ್ಯದಲ್ಲಿ ತೊಡಗಿದ್ದರು ಎಂಬುದನ್ನು ಕಾಣುವಾಗ ಕೆಲವು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಎಲ್ಲಾ ಕಂಪೆನಿಗಳಲ್ಲಿ ಇರುವ ಎಲ್ಲಾ ಮುಸ್ಲಿಂ ಪುರುಷರು ಇತರರನ್ನು ಮತಾಂತರಕ್ಕೆ ಪ್ರಚೋದಿಸುವುದಿಲ್ಲ. ತಮಗೆ ಮತಾಂತರ ಮಾಡಲು ಅವಕಾಶ ಸಿಕ್ಕಿದೆ ಎಂಬಂತೆ ವರ್ತಿಸುವುದಿಲ್ಲ. ಆದರೆ ಟಿಸಿಎಸ್‌ನಲ್ಲಿ ಮಾತ್ರ ಹಾಗೇಕಾಯಿತು? ಮತಾಂತರ ಮಾಡುವ ಸಮಾನ ಉದ್ದೇಶದ ಅಷ್ಟು ಮಂದಿ ಒಂದೇ ಕಂಪೆನಿಯಲ್ಲಿ, ಒಂದೇ ಕಡೆಯಲ್ಲಿ ಕೆಲಸ ಮಾಡಲು ಹೇಗೆ ಸಾಧ್ಯವಾಯಿತು? ಅವರಿಗೆ ಅಂತಹ ಅವಕಾಶ ಸೃಷ್ಟಿಸಿದವರಾರು? ಮ್ಯಾನೇಜ್‌ಮೆಂಟ್‌ನಲ್ಲೇ ಕೆಲವರು ಅಂತಹ ಅವಕಾಶ ಕಲ್ಪಿಸಿದರೇ? ಮತಾಂತರ ಜಾಲದಲ್ಲಿ ನಿರತವಾರ ವ್ಯಕ್ತಿಗಳನ್ನೇ ಆಯ್ಕೆ ಮಾಡಿಕೊಂಡು ಅವರನ್ನು ಒಂದೇ ಕಂಪೆನಿಯ ಒಂದೇ ಜಾಗದಲ್ಲಿ ಕೆಲಸ ಮಾಡುವಂತೆ ಮಾಡಲಾಯಿತೇ? ಇದರ ಜತೆಗೇ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಮಹಿಳೆಯರನ್ನೇ ಮತಾಂತರಕ್ಕೆ ಗುರಿ ಮಾಡಲಾಗಿದೆ. ಉದ್ಯೋಗಿಗಳ ಕುರಿತಾದ ಅಂಥ ಮಾಹಿತಿಯನ್ನು ಈ ವ್ಯಕ್ತಿಗಳಿಗೆ ಒದಗಿಸಿದವರು ಯಾರು? ಉದ್ಯೋಗಿಗಳ ವೈಯಕ್ತಿಕ ಮಾಹಿತಿಗಳನ್ನು ರಹಸ್ಯವಾಗಿಡುವುದು ಕಂಪೆನಿಗಳ ಕರ್ತವ್ಯವಲ್ಲವೆ?

ಇವರೆಲ್ಲರೂ ಒಂದು ಸಂಘಟಿತ ವ್ಯವಸ್ಥೆಯಡಿಯಲ್ಲಿ ಕೆಲಸ ಮಾಡುತ್ತಿರುವ ಅನುಮಾನ ದಟ್ಟವಾಗುತ್ತಿದೆ. ಇದರ ಜತೆಗೇ ವಿದೇಶಿ ಕೈವಾಡವೂ ಇದರ ಹಿಂದಿರುವ ಸಾಧ್ಯತೆಗಳಿವೆ.

ಆರಂಭದಲ್ಲಿ ಮಹಿಳೆಯರು ತಮಗಾದ ಕಿರುಕುಳದ ಕುರಿತು ಸಂಬಂಧಿತ ಮೇಲಧಿಕಾರಿಗಳಿಗೆ ತಿಳಿಸಿದಾಗ ಇಂತಹ ಘಟನೆಗಳು ಬೇರೆ ಕಂಪೆನಿಗಳಲ್ಲಿಯೂ ನಡೆಯುತ್ತವೆ ಎಂಬುದಾಗಿ ಸಂತ್ರಸ್ತ ಮಹಿಳೆಯರಿಗೆ ಹೇಳಿ, ವಿಷಯವನ್ನು ತೇಲಿಸಿ ಬಿಡಲಾಯಿತು. ಇದು ಇನ್ನಷ್ಟು ಆತಂಕಕಾರಿ. ಇದು ಇತರ ಕಂಪೆನಿಗಳಲ್ಲಿರುವ ಮುಸ್ಲಿಮರನ್ನು ಕೂಡಾ ಅನುಮಾನದಿಂದ ನೋಡುವಂತೆ ಮಾಡುತ್ತದೆ. ಜತೆಗೇ ಕಂಪೆನಿಗಳು ಇನ್ನು ಮುಂದೆ ಮುಸ್ಲಿಮರನ್ನು ಕೆಲಸಕ್ಕೆ ಸೇರಿಸಿಕೊಳ್ಳಲು ಹಿಂಜರಿಯುವಂತಹ ಪ್ರಸಂಗ ಸೃಷ್ಟಿಸುತ್ತದೆ. ಕಂಪೆನಿಯಲ್ಲಿನ ಕೆಲಸಗಾರರು ಸಹೋದ್ಯೋಗಿ ಮುಸ್ಲಿಮರನ್ನು ಅನುಮಾನದಿಂದ ನೋಡುವಂತೆಯೂ ಪ್ರೇರೇಪಿಸುತ್ತದೆ. ಇವೆಲ್ಲವೂ ಅಮಾಯಕ ಮುಸ್ಲಿಮರ ಪಾಲಿಗೆ ಆಘಾತಕಾರಿ ಬೆಳವಣಿಗೆಯಲ್ಲವೆ!

ಕಂಪೆನಿಗಳಲ್ಲಿ ಮತಾಂತರಕ್ಕೆ ಪ್ರಚೋದನೆ ನೀಡುವ ಪ್ರಸಂಗಗಳು ಬೇರೆಡೆಗಳಲ್ಲೂ ನಡೆಯುವುದಿದೆ. ಅಮೆರಿಕದಲ್ಲಿ ಕ್ರೈಸ್ತ ಮತಕ್ಕೆ ಮತಾಂತರಗೊಳ್ಳುವಂತೆ ಒತ್ತಡ ಹೇರಿದ ಪ್ರಸಂಗಗಳು ವರದಿಯಾದುದಿದೆ. ಕಂಪೆನಿಯ ಮೇಲ್‌ಸ್ತರದ ಅಧಿಕಾರಿಗಳು ಕೆಳಹಂತದಲ್ಲಿರುವ ಉದ್ಯೋಗಿಗಳನ್ನು ತಮ್ಮ ಧರ್ಮಕ್ಕೆ ಒತ್ತಾಯಿಸಿದ ಪ್ರಸಂಗಗಳು ನಡೆದಿವೆ.

ಒಬ್ಬನನ್ನು ಮತಾಂತರಕ್ಕೆ ಪ್ರಯತ್ನಿಸುವುದು ಕಾನೂನುಬಾಹಿರವಾಗಿ ತಪ್ಪಲ್ಲ. ಆದರೆ ಒತ್ತಡ ಹೇರಿ ಅಥವಾ ಆಮಿಷವೊಡ್ಡಿ ಇಂತಹ ಕಾರ್ಯ ಎಸಗುವುದು ಕಾನೂನುಬಾಹಿರವಾಗಿದೆ. ಅದರಲ್ಲಿಯೂ ಈ ವಿಚಾರದಲ್ಲಿ ಕಿರುಕುಳ ನೀಡುವುದು, ಉದ್ಯೋಗಿಗೆ ಇಚ್ಛೆಯಿಲ್ಲದಿದ್ದರೂ ಆತನ ಮೇಲೆ ಒತ್ತಡ ಹೇರುವುದು ಅಕ್ಷಮ್ಯವಾಗಿದೆ. ಸಂವಿಧಾನವು ಧಾರ್ಮಿಕ ಪ್ರಚಾರದ ಹಕ್ಕನ್ನು ನೀಡುತ್ತದೆಯಾದರೂ ಇದು ಬೇರೆಯವರನ್ನು ಮತಾಂತರ ಮಾಡುವ ಸ್ವಾತಂತ್ರ್ಯವನ್ನು ನೀಡುವುದಿಲ್ಲ ಎಂದು ಸುಪ್ರೀಂಕೋರ್ಟ್ ಸ್ಪಷ್ಟಪಡಿಸಿರುವುದನ್ನು ಮರೆಯಬಾರದು.

ಕೆಲವು ವ್ಯಕ್ತಿಗಳು ಕಂಪೆನಿಯೊಂದರಲ್ಲಿ ಸೇರಿಕೊಂಡು ತಮ್ಮ ಸಹೋದ್ಯೋಗಿಗಳನ್ನು ಮತಾಂತರಕ್ಕೆ ಪ್ರಚೋದಿಸುವುದು ಮತ್ತು ಈ ಸಂಬಂಧ ಅವರಿಗೆ ಕಿರುಕುಳ ನೀಡುವುದು ನ್ಯಾಯಬಾಹಿರವಾಗಿದೆ. ಇದು ಕಾನೂನು ವಿರೋಧಿಯೂ ಆಗಿದೆ. ಹಾಗಾಗಿ ಕಂಪೆನಿಗಳು ಇಂತಹ ಕೃತ್ಯಗಳ ಮೇಲೆ ಹೆಚ್ಚಿನ ನಿಗಾ ಇಡುವ ಅಗತ್ಯವಿದೆ.

ಇದೇವೇಳೆ ಇಂತಹ ಕೃತ್ಯಗಳ ವಿರುದ್ಧ ಭಾರತೀಯ ಮುಸ್ಲಿಮರು ಅದರಲ್ಲಿಯೂ ಮುಖ್ಯವಾಗಿ ರಾಜಕಾರಣಿಗಳು ಮತ್ತು ಗಣ್ಯರು ಧ್ವನಿ ಎತ್ತುವ ಅಗತ್ಯವಿದೆ. ಕಾರ್ಪೋರೇಟ್ ಕಂಪೆನಿಗಳಲ್ಲಿ ನಡೆಯುವ ಜಿಹಾದ್ ಸಮ್ಮತವಲ್ಲವೆಂದು ಅವರು ದೇಶಕ್ಕೆ ಸಾರಿ ಹೇಳಬೇಕಾಗಿದೆ. ಆದರೆ ಈ ವರೆಗೆ ಅಂತಹ ಯಾವುದೇ ಧ್ವನಿಯೂ ಕೇಳಿಸದಿರುವುದು ದೌರ್ಭಾಗ್ಯ.

ಹಿಂದುಗಳು ತಮ್ಮ ಸಮುದಾಯದವರಿಂದಾಗುವ ಅನ್ಯಾಯಗಳ ವಿರುದ್ಧ ಧ್ವನಿ ಎತ್ತಲು ಹಿಂಜರಿಯುವುದಿಲ್ಲ. ನ್ಯಾಯಬಾಹಿರವಾದುದನ್ನು ಬಹಿರಂಗವಾಗಿ ಟೀಕಿಸುತ್ತಾರೆ. ಆದರೆ ಮುಸ್ಲಿಮರಿಂದ ಇಂತಹ ಬಹಿರಂಗ ಖಂಡನೆ ಕೇಳಿಬರುವುದಿಲ್ಲ. ಕೆಲವರಂತೂ ಇಂತಹ ಮತಾಂತರ ಕೃತ್ಯಗಳಿಗೆ ಸಮ್ಮತಿ ವ್ಯಕ್ತಪಡಿಸುವಂತಹ ಹೇಳಿಕೆಯನ್ನೂ ನೀಡುತ್ತಾರೆ.

ಒಂದಂತೂ ನಿಜ. ನಾಸಿಕ್‌ನ ಪ್ರಕರಣವು ಕಂಪೆನಿಗಳು 'ಶುದ್ಧೀಕರಣ' ಕಾರ್ಯಕ್ಕೆ ಮುಂದಾಗಬೇಕಾದ ಅಗತ್ಯವನ್ನು ಒತ್ತಿ ಹೇಳಿದೆ. ನಮ್ಮ ದೇಶದಲ್ಲಿ ಕಾರ್ಯಾಚರಿಸುವ ಕಂಪೆನಿಗಳು ಇಲ್ಲಿನ ಮೌಲ್ಯವನ್ನು, ಪರಂಪರೆಯನ್ನು ಗೌರವಿಸಬೇಕಾದ ಅಗತ್ಯವನ್ನು ಕೂಡಾ ತಿಳಿಸುತ್ತದೆ.

ಸಮಾಜ ನಾಶಕ್ಕೆ ಮಾದಕ ಪದಾರ್ಥ; ಜಾಗೃತಿಯೊಂದೇ ಪರಿಹಾರ

• ಚಂದನ್ ಲಕ್ಕೂರು



ಇಂದಿನ ಯುವಜನತೆಯ ಸ್ಥಿತಿಯನ್ನು ನೋಡಿದಾಗ ಆತಂಕ ಶುರುವಾಗುತ್ತದೆ. ಏಕೆಂದರೆ ದೇಶದ ಭವಿಷ್ಯದ ಶಕ್ತಿ ಎನಿಸಿಕೊಂಡಿರುವ ವಿದ್ಯಾರ್ಥಿಗಳು ಇಂದು ತಮಗೆ ಅರಿವಿಲ್ಲದಂತೆಯೇ ಒಂದು ಕರಾಳ ಲೋಕದತ್ತ ಹೆಜ್ಜೆ ಹಾಕುತ್ತಿದ್ದಾರೆ.

ಕರ್ನಾಟಕವನ್ನು ಮಾದಕ ಮುಕ್ತ ರಾಜ್ಯವನ್ನಾಗಿ ಮಾಡುವುದಾಗಿ ಸರ್ಕಾರವು ಪದೇ ಪದೇ ಘೋಷಿಸುತ್ತಿದ್ದರೂ, ವಾಸ್ತವ ಸ್ಥಿತಿ ಮಾತ್ರ ಅತ್ಯಂತ ಆತಂಕಕಾರಿಯಾಗಿದೆ. ಯುವಜನತೆಯ ದಾರಿ ತಪ್ಪಿಸುತ್ತಿರುವ ಮಾದಕ ವಸ್ತುಗಳ ಹಾವಳಿಯನ್ನು ತಡೆಯುವುದು ಸರ್ಕಾರದ ಆದ್ಯತೆಯಾಗಬೇಕೆಂದು ಸ್ವತಃ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ಹಲವು ಬಾರಿ ಸದನದಲ್ಲಿ ಹಾಗೂ ಸಾರ್ವಜನಿಕ ವೇದಿಕೆಗಳಲ್ಲಿ ಹೇಳಿದ್ದಾರೆ. ಆದರೆ ಇಂದಿನ ಬೆಳವಣಿಗೆಗಳನ್ನು ಗಮನಿಸಿದರೆ ಈ ಭರವಸೆಗಳು ಕೇವಲ ಘೋಷಣೆಗಳಾಗಿ ಉಳಿಯುತ್ತಿವೆಯೋ ಎಂಬ ಸಂಶಯ ಮೂಡುತ್ತಿದೆ.

ಇತ್ತೀಚಿನ ದಿನಗಳಲ್ಲಿ ಕರ್ನಾಟಕದಲ್ಲಿ ಮಾದಕ ವಸ್ತುಗಳ ವ್ಯವಹಾರವು ಕೇವಲ ಮಾರಾಟಕ್ಕೆ ಸೀಮಿತವಾಗಿಲ್ಲ. ರಾಜ್ಯದೊಳಗೆ ಮಾದಕ ವಸ್ತುಗಳ ತಯಾರಿಕಾ ಘಟಕಗಳೇ ಕಾರ್ಯಾಚರಿಸುತ್ತಿರುವುದು ಬೆಳಕಿಗೆ ಬರುತ್ತಿದೆ. ಅತ್ಯಂತ ಆಘಾತಕಾರಿ ವಿಷಯವೆಂದರೆ ನಮ್ಮ ರಾಜ್ಯದ ಪೊಲೀಸರಿಗಿಂತ ಮೊದಲು ಹೊರರಾಜ್ಯದ ಪೊಲೀಸರು ಅಥವಾ ಕೇಂದ್ರ ತನಿಖಾ ದಳಗಳು ದಾಳಿ ನಡೆಸಿ ಈ ಜಾಲವನ್ನು ಪತ್ತೆಹಚ್ಚುತ್ತಿದ್ದಾರೆ. ನೆರೆರಾಜ್ಯದ ಅಧಿಕಾರಿಗಳು ಬಂದು ಬಾಗಿಲು ಬಡಿದಾಗ ಮಾತ್ರ ನಮ್ಮ ಇಲಾಖೆಗೆ ಇಲ್ಲಿ ಮಾದಕ ವಸ್ತುಗಳ ಉತ್ಪಾದನೆ ನಡೆಯುತ್ತಿದೆ ಎಂಬ ಅರಿವಾಗುತ್ತಿರುವುದು ವ್ಯವಸ್ಥೆಯ ಬಹುದೊಡ್ಡ ವೈಫಲ್ಯ.

ಇದು ಕೇವಲ ಕಾನೂನು ಸುವ್ಯವಸ್ಥೆಯ ಪ್ರಶ್ನೆಯಲ್ಲ. ಇದು ಆಡಳಿತ ಯಂತ್ರ, ಗೃಹ ಇಲಾಖೆ ಮತ್ತು ಗುಪ್ತಚರ ದಳದ ಕಾರ್ಯವೈಖರಿಯ ಮೇಲೆ ಸಾರ್ವಜನಿಕರು ಇಟ್ಟಿರುವ ನಂಬಿಕೆಯ ಪ್ರಶ್ನೆ ಕೂಡ. ಮಾದಕ ಮುಕ್ತ ಕರ್ನಾಟಕ ಎನ್ನುವ ಘೋಷಣೆಗಳ ನಡುವೆಯೇ ಇಂತಹ ಭೀಕರ ಜಾಲಗಳು ಬೇರೂರುತ್ತಿರುವುದು ವಿಪರ್ಯಾಸ. ಇಂದು ನಗರದ ಯಾವುದೇ ಮೂಲೆಯಲ್ಲಿ ನೋಡಿದರೂ ಶಿಕ್ಷಣದ ಹೆಸರಿನಲ್ಲಿ ಬಂದು ನೆಲೆಸಿರುವ ಕೆಲವು ವಿದೇಶಿ ಪ್ರಜೆಗಳು, ಅದರಲ್ಲೂ ವಿಶೇಷವಾಗಿ ನೈಜೀರಿಯಾದಂತಹ ದೇಶಗಳಿಂದ ಬಂದ ಕೆಲವರು ನಮ್ಮ ಯುವಕರನ್ನು ಗುರಿಯಾಗಿಸಿಕೊಂಡು ಈ ವಿಷದ ಜಾಲವನ್ನು ಹರಡುತ್ತಿದ್ದಾರೆ. ಅವರು ಮೊದಲು ಪರಿಚಯ ಮಾಡಿಕೊಳ್ಳುವುದು ಸ್ನೇಹದ ಹಸ್ತ ಚಾಚುವ ಮೂಲಕ. ಕಾಲೇಜುಗಳ ಹತ್ತಿರ, ಕೆಫೆಗಳಲ್ಲಿ ಅಥವಾ ರಾತ್ರಿಯ ಪಾರ್ಟಿಗಳಲ್ಲಿ ಕಾಣಿಸಿಕೊಳ್ಳುವ ಇವರು ನಮ್ಮ ಹುಡುಗರಿಗೆ ಹೊಸ ಅನುಭವದ ಆಸೆ ತೋರಿಸುತ್ತಾರೆ. ಇವರಿಗೆ ಬೇಕಾಗಿರುವುದು ಕೇವಲ ಹಣ ಮತ್ತು ನಮ್ಮ ದೇಶದ ಯುವಶಕ್ತಿಯನ್ನು ದಾರಿ ತಪ್ಪಿಸುವುದು. ಇಂತಹ ವಿದೇಶಿ ದಂಧೆಕೋರರು ಬಹಳ ಸಂಘಟಿತವಾಗಿ ಕೆಲಸ ಮಾಡುತ್ತಾರೆ ಮತ್ತು ಅವರ ಜಾಲ ಎಷ್ಟು ಆಳವಾಗಿದೆ ಎಂದರೆ ಒಬ್ಬ ಸಾಮಾನ್ಯ ವಿದ್ಯಾರ್ಥಿಗೆ ಅದರ ಅಪಾಯದ ಅರಿವಾಗುವಷ್ಟರಲ್ಲಿ ಆತ ಸಂಪೂರ್ಣವಾಗಿ ಅದಕ್ಕೆ ದಾಸನಾಗಿರುತ್ತಾನೆ.

ಇತ್ತೀಚಿನ ಪೊಲೀಸ್ ವರದಿಗಳ ಪ್ರಕಾರ, ಕೇವಲ ಒಂದು ತಿಂಗಳ ಅಂತರದಲ್ಲಿ ಬೆಂಗಳೂರಿನಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದರೆ ಈ ದಂಧೆಯ ವಿಸ್ತಾರ ಅದೆಷ್ಟಿರಬಹುದು? MDMA, ಗಾಂಜಾ, ಹೈಡ್ರೋ ಗಾಂಜಾ ಹಾಗೂ ಮಾರಕವಾದ ಸಿಂಥೆಟಿಕ್ ಡ್ರಗ್ಸ್‌ಗಳು ಪತ್ತೆಯಾಗಿರುವುದು ನಮ್ಮ ಯುವಜನತೆ ಎಂತಹ ಅಪಾಯದ ಸುಳಿಯಲ್ಲಿದ್ದಾರೆ ಎಂಬುದಕ್ಕೆ ಸಾಕ್ಷಿ. ಎಷ್ಟೋ ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಬದುಕನ್ನು ಈ ಕಾರಣಕ್ಕಾಗಿ ಹಾಳು ಮಾಡಿಕೊಂಡಿದ್ದಾರೆ. ಕುತೂಹಲಕ್ಕಾಗಿ ಅಥವಾ ಒತ್ತಾಯಕ್ಕೆ ಮಣಿದು ಒಂದು ಮಾತ್ರೆ ಅಥವಾ ಒಂದು ಚಿಟಿಕೆ ಪುಡಿಯನ್ನು ಸೇವಿಸುವ ವಿದ್ಯಾರ್ಥಿ, ಸಾವಿನ ಹಳ್ಳಕ್ಕೆ ತಾನೇ ಬೀಳುತ್ತಿದ್ದಾನೆ. ಪೊಲೀಸ್ ಇಲಾಖೆಯು ಇತ್ತೀಚೆಗೆ ಪೆಡ್ಲರ್‌ಗಳನ್ನು ಮತ್ತು ಸೇವನೆ ಮಾಡುವವರನ್ನು ಬಂಧಿಸಿರುವುದು ಕೇವಲ ಒಂದು ಭಾಗವಷ್ಟೇ. ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಪಾನ್ ಶಾಪ್‌ಗಳು ಹಾಗೂ ಶಾಲಾ-ಕಾಲೇಜುಗಳ ಸುತ್ತಮುತ್ತಲಿನ ಸಾವಿರಾರು ಅಂಗಡಿಗಳ ಮೇಲೆ ದಾಳಿ ನಡೆಸಿರುವುದು ಈ ಜಾಲ ಎಷ್ಟು ಹತ್ತಿರಕ್ಕೆ ಬಂದಿದೆ ಎಂಬುದನ್ನು ತೋರಿಸುತ್ತದೆ.

ಇಲ್ಲಿ ಕೇವಲ ವಿದೇಶಿಯರನ್ನು ದೂಷಿಸಿದರೆ ಸಾಲದು. ವಿದ್ಯಾರ್ಥಿಗಳು ಯಾಕೆ ಇಷ್ಟು ಸುಲಭವಾಗಿ ಇವರ ಬಲೆಗೆ ಬೀಳುತ್ತಿದ್ದಾರೆ ಎಂಬುದು ಮುಖ್ಯವಾದ ಪ್ರಶ್ನೆ. ಆಧುನಿಕ ಜೀವನಶೈಲಿಯ ಭ್ರಮೆಯಲ್ಲಿರುವ ಯುವಕರು, ವಿದೇಶಿ ಸಂಸ್ಕೃತಿಯನ್ನು ಅನುಕರಿಸುವ ಭರದಲ್ಲಿ ಡ್ರಗ್ಸ್ ಸೇವಿಸುವುದು ಒಂದು ಫ್ಯಾಷನ್ ಎಂದು ತಿಳಿದುಕೊಳ್ಳುತ್ತಿದ್ದಾರೆ. ನೈಜೀರಿಯಾದಂತಹ ದೇಶಗಳಿಂದ ಬಂದು ಇಲ್ಲಿ ಡ್ರಗ್ ಪೆಡ್ಲರ್ ಆಗಿ ಕೆಲಸ ಮಾಡುವವರು ಇವರ ಈ ದೌರ್ಬಲ್ಯವನ್ನು ಸರಿಯಾಗಿ ಬಳಸಿಕೊಳ್ಳುತ್ತಿದ್ದಾರೆ. ಒಬ್ಬ ವಿದ್ಯಾರ್ಥಿ ಒಮ್ಮೆ ಈ ಜಾಲಕ್ಕೆ ಸಿಲುಕಿದರೆ ಆತನ ಇಡೀ ಕುಟುಂಬವೇ ಬೀದಿಗೆ ಬರುತ್ತದೆ.

ಸಿಬಿಐ ಮತ್ತು ಸ್ಥಳೀಯ ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ನಡೆಸುತ್ತಿದ್ದರೂ, ಡ್ರಗ್ಸ್ ಉತ್ಪಾದನಾ ಘಟಕಗಳೇ ನಗರದಲ್ಲಿ ಪತ್ತೆಯಾಗುತ್ತಿರುವುದು ಈ ಸಮಸ್ಯೆಯ ಗಂಭೀರತೆಯನ್ನು ಮತ್ತಷ್ಟು ಹೆಚ್ಚಿಸಿದೆ. ಈ ಸಮಸ್ಯೆಗೆ ಕೊನೆ ಎಂಬುದು ನಮ್ಮೆಲ್ಲರ ಜಾಗೃತಿಯಲ್ಲಿ ಮಾತ್ರ ಇದೆ. ವಿದೇಶದಿಂದ ಬಂದವರು ಇಲ್ಲಿ ಕಾನೂನು ಬಾಹಿರ ಚಟುವಟಿಕೆ ನಡೆಸುತ್ತಿದ್ದರೆ ಅದನ್ನು ಪತ್ತೆ ಹಚ್ಚುವ ಕೆಲಸ ಪೊಲೀಸ್ ಇಲಾಖೆಯದಾದರೂ, ವಿದ್ಯಾರ್ಥಿಗಳು ತಮ್ಮ ವಿವೇಚನೆಯನ್ನು ಕಳೆದುಕೊಳ್ಳಬಾರದು. ಜೀವನದಲ್ಲಿ ಎಷ್ಟೇ ಒತ್ತಡಗಳಿದ್ದರೂ ಅಥವಾ ಏನೇ ಸಮಸ್ಯೆಗಳಿದ್ದರೂ ಮಾದಕ ವಸ್ತುಗಳು ಅದಕ್ಕೆ ಪರಿಹಾರವಲ್ಲ ಎಂಬ ಸತ್ಯವನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಅರಿಯಬೇಕಿದೆ. ಇಲ್ಲದಿದ್ದರೆ, ದೇಶದ ಮುಂದಿನ ತಲೆಮಾರು ಸಂಪೂರ್ಣವಾಗಿ ನಾಶವಾಗುವುದರಲ್ಲಿ ಸಂಶಯವಿಲ್ಲ.

ಬಿಜೆಪಿ ಆರೋಪ ಬೆಂಬಲಿಸಿದ ಚಡ್ಡಾ

ಸೋಲಿಗೆ ಕೇಜ್ರಿ ಬಂಗಲೆ ಕಾರಣ!

ಹೊಸದಿಲ್ಲಿ: ರಾಜಧಾನಿಯಲ್ಲಿ ಎರಡನೇ ಶೀಶ್ ಮಹಲ್ ಪತ್ತೆಯಾಗಿರುವುದೇ ದಿಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷದ (ಆಪ್) ಸೋಲಿಗೆ ಪ್ರಮುಖ ಕಾರಣವೆಂದು ಆಪ್ ತೊರೆದು 6 ಸಂಸದರ ಜತೆ ಬಿಜೆಪಿ ಸೇರಿದ ರಾಜ್ಯಸಭಾ ಸಂಸದ ರಾಘವ್ ಚಡ್ಡಾ ಆರೋಪಿಸಿದ್ದಾರೆ.

ಕಾಮನ್‌ಮ್ಯಾನ್ ವ್ಯಕ್ತಿತ್ವವನ್ನು ತೋರಿಸಿಕೊಳ್ಳುವ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, ಲೋದಿ ಎಸ್ಟೇಟ್‌ನಲ್ಲಿರುವ ಅಧಿಕೃತ ನಿವಾಸವನ್ನು ಐಷಾರಾಮಿಯಾಗಿ ನವೀಕರಣ ಮಾಡಿಸಿಕೊಂಡಿದ್ದಾರೆ. ಅಲ್ಲದೆ, ಈ ನವೀಕರಣಕ್ಕಾಗಿ



ಸಾರ್ವಜನಿಕರ ಹಣ ಬಳಸಲಾಗಿದೆ ಎಂದು ದಿಲ್ಲಿ ಉಪಮುಖ್ಯಮಂತ್ರಿ ಮತ್ತು ಬಿಜೆಪಿ ನಾಯಕ ಪರ್ವೇಶ್ ಸಾಹಿಬ್ ಸಿಂಗ್ ವರ್ಮಾ ಇತ್ತೀಚೆಗೆ ಆರೋಪಿಸಿದ್ದರು. ಬಿಜೆಪಿ ಗಂಭೀರ ಆರೋಪದ ಬಳಿಕ ರಾಘವ್ ಚಡ್ಡಾ ಆರೋಪ ಮಾಡಿದ್ದಾರೆ.

ಆಪ್‌ನಲ್ಲಿ ಆತ್ಮಾವಲೋಕನೆ ಅಗತ್ಯ: ದಿಲ್ಲಿಯಲ್ಲಿ ಶೀಶ್ ಮಹಲ್ 2 ಬೆಳಕಿಗೆ ಬಂದಿದೆ. ಕೆಲವು ಚಿತ್ರಗಳು ಹರಿದಾಡುತ್ತಿವೆ. ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷದ ಸೋಲಿಗೆ ಇದೇ ಪ್ರಮುಖವಾದ ಕಾರಣ ಎಂದು ರಾಘವ್ ಚಡ್ಡಾ ಆರೋಪಿಸಿದ್ದಾರೆ. ಕೇಜ್ರಿವಾಲ್ ವಿರುದ್ಧದ ಬಿಜೆಪಿ ಆರೋಪವನ್ನು ಸಂಪೂರ್ಣ ಬೆಂಬಲಿಸಿದ ಚಡ್ಡಾ, ಚುನಾವಣೆ ಸಂದರ್ಭದಲ್ಲಿ ಪಕ್ಷದ ಕಾರ್ಯಕರ್ತರು ಹೇಗೆ ಪ್ರತಿಕ್ರಿಯಸಬೇಕು? ಪಕ್ಷ ಆತ್ಮಾವಲೋಕನೆ ಮಾಡಿಕೊಳ್ಳುವ ಅಗತ್ಯವಿದೆ ಎಂದು ಚಡ್ಡಾ ಹೇಳಿದ್ದಾರೆ.

ಚುನಾವಣಾ ಸಮಯದಲ್ಲಿ ಪಕ್ಷದ, ಪಕ್ಷದ ಅಗ್ರಗಣ್ಯ ನಾಯಕನ ಮೇಲೆ ಇಂತಹ ಆರೋಪಗಳು ಬಂದಾಗ ಪಕ್ಷದಲ್ಲಿರುವ ಕೆಲವು ಪ್ರಾಮಾಣಿಕ ಕಾರ್ಯಕರ್ತರು ಬೀದಿಯಲ್ಲಿ ಪ್ರಚಾರಕ್ಕೆ ತೆರಳುವಾಗ ಸಾರ್ವಜನಿಕರ ಪ್ರಶ್ನೆಗಳಿಗೆ ಹೇಗೆ ಪ್ರತಿಕ್ರಿಯೆ ನೀಡುವುದು ಸಾಧ್ಯ? ಆಮ್ ಆದ್ಮಿ ಪಕ್ಷದಲ್ಲಿ ಆತ್ಮಾವಲೋಕನೆಯ ಅವಶ್ಯಕತೆ ಇದೆ ಎಂದು ಚಡ್ಡಾ ಕಡ್ಡಿ ಮುರಿದಂತೆ ಹೇಳಿದ್ದಾರೆ.



ಶೀಶ್ ಮಹಲ್ 2 ಫೋಟೋ ಬಿಡುಗಡೆ

ಭಾರತೀಯ ಜನತಾ ಪಕ್ಷ (ಬಿಜೆಪಿ) ಶನಿವಾರ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ವಿರುದ್ಧ ಸಾರ್ವಜನಿಕರ ಹಣದಿಂದ ಅರಮನೆಯಂತಹ ದೊಡ್ಡ ಮನೆ ಕಟ್ಟಿಸಿಕೊಂಡ ಗಂಭೀರ ಆರೋಪ ಮಾಡಿದ್ದು, ಇದನ್ನು ಶೀಶ್ ಮಹಲ್ 2ನೇ ಭಾಗ ಎಂದು ಹೇಳಿದೆ. ಪಂಜಾಬ್‌ನಲ್ಲಿ ಈ ಹಿಂದೆ ಇಂತಹದ್ದೇ ಶೀಶ್ ಮಹಲ್ ಕೇಜ್ರಿವಾಲ್ ಪಡೆದುಕೊಂಡಿದ್ದರು. ಪತ್ರಿಕಾಗೋಷ್ಠಿ ಕರೆದಿದ್ದ ಪರ್ವೇಶ್, ಶೀಶ್ ಮಹಲ್ 2 ಐಷಾರಾಮಿ ಬಂಗಲೆಯ ಚಿತ್ರಗಳನ್ನು ಬಿಡುಗಡೆಗೊಳಿಸಿದರು.

ಧುರಂಧರ್ ಸಿನಿಮಾ 2ನೇ ಭಾಗ ಬಿಡುಗಡೆಯಾದಂತೆ ಶೀಶ್ ಮಹಲ್ 2ನೇ ಭಾಗವನ್ನೂ ಬಿಡುಗಡೆ ಮಾಡಿದ್ದೇವೆ. ಹೀಗಾಗಿ ಕೇಜ್ರಿವಾಲ್ ಅವರನ್ನು ದಿಲ್ಲಿಯ ರೆಹಮಾನ್ ಡಕಾಯಿತ್ ಹೆಸರಿನಿಂದ ಕರೆಯಬಹುದು. ಹಳೆಯ ಶೀಶ್ ಮಹಲನ್ನು ಇನ್ನಷ್ಟು ಐಷಾರಾಮಿಯಾಗಿ ನವೀಕರಣ ಮಾಡಿದ್ದಾರೆ. ಮೂಲ ಶೀಶ್ ಮಹಲನ್ನು ನಗರವೇ ಕೋವಿಡ್ ವಿರುದ್ಧ ಹೋರಾಡುತ್ತಿದ್ದಾಗ, ದಿಲ್ಲಿ ಜನರು ಔಷಧ ಕೇಳುತ್ತಲೇ ಸಾಯುತ್ತಿದ್ದಾಗ ಕೇಜ್ರಿ ಅರಮನೆ ಕಟ್ಟಿದ್ದಾರೆ.

■ **ಪರ್ವೇಶ್ ಸಾಹಿಬ್ ಸಿಂಗ್ ವರ್ಮಾ,**
ದಿಲ್ಲಿ ಉಪ ಮುಖ್ಯಮಂತ್ರಿ

ಎಪ್ಸ್ಟೀನ್ ಫೈಲ್ಸ್ ವಿಡಿಯೋ ಪ್ರಸಾರ

ವಾಷಿಂಗ್ಟನ್: ಶ್ವೇತಭವನದ ಅತ್ಯಂತ ಪ್ರಮುಖ ಮಾಧ್ಯಮ ಸಭೆ ಭಾನುವಾರ ನಡೆಯಲಿದೆ. ಇದಕ್ಕೆ ಕೇವಲ ಒಂದು ದಿನ ಮೊದಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಭಾರೀ ಮುಜುಗರ ತರುವ ಸನ್ನಿವೇಶ ಎದುರಾಗಿದೆ.



ಅಮೆರಿಕದ ರಾಜಧಾನಿ ವಾಷಿಂಗ್ಟನ್ ಡಿಸಿಯಲ್ಲಿರುವ ಹಿಲ್ಟನ್ ಕಟ್ಟಡದ ಮೇಲೆ ಇಡೀ ಜಗತ್ತನ್ನು ತಲ್ಲಣಗೊಳಿಸಿರುವ ಅಪ್ರಾಪ್ತ ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದ ಎಪ್ಸ್ಟೀನ್ ಫೈಲ್ಸ್ ನ ವಿಡಿಯೋವನ್ನು ಪ್ರದರ್ಶಿಸಲಾಗಿದೆ. ಹಿಲ್ಟನ್ ಕಟ್ಟದ ಮೇಲೆ ಪ್ರದರ್ಶಿಸಲಾದ ವಿಡಿಯೋದಲ್ಲಿ, ಲೈಂಗಿಕ ಹಗರಣದ ರೂವಾರಿ ಜೆಫ್ರಿ ಎಪ್ಸ್ಟೀನ್ ಮತ್ತು ಡೊನಾಲ್ಡ್ ಟ್ರಂಪ್ ತುಂಬಾ ಆತ್ಮೀಯವಗಿ ಮಾತನಾಡುತ್ತಿರುವ ದೃಶ್ಯಗಳಿವೆ.

ಈ ವಿಡಿಯೋ ಎಪ್ಸ್ಟೀನ್ ಮತ್ತು ಟ್ರಂಪ್ ಸಂಬಂಧಗಳು ಮತ್ತು ಈ ಲೈಂಗಿಕ ಹಗರಣದಲ್ಲಿ ಟ್ರಂಪ್ ಭಾಗಿಯಾಗಿದ್ದಾರೆ ಎನ್ನುವ ಕುರಿತು ಸ್ಪಷ್ಟ ಸಾಕ್ಷಿಯಾಗಿದ್ದು, ಡೊನಾಲ್ಡ್ ಟ್ರಂಪ್ ಈಗಲಾದರೂ ಸತ್ಯ ಒಪ್ಪಿಕೊಳ್ಳಬೇಕು ಎಂದು ಕೊನೆಯಲ್ಲಿ ಆಗ್ರಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಧಾರ್ಮಿಕ ಸಂಸ್ಥೆಗಳನ್ನು ಸರ್ಕಾರ ನೇರವಾಗಿ ನಿರ್ವಹಿಸಬಾರದು ಎಂದು ತನ್ನ ನಿಲುವನ್ನು ಸ್ಪಷ್ಟಪಡಿಸಿರುವ ಕೇಂದ್ರ ಸರ್ಕಾರ, ದೇವಾಲಯಗಳ ಮೇಲೆ ಸರ್ಕಾರ ಹತೋಟಿ ಹೊಂದಿರುವುದನ್ನು ತಾನು ಬೆಂಬಲಿಸುವುದಿಲ್ಲ ಎಂದು ಇತ್ತೀಚೆಗೆ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ದೇಗುಲಗಳು ಸರ್ಕಾರದ ಸುಪರ್ದಿಗೆ | ಸುಪ್ರೀಂ ನಿಲುವೇನು?

ಜಾತ್ಯತೀತ ನಿರ್ವಹಣೆ ಮತ್ತು ಧಾರ್ಮಿಕ ಸ್ವಾಯತ್ತತೆಯ ನಡುವೆ ಕಟ್ಟುನಿಟ್ಟಾದ ವ್ಯತ್ಯಾಸವಿರಬೇಕು ಎಂದ ಸುಪ್ರೀಂ



ಕೇಂದ್ರ ಸರ್ಕಾರದ ನಿಲುವು ಏನು?

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಒಂಬತ್ತು ನ್ಯಾಯಾಧೀಶರ ಸಂವಿಧಾನ ಪೀಠದ ಮುಂದೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಈ ವಿಷಯ ಮಂಡಿಸಿದರು. ಶಬರಿಮಲೆ ದೇವಾಲಯ ಕುರಿತ ಮರುಪರಿಶೀಲನಾ ಅರ್ಜಿಗಳಿಂದ ಉದ್ಭವಿಸಿದ ಸಂವಿಧಾನದ 25 ಮತ್ತು 26 ನೇ ವಿಧಿಗಳ ವಿಸ್ತಾರದ ಕುರಿತ ಗೊಂದಲವನ್ನು, ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಯನ್ನು ಈ ಪೀಠ ಪರಿಶೀಲಿಸುತ್ತಿದೆ. ಜಾತ್ಯತೀತ ನಿರ್ವಹಣೆ ಮತ್ತು ಧಾರ್ಮಿಕ ಸ್ವಾಯತ್ತತೆಯ ನಡುವೆ ಕಟ್ಟುನಿಟ್ಟಾದ ವ್ಯತ್ಯಾಸವಿರಬೇಕು ಎಂದು ಕೇಂದ್ರದ ನಿಲುವು ಪ್ರತಿಪಾದಿಸಿದೆ. 25(2) ನೇ ವಿಧಿ, ಹಣಕಾಸಿನಂತಹ ಜಾತ್ಯತೀತ ಅಂಶಗಳನ್ನು ನಿಯಂತ್ರಿಸಲು ರಾಜ್ಯಕ್ಕೆ ಅವಕಾಶ ನೀಡಿದರೂ, ಇದು ದೇವಾಲಯಗಳ ಶಾಶ್ವತ ಸರ್ಕಾರಿ ಸ್ವಾಧೀನಕ್ಕೆ ದಾರಿಯಾಗಬಾರದು. ಹಿಂದು ಧರ್ಮ ಹಲವು ಅನನ್ಯತೆ ಮತ್ತು ಬಹುತ್ವ ಹೊಂದಿದೆ. ಹೊಸ ನಿಯಮಗಳನ್ನು ಬಲವಂತವಾಗಿ ಹೇರಬಾರದು, ಎಂದು ಕೇಂದ್ರ ಸರ್ಕಾರ ವಾದಿಸಿದೆ. ಸಂವಿಧಾನಾತ್ಮಕ ವ್ಯಾಖ್ಯಾನಗಳು ಎಲ್ಲಾ ಧರ್ಮಗಳಿಗೂ ಸಮಾನವಾಗಿರಬೇಕು ಎಂದು ಸಾಲಿಸಿಟರ್ ಜನರಲ್ ಒತ್ತಿಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ನ ಅವಲೋಕನ

ಧಾರ್ಮಿಕ ಸಂಸ್ಥೆಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡುವ ಅಪಾಯಗಳ ಬಗ್ಗೆ ಒಂಬತ್ತು ನ್ಯಾಯಾಧೀಶರ ಪೀಠ ಕಳವಳ ವ್ಯಕ್ತಪಡಿಸಿದೆ. ನಿರ್ದಿಷ್ಟ ಪಂಗಡಗಳಿಂದ ಇತರರನ್ನು ಹೊರಗಿಡುವ ಸಂಪೂರ್ಣ ಅಧಿಕಾರ ನೀಡಿದರೆ, ಅದು ಸಮಾಜವನ್ನು ವಿಭಜಿಸಬಹುದು ಮತ್ತು ಹಿಂದು ಧರ್ಮದ ಅಂತರ್ಗತ ಸ್ವರೂಪದ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು ಎಂದು ನ್ಯಾಯಾಲಯ ಎಚ್ಚರಿಸಿದೆ. ಪ್ರತಿಯೊಬ್ಬರಿಗೂ ಪ್ರತಿ ದೇವಾಲಯ ಮತ್ತು ಮಠಕ್ಕೆ ಪ್ರವೇಶ ಇರಬೇಕು ಎಂದು ನ್ಯಾಯಮೂರ್ತಿ ಬಿ.ವಿ. ನಾಗರತ್ನ ಗಮನಿಸಿದರು. ಸಾಮಾಜಿಕ ಸುಧಾರಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ತಾರತಮ್ಯವನ್ನು ತಡೆಯಲು 25(2) (ಬಿ) ವಿಧಿಯಲ್ಲಿ ರಾಜ್ಯ ಸರ್ಕಾರ ಮಧ್ಯಪ್ರವೇಶಿಸಬಹುದು ಎಂದು ಅವರು ತಿಳಿಸಿದ್ದಾರೆ. ದೇವಾಲಯದ ಹಣ ದೇವರಿಗೆ ಸೇರಿದ್ದು ಮತ್ತು ಅದನ್ನು ದೇವಾಲಯದ ಹಿತಾಸಕ್ತಿಗಳಿಗಾಗಿ ಮಾತ್ರ ಬಳಸಬೇಕು ಎಂದು ನ್ಯಾಯಾಲಯ ಈ ಹಿಂದಿನ ತೀರ್ಪುಗಳ ನಿಲುವನ್ನು ಕಾಯ್ದುಕೊಂಡಿದೆ.

ದೇವಾಲಯಗಳ ಒಳಹೊರಗು

- **ಕೇಂದ್ರದ ವಿರೋಧ:** ಧಾರ್ಮಿಕ ಸಂಸ್ಥೆಗಳ ಮೇಲೆ ಸರ್ಕಾರದ ಹತೋಟಿ ಬೇಡ.
- **ನ್ಯಾಯಾಲಯದ ಕಳವಳ:** ಸಂಪೂರ್ಣ ಸ್ವಾತಂತ್ರ್ಯ ಸಮಾಜವನ್ನು ವಿಭಜಿಸಬಹುದು.
- **ಸಾಂವಿಧಾನಿಕ ನಿಯಮ:** ಆರ್ಥಿಕ ನಿಯಂತ್ರಣಕ್ಕೆ ಅವಕಾಶವಿದೆ, ಆಚರಣೆಗಳಿಗಲ್ಲ.
- **ಸಮಾನ ಪ್ರವೇಶ:** ಎಲ್ಲರಿಗೂ ದೇವಾಲಯ ಪ್ರವೇಶವಿರಬೇಕು ಎಂದ ನ್ಯಾಯಾಲಯ
- **ನಿಧಿ ಬಳಕೆ:** ದೇವಾಲಯದ ಹಣ ದೇವರಿಗೆ ಮತ್ತು ದೇವಾಲಯದ ಅಭಿವೃದ್ಧಿಗೆ ಮಾತ್ರ.

ಸಾಂವಿಧಾನಿಕ ಮತ್ತು ಕಾನೂನು ಚೌಕಟ್ಟು

ಸುದ್ದಿ ಸಮಗ್ರ

ಸಂವಿಧಾನದ 25(2) ನೇ ವಿಧಿ, ಧಾರ್ಮಿಕ ಆಚರಣೆಗೆ ಸಂಬಂಧಿಸಿದ ಆರ್ಥಿಕ ಮತ್ತು ಜಾತ್ಯತೀತ ಚಟುವಟಿಕೆಗಳನ್ನು ನಿಯಂತ್ರಿಸಲು ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. 26ನೇ ವಿಧಿ, ಧಾರ್ಮಿಕ ಪಂಗಡಗಳಿಗೆ ತಮ್ಮದೇ ಆದ ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸುವ ಹಕ್ಕನ್ನು ನೀಡುತ್ತದೆ. 1954 ರ ಶಿರೂರು ಮಠದ ಪ್ರಕರಣದಲ್ಲಿ, ರಾಜ್ಯ ಜಾತ್ಯತೀತ ಅಂಶಗಳನ್ನು ನಿಯಂತ್ರಿಸಬಹುದಾದರೂ ಧಾರ್ಮಿಕ ವಿಧಿವಿಧಾನಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. 2014 ರ ಚಿದಂಬರಂ ನಟರಾಜ ದೇವಾಲಯದ ಪ್ರಕರಣದಲ್ಲಿ, ದುರ್ಬಳಕೆ ಸರಿಪಡಿಸಲು ಸರ್ಕಾರಿ ಸ್ವಾಧೀನ ಸೀಮಿತ ಅವಧಿಗೆ ಮಾತ್ರ ಇರಬೇಕು ಎಂದು ನ್ಯಾಯಾಲಯ ಒತ್ತಿಹೇಳಿತ್ತು.

ಪ್ರಸ್ತುತ ಆಡಳಿತಾತ್ಮಕ ಪರಿಸ್ಥಿತಿ



ಭಾರತದಾದ್ಯಂತ ದೇವಾಲಯದ ಆಡಳಿತದಲ್ಲಿ ಸರ್ಕಾರದ ವ್ಯಾಪಕ ಭಾಗವಹಿಸುವಿಕೆಯ ಹಿನ್ನೆಲೆಯಲ್ಲಿ ಈ ಚರ್ಚೆ ನಡೆಯುತ್ತಿದೆ. ತಮಿಳುನಾಡಿನಲ್ಲಿ ಹಿಂದು ಧಾರ್ಮಿಕ ಮತ್ತು ದತ್ತಿ (ಎಚ್‌ಆರ್ ಮತ್ತು ಸಿಇ) ಇಲಾಖೆ, 30,000 ಕ್ಕೂ ಹೆಚ್ಚು ದೇವಾಲಯಗಳನ್ನು ನಿರ್ವಹಿಸುತ್ತಿದೆ. ಕೇರಳದಲ್ಲಿ ಸುಮಾರು 3,000 ದೇವಾಲಯಗಳು ರಾಜ್ಯದ ಮೇಲ್ವಿಚಾರಣೆಯ ದೇವಸ್ವಂ ಮಂಡಳಿಗಳ ಅಡಿಯಲ್ಲಿವೆ. ಆಂಧ್ರಪ್ರದೇಶದಲ್ಲಿ ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಮಂಡಳಿ, ರಾಜ್ಯದ ಮೇಲ್ವಿಚಾರಣೆಯಲ್ಲಿ ಬಾಲಾಜಿ ದೇವಾಲಯವನ್ನು ನಿರ್ವಹಿಸುತ್ತದೆ.

ಪರ ಮತ್ತು ವಿರೋಧ ವಾದಗಳು

ಸರ್ಕಾರಿ ಮೇಲ್ವಿಚಾರಣೆಯ ಪರವಾಗಿರುವವರು, ಇದು ಉತ್ತರದಾಯಿತ್ವ ಮತ್ತು ಸಾಮಾಜಿಕ ಸಮಾನತೆಯನ್ನು ಖಚಿತಪಡಿಸುತ್ತದೆ ಎಂದು ವಾದಿಸಿದ್ದಾರೆ. ಎಲ್ಲಾ ಜಾತಿಗಳಿಗೂ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಮತ್ತು ವಂಶಪಾರಂಪರ್ಯ ಅರ್ಚಕತ್ವವನ್ನು ಪ್ರಶ್ನಿಸಲು ಸರ್ಕಾರದ ಹಸ್ತಕ್ಷೇಪ ಮುಖ್ಯವಾಗುತ್ತದೆ ಎನ್ನುತ್ತಾರೆ. ಮತ್ತೊಂದೆಡೆ, ಈ ವ್ಯವಸ್ಥೆಯನ್ನು ಟೀಕಿಸುವವರು, ಪ್ರಸ್ತುತ ವ್ಯವಸ್ಥೆ ತಾರತಮ್ಯದಿಂದ ಕೂಡಿದೆ, ಎಂದು ಅಭಿಪ್ರಾಯಪಟ್ಟಿದ್ದಾರೆ. ಮಸೀದಿ ಮತ್ತು ಚರ್ಚ್‌ಗಳು ಸ್ವಯಂ-ನಿರ್ವಹಣೆಯಲ್ಲಿದ್ದರೆ, ಹಿಂದು ದೇವಾಲಯಗಳು ಮಾತ್ರ ರಾಜ್ಯದ ನಿಯಂತ್ರಣಕ್ಕೆ ಒಳಪಟ್ಟಿವೆ ಎಂಬುದು ಅವರ ಅಭಿಪ್ರಾಯ. ದೇವಾಲಯದ ಆದಾಯವನ್ನು ಧಾರ್ಮಿಕೇತರ ಸರ್ಕಾರಿ ಯೋಜನೆಗಳಿಗೆ ಬಳಸುವುದನ್ನು ಭಕ್ತರು ವಿರೋಧಿಸಿದ್ದಾರೆ.

ಮುಂದಿನ ಹಾದಿ ಏನು?

ಧಾರ್ಮಿಕ ಮುಖಂಡರು ಮತ್ತು ತಜ್ಞರನ್ನೊಳಗೊಂಡ ಸ್ವತಂತ್ರ ಟ್ರಸ್ಟ್‌ಗಳನ್ನು ರಚಿಸುವುದು ಒಂದು ಪರಿಹಾರ ಎನಿಸಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕೇರಳದ ದೇವಸ್ವಂ ಮಾದರಿಯನ್ನು ಸುಧಾರಿಸಿ, ಪಾರದರ್ಶಕತೆ ಹೆಚ್ಚಿಸುವ ಬಗ್ಗೆಯೂ ಸಲಹೆಗಳು ಬಂದಿವೆ. ಆಚರಣೆಗಳು ಮತ್ತು ಹಬ್ಬಗಳ ಬಗ್ಗೆ ಸಲಹೆ ನೀಡಲು ಸ್ಥಳೀಯ ಭಕ್ತರ ಮಂಡಳಿಗಳನ್ನು ಸ್ಥಾಪಿಸುವುದು ಧಾರ್ಮಿಕ ಸಮುದಾಯಕ್ಕೆ ಹೆಚ್ಚಿನ ಅಧಿಕಾರವನ್ನು ನೀಡುತ್ತದೆ, ಎಂಬ ಸಲಹೆಗಳು ಕೇಳಿಬಂದಿವೆ. ಈ ಸರ್ವೋಚ್ಚ ನ್ಯಾಯಾಲಯದ ಮುಂದಿನ ನಡೆ ಏನಿರಬಹುದು ಎಂಬುದು ಕುತೂಹಲ ಮೂಡಿಸಿದೆ.

ಕಿರುಸುದ್ದಿ

47 ನಕ್ಸಲರ ಶರಣಾಗತಿ

ಹೈದರಾಬಾದ್: ದಶಕಗಳ ಕಾಲ ಸಶಸ್ತ್ರ ಹೋರಾಟದಲ್ಲಿದ್ದ 47 ಸಿಪಿಐ (ಮಾವೋವಾದಿ) ಕಾರ್ಯಕರ್ತರು ಶನಿವಾರ ತೆಲಂಗಾಣ ಪೊಲೀಸರ ಮುಂದೆ ಶರಣಾಗಿದ್ದಾರೆ. ಅವರಿಂದ ನಾಲ್ಕು ಎಕೆ-47 ರೈಫಲ್‌ಗಳು ಮತ್ತು ಒಂದು ಎಲ್‌ಎಂಜಿ ಸೇರಿದಂತೆ ಒಟ್ಟು 32 ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಶರಣಾದವರಲ್ಲಿ ದಕ್ಷಿಣ ಬಸ್ತಾರ್ ವಿಭಾಗೀಯ ಸಮಿತಿಯ ಉಸ್ತುವಾರಿ ಹೆಮ್ಲಾ ಐತು ಅಲಿಯಾಸ್ ವಿಜ್ಜಾ ಸೇರಿದ್ದಾರೆ ಎಂದು ಡಿಜಿಪಿ ಬಿ.ಶಿವಧರ್ ರೆಡ್ಡಿ ತಿಳಿಸಿದ್ದಾರೆ. ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಮನವಿ ಮತ್ತು ಸರ್ಕಾರದ ಪುನರ್ವಸತಿ ನೀತಿಯಿಂದ ಪ್ರೇರಿತರಾಗಿ ಛತ್ತೀಸ್‌ಗಢ ಮೂಲದ ಈ ನಕ್ಸಲರು ಮುಖ್ಯವಾಹಿನಿಗೆ ಮರಳಿದ್ದಾರೆ.

ನೀತಿ ಆಯೋಗವನ್ನು ಪುನರ್ ರಚಿಸಿದ ಸರ್ಕಾರ

ಹೊಸದಿಲ್ಲಿ: ನೀತಿ ಆಯೋಗವನ್ನು ಕೇಂದ್ರ ಸರಕಾರ ಪುನಾರಚಿಸಿದ್ದು, ಮಾಜಿ ಪ್ರಧಾನ ಆರ್ಥಿಕ ಸಲಹೆಗಾರ ಅಶೋಕ್‌ಕುಮಾರ್ ಲಹಿರಿ ಅವರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಿದೆ. ಆರ್ಥಿಕ ತಜ್ಞ ಕೆ.ವಿ.ರಾಜು , ಎಐಐಎಂಎಸ್ ನಿರ್ದೇಶಕ ಎಂ.ಶ್ರೀನಿವಾಸ್ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಅಭಯ ಕರಂಡಿಕರ್ ಸಹಿತ ಐವರು ಪೂರ್ಣಾಕಾಲಿಕ ಸದಸ್ಯರನ್ನು ನಿಯುಕ್ತಿಗೊಳಿಸಿದೆ. ನೀತಿ ಆಯೋಗ ಪುನಾರಚನೆಯನ್ನು ಘೋಷಿಸಿದ ಪ್ರಧಾನಿ ನರೇಂದ್ರ ಮೋದಿ, ಉಪಾಧ್ಯಕ್ಷ ಲಹಿರಿ ಸಹಿತ ಹೊಸ ಸದಸ್ಯರೆಲ್ಲರಿಗೂ ಶುಭ ಹಾರೈಸಿದ್ದಾರೆ. ಉಪಯುಕ್ತ ಮತ್ತು ಪ್ರಭಾವಿಯಾಗಿ ಕರ್ತವ್ಯ ನಿರ್ವಹಿಸುವಂತೆ ಆಶಯ ವ್ಯಕ್ತಪಡಿಸಿದ್ದಾರೆ. ವಿಜ್ಞಾನಿ ಗೋವರ್ಧನ್ ದಾಸ್ ಮತ್ತು ಸಂಪುಟದ ಮಾಜಿ ಕಾರ್ಯದರ್ಶಿ ರಾಜೀವ್ ಗೌಬ ಕೂಡ ಪೂರ್ಣಕಾಲಿಕ ಸದಸ್ಯರ ತಂಡದಲ್ಲಿದ್ದಾರೆ. ಭಾರತದ ನೀತಿ ರಚನಾ ವಾಸ್ತುಶಿಲ್ಪದ ಪ್ರಧಾನ ಆಧಾರಸ್ತಂಭವಾಗಿದೆ ನೀತಿ ಆಯೋಗ. ಸಹಕಾರಿ ಒಕ್ಕೂಟ ವ್ಯವಸ್ಥೆಗೆ ಉತ್ತೇಜನ, ಸುಧಾರಣೆಗಳಿಗೆ ಒತ್ತು ಮತ್ತು ಸುಗಮ ಜೀವನಕ್ಕೆ ವೇಗ ನೀಡುವ ವ್ಯವಸ್ಥೆಯಾಗಿದೆ ನೀತಿ ಆಯೋಗ. ಹೊಸ ಹೊಸ ಆವಿಷ್ಕಾರಗಳು ಮತ್ತು ವಿವಿಧ ರಂಗಗಳಲ್ಲಿ ದೀರ್ಘಕಾಲೀನ ವ್ಯೂಹಾತ್ಮಕ ಚಿಂತನೆಗಳಿಗೆ ಕ್ರಿಯಾತ್ಮಕ ವೇದಿಕೆಯಾಗಿದೆ ಎಂದು ಪ್ರಧಾನಿ ಮೋದಿ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಬಣ್ಣಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೀತಿ ಆಯೋಗದ ಅಧ್ಯಕ್ಷರಾಗಿದ್ದಾರೆ.



ಉಷ್ಣಾಂಶ ಏರಿಕೆ ಹಿನ್ನೆಲೆ ಐಎಂಡಿ ಮಾರ್ಗಸೂಚಿ

ಹೊಸದಿಲ್ಲಿ: ದೇಶದ ಹಲವೆಡೆ ತಾಪಮಾನ ಏರಿಕೆಯಾಗುತ್ತಿರುವ ಹಿನ್ನೆಲೆ ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಕೂಲಂಕುಶವಾಗಿ ಬಿಸಿಗಾಳಿ ಮಾರ್ಗಸೂಚಿಗಳು ಮತ್ತು ಸಲಹೆಗಳನ್ನು ಶನಿವಾರ ಬಿಡುಗಡೆಗೊಳಿಸಿದೆ. ಐಎಂಡಿ ಬಿಡುಗಡೆಗೊಳಿಸಿದ ಮಾರ್ಗಸೂಚಿಯಲ್ಲಿ ಸೂರ್ಯನ ಕಿರಣಕ್ಕೆ ಹೆಚ್ಚು ಹೊತ್ತು ನಿಲ್ಲದಿರಲು, ಅದರಲ್ಲೂ ಮಧ್ಯಾಹ್ನದ ಸಮಯದಲ್ಲಿ ಹೆಚ್ಚು ಹೊರಗಡೆ ಇರುವುದು, ಆದಷ್ಟು ನೀರು ಕುಡಿಯುವುದು, ಹಗುರವಾದ ಮತ್ತು ಉಸಿರಾಡಲು ಸುಲಭವಾಗುವಂತಹ ಬಟ್ಟೆ ಧರಿಸುವುದು ಮತ್ತು ಅತಿ ಉಷ್ಣಾಂಶದಲ್ಲಿ ಹೊರಗೆ ಹೆಚ್ಚು ಕೆಲಸ ಮಾಡದಿರುವುದು ಇತ್ಯಾದಿ ಸಲಹೆ ನೀಡಿದೆ.

ಈಗಾಗಲೇ ಆರೋಗ್ಯ ಸಮಸ್ಯೆ ಎದುರಿಸುತ್ತಿರುವ ಮಕ್ಕಳು, ಹಿರಿಯ ನಾಗರಿಕರು ಮತ್ತು ಇತರರು ತಮ್ಮ ಆರೋಗ್ಯದ ಬಗ್ಗೆ ವಿಶೇಷ ಕಾಳಜಿಯನ್ನು ವಹಿಸಬೇಕೆಂದು ಐಎಂಡಿ ತಿಳಿಸಿದೆ. ತಾಪಮಾನದಿಂದ ಶರೀರದಲ್ಲಿ ಬಳಲಿಕೆ, ಸ್ಟ್ರೋಕ್ ಸಂಬಂಧಿತ ಸಾಧ್ಯತೆಗಳನ್ನು ಕಡಿಮೆಗೊಳಿಸಲು ಜಾಗೃತಿ ಮೂಡಿಸುವ ಪ್ರಯತ್ನ ಮತ್ತು ತಡೆಗಟ್ಟುವ ಕ್ರಮಗಳನ್ನು ಇಲಾಖೆ ತೆಗೆದುಕೊಳ್ಳಲಿದೆ ಎಂದು ತಿಳಿಸಿದೆ. ರಾಜಸ್ಥಾನದ ಶ್ರೀಗಂಗಾನಗರದಲ್ಲಿ ಗರಿಷ್ಠ 44.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಉಳಿದಂತೆ ದೇಶದಲ್ಲಿ 40ರಿಂದ 44 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಜಮ್ಮು ಕಾಶ್ಮೀರ, ಹಿಮಾಚಲ ಪ್ರದೇಶ, ಪಂಜಾಬ್, ಹರ್ಯಾಣ, ಚಂಡೀಗಢ, ದಿಲ್ಲಿ, ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಮಧ್ಯ ಭಾರತದ ಹಲವೆಡೆಗಳಲ್ಲಿ ಬಿಸಿಗಾಳಿ ಬೀಸುವ ಸಾಧ್ಯತೆಯಿದೆ ಎಂದು ಐಎಂಡಿ ತಿಳಿಸಿದೆ. ಕೇರಳ, ಕರ್ನಾಟಕದಂತಹ ಕರಾವಳಿ ರಾಜ್ಯಗಳಲ್ಲಿ ಬಿಸಿಗಾಳಿ ಇರಲಿದೆ.

ನೂತನ ಪಕ್ಷ ಸ್ಥಾಪಿಸಿದ ಕೆಸಿಆರ್ ಪುತ್ರಿ ಕೆ.ಕವಿತಾ

ಹೈದರಾಬಾದ್: ತೆಲಂಗಾಣ ಜಾಗೃತಿ ಅಧ್ಯಕ್ಷೆ ಕೆ. ಕವಿತಾ ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಎಂಬ ಹೊಸ ರಾಜಕೀಯ ಪಕ್ಷವನ್ನು ಘೋಷಿಸುವ ಮೂಲಕ ರಾಜ್ಯ ರಾಜಕಾರಣದಲ್ಲಿ ಮಹತ್ವದ ಬದಲಾವಣೆಗೆ ನಾಂದಿ ಹಾಡಿದ್ದಾರೆ.

ಹೈದರಾಬಾದ್‌ನ ಹೊರವಲಯದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಪಕ್ಷವನ್ನು ಅನಾವರಣಗೊಳಿಸಿದ ಕವಿತಾ, ಆಡಳಿತಾರೂಢ ಕಾಂಗ್ರೆಸ್, ಬಿಜೆಪಿ ಮತ್ತು ತಮ್ಮ ತಂದೆ ಕೆ. ಚಂದ್ರಶೇಖರ್ ರಾವ್ (ಕೆಸಿಆರ್) ನೇತೃತ್ವದ ಬಿಆರ್‌ಎಸ್ ಪಕ್ಷಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಈ ಮೂರೂ ಪಕ್ಷಗಳು ಭ್ರಷ್ಟಾಚಾರ ಮತ್ತು ಕುಟುಂಬ ರಾಜಕಾರಣದಿಂದ ಕೂಡಿವೆ ಎಂದು ಅವರು ಆರೋಪಿಸಿದರು. ಅಧಿಕಾರಕ್ಕೆ ಬಂದ ನಂತರ ಬಿಆರ್‌ಎಸ್ ತನ್ನ ಮೂಲ ಸ್ವರೂಪ ಕಳೆದುಕೊಂಡಿದೆ ಎಂದು ಟೀಕಿಸಿದರು. ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಕೆಸಿಆರ್ ಮೌನ ವಹಿಸಿದ್ದಾರೆ ಎಂದು ದೂರಿದರು.

ಕವಿತಾ ಪಾಂಚಜನ್ಯ ಎಂಬ ಐದು ಪ್ರಮುಖ ಭರವಸೆಗಳನ್ನು ಘೋಷಿಸಿದರು. ಇದರಲ್ಲಿ ಉಚಿತ ಶಿಕ್ಷಣ, ಆರೋಗ್ಯ, ರೈತರಿಗೆ ಉಚಿತ ವಿದ್ಯುತ್ ಮತ್ತು ಬೆಂಬಲ ಸೇರಿದೆ.

ಒಂದೇ ಅಧಿಸೂಚನೆಯ ಮೂಲಕ ನಾಲ್ಕು ಲಕ್ಷ ಉದ್ಯೋಗಗಳ ನೇಮಕಾತಿ ಮತ್ತು ಶಾಸಕಾಂಗ ಸ್ಥಾನಗಳಲ್ಲಿ ಹಿಂದುಳಿದ ವರ್ಗಗಳಿಗೆ ಶೇ.50 ರಷ್ಟು ಮೀಸಲಾತಿ ನೀಡುವುದಾಗಿ ಅವರು ಭರವಸೆ ನೀಡಿದ್ದಾರೆ. 2028 ರ ವಿಧಾನಸಭಾ ಚುನಾವಣೆಯ ನಂತರ ತಮ್ಮ ಪಕ್ಷ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

ದಾವೂದ್‌ನ ಶಂಕಿತ ಸಹಚರ ಸಲೀಮ್ ಸೆರೆ

ಇಸ್ತಾಂಬುಲ್: ಭೂಗತ ದೊರೆ ದಾವೂದ್ ಇಬ್ರಾಹಿಂನ ಶಂಕಿತ ಸಹಚರ ಹಾಗೂ ಭಾರತೀಯ ಮಾದಕವಸ್ತು ದಂಧೆಯ ಕಿಂಗ್‌ಪಿನ್ ಸಲೀಮ್ ದೋಲಾ ಇಸ್ತಾಂಬುಲ್‌ನಲ್ಲಿ ಸೆರೆಯಾಗಿದ್ದಾನೆ. ಟರ್ಕಿ ಅಧಿಕಾರಿಗಳು ನಡೆಸಿದ ಮಾದಕವಸ್ತು ವಿರೋಧಿ ಪ್ರಮುಖ ಅಂತಾರಾಷ್ಟ್ರೀಯ ಕಾರ್ಯಾಚರಣೆಯಲ್ಲಿ ಸಲೀಮ್ ಬಂಧನಕ್ಕೆ ಒಳಗಾಗಿದ್ದಾನೆ. ಈತನಿಗೂ ದಾವೂದ್‌ಗೂ ನಿಕಟ ಸಂಪರ್ಕವಿದೆ ಎಂಬ ಶಂಕೆಯಿದೆ.

ಹಲವುವರ್ಷಗಳಿಂದ ಅಂತಾರಾಷ್ಟ್ರೀಯ ನಾರ್ಕೋಟಿಕ್ಸ್ ವ್ಯವಹಾರ ನಡೆಸುತ್ತಿರುವ ದೋಲಾ ಕೊನೆಗೂ ಸಿಕ್ಕಿಬಿದ್ದಿದ್ದಾನೆ. ಆರಂಭದಲ್ಲಿ ಮುಂಬೈನಿಂದ ಡ್ರಗ್ಸ್ ಜಾಲವನ್ನು ನಿಯಂತ್ರಿಸುತ್ತಿದ್ದ ದೋಲಾ ತನ್ನ ಜಾಲವು ವಿಸ್ತರಿಸುತ್ತಿದ್ದಂತೆ ದುಬೈಯಲ್ಲಿ ತಲೆಮರೆಸಿಕೊಂಡಿದ್ದ. ಮುಂಬೈ ಪೊಲೀಸ್ ದಾಖಲಿಸಿದ ಪ್ರಕರಣಗಳ ಆಧಾರದಲ್ಲಿ ಕೇಂದ್ರ ತನಿಖಾ ದಳ(ಸಿಬಿಐ) ಮನವಿ ಮೇರೆಗೆ ಇಂಟರ್‌ಪೋಲ್ ಈತನ ವಿರುದ್ಧ ರೆಡ್ ಕಾರ್ನರ್ ನೋಟಿಸ್ ಜಾರಿಗೊಳಿಸಿತ್ತು. ದೋಲಾ ಬಂಧನವಾಗಿರುವುದು ಅಂತಾರಾಷ್ಟ್ರೀಯ ಡ್ರಗ್ ಮಾಫಿಯಾಗೆ ದೊಡ್ಡ ಹೊಡೆತವೆಂದು ಮುಂಬೈ ಪೊಲೀಸ್ ಹಿರಿಯ ಅಧಿಕಾರಿ ಹೇಳಿದ್ದಾರೆ. ಸಲೀಮ್‌ನ ಡ್ರಗ್ ಕಾರ್ಟೆಲ್, ತನ್ನ ಮಾದಕದ್ರವ್ಯ ಕಳ್ಳಸಾಗಣೆ ಸಂಪರ್ಕ ಜಾಲದ ಮೂಲಕ ರೂ.5,000 ಕೋಟಿಗಿಂತ ಅಧಿಕ ಆದಾಯವನ್ನು ಮಾಡುತ್ತಿತ್ತು. ಕಳೆದ ವರ್ಷ ಸಲೀಮ್ ಪುತ್ರ ತಾಹಿರ್ ದೋಲಾ ಯುಎಇನಲ್ಲಿ ಸೆರೆಯಾಗಿದ್ದ. ಯುಎಇನಲ್ಲಿ ಸ್ಥಳೀಯ ಪೊಲೀಸ್ ಮತ್ತು ಇಂಟರ್‌ಪೋಲ್ ನಡೆಸಿದ್ದ ಕಾರ್ಯಾಚರಣೆಯಲ್ಲಿ ಬಂಧಿಸಲ್ಪಟ್ಟಿದ್ದ. 2025ರ ಜೂನ್‌ನಲ್ಲಿ ಜೂ. ದೋಲಾನನ್ನು ಭಾರತಕ್ಕೆ ಯಶಸ್ವಿಯಾಗಿ ಗಡೀಪಾರು ಮಾಡಲಾಗಿತ್ತು.

ಮಾಲಿಯಲ್ಲಿ ಉಗ್ರ ದಾಳಿ

ಬಮಾಕೊ: ಸಶಸ್ತ್ರ ಗುಂಪುಗಳು ಮಾಲಿಯಾದ್ಯಂತ ಸಂಘಟಿತ ದಾಳಿಗಳನ್ನು ನಡೆಸಿದ್ದು, ಬಮಾಕೊ ಮತ್ತು ಇತರ ಹಲವಾರು ನಗರಗಳಲ್ಲಿನ ಮಿಲಿಟರಿ ನೆಲೆಗಳು ಹಾಗೂ ಆಯಕಟ್ಟಿನ ಸ್ಥಳಗಳನ್ನು ಗುರಿಯಾಗಿಸಿಕೊಂಡಿವೆ.

ಬಮಾಕೊ ನಗರದ ಹೊರವಲಯದಲ್ಲಿರುವ ಕಟಿ ಮಿಲಿಟರಿ ನೆಲೆ ಮತ್ತು ಮೊಡಿಬೊ ಕೀಟಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪವಿರುವ ಸೂಕ್ಷ್ಮ ಪ್ರದೇಶಗಳ ಮೇಲೆ ಮುಂಜಾನೆ 6 ಗಂಟೆಗೆ ಮೊದಲು ದಾಳಿಕೋರರು ದಾಳಿ ನಡೆಸಿದ್ದಾರೆ ಎಂದು ಮಾಲಿ ಸಶಸ್ತ್ರ ಪಡೆಗಳು ವರದಿ ಮಾಡಿವೆ. ದಾಳಿಕೋರರನ್ನು ಹತ್ತಿಕ್ಕಲು ಹೆಲಿಕಾಪ್ಟರ್‌ಗಳನ್ನು ನಿಯೋಜಿಸಿವೆ. ಉತ್ತರ ನಗರಗಳಾದ ಗಾವೊ ಮತ್ತು ಕಿದಾಲ್ ಹಾಗೂ ಮಧ್ಯದ ನಗರವಾದ ಸೆವಾರೆಯಲ್ಲಿಯೂ ಏಕಕಾಲದಲ್ಲಿ ಸಂಘರ್ಷ ನಡೆದಿದೆ. ಅಜಾವಾದ್ ಲಿಬರೇಶನ್ ಫ್ರಂಟ್ ತನ್ನ ಪಡೆಗಳು ಗಾವೊ ಮತ್ತು ಕಿದಾಲ್‌ನಲ್ಲಿನ ಸ್ಥಾನಗಳನ್ನು ನಿಯಂತ್ರಣಕ್ಕೆ ತೆಗೆದುಕೊಂಡಿವೆ.

ಪ.ಬಂಗಾಳದಲ್ಲಿ ಬಿಜೆಪಿ 200ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ : ಬಿಸ್ವಾ

ನುಸುಳುಕೋರರಿಂದ ಜನಸಂಖ್ಯೆ ಹೆಚ್ಚಳ

ಕೋಲ್ಕತ್ತಾ: ಪಶ್ಚಿಮ ಬಂಗಾಳ ಮತ್ತು ನೆರೆಯ ರಾಜ್ಯಗಳಲ್ಲಿ ಬಾಂಗ್ಲಾದೇಶದ ನುಸುಳು ಕೋರರು ಜನಸಂಖ್ಯಾ ಚಿತ್ರಣವೇ ಬದಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ನಡೆಯುತ್ತಿರುವ ವಿಧಾನಸಭಾ ಚುನಾವಣೆಯಲ್ಲಿ ಪ್ರತಿಯೊಬ್ಬ ಭಾರತೀಯನ ಹಿತಾಸಕ್ತಿಯೂ ಅಡಗಿದೆ ಎಂದು ಅಸ್ಸಾಂ ಸಿಎಂ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ.

ಕೋಲ್ಕತ್ತಾದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಶರ್ಮಾ, ಅಸ್ಸಾಂನ 126 ಸ್ಥಾನಗಳಲ್ಲಿ 100ಕ್ಕೂ ಹೆಚ್ಚು ಮತ್ತು ಪಶ್ಚಿಮ ಬಂಗಾಳದಲ್ಲಿ ಬಿಜೆಪಿ 200ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ ಎಂದು ಭವಿಷ್ಯ ನುಡಿದರು. ಪಶ್ಚಿಮ ಬಂಗಾಳದ ಚುನಾವಣೆ ಕೇವಲ ಸಾಮಾನ್ಯ ಚುನಾವಣೆಯಲ್ಲ, ಇದು ಇಡೀ ರಾಷ್ಟ್ರದ ಮೇಲೆ ನಾಗರಿಕ ಪರಿಣಾಮ ಬೀರುವ ಸ್ಪರ್ಧೆ ಎಂದು ಅವರು ಬಣ್ಣಿಸಿದರು. ನುಸುಳುವಿಕೆಯನ್ನು ತಡೆಯದಿದ್ದರೆ ಪಶ್ಚಿಮ ಬಂಗಾಳ ಬಾಂಗ್ಲಾದೇಶದ



ವಿಸ್ತೃತ ಭಾಗವಾಗುವ ಅಪಾಯವಿದೆ ಎಂದು ಅವರು ಎಚ್ಚರಿಸಿದರು.

ಗಡಿ ಭದ್ರತೆ ಮತ್ತು ಅಡೆತಡೆಗಳು: ಭಾರತ ಬಾಂಗ್ಲಾದೇಶದೊಂದಿಗೆ ಹೊಂದಿರುವ ಒಟ್ಟು ಗಡಿಯಲ್ಲಿ ಪಶ್ಚಿಮ ಬಂಗಾಳ ಶೇ. 54ರಷ್ಟು ಪಾಲನ್ನು ಹೊಂದಿದೆ ಎಂದು ಶರ್ಮಾ ಹೇಳಿದರು. ಅಸ್ಸಾಂನಲ್ಲಿ ಶೇ. 100 ರಷ್ಟು ಗಡಿ ಬೇಲಿ ನಿರ್ಮಾಣ ಪೂರ್ಣಗೊಂಡಿದ್ದರೆ, ಪಶ್ಚಿಮ ಬಂಗಾಳ ಸರ್ಕಾರ ತನ್ನ ಮತಬ್ಯಾಂಕ್ ಮತ್ತು ಆರ್ಥಿಕ ಹಿತಾಸಕ್ತಿಗಳಿಗಾಗಿ ಬೇಲಿ ನಿರ್ಮಾಣಕ್ಕೆ ಅಡ್ಡಿಪಡಿಸುತ್ತಿದೆ, ಎಂದು ಅವರು ಆರೋಪಿಸಿದರು. ಗಡಿ ಜಿಲ್ಲೆಗಳಲ್ಲಿ ಮತದಾರರ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿರುವುದರ ಕುರಿತು ಅವರು ಬೆಳಕು ಚೆಲ್ಲಿದರು.

ಬಿಜೆಪಿ ಅಧಿಕಾರಕ್ಕೆ ಬಂದರೆ ನುಸುಳುವಿಕೆ ತಡೆಯಲು ಐದು ಗಡಿ ರಾಜ್ಯಗಳ ಮುಖ್ಯಮಂತ್ರಿಗಳನ್ನೊಳಗೊಂಡ ಜಂಟಿ ಕಾರ್ಯಪಡೆ ರಚಿಸುವಂತೆ ಕೇಂದ್ರ ಗೃಹ ಸಚಿವರಿಗೆ ಮನವಿ ಮಾಡುವುದಾಗಿ ಶರ್ಮಾ ತಿಳಿಸಿದರು. ಅಲ್ಲದೆ, 1948 ರ ಕಾನೂನುಬಾಹಿರ ವಲಸಿಗರ ಹೊರಹಾಕುವಿಕೆ ಕಾಯಿದೆಯನ್ನು ಎಲ್ಲಾ ಗಡಿ ರಾಜ್ಯಗಳಿಗೆ ವಿಸ್ತರಿಸುವಂತೆ ಅವರು ಒತ್ತಾಯಿಸಿದರು. ಎರಡು ವರ್ಷಗಳಲ್ಲಿ ಅಸ್ಸಾಂನ ತಲಾ ಆದಾಯ ಪಶ್ಚಿಮ ಬಂಗಾಳವನ್ನು ಮೀರಿಸಲಿದೆ ಎಂದು ಅವರು ತಿಳಿಸಿದರು.

ನನ್ನ ಪುಸ್ತಕದ ಅಂತಿಮ ಪ್ರತಿ ನನಗೆ ದೊರಕಿಲ್ಲ: ಜ.ನರವಣೆ

ಹೊಸದಿಲ್ಲಿ: ಕೇಂದ್ರದ ನರೇಂದ್ರ ಮೋದಿ ಸರಕಾರವನ್ನು ತರಾಟೆಗೆತ್ತಿಕೊಳ್ಳಲು ಕಾಂಗ್ರೆಸ್‌ನ ರಾಹುಲ್‌ಗಾಂಧಿ ಸಂಸತ್ತಿನ ಹೊರಗಡೆ ಪ್ರದರ್ಶಿಸಿದ್ದ ಪುಸ್ತಕ ಅಥವಾ ದಾಖಲೆ ಯಾವುದು ಮತ್ತು ಎಲ್ಲಿಂದ ಬಂತು? ಅದ್ಯಾವ ಪುಸ್ತಕವೆಂಬುದು ನನಗಂತು ಗೊತ್ತೇ ಇಲ್ಲ. ಲೇಖಕನಾದ ನಾನೇ ನನ್ನ ಪುಸ್ತಕ ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿಯ ಅಂತಿಮ ಕಾಪಿಯನ್ನು ಕೂಡ ನೋಡಿಲ್ಲ. ನನ್ನ ಅಪ್ರಕಟಿತ ಪುಸ್ತಕದ ಆವೃತ್ತಿ ಇನ್ನೂ ನನಗೆ ಸಿಕ್ಕಿಲ್ಲ. ವಾಸ್ತವ ಇದಾಗಿರುವಾಗ ನನ್ನ ಪುಸ್ತಕ ಸಾರ್ವಜನಿಕ ಪ್ರಸರಣಕ್ಕೆ ತಲುಪಲು ಸಾಧ್ಯವೇ ಇಲ್ಲ. ನನ್ನ ಪುಸ್ತಕ ಪ್ರಕಟವೇ ಆಗಿಲ್ಲವೆಂದ ಮೇಲೆ ರಾಹುಲ್ ಸಂಸತ್ತಿನ ಹೊರಗಡೆ ಪ್ರದರ್ಶಿಸಿದ್ದು ಯಾವುದನ್ನು ಎಂದು ಭಾರತೀಯ ಸೇನಾಪಡೆಯ ಮಾಜಿ ಮುಖ್ಯಸ್ಥ ಜ. ಮನೋಜ್ ಮುಕುಂದ್ ನರವಣೆ ತೀಕ್ಷ್ಣವಾಗಿ ಪ್ರಶ್ನಿಸಿದ್ದಾರೆ. ಜ. ನರವಣೆ ಹೊರಗೆಡವಿರುವ ಸತ್ಯವು ರಾಜಕೀಯ ವಲಯದಲ್ಲಿ ಸಹಜವಾಗೇ ಬಿರುಗಾಳಿ ಎಬ್ಬಿಸಿದೆ ಮಾತ್ರವಲ್ಲ, ರಾಹುಲ್ ಗಾಂಧಿ ಪ್ರದರ್ಶಿಸಿದ್ದ ದಾಖಲೆ ಸತ್ಯಾಸತ್ಯತೆ ಬಗ್ಗೆ ಗಂಭೀರ ಸವಾಲುಗಳನ್ನು ಹುಟ್ಟುಹಾಕಿದೆ. ರಾಹುಲ್ ನೇತೃತ್ವದ ವಿಪಕ್ಷ ಕಾಂಗ್ರೆಸ್ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರದ ವಿರುದ್ಧ ಅಪಪ್ರಚಾರ ಮಾಡಲು ಯಾವೆಲ್ಲ ಕಪಟ ಮತ್ತು ಅಸತ್ಯದ ಹಾದಿ ಹಿಡಿದಿದೆ ಎಂಬ ಸತ್ಯವೂ ಜ.ನರವಣೆ ಅವರ ಆಘಾತಕಾರಿ ಹೇಳಿಕೆಯಿಂದ ಬಯಲಾಗಿದೆ.

ಪುಸ್ತಕ ಪ್ರಸರಣದಲ್ಲಿಲ್ಲ,ಪ್ರಕಾಶಕರ ಹೇಳಿಕೆ: ನನ್ನ ಕೃತಿಯ ಮುದ್ರಣ ಆಗಿಲ್ಲ. ಇದರ ಹಾರ್ಡ್‌ಕಾಪಿ ಅಥವಾ ಸಾಫ್ಟ್ ಕಾಪಿ ಕೂಡ ಪ್ರಸರಣದಲ್ಲಿಲ್ಲವೆಂದು ಪುಸ್ತಕವನ್ನು ಪ್ರಕಟಿಸಬೇಕಿದ್ದ ಪೆಂಗ್ವಿನ್ ರ್‍ಯಾಂಡಮ್ ಹೌಸ್ ಇಂಡಿಯಾ ಕೂಡ ಖಡಾಖಂಡಿತ ನೆಲೆಯಲ್ಲಿ ಮಾಹಿತಿ ನೀಡಿದೆ ಎಂದು ಜ.ನರವಣೆ ಗಮನ ಸೆಳೆದಿದ್ದಾರೆ.

ಕಿರುಸುದ್ದಿ

ಬಿಜೆಪಿ ಮಹಿಳಾ ಮೋರ್ಚಾ ಪದಾಧಿಕಾರಿಗಳ ನೇಮಕ

ಕಲಬುರಗಿ: ಭಾರತೀಯ ಜನತಾ ಪಾರ್ಟಿಯ ಸಂಘಟನೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಕಲಬುರಗಿ ಮಹಾನಗರ ಜಿಲ್ಲಾಧ್ಯಕ್ಷ ಚಂದು ಪಾಟೀಲ ಅವರ ಆದೇಶದಂತೆ ಉತ್ತರ ಮಂಡಲದ ಮಹಿಳಾ ಮೋರ್ಚಾಗೆ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಮಂಡಲದ ಅಧ್ಯಕ್ಷರಾಗಿ ಜಯಶ್ರೀ ಬಸವರಾಜ ಮುಚ್ಚಳಂಬಿ ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಗಳಾಗಿ ಮೀನಾಕ್ಷಿ ಶಾಂತಕುಮಾರ ಶೆಟ್ಟಿ ಮತ್ತು ಆಶಾ ಓಂಪ್ರಕಾಶ ಸ್ನೋಜಾ ಅವರನ್ನು ನೇಮಿಸಲಾಗಿದೆ. ಉಪಾಧ್ಯಕ್ಷರಾಗಿ ಜಯಶ್ರೀ ಉಮರ್ಗಿ, ಶಾಂತಾ ಹಿರೇಗೌಡ, ಸುರೇಖಾ ಫರತಾಬಾದಿ, ಜ್ಯೋತಿ ಪಾಟೀಲ ಹಾಗೂ ಕೋಶಾಧ್ಯಕ್ಷರಾಗಿ ಸವಿತಾ ಮಹಾದೇವಿ ಹೊನ್ನುಟಗಿಮಠ ನೇಮಕಗೊಂಡಿದ್ದಾರೆ. ಪಕ್ಷ ನೀಡಿರುವ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ, ಸಂಘಟನಾತ್ಮಕವಾಗಿ ಕಾರ್ಯನಿರ್ವಹಿಸುವಂತೆ ಉತ್ತರ ಮಂಡಲ ಅಧ್ಯಕ್ಷ ವರದಶಂಕರ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

177ನೇ ದಿನದ ಧರಣಿ ಯಶಸ್ವಿ



ಕೊಪ್ಪಳ: ಕೇಂದ್ರ ಪರಿಸರ ಇಲಾಖೆಯ ಶಿಫಾರಸ್ಸಿನಂತೆ ಹಿರೇಬಗನಾಳ, ಅಲ್ಲಾನಗರ ಹತ್ತಿರದ ವಿಷಾನಿಲ ಉಗುಳುವ ಸ್ಪಾಂಜ್ ಐರನ್ ಕಾರ್ಖಾನೆಗಳನ್ನು ಸ್ಥಳಾಂತರ ಮಾಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ನಗರಸಭೆ ಮುಂದೆ ನಡೆದಿರುವ ಬಲ್ಡೋಟ ತೊಲಗಿಸಿ ಕೊಪ್ಪಳ ಉಳಿಸಿ ಧರಣಿಯಲ್ಲಿ ಒಕ್ಕೊರಲಿನಿಂದ ಒತ್ತಾಯಿಸಲಾಯಿತು. ಹೈಕೋರ್ಟ್ ಆದೇಶದಂತೆ 44.35 ಎಕರೆ ಬಸಾಪುರ ಕೆರೆಯನ್ನು ಬಲ್ಡೋಟ ಅತಿಕ್ರಮಣದಿಂದ ಮುಕ್ತಗೊಳಿಸಿ, ಜಾನುವಾರು ನೀರು ಕುಡಿಯಲು ಅನುವು ಮಾಡಬೇಕು. ಕೊಪ್ಪಳ ಹತ್ತಿರ 2011ರಿಂದ ಬಲ್ಡೋಟ- ಎಂಎಸ್‌ಪಿಎಲ್ ಪೆಲ್ಲೆಟ್ ಘಟಕ ಕೊಪ್ಪಳ ನಗರಕ್ಕೆ ಹೊಂದಿಕೊಂಡು ಕಾರ್ಯಾಚರಿಸುತ್ತಿದ್ದು 40% ಭಾಗ ಮಾಲಿನ್ಯ ಮಾಡಿದೆ. ತಕ್ಷಣ ಈ ಘಟಕ ಬಂದ್ ಮಾಡಬೇಕು. ತುಂಗಭದ್ರಾ ಜಲಾಶಯ ವಿಷಗೊಳಿಸುವ ಕಾರ್ಖಾನೆಗಳನ್ನು ಮುಚ್ಚಬೇಕು. ಎಐಐಎಂಎಸ್ ಸಂಸ್ಥೆಯಿಂದ ಬಾಧಿತ 22 ಹಳ್ಳಿಯ ಜನರ ಆರೋಗ್ಯ ಸರ್ವೆ ಮಾಡಬೇಕು. ಐಐಎಸ್ಸಿ ಸಂಸ್ಥೆಯಿಂದ ಬಾಧಿತ ಹಳ್ಳಿ ಮತ್ತು ತುಂಗಭದ್ರಾ ನೀರಿನ ಗುಣಮಟ್ಟದ ಸರ್ವೆ ಮಾಡಬೇಕು ಎಂದು ಆಗ್ರಹಿಸಿದರು. ಧರಣಿಯಲ್ಲಿ ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು, ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ, ಮಂಜುನಾಥ ಜಿ. ಗೊಂಡಬಾಳ, ಪುಟ್ಟರಾಜ ಪಾಟೀಲ್, ಶಂಭುಲಿಂಗಪ್ಪ ಹರಗೇರಿ, ರವಿ ಕಾಂತನವರ, ರಾಜಶೇಖರ ಏಳುಬಾವಿ, ಗಾಯಕ ಸದಾಶಿವ ಪಾಟೀಲ್, ಶರಣು ಶೆಟ್ಟರ್, ಮಹಾದೇವಪ್ಪ ಮಾವಿನಮಡು, ನಾಗರಾಜ ಕುಷ್ಟಗಿ, ವಿಜಯಮಹಾಂತೇಶ ಹಟ್ಟಿ, ರಾಮಲಿಂಗಯ್ಯ ಶಾಸ್ತ್ರಿ, ಭೀಮಪ್ಪ ಯಲಬುರ್ಗಿ, ಶಿವಪ್ಪ ಜಲ್ಲಿ, ಗಂಗಮ್ಮ ಕುರುಗೋಡು ಇದ್ದರು.

ಮಲ್ಲಮ್ಮ ಜಯಂತಿಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಿ

ಕೊಪ್ಪಳ: ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಅದ್ದೂರಿಯಾಗಿ ಮತ್ತು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಶ್ರೀಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ ಕುರಿತು ಕೊಪ್ಪಳ ಜಿಲ್ಲಾಡಳಿತ ಭವನದ ಕೆಸ್ವಾನ್-2ರ ಸಭಾಂಗಣದಲ್ಲಿ ಶುಕ್ರವಾರ ಕರೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಮೇ 10ರಂದು ಆಚರಣೆ ಮಾಡಲಾಗುವುದು. ಜಯಂತಿ ದಿನದಂದು ಜಿಲ್ಲೆಯ ಎಲ್ಲಾ ಸರ್ಕಾರಿ ಕಛೇರಿಗಳು, ತಾಲ್ಲೂಕು ಕೇಂದ್ರಗಳಲ್ಲಿ ಮತ್ತು ತಾಲ್ಲೂಕಾ ಕಛೇರಿ, ಗ್ರಾಮ ಪಂಚಾಯತಿಗಳಲ್ಲಿ, ಶಾಲಾ, ಕಾಲೇಜು ಹಾಗೂ ವಸತಿ ನಿಲಯಗಳಲ್ಲಿ ಶ್ರೀಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಕಡ್ಡಾಯವಾಗಿ ಆಚರಣೆ ಮಾಡಬೇಕಾಗಿದ್ದು, ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು. ಜಿಲ್ಲಾ ಕೇಂದ್ರದಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆಗಾಗಿ ಸಂಬಂಧಿಸಿದ ಇಲಾಖೆಗಳು ಅಚ್ಚುಕಟ್ಟು ವ್ಯವಸ್ಥೆ ಕಲ್ಪಿಸಬೇಕು. ಮೇ 10ರ ಬೆಳಿಗ್ಗೆ 10.30 ಗಂಟೆಗೆ ಕೊಪ್ಪಳ ನಗರದ ಕಿನ್ನಾಳ ರಸ್ತೆಯಲ್ಲಿರುವ ಶ್ರೀ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣ ಕುಮಾರ್, ಸಮಾಜದ ಮುಖಂಡರಾದ ವಿರುಪಣ್ಣ ನವೋದಯ ಇತರರು ಉಪಸ್ಥಿತರಿದ್ದರು.

ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಹಾಹಾಕಾರ

ಬರಿದಾಗುತ್ತಿದೆ ತುಂಗಭದ್ರೆಯ ಒಡಲು

▸ ಬಸವರಾಜ ಅಕ್ಕಂಡಿ ಮಾಲವಿ

ದಿಗಂತ ವಿಶೇಷ

ಹಗರಿಬೊಮ್ಮನಹಳ್ಳಿ: ಸುಡು ಬಿಸಿಲು ಜೀವಿಗಳ ನೆತ್ತಿಯ ಸುಡುತಿದೆ.ಹೊರಗಡೆ ಓಡಾಡಲು ಸಹ ಭಯ ಪಡಿಸುವ ಬಿಸಿಲು 40ರ ಉಷ್ಣಾಂಶದ ಗಡಿ ದಾಟುತಿದೆ. ಈ ಬಿಸಿಲಿನ ಝಳಕ್ಕೆ ಸರಿಯಾದ ಗಾಳಿ ಇಲ್ಲದೇ ಮನೆಯಲ್ಲಿ ಮರಗಿಡಗಳ ಕಟ್ಟೆಯಲ್ಲಿ ಎಲ್ಲೂ ಕುಳಿತ್ರು ಸಮಾಧಾನ ಇಲ್ಲ ಎನ್ನುವಂತಾಗಿದೆ. ಇಷ್ಟರ ಮಧ್ಯೆ ತುಂಗಭದ್ರೆಯ ಹಿನ್ನೀರು ಬರಿದಾಗುತ್ತಿದೆ.

ತುಂಗಭದ್ರೆಯ ಹಿನ್ನೀರು ತಾಲೂಕಿನ ಬನ್ನಿಗೋಳು ಗ್ರಾಮದ ಬಳಿ ನಿರ್ಮಿಸಿರುವ ಕುಡಿಯುವ ನೀರಿನ ಜಾಕ್ವೆಲ್ ಬಳಿ ನೀರು ಬರಿದಾಗುತ್ತಿರುವುದು ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಆತಂಕ ಎದುರಾಗುವ ಮುನ್ಸೂಚನೆ ನೀಡುವಂತಿದೆ.

ಈ ಬನ್ನಿಗೋಳು ಜಾಕ್ವಾಲ್ ಮೂಲಕ ಹಗರಿಬೊಮ್ಮನಹಳ್ಳಿ, ಕೊಟ್ಟೂರು ಹಾಗೂ ಕೂಡ್ಲಿಗಿ ಪಟ್ಟಣಗಳಿಗೆ ಶುದ್ಧೀಕರಣಗೊಂಡು ಕುಡಿಯುವ ನೀರು ಸರಬರಾಜು ಆಗುತಿತ್ತು.

ನದಿಯು ನೀರಿನ ಮಟ್ಟ ಕುಸಿತದ ಪರಿಣಾಮ



ಈ ಮೂರು ನಗರದಲ್ಲಿಯೂ ಕುಡಿಯುವ ನೀರಿನ ಅಭಾವ ಉಂಟಾಗುವ ಸಾಧ್ಯತೆಗಳಿವೆ. ಬನ್ನಿಗೋಳ ಜಾಕ್ವಾಲಿನಲ್ಲಿ ಪಂಪು ಮಾಡುವಷ್ಟು ನೀರು ಇಲ್ಲದ ಕಾರಣ ಮೋಟಾರ್‌ಗಳು ನೀರಿಲ್ಲದೆ ಸ್ಥಗಿತಗೊಂಡಿದೆ.

ಹಗರಿಬೊಮ್ಮನಹಳ್ಳಿ ನಗರದ ಹಲವು ವಾರ್ಡ್‌ಗಳಲ್ಲಿ ದಿನನಿತ್ಯದ ನೀರಿನ ಸರಬರಾಜು ವ್ಯತ್ಯಯವಾಗುತ್ತಿದೆ. ನದಿಯಲ್ಲಿ ನೀರಿಲ್ಲದ ಕಾರಣ ಬಾವಿ ಮತ್ತು ಬೋರ್‌ವೆಲ್‌ಗಳ ಮೇಲೂ ಹೆಚ್ಚಿನ ಒತ್ತಡ ಉಂಟಾಗಿದ್ದು, ಅಂತರ್ ಜಲ ಕುಸಿಯುವ ಜೊತೆಗೆ ಬೋರವೆಲ್ ನಲ್ಲಿ ನೀರು ಕಡಿಮೆ ಆಗಿ ಜನ ಜಾನುವಾರುಗಳ ಕುಡಿಯುವ ನೀರಿಗಾಗಿ ಪರದಾಡುವ ಪರಿಸ್ಥಿತಿ ಬಂದ್ ಒದಾಗುವ ಕಾಲ ಸನ್ನಿಹಿತವಾಗಿದೆ.

ಆದ್ದರಿಂದ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು

ನದಿಯ ನೀರನ್ನು ತಡೆಗಟ್ಟುವ ನಿಟ್ಟಿನಲ್ಲಿ ಉಸುಕಿನ ಚೀಲದಿಂದ ಬಂಡ್ ನಿರ್ಮಾಣಕ್ಕೆ ಟೆಂಡರ್ ಕರೆದಿದ್ದು ಟೆಂಡರ್ ಬಳಿಕ ಕಾಮಗಾರಿ ಕೈಗೆತ್ತಿಕೊಳ್ಳಲಾಗುತಿದೆ. ಹಗರಿಬೊಮ್ಮನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ 117 ಬೋರವೆಲ್‌ಗಳಿದ್ದು ಎಲ್ಲ ಬೋರವೆಲ್‌ಗಳಿಂದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ದುರಸ್ತಿ ಕಾರ್ಯ ಬಂದರೂ ಸಹ ಶೀಘ್ರವಾಗಿ ಕ್ರಮ ವಹಿಸುತ್ತೇವೆ.

■ ಎಂ.ಕೆ.ಮುಗಳಿ, ಮುಖ್ಯಾಧಿಕಾರಿ ಪುರಸಭೆ

ಸಿಂಗಟಾಲೂರು ಬ್ಯಾರೇಜ್‌ನಿಂದ ತುಂಗಭದ್ರಾ ನದಿಗೆ ತಕ್ಷಣ ನೀರು ಬಿಡುಗಡೆ ಮಾಡಬೇಕು. ಬನ್ನಿಗೋಳ ಜಾಕ್ವಾಲ್ ಬಳಿ ಸ್ಯಾಂಡ್ ಬ್ಯಾಗ್‌ಗಳ ಮೂಲಕ ನೀರನ್ನು ತಡೆದು ಜನ ಜಾನುವಾರುಗಳಿಗೆ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳಬೇಕು.

ಹಗರಿಬೊಮ್ಮನಹಳ್ಳಿ ಪುರಸಭೆ ನಗರಕ್ಕೆ ತುರ್ತು ಕುಡಿಯುವ ನೀರಿನ ಟ್ಯಾಂಕರ್ ವ್ಯವಸ್ಥೆ ಕಲ್ಪಿಸಬೇಕು ಎಂಬುದು ಸ್ಥಳೀಯ ನಾಗರಿಕರ ಆಗ್ರಹವಾಗಿದೆ.

ಶಾಲೆಗೆ ಮಮತಾ ಟಾಪರ್: ಸನ್ಮಾನ

ಹೂವಿನಹಡಗಲಿ: ತಾಲೂಕಿನ ಮಿರಾಕೊರನಹಳ್ಳಿ ಗ್ರಾಮದ ಮಮತಾ, ಗುಜನೂರು ಗ್ರಾಮದ ಸಹನಾ ಎಚ್., ಪರಶುರಾಮ್ ಬಿ. ಅವರು ಉತ್ತಮ ಅಂಕಗಳನ್ನು ಪಡೆಯುವುದರ ಮೂಲಕ ಶ್ರೀಶರಣಬಸವೇಶ್ವರ ಸರ್ಕಾರಿ ಪ್ರೌಢಶಾಲೆಗೆ ಟಾಪರ್ ಆಗಿ ಶಾಲೆಗೆ, ಗ್ರಾಮಕ್ಕೆ ಕೀರ್ತಿ ತಂದಿದ್ದಾರೆ.

ಸಹನಾ ಎಚ್.ಮಮತಾಳ, ಪರಶುರಾಮ್ ಸಾಧನೆಯನ್ನು ಶರಣಬಸವೇಶ್ವರ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಸೂರ್ಯಕಾಂತ್, ಎಸ್‌ಡಿಎಂಸಿ ಅಧ್ಯಕ್ಷ ಎಚ್.ಆರ್.ಮಹಮ್ಮದ್ ಮಹಮ ರಫಿ, ಎಸ್‌ಡಿಎಂಸಿ ಸದಸ್ಯ ಶಿಕ್ಷಣ ಪ್ರೇಮಿ ಕೆ.ರವಿಕುಮಾರ್, ಶಿಕ್ಷಣ ಪ್ರೇಮಿ ಮಾನಿಹಳ್ಳಿ ಪ್ರಕಾಶ್, ಜ್ಞಾನ ಗಂಗಾ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಲಿಂಗದಹಳ್ಳಿ ವಿಜಯಕುಮಾರ್, ಕನಕ ಪತ್ತಿನ ಸಹಕಾರ ಸಂಘದ ಮಾಜಿ ಉಪಾಧ್ಯಕ್ಷ ಹನುಮಂತಪ್ಪ, ಶಾಂತಪ್ಪ ಹೊಸಮನಿ ಸಹ ಶಿಕ್ಷಕರು ಶಾಲಾ ಸಿಬ್ಬಂದಿ ಸೇರಿದಂತೆ ಊರಿನ ಗ್ರಾಮಸ್ಥರು, ಶಿಕ್ಷಣ ಪ್ರೇಮಿಗಳು ಹರ್ಷ ವ್ಯಕ್ತಪಡಿಸಿದ್ದಾರೆ. ಗುಜನೂರು ಗ್ರಾಮದ ಹೊಸಮನಿ ಸಹನಾ ಶಾಂತಪ್ಪ ಇವರು ಕೂಡ ಉತ್ತಮ ಅಂಕ ಗಳಿಸಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಅದೇ ರೀತಿಯಲ್ಲಿ ಗುಜನೂರು ಗ್ರಾಮದ ಪರಶುರಾಮ್ ತಂದೆ ಬೀರಪ್ಪ ಕೂಡ ಉತ್ತಮ ಅಂಕ ಗಳಿಸಿ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ.

ಈ ವಿದ್ಯಾರ್ಥಿಗಳಿಗೆ ಮಿರಕೋರನಹಳ್ಳಿ ಶರಣಬಸವೇಶ್ವರ ಪ್ರೌಢಶಾಲೆಯ ಸಿಬ್ಬಂದಿ ಮತ್ತು ಎಸ್‌ಡಿಎಂಸಿ ಶಿಕ್ಷಣ ಪ್ರೇಮಿಗಳು ಗೌರವಿಸಿದರು.



ಬಳ್ಳಾರಿ ಕೇಂದ್ರ ಬಸ್ ನಿಲ್ದಾಣದಲ್ಲಿ ಸ್ವಚ್ಛತಾ ಅಭಿಯಾನ



ಬಳ್ಳಾರಿ: ನಗರದ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಸಾರಿಗೆ ಸಿಬ್ಬಂದಿ ವೇದಿಕೆ ಸ್ವಚ್ಛತಾ ಅಭಿಯಾನದಡಿ ಶನಿವಾರ ಸ್ವಚ್ಛತಾ ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸಾರಿಗೆ ಇಲಾಖೆ ಅಧಿಕಾರಿಗಳು, ಸಿಬ್ಬಂದಿ, ಸ್ವಚ್ಛತಾ ಅಭಿಯಾನದಲ್ಲಿ ಭಾಗವಹಿಸಿ ಗಮನಸೆಳೆದರು. ಸಾರಿಗೆ ಇಲಾಖೆಯ ಡಿಟಿಓ ಬಿರಾದಾರ್, ಲೆಕ್ಕಾಧಿಕಾರಿ ಪಂಪನಗೌಡ, ಕಾರ್ಮಿಕ ಕಲ್ಯಾಣ ಅಧಿಕಾರಿ ಕರೇಗೌಡ್, ಅಧಿಕಾರಿ ಮಂಜುನಾಥ್, ಎಟಿಎಂ ವೀರಮ್ಮ, 2ನೇ ಘಟಕದ ವ್ಯವಸ್ಥಾಪಕ ಗಂಗಾಧರ, ಸೂಪರ್ ವೈಸರ್ ಗೌಸ್, ಭಾರತೀಯ ಮಜ್ದೂರ್ ಸಂಘದ ಪ್ರಮುಖ ಸೋಮಶೇಖರ್, ವಿನಯ್ ಕುಮಾರ್, ರಮೇಶ್, ವಿಜಯ್ ಕುಮಾರ್, ಬಂಡೇಗೌಡ, ಬಸವರಾಜ್, ಸೇರಿದಂತೆ ಇತರ ಇದ್ದರು. ಬಸ್ ನಿಲ್ದಾಣದಲ್ಲಿ ಆಯೋಜಿಸಿದ್ದ ಈ ಅಭಿಯಾನದಲ್ಲಿ ಸಿಬ್ಬಂದಿ, ಅಧಿಕಾರಿಗಳು ಭಾಗವಹಿಸಿ ನಿಲ್ದಾಣವನ್ನು ಸ್ವಚ್ಛಗೊಳಿಸುವ ಮೂಲಕ ಗಮನಸೆಳೆದರು.

ಕೃಷಿ, ಎಂಎಸ್‌ಎಂಇ ವಲಯಕ್ಕೆ ಹೆಚ್ಚಿನ ಒತ್ತು



ಬಳ್ಳಾರಿ: ಜಿಲ್ಲೆಯ ಆರ್ಥಿಕ ಪ್ರಗತಿಗೆ ಪೂರಕವಾಗಿರುವ 2026-27ನೇ ಹಣಕಾಸು ವರ್ಷದ ಜಿಲ್ಲಾ ಕ್ರೆಡಿಟ್ ಯೋಜನೆಯನ್ನು ಲೀಡ್ ಬ್ಯಾಂಕ್ ಆದ ಕೆನರಾ ಬ್ಯಾಂಕ್ ವತಿಯಿಂದ ಶುಕ್ರವಾರ ಬಿಡುಗಡೆ ಮಾಡಲಾಯಿತು.

ನಗರದ ನೂತನ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್. ಕೆ ಹಾಗೂ ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಅವರು ಈ ಸಾಲಿನ ಸಾಲ ಯೋಜನೆಯ ಕೈಪಿಡಿಯನ್ನು ಲೋಕಾರ್ಪಣೆಗೊಳಿಸಿದರು.

ಸಾಲ ಯೋಜನೆಯ ಮುಖ್ಯಾಂಶಗಳು (2026-27): ಈ ಬಾರಿಯ ಸಾಲ ಯೋಜನೆಯು ಕಳೆದ ವರ್ಷಕ್ಕಿಂತ ಶೇ.16.19 ರಷ್ಟು ಹೆಚ್ಚಳ ಕಂಡಿದ್ದು, ಒಟ್ಟು ರೂ.14,248.71 ಕೋಟಿಗಳ ಗುರಿಯನ್ನು ಹೊಂದಿದೆ.

ಕೃಷಿವಲಯ: ಒಟ್ಟು ಯೋಜನೆಯ ಶೇ. 43.74 ರಷ್ಟು ಅಂದರೆ ರೂ. 6,231.71 ಕೋಟಿ ಅನುದಾನವನ್ನು ಕೃಷಿ ಕ್ಷೇತ್ರಕ್ಕೆ ಮೀಸಲಿಡಲಾಗಿದೆ.

ಎಂ.ಎಸ್.ಎಂ.ಇ: ಜಿಲ್ಲೆಯ ಕೈಗಾರಿಕಾ ಚಟುವಟಿಕೆಗಳ ಉತ್ತೇಜನಕ್ಕಾಗಿ ರೂ. 3,630.09 ಕೋಟಿ ನಿಗದಿಪಡಿಸಲಾಗಿದೆ.

ಆದ್ಯತಾ ವಲಯ: ಒಟ್ಟು ಯೋಜನೆಯ ಶೇ. 70.96 ರಷ್ಟು ಭಾಗವನ್ನು (ರೂ. 10,111.45 ಕೋಟಿ) ಆದ್ಯತಾ ವಲಯಕ್ಕೆ ನೀಡಲಾಗಿದೆ.

ಸರ್ಕಾರಿ ಪ್ರಾಯೋಜಿತ ಯೋಜನೆಗಳ ಪ್ರಗತಿ ಪರಿಶೀಲಿಸಿದ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ. ಅವರು, 'ಪಿಎಂಎಫ್‌ಎಂಇ, ಪಿಎಂಇಜಿಪಿ ಹಾಗೂ ಪಿಎಂ ಸ್ವಾನಿಧಿಯಂತಹ ಯೋಜನೆಗಳ ಸಮರ್ಪಕ ಅನುಷ್ಠಾನವಾಗಬೇಕು. ಬ್ಯಾಂಕರ್‌ಗಳು ಮತ್ತು ಸರ್ಕಾರಿ ಇಲಾಖೆಗಳ ನಡುವೆ ಉತ್ತಮ ಸಮನ್ವಯವಿದ್ದರೆ ಈ ವರ್ಷವೂ ಹೆಚ್ಚಿನ ಸಾಧನೆ ಮಾಡಲು ಸಾಧ್ಯ ಎಂದು ಆಶಿಸಿದರು.

ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿದರು.

ಕೆನರಾ ಬ್ಯಾಂಕ್ ಪ್ರಾದೇಶಿಕ ವ್ಯವಸ್ಥಾಪಕ ಅರುಣ್ ಕುಮಾರ್ ಎಜಿ, ವಿಭಾಗೀಯ ವ್ಯವಸ್ಥಾಪಕ ಉಪೇಂದ್ರ ಸಿಂಗ್, ಯೂನಿಯನ್ ಬ್ಯಾಂಕ್ನ ಜಿ. ರಾಜೇಶ್, ಕೆಜಿಬಿ ಹಿರಿಯ ವ್ಯವಸ್ಥಾಪಕ ಚಂದ್ರಪ್ಪ, ಎಸ್ಬಿಐ ಮುಖ್ಯ ವ್ಯವಸ್ಥಾಪಕ ನಾಗರಾಜು, ಐಓ ಬ್ಯಾಂಕ್ ಹಿರಿಯ ವ್ಯವಸ್ಥಾಪಕ ಮಹಾಂತೇಶ್.ಟಿ., ಎಚ್‌ಡಿಎಫ್‌ಸಿ ಬ್ಯಾಂಕ್ ಮುಖ್ಯಸ್ಥ ರಮೇಶ್ ಜೋನಾಲ್, ಕ್ಲಸ್ಟರ್ ಮುಖ್ಯಸ್ಥ ನಂದ ಕಿಶೋರ್, ಬಿಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ನಾಸೀರ್ ಅಹಮದ್, ಆರ್‌ಎಸ್‌ಇಟಿಐ ಸಿಬಿ ನಿರ್ದೇಶಕ ರಾಜಸಾಬ್ ಸೇರಿದಂತೆ ವಿವಿಧ ಬ್ಯಾಂಕ್ಗಳ ಜಿಲ್ಲಾ ಸಂಯೋಜಕರು ಮತ್ತು ಲೈನ್ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬಿಜೆಪಿ ಮಹಿಳಾ ಮೋರ್ಚಾದಿಂದ ಬೃಹತ್ ಜನಾಕ್ರೋಶ ಸಭೆ

ಮಹಿಳಾ ಮೀಸಲಾತಿ ಮಸೂದೆಗೆ ಅಡ್ಡಿ



ವಿಜಯನಗರ: ಮಹಿಳೆಯರ ರಾಜಕೀಯ ಸಬಲೀಕರಣಕ್ಕಾಗಿ ಕೇಂದ್ರ ಸರ್ಕಾರ ತಂದಿರುವ 'ನಾರಿ ಶಕ್ತಿ ವಂದನ್ ಅಧಿನಿಯಮ' (ಮಹಿಳಾ ಮೀಸಲಾತಿ ಮಸೂದೆ) ಜಾರಿಯಾಗದಂತೆ ತಡೆಯುತ್ತಿರುವ ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳ ಧೋರಣೆಯನ್ನು ಖಂಡಿಸಿ ಹೊಸಪೇಟೆಯ ಥಿಯೋಸಫಿಕಲ್ ಕಾಲೇಜಿನಲ್ಲಿ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ 'ಜನಾಕ್ರೋಶ ಮಹಿಳಾ ಸಭೆ' ಶನಿವಾರ ನಡೆಯಿತು.

ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಆರುಂಡಿ ಸುವರ್ಣ, ಮಹಿಳೆಯು ಇಂದು ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಸಾಮರ್ಥ್ಯ ಸಾಬೀತುಪಡಿಸಿದ್ದಾಳೆ. ಇತಿಹಾಸದಲ್ಲಿ ಕಿತ್ತೂರು ಚೆನ್ನಮ್ಮ, ಒನಕೆ ಓಬವ್ವ ಅಪ್ರತಿಮ ಶೌರ್ಯ ತೋರಿದರೆ, ಇಂದು ದ್ರೌಪದಿ ಮುರ್ಮು ಅವರು ರಾಷ್ಟ್ರಪತಿಯಾಗಿ, ನಿರ್ಮಲಾ ಸೀತಾರಾಮನ್ ಅವರು ಹಣಕಾಸು ಸಚಿವೆಯಾಗಿ ದೇಶವನ್ನು ಮುನ್ನಡೆಸುತ್ತಿದ್ದಾರೆ. ವಿಜ್ಞಾನ ಕ್ಷೇತ್ರದಲ್ಲಿ ಕಲ್ಪನಾ ಚಾವ್ಲಾ, ಸುನೀತಾ ವಿಲಿಯಮ್ಸ್ ಸಾಧನೆ ಮಾಡಿದ್ದಾರೆ. ಹೀಗಿದ್ದರೂ ರಾಜಕೀಯದಲ್ಲಿ ಮಹಿಳೆಯರಿಗೆ ಸೂಕ್ತ ಅವಕಾಶ ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಮಹಿಳೆಯರಿಗೆ ರಾಜಕೀಯದಲ್ಲಿ ಶೇ.33 ಮೀಸಲಾತಿ ನೀಡಲು ಮುಂದಾಗಿದ್ದಾರೆ. ಆದರೆ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ರಾಜಕೀಯ ಲಾಭಕ್ಕಾಗಿ ಇದನ್ನು ವಿರೋಧಿಸುತ್ತಿವೆ. ಮಹಿಳಾ ಮೀಸಲಾತಿಯು ನಮ್ಮ ಹಕ್ಕು, ಇದನ್ನು ಪಡೆದೇ ತೀರುತ್ತೇವೆ ಎಂದು ಅವರು ಗುಡುಗಿದರು.

ಸಭೆಯ ನಂತರ ಕಾಲೇಜಿನಿಂದ ಲಕ್ಷ್ಮೀ ಟಾಕೀಸ್ ವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ, ವಿರೋಧ ಪಕ್ಷಗಳ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನಗರಸಭೆ ಮಾಜಿ ಅಧ್ಯಕ್ಷೆ ಸುಂಕಮ್ಮ, ಮಂಡಲ ಅಲ್ಪಸಂಖ್ಯಾತರ ಅಧ್ಯಕ್ಷ ಇಮ್ತಿಯಾಜ್, ಮಹಿಳಾ ಮೋರ್ಚಾ ಅಧ್ಯಕ್ಷ ಉಮಾದೇವಿ, ಪ್ರಮುಖರಾದ ಪೂರ್ಣಿಮಾ, ಶೋಭಾ, ಶೈಲಜಾ ಭವಾನಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೀರಾಬಾಯಿ, ಮಾಧ್ಯಮ ಸಂಚಾಲಕಿ ಅನುರಾಧ, ಮಂಡಲ ಪ್ರಧಾನ ಕಾರ್ಯದರ್ಶಿ ಮಧುರ ಚನ್ನ ಶಾಸ್ತ್ರಿ, ನಟರಾಜ್, ಗೌಳಿ ಬಸವರಾಜ್ ಮತ್ತಿತರರು ಉಪಸ್ಥಿತರಿದ್ದರು.

ಡಾ.ರಾಜ್ ಬದುಕು ಯುವಕರಿಗೆ ಆದರ್ಶ: ಶಾಸಕ



ಯಾದಗಿರಿ: ಕನ್ನಡ ಚಿತ್ರರಂಗದ ಧ್ರುವತಾರೆ, ವರನಟ, ಡಾ. ರಾಜ್‌ಕುಮಾರ್ ಅವರು ಕೇವಲ ನಟರಾಗಿರದೆ, ಕನ್ನಡ ನೆಲ ಹಾಗೂ ಭಾಷೆಯ ಉಳಿವಿಗಾಗಿ ಹೋರಾಟ ನಡೆಸಿದ ಮೇರು ವ್ಯಕ್ತಿತ್ವದ ನಟರು ಎಂದು ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಹೇಳಿದರು.

ಶನಿವಾರ ನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಸಭಾ ಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಡಾ.ರಾಜ್ ಕುಮಾರ್ ಜಯಂತ್ಯೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಡಾ. ರಾಜ್ ಕುಮಾರ್ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಗಾಜನೂರಿನ ಸಣ್ಣ ಹಳ್ಳಿಯಿಂದ ಬಂದು ರಾಜ್ಯ, ರಾಷ್ಟ್ರ ,ವಿಶ್ವದಲ್ಲಿ ಖ್ಯಾತಿ ಪಡೆದ ಡಾ.ರಾಜ್ ಅವರ ಸಾಧನೆ ಇಂದಿನ ಪೀಳಿಗೆಗೆ ಮಾದರಿಯಾಗಿದೆ. ವಿಶೇಷವಾಗಿ ಮಹಿಳೆಯರಿಗೆ ಸ್ಫೂರ್ತಿಯಾಗಿದ್ದ ಅವರು ತಮ್ಮ ಪತ್ನಿ ಪಾರ್ವತಮ್ಮ ರಾಜ್ ಕುಮಾರ್ ಅವರೊಂದಿಗೆ ಪ್ರೀತಿ , ವಾತ್ಸಲ್ಯದಿಂದ ಇದ್ದ,ಅವರ ಒಳ್ಳೆಯ ಗುಣಗಳು ಹಾಗೂ ಕನ್ನಡ ಭಾಷೆ ಉಳಿವಿಗಾಗಿ ಆರಂಭಿಸಿದ ಗೋಕಾಕ್ ಚಳುವಳಿ ಅಂಗವಾಗಿ ಯಾದಗಿರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ತಾವು ಡಾ.ರಾಜ್ ರೊಂದಿಗೆ ಭೇಟಿಯಾದ ಕ್ಷಣಗಳನ್ನು ಶಾಸಕರು ಸ್ಮರಿಸಿದರು.

ಡಾ. ರಾಜಕುಮಾರ ಅವರ ಭಾಷಾ ಪ್ರೇಮ, ಗೋಕಾಕ್ ಚಳವಳಿಯ ನೇತೃತ್ವ ಹಾಗೂ ಅವರು ಸಮಾಜಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ ಎಂದ ಅವರು ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ,ಗೌರವ ಡಾಕ್ಟರೇಟ್ ಪದವಿ, ಪದ್ಮಭೂಷಣ , ರಾಷ್ಟ್ರ ಪ್ರಶಸ್ತಿಗಳನ್ನು ಪಡೆದ ಕರ್ನಾಟಕದ ಹೆಮ್ಮೆಯ ಸುಪುತ್ರರಾಗಿದ್ದಾರೆ.

■ ಚನ್ನಾರಡ್ಡಿ ಪಾಟೀಲ್ ಶಾಸಕ

ಉಪನ್ಯಾಸ ನೀಡಿದ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ರಾಜು ಭಾವಿಹಳ್ಳಿ ಅವರು ಕನ್ನಡ ಭಾಷಾ ರಕ್ಷಣೆಗಾಗಿ ನಡೆದ ಗೋಕಾಕ್ ಚಳವಳಿಯ ಮುಂಚೂಣಿ ನಾಯಕರಾಗಿ ಕನ್ನಡದ ಕಿಚ್ಚನ್ನು ಮನೆಮನಗಳಲ್ಲಿ ಹಚ್ಚಿದರು. ಈ ಚಳವಳಿಯು ತನ್ನ ತಾಯ್ನಾಡಿಗೆ ಸೇವೆ ಎಂದು ಭಾವಿಸಿದ್ದ ಡಾ.ರಾಜ್ ಕುಮಾರ್ ಅವರು ಬೇಡರ ಕಣ್ಣಪ್ಪ ಪ್ರಥಮ ಚಲನಚಿತ್ರ ರಾಷ್ಟ್ರ ಪ್ರಶಸ್ತಿಗೆ ಭಾಜನವಾಯಿತು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಹರೀಶ್ ರಾಥೋಡ್ ಉಪಸ್ಥಿತರಿದ್ದರು. ಹಿರಿಯ ಸಹಾಯಕ ನಿರ್ದೇಶಕರು ಸುಲೈಮಾನ್ ನದಾಫ್ ಸ್ವಾಗತಿಸಿದರು. ಗುರುಪ್ರಸಾದ್ ವೈದ್ಯ ನಿರೂಪಿಸಿ, ಕೊನೆಯಲ್ಲಿ ವಂದಿಸಿದರು.

ಪಿಎಸ್‌ಐ ವರ್ಗಾವಣೆ: ಮುಖಂಡರಿಂದ ಸನ್ಮಾನ

ಹಗರಿಬೊಮ್ಮನಹಳ್ಳಿ: ಪಟ್ಟಣದ ಪೋಲಿಸ್ ಠಾಣೆಯ ಪಿಎಸ್‌ಐ ಬಸವರಾಜ್ ಅಡವಿಬಾವಿ ಅವರು ರಾಯಚೂರು ಜಿಲ್ಲೆಗೆ ವರ್ಗಾವಣೆ ಹಿನ್ನೆಲೆಯಲ್ಲಿ ಪಿಎಸ್‌ಐ ಬಸವರಾಜ ಅಡವಿ ಬಾವಿ ಅವರನ್ನು ಸ್ಥಳೀಯ ಜನಪ್ರತಿನಿಧಿಗಳ ಮುಖಂಡರು ಸನ್ಮಾನಿಸಿ ಬೀಳ್ಕೊಟ್ಟರು.

ವಾಲ್ಮೀಕಿ ಸಮಾಜದ ಅಧ್ಯಕ್ಷ ಪುರಸಭೆ ಸದಸ್ಯ ಪವಾಡಿ ಹನುಮಂತಪ್ಪ, ಪುರಸಭೆ ಸದಸ್ಯ ಗಣೇಶ್ ಮುಖಂಡರಾದ, ಸರೆಗಾರ ಹುಚ್ಚಪ್ಪ, ಡಿಶ್ ಮಂಜುನಾಥ್. ಅಂಬೇಡ್ಕರ್ ಸಂಘದ ಅಧ್ಯಕ್ಷ ದೊಡ್ಡಬಸಪ್ಪ ಗದ್ದಿಕೇರಿ, ಕರೀಂ ಸಾಬ್, ಮಹೇಶ್ ಎ., ಬೆಣಕಲ್ ಪ್ರಕಾಶ್, ಲೋಕಪ್ಪ, ನಿಂಗಪ್ಪ, ಬುಳ್ಳಪ್ಪ, ದಶಮಾಪುರ ಬಸವರಾಜ್, ಫಾರೆಸ್ಟ್ ಮುತ್ತೂರು ಪೂಜಾರಪ್ಪ ಇತರರಿದ್ದರು.



ಭಗೀರಥ ಜಯಂತಿ ಆಚರಣೆಗೆ ನಿರ್ಲಕ್ಷ್ಯ: ಆರೋಪ



ಕುಷ್ಟಗಿ: ಪಟ್ಟಣದ ಪಿಕಾರ್ಡ್ ಬ್ಯಾಂಕ್‌ನಲ್ಲಿ ಮಹರ್ಷಿ ಭಗೀರಥ ಜಯಂತಿ ಆಚರಣೆಗೆ ದಿವ್ಯ ನಿರ್ಲಕ್ಷ್ಯ ತೋರಿದ್ದಾರೆ. ತಾಲೂಕಾಡಳಿತ ಸೂಕ್ತ ಕ್ರಮ ವಹಿಸಲು ಮುಂದಾಗಬೇಕು ಎಂದು ಉಪ್ಪಾರ ಭಗೀರಥ ಸಮಾಜದ ಯುವ ಘಟಕದ ಅಧ್ಯಕ್ಷ ಪುಂಡಲೀಕಪ್ಪ ಜೂಲಕಟ್ಟಿ ಆಗ್ರಹಿಸಿದ್ದಾರೆ.

ಇಲ್ಲಿನ ಹಳೆ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಂಗಳವಾರ ಮಾತನಾಡಿದರು. ಕಳೆದ ವರ್ಷವೂ ಅರಣ್ಯ ಇಲಾಖೆ ಕಚೇರಿಯಲ್ಲಿ ಮಹರ್ಷಿಯರ ಜಯಂತ್ಯುತ್ಸವ ಆಚರಿಸಿಲ್ಲ. ತಾಲೂಕಾಡಳಿತ ಸೂಕ್ತ ಆದೇಶ ಹೊರಡಿಸಿ ಮಹಾನ್ ವ್ಯಕ್ತಿಗಳ ಜಯಂತಿ ಆಚರಣೆಗೆ ಕ್ರಮ ವಹಿಸಬೇಕು ಎಂದು ಪೂರ್ವಭಾವಿ ಸಭೆಯಲ್ಲಿ ಸಮಾಜದ ಮುಖಂಡರು ತಿಳಿಸಿದ್ದೇವೆ. ಆದರೆ ಇಂತಹ ಮಹಾನ್ ವ್ಯಕ್ತಿಗಳ ಜಯಂತ್ಯೋತ್ಸವಕ್ಕೆ ಅವಮಾನಿಸಲಾಗಿದೆ. ಅಲ್ಲದೇ ಪಿಕಾರ್ಡ್ ಬ್ಯಾಂಕ್‌ನಲ್ಲಿ ಮಹರ್ಷಿ ವ್ಯಕ್ತಿಗಳ ಪೋಟೊಕ್ಕೆ ಪೂಜೆ ಸಲ್ಲಿಸಿ ಆಚರಿಸಬೇಕಾದ ಕಾರ್ಯಕ್ರಮವನ್ನು ಸಂಪೂರ್ಣ ನಿರ್ಲಕ್ಷ್ಯ ತೋರಿದ್ದು, ಇಡೀ ಸಮಾಜ ಖಂಡಿಸುತ್ತಿದೆ. ಇನ್ನೊಂದೆ ತಾಲೂಕಾಧಿಕಾರಿಗಳ ಕಚೇರಿಯಲ್ಲಿ ಕಡ್ಡಾಯವಾಗಿ ಮಹಾನ್ ವ್ಯಕ್ತಿಗಳ ಜಯಂತಿ ಕಾಟಾಚಾರಕ್ಕೆ ಮಾಡಿದ್ದು, ಸರಕಾರದ ಆದೇಶ ಹೊರಡಿಸಿ ಜಯಂತಿ ಅನೇಕ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳಬೇಕು. ಕೂಡಲೇ ಅಂತಹವರ ವಿರುದ್ಧ ಶಿಸ್ತು ಕ್ರಮಕೈಗೊಳ್ಳಬೇಕು. ಒಂದು ವೇಳೆ ಕ್ರಮ ವಹಿಸಿದ್ದರೆ ತಾಲೂಕಿನದ್ಯಾಂತ ಉಗ್ರ ಹೋರಾಟ ನಡೆಸಲಾಗುವುದು ಎಚ್ಚರಿಕೆ ನೀಡಿದ್ದಾರೆ.

ತಾಲೂಕಾಧ್ಯಕ್ಷ ಸಂಗಪ್ಪ ಭಾವಿಕಟ್ಟಿ, ಪ್ರಧಾನ ಕಾರ್ಯದರ್ಶಿ ಮಂಜುನಾಥ ಕೆಬಿ, ಮುಖಂಡರಾದ ಚಂದ್ರು ಹಾವರಗಿ, ನಾಗರಾಜ ಉಪ್ಪಾರ ವಕೀಲರು, ಶಿವು ಹಿರೇಮನಿ, ಅಮರೇಶ ನಾಗರಾಳ, ಮೈಲಾರಪ್ಪ ಮಂತ್ರಿ ಇತರರಿದ್ದರು.

ಡಾ.ರಾಜ್ ಸಿನೇಮಾಗಳಲ್ಲಿ ಉತ್ತಮ ಜೀವನ ಸಂದೇಶ

ಕೊಪ್ಪಳ: ಡಾ.ರಾಜಕುಮಾರ ಅವರು ನಟಿಸಿದ ಚಲನಚಿತ್ರಗಳಲ್ಲಿ ಪ್ರೇಕ್ಷಕರಿಗೆ ಮನರಂಜನೆ ಜೊತೆಗೆ ಉತ್ತಮ ಜೀವನ ಸಂದೇಶವಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ಹೇಳಿದರು.

ಡಾ.ರಾಜ್‌ಕುಮಾರ್ ಅವರ 97ನೇ ಜನ್ಮ ದಿನಾಚರಣೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕೊಪ್ಪಳ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 24 ರಂದು ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ ಆಯೋಜಿಸಲಾಗಿದ್ದ ರಾಜ್ ಸಂಭ್ರಮ-2026 ಡಾ. ರಾಜ್‌ಕುಮಾರ್ ರವರ ಚಲನಚಿತ್ರ ಗೀತೆಗಳ ಗಾಯನ ಮತ್ತು ಡಾ. ರಾಜ್‌ಕುಮಾರ್ ಅವರ ಸಿನೇಮಾಗಳ ಡೈಲಾಗ್ (ಮಿಮಿಕ್ರಿ) ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ರಾಜಕುಮಾರ ಅವರು ನಾಡು-ನುಡಿಯ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಗೋಕಾಕ್ ಚಳವಳಿ ಸೇರಿದಂತೆ ಅನೇಕ ಕನ್ನಡಪರ ಹೋರಾಟಗಳಲ್ಲಿ ಭಾಗವಹಿಸಿದ್ದಾರೆ ಎಂದರು.



ಕರ್ನಾಟಕ ಚಲನಚಿತ್ರ ಅಕಾಡೆಮಿ ಸದಸ್ಯರು ಹಾಗೂ ಲೇಖಕಿ ಸಾವಿತ್ರಿ ಮುಜುಮದಾರ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಡಾ. ರಾಜ್‌ಕುಮಾರ್ ಅವರು ಕನ್ನಡದ ಅಸ್ಮಿತೆ. ಪ್ರಭಾವಿ ನಟರಾಗಿ ಸುಮಾರು ನಾಲ್ಕು ದಶಕಗಳಿಗೂ ಅಧಿಕ ಕಾಲ ಚಿತ್ರರಂಗದಲ್ಲಿ ತಮ್ಮದೆ ಆದ ಛಾಪು ಮೂಡಿಸಿದ್ದರು. ರಾಜ್ ಕುಮಾರ್ ಅವರು ಕೇವಲ ನಟರಾಗದೇ ಗೋಕಾಕ್ ಚಳುವಳಿ ಸೇರಿದಂತೆ ಅನೇಕ ಹೋರಾಟಗಳಲ್ಲಿ ಭಾಗಿಯಾಗಿ ಕನ್ನಡ ಚಿತ್ರರಂಗಕ್ಕೆ ಮಾದರಿಯಾಗಿದ್ದಾರೆ ಎಂದರು.

ಕನ್ನಡ ಪರ ಹೋರಾಟಗಾರರಾದ ಮಹಾಂತೇಶ ಕೊತಬಾಳ ಹಾಗೂ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷರಾದ ಮಂಜುನಾಥ ಗೊಂಡಬಾಳ ಅವರು ಮಾತನಾಡಿದರು. ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಹೇಮಂತ್ ಕುಮಾರ್, ಹಿರಿಯ ಚಲನಚಿತ್ರ ಸಾಹಿತಿಗಳಾದ ಡಾ.ಮಹಾಂತೇಶ ಮಲ್ಲನಗೌಡ್ರ, ಹಿರಿಯ ಸಾಹಿತಿಗಳಾದ ಡಾ. ಅಲ್ಲಮಪ್ರಭು ಬೆಟ್ಟದೂರು, ಕನ್ನಡ ಪರ ಹೋರಾಟಗಾರರಾದ ಮಂಜುನಾಥ ಸುತ್ತೂರು, ಡಿವೈಎಸ್ಪಿ ಮುತ್ತಣ್ಣ ಸವರಗೋಳ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕೊಪ್ಪಳ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕರಾದ ಗವಿಸಿದ್ದಪ್ಪ ಹೊಸಮನಿ ಅವರು ಸ್ವಾಗತಿಸಿದರು. ಗ್ರಂಥಾಲಯ ಇಲಾಖೆಯ ನಾಗರಾಜನಾಯಕ ಡೊಳ್ಳಿನ್ ಅವರು ನಿರೂಪಿಸಿದರು.

ಸನ್ಮಾನ

ಗೋಕಾಕ್ ಚಳವಳಿ ಸಂದರ್ಭದಲ್ಲಿ ಡಾ.ರಾಜ್‌ಕುಮಾರ್ ಅವರೊಂದಿಗೆ ಭಾಗವಹಿಸಿದ ಅನೇಕ ಮಹನಿಯರ ಪೈಕಿ ಮಂಚೂಣಿಯಲ್ಲಿದ್ದ ಕೆಲ ಹೋರಾಟಗಾರರಿಗೆ, ಕನ್ನಡಪರ ಸಂಘಟಕರಿಗೆ ಚಲನಚಿತ್ರ ಅಕಾಡೆಮಿಯಿಂದ ಸನ್ಮಾನಿಸಲಾಯಿತು.

4 ಹೊಸ ಕೋರ್ಸ್ ಆರಂಭಿಸಲು ಎಐಸಿಟಿಇ ಅನುಮತಿ

ಕಲಬುರಗಿ: ಕಲಬುರಗಿ ನಗರದ ಶರಣಬಸವ ವಿಶ್ವವಿದ್ಯಾಲಯದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷ 2026–27ರಿಂದ ತಾಂತ್ರಿಕ ಶಿಕ್ಷಣದ ಉದಯೋನ್ಮುಖ ಕ್ಷೇತ್ರಗಳಲ್ಲಿ ಎರಡು ಹೊಸ ಪದವಿ ಮತ್ತು ಎರಡು ಸ್ನಾತಕೋತ್ತರ ಎಂಜಿನಿಯರಿಂಗ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಅನುಮೋದನೆ ನೀಡಿದೆ.

ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಅನಿಲಕುಮಾರ ಬಿಡವೆ ಶನಿವಾರ ಪತ್ರಿಕಾ ಪ್ರಕಟಣೆ ಹೊರಡಿಸಿ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ವಿಶ್ವವಿದ್ಯಾಲಯಕ್ಕೆ ನೀಡಿದ ತನ್ನ ಸಂವಹನದಲ್ಲಿ, ಈ ಶೈಕ್ಷಣಿಕ ವರ್ಷದಿಂದ 18 ವಿದ್ಯಾರ್ಥಿಗಳ ಪ್ರವೇಶದೊಂದಿಗೆ ಸೈಬರ್ ಸೆಕ್ಯುರಿಟಿಯಲ್ಲಿ ಎಂ.ಟೆಕ್ ಸ್ನಾತಕೋತ್ತರ ಕೋರ್ಸ್ ಮತ್ತು 18 ವಿದ್ಯಾರ್ಥಿಗಳ ಪ್ರವೇಶದೊಂದಿಗೆ ಪವರ್ ಸಿಸ್ಟಮ್ ಮತ್ತು ಪವರ್ ಎಲೆಕ್ಟ್ರಾನಿಕ್ಸ್‌ನಲ್ಲಿ ಎಂ.ಟೆಕ್ ಸ್ನಾತಕೋತ್ತರ ಕೋರ್ಸ್ ಪ್ರಾರಂಭಿಸಲು ವಿಶ್ವವಿದ್ಯಾಲಯಕ್ಕೆ ಅನುಮತಿ ನೀಡಿದೆ ಎಂದು ತಿಳಿಸಿದರು.

ಎಐಸಿಟಿಇ ಶರಣಬಸವ ವಿಶ್ವವಿದ್ಯಾಲಯವು 60 ವಿದ್ಯಾರ್ಥಿಗಳ ಪ್ರವೇಶದೊಂದಿಗೆ ಬಿ.ಟೆಕ್ ಇನ್ ಕಂಪ್ಯೂಟರ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆ್ಯಂಡ್ ಮೆಷಿನ್ ಲರ್ನಿಂಗ್) ಮತ್ತು 60 ವಿದ್ಯಾರ್ಥಿಗಳ ಪ್ರವೇಶದೊಂದಿಗೆ ಬಿ.ಟೆಕ್ ಇನ್ ಕಂಪ್ಯೂಟರ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ಸೇರಿದಂತೆ



ಎರಡು ಹೊಸ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡಿದೆ ಎಂದರು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಅನುಮತಿಸಿದ ಎಲ್ಲಾ ನಾಲ್ಕು ಹೊಸ ಕೋರ್ಸ್‌ಗಳು, ಸೈಬರ್ ಸೆಕ್ಯೂರಿಟಿ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆ್ಯಂಡ್ ಮೆಷಿನ್ ಲರ್ನಿಂಗ್‌ನಂತಹ ಉದಯೋನ್ಮುಖ ಕ್ಷೇತ್ರಗಳಲ್ಲಿ ವೃತ್ತಿಪರರಿಗೆ ಅವಕಾಶ ಒದಗಿಸುತ್ತವೆ. ಮತ್ತು ಈ ಉದಯೋನ್ಮುಖ ಕ್ಷೇತ್ರಗಳಲ್ಲಿ ಉದ್ಯಮದ ಬೇಡಿಕೆ ಪೂರೈಸಲು ಬಯಸುವ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಅವಕಾಶ ಒದಗಿಸುತ್ತದೆ. ಈ ಉದಯೋನ್ಮುಖ ಕ್ಷೇತ್ರಗಳಲ್ಲಿ ಸಂಪೂರ್ಣವಾಗಿ ತಾಂತ್ರಿಕ ಜ್ಞಾನ ಹೊಂದಿರುವ ವಿದ್ಯಾರ್ಥಿಗಳು ಉದ್ಯಮದ ಬೇಡಿಕೆ ಪೂರೈಸಲು ಮುಂದಾಗುತ್ತಾರೆ.

ಇದು ಸೈಬರ್ ಸೆಕ್ಯೂರಿಟಿ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆ್ಯಂಡ್ ಮೆಷಿನ್ ಲರ್ನಿಂಗ್‌ನ ಕ್ಷೇತ್ರಗಳಲ್ಲಿ ನೇಮಕಾತಿ ನಂತರ ಎಂಜಿನಿಯರಿಂಗ್ ಪದವೀಧರರಿಗೆ ಅಗತ್ಯ ತರಬೇತಿ ಒದಗಿಸಲಿದೆ ಎಂದರು.

ಈ ಹೊಸ ಕೋರ್ಸ್‌ಗಳ ಜೊತೆಗೆ, ವಿದ್ಯಾರ್ಥಿಗಳ ಪ್ರಮುಖ ಉದಯೋನ್ಮುಖ ಕ್ಷೇತ್ರಗಳಲ್ಲಿ ಕೌಶಲ್ಯ ಹೆಚ್ಚಿಸಲು ಮತ್ತು ಅವರ ಉದ್ಯೋಗಾವಕಾಶ ಹೆಚ್ಚಿಸಲು ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್ (ಬಿ.ಸಿ.ಎ.)ನಲ್ಲಿ ಸೈಬರ್ ಸೆಕ್ಯೂರಿಟಿ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆ್ಯಂಡ್ ಮೆಷಿನ್ ಲರ್ನಿಂಗ್ ಈ ಎರಡು ವಿಶೇಷತೆಗಳನ್ನು ಪರಿಚಯಿಸಲು ವಿಶ್ವವಿದ್ಯಾಲಯ ನಿರ್ಧರಿಸಿದೆ ಎಂದು ಹೇಳಿದರು.

ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ, ಕುಲಸಚಿವೆ ಡಾ. ಲಕ್ಷ್ಮೀ ಪಾಟೀಲ್ ಮಾಕಾ, ಕುಲಸಚಿವ (ಮೌಲ್ಯಮಾಪನ) ಡಾ.ಎಸ್.ಎಚ್.ಹೊನ್ನಳ್ಳಿ ಮತ್ತು ಹಣಕಾಸು ಅಧಿಕಾರಿ ಡಾ.ಕಿರಣ್ ಮಾಕಾ ಕೂಡ ಹೊಸ ಕೋರ್ಸ್‌ಗಳಿಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ಅನುಮೋದನೆ ಪಡೆದಿದ್ದಕ್ಕಾಗಿ ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ಶ್ಲಾಘಿಸಿದರು.

ವಿದ್ಯಾರ್ಥಿಗಳಿಗೆ ಸಹಾಯ

9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪಾಜಿ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಮಾತೋಶ್ರೀ ಡಾ.ದಾಕ್ಷಾಯಿಣಿ ಅವ್ವಾಜಿ, ಈ ಹೊಸ ಕೋರ್ಸ್ ಪ್ರಾರಂಭಿಸಲು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ಅಗತ್ಯ ಅನುಮೋದನೆ ಪಡೆದಿದ್ದಕ್ಕಾಗಿ ವಿವಿ ಅಧಿಕಾರಿಗಳನ್ನು ಅಭಿನಂದಿಸಿದ್ದಾರೆ. ವಿದ್ಯಾರ್ಥಿಗಳಿಗೆ ವೃತ್ತಿಪರ ಶಿಕ್ಷಣದ ಉದಯೋನ್ಮುಖ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಸಹಾಯ ಮಾಡುತ್ತದೆ ಎಂದಿದ್ದಾರೆ.

ಪಾಲಿಕೆಯಿಂದ ಬ್ಯಾನರ್ ತೆರವು: ಭಕ್ತರ ಪ್ರತಿಭಟನೆ

ರಾಯಚೂರು: ದೇವಸ್ಥಾನದಲ್ಲಿನ ಪೂಜಾ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹಾಕಲಾದ ಬ್ಯಾನರಿಗೆ ಸಂಬಂಧಿಸಿದಂತೆ ನಗರಸಭೆ ಅಧಿಕಾರಿ ಹಾಗೂ ಸಿಬ್ಬಂದಿ ಆಕ್ಷೇಪ ವ್ಯಕ್ತಪಡಿಸಿ ಬ್ಯಾನರನ್ನು ತೆರವುಗೊಳಿಸುವುದಕ್ಕೆ ಮುಂದಾಗಿರುವುದನ್ನು ಖಂಡಿಸಿ ಭಕ್ತರು ದೇವಸ್ಥಾನದ ಎದಿರು ಪ್ರತಿಭಟನೆ ಮಾಡಿದ ಘಟನೆ ಶನಿವಾರ ಜರುಗಿದೆ.



ನಗರದ ಆರ್ಯವೈಶ್ಯ ಸಮುದಾಯ ಶ್ರೀ ನಗರೇಶ್ವರ ದೇವಸ್ಥಾನದಲ್ಲಿ ಕಳೆದ ಕೆಲ ದಿನಗಳಿಂದ ಕುಲದೇವತೆ ವಾಸವಿ ದೇವಿಯ ಜಯಂತಿ ಆಚರಿಸುತ್ತಿದ್ದರು. ಈ ಸಮುದಾಯ ನಿರಂತರ ಒಂದು ವಾರಗಳ ವಿವಿಧ ಕಾರ್ಯಕ್ರಮ ಆಯೋಜನೆ ಮಾಡುತ್ತಾರೆ. ಈ ಸಂದರ್ಭದಲ್ಲಿ ಕಾರ್ಯಕ್ರಮ ಹಾಗೂ ಅಭಿನಂದನಾ ಪೂರ್ವಕವಾದ ಕೆಲ ಫ್ಲೆಕ್ಸ್‌ಗಳನ್ನು ದೇವಸ್ಥಾನದ ಒಳಗಡೆ ಸಮುದಾಯದ ಬಾಂಧವರು ಹಾಕಿದ್ದಾರೆ.

ಆದರೆ, ಶನಿವಾರ ಬೆಳಗ್ಗೆ ಮಹಾನಗರ ಪಾಲಿಕೆ ಅಧಿಕಾರಿಯೋರ್ವರು ಹಾಗೂ ಕೆಲ ಸಿಬ್ಬಂಧಿಗಳು ಆಗಮಿಸಿ ನೀವು ಅನುಮತಿ ಪಡೆದುಕೊಳ್ಳದೇ ಫ್ಲೆಕ್ಸ್‌ಗಳನ್ನು ಹಾಕಿದ್ದೀರಿ ಇವುಗಳನ್ನು ತೆರವುಗೊಳಿಸಿ ಇಲ್ಲದಿದ್ದರೆ ನಾವೇ ತೆರವುಗೊಳಿಸುತ್ತೇವೆ ಎಂದು ಹೇಳಿ ಆ ಫ್ಲೆಕ್ಸ್‌ಗಳನ್ನು ತೆರವುಗೊಳಿಸುವುದಕ್ಕೆ ಮುಂದಾಗಿದ್ದಾರೆ.

ಫ್ಲೆಕ್ಸ್ ತೆರವುಗೊಳಿಸುವುದನ್ನು ಆರ್ಯವೈಶ್ಯ ಸಮುದಾಯದ ಪ್ರಮುಖರು ಹಾಗೂ ಮಹಿಳೆಯರು ವಿರೋಧಿಸಿದ್ದಾರೆ. ಇವೆರೆಲ್ಲರ ವಿರೋಧವನ್ನು ಲೆಕ್ಕಿಸದೇ ಪಾಲಿಕೆಯ ಸಿಬ್ಬಂದಿಗಳು ಫ್ಲೆಕ್ಸ್‌ಗಳನ್ನು ತೆರವುಗೊಳಿಸುವುದಕ್ಕೆ ಮುಂದಾದಾಗ ಸಮಾಜದ ನೂರಾರು ಜನತೆ ಸೇರಿ ದೇವಸ್ಥಾನದ ಮುಂಭಾಗದಲ್ಲಿ ಪ್ರತಿಭಟನೆ ಮಾಡಲಾರಂಭಿಸಿ ಪಾಲಿಕೆ ವಿರುದ್ಧ ಘೋಷಣೆ ಕೂಗಲಾರಂಭಿಸಿದ್ದಾರೆ.

ಈ ವಿಷಯ ಸ್ಥಳೀಯ ಶಾಸಕ ಶಿವರಾಜ ಪಾಟೀಲ ಅವರಿಗೆ ತಿಳಿಯುತ್ತಿದ್ದಂತೆ ದೇವಸ್ಥಾನಕ್ಕೆ ಆಗಮಿಸಿ, ಪಾಲಿಕೆಯ ಸಿಬ್ಬಂದಿಗಳು ಅನಕ್ಷೇಪಿತ ಮಾತುಗಳನ್ನು ಆಡಿಸುವುದು ಸರಿಯಾದುದಲ್ಲ, ನೀವು ಪ್ರತಿಭಟನೆ ಮಾಡಿದರೂ, ಘೋಷಣೆಗಳನ್ನು ಕೂಗಿದರೂ ನಾವು ತೆರವುಗೊಳಿಸಿಯೇ ತೀರುತ್ತೇವೆ ಎಂದು ಹೇಳಿದ್ದು ಸರಿಯಾದುದಲ್ಲ, ಇದು ಯಾವುದೇ ರಾಜಕೀಯ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹಾಕಲಾದ ಬ್ಯಾನರುಗಳಲ್ಲ, ದೇವರ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹಾಕಲಾಗಿರುವವು ಈ ವಿಷಯವನ್ನು ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಆರ್ಯವೈಶ್ಯ ಸಮುದಾಯ ಹಿರಿಯರು, ಪ್ರಮುಖರೊಂದಿಗೆ ಚರ್ಚಿಸಿ ಶಾಂತವಾಗಿ ಇತ್ಯರ್ಥ ಮಾಡಬಹುದಾಗಿತ್ತು ಎಂದು ಹೇಳಿದರು.

ಆರ್ಯವೈಶ್ಯ ಸಮಾಜ ಶ್ರೀ ನಗರೇಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷ ಸಾವಿತ್ರಿ ಪುರುಷೋತ್ತಮ ಮಾತನಾಡಿ, ಪಾಲಿಕೆಯ ಅಧಿಕಾರಿಗಳ ಮಾತುಗಳು ಸಮುದಾಯದ ಜನರಿಗೆ ನೋವು ತಂದಿದೆ ಇದನ್ನು ಯಾರೂ ಸಹಿಸುವುದಿಲ್ಲ ಕೂಡಲೇ ಪಾಲಿಕೆ ಅಧಿಕಾರಿ ರಾಜಕುಮಾರ, ಸಿಬ್ಬಂದಿ ನರಸಿಂಹಲು ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ಪಾಲಿಕೆಯ ಸದಸ್ಯರಾದ ಈ.ಶಶಿರಾಜ, ಸಾಜಿದ್ ಸಮೀರ್ ಮತ್ತು ಕಡಗೋಲು ಆಂಜನೇಯ, ಪೊಲೀಸರು, ಮಹಾನಗರ ಪಾಲಿಕೆಯ ವಲಯ ಆಯುಕ್ತ ಮಲ್ಲಿಕಾರ್ಜುನ ಆಗಮಿಸಿ ಸಮಸ್ಯೆಯನ್ನು ತಿಳಿಗೊಳಿಸಿದರು.

ದೇವಸ್ಥಾನ ಕಾರ್ಯದರ್ಶಿ ಸಿ.ಪದ್ಮರಾಜ, ಸಮಾಜದ ಪ್ರಮುಖರಾದ ಜಟ್ಟಂ ಪದ್ಮರಾಜ, ಬಿ.ಗೋವಿಂದ, ಪಲುಗುಲ ನಾಗರಾಜ, ಗಾಣದಾಳ ಲಕ್ಷ್ಮೀಪತಿ, ಹಿಂಗೋಲಿ ಅಶೋಕ, ತೋರಣಾಳ ವೀಣಾ ಮಾನಾಡಿದರು. ಈ ಸಂದರ್ಭದಲ್ಲಿ ಆರ್ಯವೈಶ್ಯ ಸಮುದಾಯದವರು ಪಾಲಿಕೆಯ ಆಯುಕ್ತ ಮಲ್ಲಿಕಾರ್ಜುನ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡ್ಲಿ (ಕೆಂಪು)	1,510	5,469
ಕಡ್ಲಿ (ಬಿಳಿ)	5,589	5,705
ಉದ್ದು	4,111	7,111
ಹೆಸರು	1,209	7,489
ಜೋಳ	1,417	4,610
ಅಲಸಂಧಿ	1,510	5,515
ಮಡಿಕೆ	13,529	13,737
ಗೋವಿನಜೋಳ	1,611	1,866
ಸಾಸಿವೆ	4,229	4,329
ನವಣೆ	3,029	3,029
ಕುಸುಬಿ	5,449	5,776
ಸೋಯಾಬಿನ್	4,859	5,919
ತೊಗರಿ	4,229	4,459
ಗೋಧಿ	2,206	5,555
ಅವರೆ	2,012	6,635
ಬಟಾಣಿ	5,052	5,052
ಶೇಂಗಾ	4,870	8,010
ಮೆಣಸಿನಕಾಯಿ	4,200	56,020

ಬಾವಿಯಲ್ಲಿ ಬಿದ್ದ ಆಕಳ ಕರು ರಕ್ಷಣೆ

ಅಂಕೋಲಾ: ಪಟ್ಟಣದ ಲಕ್ಷ್ಮೇಶ್ವರ ಭಟ್ಟರಭಾಗದ ಮನೆಯೊಂದರ



ಆವರಣದಲ್ಲಿರುವ ಬಾವಿಯಲ್ಲಿ ಆಯ ತಪ್ಪಿ ಬಿದ್ದ ಆಕಳ ಕರುವನ್ನು ಅಗ್ನಿಶಾಮಕ ದಳದ ಸಿಬ್ಬಂದಿಗಳು ಸುರಕ್ಷಿತವಾಗಿ ಮೇಲೆತ್ತಿ ರಕ್ಷಣೆ ಮಾಡಿದ್ದಾರೆ.

ನೆಲಸಮ ಬಾವಿಯಲ್ಲಿ ಆಕಳ ಕರು ಬಿದ್ದು ಕೂಗುತ್ತಿರುವುದನ್ನು ಗಮನಿಸಿದ ಸ್ಥಳೀಯ ಜನರು ಅಗ್ನಿಶಾಮಕ ಠಾಣೆಗೆ ಕರೆ ಮಾಡಿ ವಿಷಯ ತಿಳಿಸಿದ್ದು, ಸಾರ್ವಜನಿಕರ ಕರೆಯ ಮೇರೆಗೆ ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ದಳದ ಸಿಬ್ಬಂದಿಗಳು ಬಾವಿಗೆ ಇಳಿದು ಆಕಳ ಕರುವಿಗೆ ಬೆಲ್ಟ್ ಕಟ್ಟಿ ಮೇಲೆತ್ತಿ ರಕ್ಷಿಸಿದರು. ಅಗ್ನಿಶಾಮಕ ಸಿಬ್ಬಂದಿಗಳ ಕಾರ್ಯಕ್ಕೆ ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಆರೋಪಿಗಳಿಬ್ಬರ ಬಂಧನ

ಬೆಳಗಾವಿ: ಜಿಲ್ಲೆಯ ಅಥಣಿ ತಾಲೂಕಿನ ಬಳ್ಳಿಗೇರಿ ಗ್ರಾಮದ ಬಳಿ ಇರುವ ಪ್ರಶಾಂತ್ ಹೋಟೆಲ್ ಮತ್ತು ಲಾಡ್ಜ್ ಮೇಲೆ ಪೊಲೀಸರು ದಾಳಿ ಮಾಡಲಾಗಿದೆ.





ಲಾಡ್ಜ್‌ನಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದ್ದ ಬಗ್ಗೆ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದ್ದು, ಈ ಅಕ್ರಮ ವೇಶ್ಯಾವಾಟಿಕೆ ದಂಧೆಗೆ ಸಂಬಂಧಿಸಿದಂತೆ ಲಾಡ್ಜ್ ಮಾಲೀಕ ಸರದಾರ ಕಾಂಬಳೆ ಮತ್ತು ಪ್ರವೀಣ ಮಲ್ಲಾರಿ ಎಂಬ ಇಬ್ಬರು ವ್ಯಕ್ತಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ದಾಳಿಯ ಸಮಯದಲ್ಲಿ ಲಾಡ್ಜ್‌ನಲ್ಲಿ ಅಕ್ರಮವಾಗಿ ಇರಿಸಲಾಗಿದ್ದ ಓರ್ವ ಮಹಿಳೆಯನ್ನು ಪೊಲೀಸರು ಸುರಕ್ಷಿತವಾಗಿ ರಕ್ಷಿಸಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಅಥಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳನ್ನು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ.

ಮದುವೆ ದಿನವೇ ಮದುಮಗಳು ಪ್ರಿಯಕರನೊಂದಿಗೆ ಪರಾರಿ

ಶಿರಸಿ: ಮದುವೆ ನಿಗದಿಯಾಗಿದ್ದ ದಿನವೇ ಮದುಮಗಳು ತನ್ನ ಪ್ರಿಯಕರನೊಂದಿಗೆ ಪರಾರಿಯಾದ ಘಟನೆ ನಗರದ ಉಸುರಿ ರಸ್ತೆಯ ಕಲ್ಯಾಣ ಮಂಟಪವೊಂದರಲ್ಲಿ ಶನಿವಾರ ನಡೆದಿದೆ. ಮುಸ್ಲಿಂ ಗಲ್ಲಿಯ ಸಿಫಾ (25) ಪರಾರಿಯಾದ ಯುವತಿ. ಈಕೆ ಎಂಬಿಬಿಎಸ್ ಕಲಿಯುತ್ತಿರುವ ಯುವಕನನ್ನು ಪ್ರೀತಿಸುತ್ತಿದ್ದು, ಪಾಲಕರ ವಿರೋಧದ ನಡುವೆಯೂ ಇಂದು ಮದುವೆ ನಿಶ್ಚಯಿಸಲಾಗಿತ್ತು. ಆದರೆ, ಮದುವೆಯ ಕಾರ್ಯಕ್ರಮಗಳು ಆರಂಭವಾಗುವ ಮುನ್ನವೇ ವಧು ಪ್ರಿಯಕರನೊಂದಿಗೆ ನಾಪತ್ತೆಯಾಗಿದ್ದಾಳೆ. ಇದರಿಂದ ಮದುವೆಗಾಗಿ ಸಿದ್ಧಪಡಿಸಿದ್ದ ನೂರಾರು ಕೆಜಿ ಮಾಂಸದೂಟ ವ್ಯರ್ಥವಾದಂತಾಗಿದೆ. ನಾಪತ್ತೆಯಾದ ಮಗಳನ್ನು ಹುಡುಕಿಕೊಡುವಂತೆ ತಂದೆ ಝುಹೀರ್ ಖಾನ್ ನೀಡಿದ ದೂರಿನನ್ವಯ ಶಿರಸಿ ಮಾರುಕಟ್ಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಡಿಲು ಬಡಿದು ವೃದ್ಧ ಸಾವು

ಹಳಿಯಾಳ: ತಾಲೂಕಿನ ಬೆಳವಟಗಿ ಗ್ರಾಮದಲ್ಲಿ ಸಿಡಿಲು ಬಡಿದು ವೃದ್ಧ ಮೃತಪಟ್ಟ ಘಟನೆ ಶನಿವಾರ ನಡೆದಿದೆ. ಅಳ್ನಾವರದ ಕೋಗಿಲಗೇರಿಯ ಶಿವಾನಂದ ರುದ್ರಪ್ಪಾ ಅಂಗಡಿ (60) ಮೃತಪಟ್ಟ ದುರ್ದೈವಿ ಎಂದು ಗುರುತಿಸಲಾಗಿದೆ. ಮೃತನು ಮಾವಿನಕಾಯಿಯ ಮರಗಳ ಗುತ್ತಿಗೆ ಪಡೆದು ಮಾವಿನಕಾಯಿ ಬಿಡಿಸಿ ಮಾರುವ ಮಾರಾಟದ ಗುತ್ತಿಗೆದಾರನಾಗಿದ್ದ ಎನ್ನಲಾಗಿದೆ. ಈ ಕುರಿತು ಹಳಿಯಾಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ತನಿಖೆ ಜಾರಿಯಲ್ಲಿದೆ.

ಕೊಳೆತ ಸ್ಥಿತಿಯಲ್ಲಿ ಮೃತದೇಹ ಪತ್ತೆ


ಅಂಕೋಲಾ: ತಾಲೂಕಿನ ಅವರ್ಸಾದ ಕವಲಗದ್ದೆ ಕಾನಭಾಗದಲ್ಲಿ ಮನೆಯಲ್ಲಿ ಒಂಟಿಯಾಗಿ ವಾಸವಾಗಿದ್ದ ವ್ಯಕ್ತಿಯೋರ್ವ ಅನಾರೋಗ್ಯದಿಂದ ಮೃತಪಟ್ಟಿದ್ದು 20ದಿನಗಳ ನಂತರ ಮೃತದೇಹ ಕೊಳೆತು ಒಣಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಕಿಶೋರ ರೋಹಿದಾಸ ಬಾನಾವಳಿಕರ(38) ಮೃತ ವ್ಯಕ್ತಿಯಾಗಿದ್ದು, ಕ್ಷಯರೋಗ ಕಾಯಿಲೆಯಿಂದ ಬಳಲುತ್ತಿದ್ದ. ಈತ ವಿಪರೀತ ಸರಾಯಿ ಕುಡಿತದ ಚಟಕ್ಕೆ ಅಂಟಿಕೊಂಡಿದ್ದು ಐದು ವರ್ಷಗಳ ಹಿಂದೆ ತಾಯಿ ಮೃತಪಟ್ಟ ನಂತರ ಅವರ್ಸಾ ಕಾನಭಾಗದ ಮನೆಯಲ್ಲಿ ಒಂಟಿಯಾಗಿ ವಾಸವಾಗಿದ್ದ. ಕಾಯಿಲೆ ಉಲ್ಬಣಿಸಿ ಅಥವಾ ವಿಪರೀತ ಸರಾಯಿ ಕುಡಿತದಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಿ ಸುಮಾರು 20 ದಿನಗಳ ಹಿಂದೆ ಮನೆಯಲ್ಲಿ ಮೃತಪಟ್ಟ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಮೃತದೇಹ ಸಂಪೂರ್ಣ ಕೊಳೆತು ಹೋಗಿದ್ದು ಅಂಕೋಲಾ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತಂತೆ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಚಲಿಸುತ್ತಿದ್ದ ರೈಲಿನಿಂದ ಬಿದ್ದು ಸಾವು

ಸಿಂಧನೂರು: ಚಲಿಸುತ್ತಿದ್ದ ರೈಲಿನಲ್ಲಿ ಬಾಗಿಲಲ್ಲಿ ನಿಂತಿದ್ದ ಯುವಕನೊಬ್ಬ ಕಾಲು ಜಾರಿ ಬಿದ್ದು



ಮೃತಪಟ್ಟ ಘಟನೆ ತಾಲೂಕಿನ ಸಾಸಲಮರಿ ಕ್ಯಾಂಪ್ ಸಮೀಪ ಗುರುವಾರ ರಾತ್ರಿ ಸಂಭವಿಸಿದೆ. ಮೃತರನ್ನು ಕಸಬಾ ಲಿಂಗಸುಗೂರು ಗ್ರಾಮದ ಸುಮಂತಕುಮಾರ ತಂದೆ ಸೂಗಯಸ್ವಾಮಿ(30) ಎಂದು ಗುರುತಿಸಲಾಗಿದೆ. ಮಾಹಿತಿ ಪ್ರಕಾರ, ಸುಮಂತಕುಮಾರ ಸ್ನೇಹಿತರೊಂದಿಗೆ ಪ್ರವಾಸಕ್ಕೆ ತೆರಳಿ, ಹುಬ್ಬಳ್ಳಿಯಿಂದ ಸಿಂಧನೂರಿಗೆ ರೈಲಿನಲ್ಲಿ ಮರಳುತ್ತಿದ್ದರು. ಈ ವೇಳೆ ಸಾಸಲಮರಿ ಕ್ಯಾಂಪ್ ಸಮೀಪ ರೈಲು ಸಾಗುತ್ತಿದ್ದಾಗ ಬಾಗಿಲಲ್ಲಿ ನಿಂತಿದ್ದ ಅವರು ಕಾಲು ಜಾರಿ ಕೆಳಗೆ ಬಿದ್ದಿದ್ದಾರೆ ಎಂದು ತಿಳಿದು ಬಂದಿದೆ. ಘಟನೆಯ ಬಳಿಕ ಯುವಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಈತನ ಸಾವಿನ ಕುರಿತು ಕೆಲವು ಅನುಮಾನಗಳು ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	7	6	0	1	13	+1.333
ಆರ್‌ಸಿಬಿ	7	5	2	0	10	+1.101
ರಾಜಸ್ಥಾನ	7	5	2	0	10	+0.790
ಹೈದರಾಬಾದ್	7	4	3	0	8	+0.820
ಚೆನ್ನೈ	7	3	4	0	6	+0.118
ದಿಲ್ಲಿ	7	3	4	0	6	-0.184
ಗುಜರಾತ್	7	3	4	0	6	-0.790
ಮುಂಬೈ	7	2	5	0	4	-0.736
ಲಖನೌ	7	2	5	0	4	-1.177
ಕೆಕೆಆರ್	7	1	5	1	3	-0.879

ಕಿರುಸುದ್ದಿ

ಗುಜರಾತ್‌ಗೆ ಚೆನ್ನೈ ಸವಾಲು



ಚೆನ್ನೈ: ಭಾನುವಾರದ ಐಪಿಎಲ್ ಪಂದ್ಯಗಳಲ್ಲಿ ಚೆನ್ನೈ ಗುಜರಾತ್ ತಂಡವನ್ನು, ಲಖನೌ ಕೋಲ್ಕತ್ತಾ ತಂಡವನ್ನು ಎದುರಿಸಲಿವೆ. ವಾರಾಂತ್ಯದಲ್ಲಿ ಅಭಿಮಾನಿಗಳಿಗೆ ಮನರಂಜನಾ ರಸದೌತಣ ನೀಡುವುದಕ್ಕೆ ಇಂಡಿಯನ್ ಪ್ರೀಮಿಯರ್ ಲೀಗ್ ಸಿದ್ಧವಾಗಿದೆ. ಹಿಂದಿನ ಪಂದ್ಯಗಳಲ್ಲಿ ಗೆಲುವು ಸಾಧಿಸಿರುವ ಚೆನ್ನೈ ಹಾಗೂ ಸತತ ಎರಡು ಸೋಲು ಕಂಡಿರುವ ಗುಜರಾತ್ ಮಧ್ಯಾಹ್ನದ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಕಳೆದ ನಾಲ್ಕು ಪಂದ್ಯಗಳಲ್ಲಿ ಚೆನ್ನೈ ಉತ್ತಮ ಪ್ರದರ್ಶನವನ್ನೇ ನೀಡಿದೆ. ಇತ್ತ ಗುಜರಾತ್ ಮುಂಬೈ ಹಾಗೂ ಆರ್‌ಸಿಬಿ ವಿರುದ್ಧ ಸೋಲನುಭವಿಸಿದೆ. ಚೆನ್ನೈ ಗೆದ್ದರೆ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಬಹುದು. ಗುಜರಾತ್ ಗೆದ್ದರೆ, ಚೆನ್ನೈ ತಂಡವನ್ನು ಕೆಳನೂಕಲಿದೆ. ಎರಡನೇ ಪಂದ್ಯದಲ್ಲಿ ಕೆಕೆಆರ್ ಮತ್ತು ಲಖನೌ ತಂಡಗಳು ಮುಖಾಮುಖಿಯಾಗಲಿವೆ. ಹಿಂದಿನ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿರುವ ಕೆಕೆಆರ್ ಮೊದಲನೇ ಗೆಲುವು ಸಾಧಿಸಿದೆ. ಇತ್ತ ಲಖನೌ ಹ್ಯಾಟ್ರಿಕ್ ಸೋಲುಗಳೊಂದಿಗೆ ಕಂಗೆಟ್ಟಿದೆ. ಹೀಗಿರುವಾಗ ಗೆಲುವಿನ ಲಯ ಪಡೆಯಲು ತಿಣುಕಾಟ ನಡೆಸುತ್ತಿದೆ. ವಾಸ್ತವವಾಗಿ ಕೆಕೆಆರ್ ಅತಿ ಕೆಟ್ಟ ಪ್ರದರ್ಶನ ನೀಡುತ್ತಿದೆ. 7 ಪಂದ್ಯಗಳಲ್ಲಿ ಒಂದು ಮಾತ್ರ ಗೆದ್ದಿದೆ. ಇತ್ತ ಲಖನೌ ಕೂಡ ಅದೇ ಹಾಲತ್ತಿನಲ್ಲಿದೆ.

ಪಂದ್ಯದ ವಿವರ

ಚೆನ್ನೈ-ಗುಜರಾತ್
ಯಾವಾಗ?: ಭಾನುವಾರ
ಎಲ್ಲಿ: ಚೆನ್ನೈ
ಸಮಯ: ಮಧ್ಯಾಹ್ನ 3:30

ಕೆಕೆಆರ್-ಲಖನೌ:
ಯಾವಾಗ: ಭಾನುವಾರ
ಎಲ್ಲಿ: ಲಖನೌ
ಸಮಯ: ಸಂಜೆ 7:30

ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಗ್ರಾಸ್‌ಹಾಪರ್ ಕಪ್: ಅಭಯ್ ಸಿಂಗ್ ಹೋರಾಟಕ್ಕೆ ತೆರೆ

ಹೊಸದಿಲ್ಲಿ: ಸ್ವಿಟ್ಜರ್‌ಲ್ಯಾಂಡ್‌ನ ಜ್ಯೂರಿಕ್‌ನಲ್ಲಿ ನಡೆದ ಗ್ರಾಸ್ ಹಾಪರ್ ಕಪ್ ಸ್ಕ್ವಾಷ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಭಾರತದ ಅಭಯ್ ಸಿಂಗ್ ಸೋಲನುಭವಿಸಿದ್ದಾರೆ. ಅವರು ಈಜಿಪ್ಟ್‌ನ ಮಾಜಿ ವಿಶ್ವ ನಂ.1 ಹಾಗೂ ವಿಶ್ವ ಚಾಂಪಿಯನ್ ಕರೀಮ್ ಗೌವಾಡ್ ವಿರುದ್ಧ ಕಠಿಣ ಪೈಪೋಟಿ ನೀಡಿದರೂ 12-10, 11-9 ಅಂತರದಲ್ಲಿ ಸೋತರು. ಮೊದಲ ಗೇಮ್‌ನಲ್ಲಿ 6-0 ಹಿನ್ನಡೆಯಲ್ಲಿದ್ದ ಅಭಯ್ ಸಿಂಗ್ ಅದ್ಭುತವಾಗಿ ಮರಳಿ ಟೈಬ್ರೇಕ್‌ಗೆ ಕೊಂಡೊಯ್ದರು. ಎರಡನೇ ಗೇಮ್‌ನಲ್ಲೂ ವಿಶ್ವ ನಂ.4 ಗೌವಾಡ್‌ಗೆ ಸಮಬಲವಾಗಿ ಎದುರಿಸಿದರು. ಆದರೆ ಅಂತಿಮ ಕ್ಷಣದಲ್ಲಿ ಅನುಭವದ ಮೇಲುಗೈ ಸಾಧಿಸಿದ ಗೌವಾಡ್ ಪಂದ್ಯವನ್ನು ತಮ್ಮದಾಗಿಸಿಕೊಂಡರು.

> **ಪಂದ್ಯದ ವೇಗ ತುಂಬಾ ಹೆಚ್ಚು ಇತ್ತು. ಅಭಯ್ ತುಂಬಾ ಬುದ್ಧಿವಂತ ಮತ್ತು ಪ್ರತಿಭಾವಂತ ಆಟಗಾರ. ಅವರ ಮುಂದಿನ ಹೆಜ್ಜೆಯನ್ನು ಊಹಿಸಲು ಕಷ್ಟ. ಮೊದಲ ಗೇಮ್‌ನಲ್ಲಿ ನಾನು ಮುನ್ನಡೆದಲ್ಲಿದ್ದರೂ ಅವರು ತಕ್ಷಣ ಮರಳಿ ಸಮಬಲ ಸಾಧಿಸಿದರು.**
> ■ ಗೌವಾಡ್, ಸ್ಕ್ವಾಷ್ ಆಟಗಾರ

265 ರನ್ ಗುರಿ ಪೇರಿಸಿದ ಶ್ರೇಯಸ್ ಪಡೆ

ಪಂಜಾಬ್ ಕಿಂಗ್ಸ್



ದಾಖಲೆಗಳು

- ಒಟ್ಟು ರನ್ 529 ರನ್ ಮೂಡಿಬಂದವು, ಇದು ಟಿ20 ಕ್ರಿಕೆಟ್‌ನಲ್ಲೇ ಹೆಚ್ಚು
- ಪವರ್‌ಪ್ಲೇನಲ್ಲಿ ಪಂಜಾಬ್ 116 ರನ್ ಗಳಿಸಿತು. ಇದು ಐಪಿಎಲ್‌ನ ಎರಡನೇ ಗರಿಷ್ಠ
- ಪಂಜಾಬ್ 265 ರನ್ ಗುರಿ ಪೇರಿಸಿತು. ಇದು ಐಪಿಎಲ್‌ನ ಎರಡನೇ ಅತಿ ಹೆಚ್ಚು ರನ್ ಚೇಸ್
- ರಾಹುಲ್-ನಿತೀಶ್ ನಡುವೆ 220 ರನ್ ಜೊತೆಯಾಟ

ಹೊಸದಿಲ್ಲಿ: ಐಪಿಎಲ್ ಇತಿಹಾಸದಲ್ಲಿ ಎಂದೆಂದಿಗೂ ನೆನಪಿಡಲೇಬೇಕಾದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಬರೋಬ್ಬರಿ 265 ರನ್ ಗುರಿ ಮುಟ್ಟಿ ದಾಖಲೆಯ ಗೆಲುವು ಸಾಧಿಸಿದೆ.

ದಿಲ್ಲಿ ಕ್ಯಾಪಿಟಲ್ಸ್ ಕೊಟ್ಟಿದ್ದ 265 ರನ್ ಗುರಿಯನ್ನು ಪಂಜಾಬ್ 7 ಎಸೆತ ಉಳಿದಿರುವಂತೆ ಪೇರಿಸಿ 6 ವಿಕೆಟ್‌ಗಳಿಂದ ಜಯಿಸಿತು. ಇದರೊಂದಿಗೆ ತನ್ನದೇ ಅತಿ ಹೆಚ್ಚು ರನ್ ಚೇಸ್ ಮಾಡಿದ ದಾಖಲೆ ಮುರಿದ ಕಿಂಗ್ಸ್, ಅಂಕಪಟ್ಟಿಯ ಅಗ್ರಸ್ಥಾನ ಇನ್ನಷ್ಟು ಗಟ್ಟಿಗೊಳಿಸಿದೆ. ಶನಿವಾರದಂದು ದಿಲ್ಲಿಯಲ್ಲಿ ರನ್‌ಹೊಳೆ ಹರಿಯಿತು. ಬರೋಬ್ಬರಿ 529 ರನ್ ಮೂಡಿಬಂದ ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದ ದಿಲ್ಲಿ 2 ವಿಕೆಟ್ ನಷ್ಟಕ್ಕೆ 264 ರನ್ ಗಳಿಸಿತು. ಕನ್ನಡಿಗ ರಾಹುಲ್ (152*, 67ಎ, 16 ಬೌ, 9ಸಿ) ರನ್ ಬಾರಿಸಿದರು. ನಿತೀಶ್ ರಾಣಾ (91, 44ಎ, 11ಬೌ, 4ಸಿ) ರನ್ ಗಳಿಸಿದರು. ಗುರಿ ಬೆನ್ನತ್ತಿದ ಪಂಜಾಬ್ 18.5 ಓವರ್‌ಗಳಲ್ಲಿ 265 ರನ್ ಗಳಿಸಿತು. ತಂಡದ ಪರ ಪ್ರಭಸಿಮ್ರನ್ (76, 26ಎ, 9 ಬೌ, 5 ಸಿ), ಶ್ರೇಯಸ್(73*, 36ಎ, 3ಬೌ, 7ಸಿ) ಗಳಿಸಿದರು.

ಪಂಜಾಬ್-ದಿಲ್ಲಿ ಸ್ಟ್ಯಾಟ್ಸ್: ಬ್ಯಾಟಿಂಗ್ ಗಿಳಿದ ದಿಲ್ಲಿ ರಾಹುಲ್ ಹಾಗೂ ನಿತೀಶ್ ಅವರ ಆಸರೆ ಪಡೆದು, ಪವರ್‌ಪ್ಲೇನಲ್ಲಿ 68 ರನ್ ಗಳಿಸಿತು. ಇತ್ತ ಪಂಜಾಬ್ ಮೊದಲನೇ ಬಾಲ್‌ನಿಂದಲೂ ಆಕ್ರಮಣಕಾರಿ ಬ್ಯಾಟಿಂಗ್‌ನೊಂದಿಗೆ ಬರೋಬ್ಬರಿ 116 ರನ್ ಬಾರಿಸಿತು. ಮಧ್ಯಮ ಓವರ್‌ನಲ್ಲಿ ರಾಹುಲ್ ಅಬ್ಬರದೊಂದಿಗೆ ದಿಲ್ಲಿ ಮಿಂಚಿತು. ಅರ್ಧಶತಕ ದಾಟಿದ ನಂತರ ಅವರು, ತೀರಾ ಬಿರುಸಿನ ಬ್ಯಾಟಿಂಗ್ ಮಾಡಿದರು. ನಿತೀಶ್ ರಾಣಾ ಕೂಡ ಭರ್ಜರಿ ಬ್ಯಾಟಿಂಗ್ ಮಾಡಿದರು. ಮಧ್ಯಮ ಓವರ್‌ಗಳಲ್ಲಿ ದಿಲ್ಲಿ 145 ರನ್ ಬಾರಿಸಿತು. ಇತ್ತ ಪಂಜಾಬ್‌ಗೆ ಯಾವುದೇ ಲಗಾಮು ಇಲ್ಲ. ಪ್ರಭಸಿಮ್ರನ್ ಅವರ ಆಟ 76ಕ್ಕೆ ನಿಂತಿತು. ಪ್ರಿಯಾಂಶ್ ಕೂಡ 43 ರನ್‌ಗೆ ವಿಕೆಟ್ ಒಪ್ಪಿಸಿದರು. ಕೊನೊಲಿ ಈ ಬಾರಿ ಬೇಗನೆ ವಿಕೆಟ್ ಕೊಟ್ಟರು. ಆದರೆ ಶ್ರೇಯಸ್ ಅಯ್ಯರ್ ಬರುತ್ತಲೇ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಮಧ್ಯಮ ಓವರ್‌ಗಳಲ್ಲಿ ಪಂಜಾಬ್ 110 ರನ್ ಗಳಿಸಿತು. ಡೆತ್ ಓವರ್‌ಗಳಲ್ಲಿ ದಿಲ್ಲಿ ತಂಡದ ರಾಹುಲ್ ಭರ್ಜರಿ ಹೊಡೆತಗಳೊಂದಿಗೆ 150 ರನ್ ಪೂರೈಸಿಕೊಂಡರು. ನಿತೀಶ್ 91 ರನ್‌ಗೆ ಔಟಾದರು. ದಿಲ್ಲಿ 51 ರನ್ ಗಳಿಸಿತು. ಒಟ್ಟು ಸ್ಕೋರ್ 264. ಇತ್ತ ಪಂಜಾಬ್ 39 ರನ್ ಮಾತ್ರ ಗಳಿಸಬೇಕಿತ್ತು. ಶ್ರೇಯಸ್ ಅಯ್ಯರ್ ಸೆಟ್ ಆದ ನಂತರ ಪಂದ್ಯವನ್ನು ಕಸಿದರು. ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸಿದ ಅವರು, 71 ರನ್ ಗಳಿಸಿದರು. ಪಂದ್ಯ ಮುಕ್ತಾಯಗೊಂಡಿತು. ಪಂಜಾಬ್ 18.5 ಓವರ್‌ಗಳಲ್ಲಿ 265 ರನ್ ಮಾಡಿತು.



ರಾಕ್‌ಸ್ಟಾರ್ ರಾಹುಲ್

ಐಪಿಎಲ್‌ನಲ್ಲಿ ಕನ್ನಡಿಗ ರಾಹುಲ್ ದಾಖಲೆ

ದಿಲ್ಲಿಯ ಅಂಗಳದಲ್ಲಿ ಕೆ.ಎಲ್. ರಾಹುಲ್ ಅವರದ್ದೇ ದರ್ಬಾರ್. ಪಂದ್ಯದಲ್ಲಿ ರಾಹುಲ್ 67 ಬಾಲ್‌ಗಳಲ್ಲಿ ಎದುರಿಸಿದರು. 16 ಬೌಂಡರಿ 9 ಸಿಕ್ಸರ್ ಬಾರಿಸಿದರು. ಇದರೊಂದಿಗೆ 152* ರನ್ ಮಾಡಿದರು. ಐಪಿಎಲ್ ಇತಿಹಾಸದಲ್ಲೇ ಮರೆಯಲಾದ ದಾಖಲೆಗಳನ್ನು, ಯಾರಿಂದಲೂ ಅಳಿಸಲಾಗದ ಮತ್ತು ಮಾಡಲಾಗದ ದಾಖಲೆಗಳನ್ನು ಕನ್ನಡಿಗ ರಾಹುಲ್ ಬರೆದರು. ಬ್ಯಾಟಿಂಗ್ ಮಾಡುವ ವೇಳೆ ಬಾರಿಸಿದ ಪ್ರತಿಯೊಂದು ಬೌಂಡರಿ ದಾಖಲೆಗಳನ್ನು ಮುರಿಯುತ್ತ ಬಂದರೆ, ಬಾನೆತ್ತರದ ಸಿಕ್ಸರ್‌ಗಳು ಇತಿಹಾಸ ನಿರ್ಮಿಸುತ್ತಾ ಬಂದವು. ಯಾವುದೇ ಬೌಲರ್‌ಗಳ ಮೇಲೆ ರಾಹುಲ್ ಕರುಣೆ ತೋರಲಿಲ್ಲ, ಯಾವುದೇ ಅವಕಾಶವನ್ನೂ ಕೈಚೆಲ್ಲಲಿಲ್ಲ, ಬ್ಯಾಟಿನ ಮೂಲಕ ಇತಿಹಾಸ ಗೀಚಿದ ರಾಹುಲ್ ದಾಖಲೆಗಳ ಪಟ್ಟಿ ಇಲ್ಲಿದೆ.

3 ಫ್ರಾಂಚೈಸಿ ಪರ 2 ಶತಕ

ಕೆ.ಎಲ್. ರಾಹುಲ್ ಈ ಇನ್ನಿಂಗ್ಸ್‌ನೊಂದಿಗೆ ಮೂರು ಬೇರೆ ಫ್ರಾಂಚೈಸಿ ಪರ ಎರಡು ಶತಕ ಬಾರಿಸಿದ ಏಕೈಕ ಆಟಗಾರ ಎಂಬ ದಾಖಲೆ ಮಾಡಿದರು. ಇದಕ್ಕೂ ಮುನ್ನ ಅವರು, ಪಂಜಾಬ್ ಕಿಂಗ್ಸ್, ಲಖನೌ ಸೂಪರ್ ಜೇಂಟ್ಸ್ ಪರ ಶತಕ ಬಾರಿಸಿದ್ದಾರೆ.

ಅತಿ ಹೆಚ್ಚು ರನ್ ಬಾರಿಸಿದ ಭಾರತೀಯ

152 ರನ್‌ಗಳ ರಾಹುಲ್ ಇನ್ನಿಂಗ್ಸ್ ಭಾರತೀಯ ಆಟಗಾರ ಟಿ20ಯಲ್ಲಿ ಗಳಿಸಿದ ಅತಿ ಹೆಚ್ಚು ವೈಯಕ್ತಿಕ ಸ್ಕೋರ್. ಈ ಹಿಂದೆ ಐಪಿಎಲ್‌ನಲ್ಲೇ ಅಭಿಷೇಕ್ ಶರ್ಮಾ 141 ರನ್ ಮಾಡಿ ಸಾಧನೆ ಮಾಡಿದ್ದರು. 152 ರನ್ ಗಳಿಸುವುದರೊಂದಿಗೆ ರಾಹುಲ್ ಈ ದಾಖಲೆ ಮುಡಿಗೇರಿಸಿ ಕೊಂಡರು.

ಹೆಚ್ಚು ಸ್ಕೋರರ್

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ವೈಯಕ್ತಿ ಅತಿ ಹೆಚ್ಚು ರನ್‌ಗಳ ದಾಖಲೆಯ ಪಟ್ಟಿಯಲ್ಲಿ ರಾಹುಲ್ ಅವರ ಈ ಇನ್ನಿಂಗ್ಸ್ ಮೂರನೇಯದ್ದು. ಈ ಮೊದಲು ಅಭಿಷೇಕ್ ಶರ್ಮಾ ಹೆಸರಲ್ಲಿದ್ದ ದಾಖಲೆಯನ್ನು ಅಳಿಸಿ ಹಾಕಿದ ಅವರು, ಗೇಲ್, ಮೆಕ್ಕಲಂ ನಂತರದ ಸ್ಥಾನದಲ್ಲಿದ್ದಾರೆ.

ಅತಿ ಹೆಚ್ಚು ವೈಯಕ್ತಿಕ ಸ್ಕೋರ್

ಆಟಗಾರ	ರನ್
ಕ್ರಿಸ್ ಗೇಲ್	175*
ಬ್ರೆಂಡನ್ ಮೆಕ್ಕಲಂ	158*
ಕೆ.ಎಲ್. ರಾಹುಲ್	152*
ಅಭಿಷೇಕ್ ಶರ್ಮಾ	141
ಡಿಕಾಕ್	140*

ರಾಹುಲ್‌ನ ಇನ್ನಷ್ಟು ದಾಖಲೆ

- ಟಿ20ಯಲ್ಲಿ 150 ರನ್ ಬಾರಿಸಿದ ಮೊದಲ ಬ್ಯಾಟರ್
- ಐಪಿಎಲ್‌ನಲ್ಲಿ 150 ರನ್ ಮಾಡಿದ 3ನೇ ಬ್ಯಾಟರ್
- ದಿಲ್ಲಿ ಪರ ಅತಿ ಹೆಚ್ಚು ರನ್ (ಒಂದೇ ಇನ್ನಿಂಗ್ಸ್‌ನಲ್ಲಿ) ಗಳಿಸಿದ ಬ್ಯಾಟರ್
- ರಾಹುಲ್‌ಗೆ ಇದು ವೈಯಕ್ತಿಕ ಅತಿ ಹೆಚ್ಚು ರನ್
- 46 ಬಾಲ್‌ಗಳಲ್ಲಿ ಶತಕ; ದಿಲ್ಲಿ ಬ್ಯಾಟರ್‌ನಿಂದ ಅತಿ ಹೆಚ್ಚು


ಸಂಕ್ಷಿಪ್ತ ಸ್ಕೋರ್

ದಿಲ್ಲಿ 20 ಓವರ್‌ಗಳಲ್ಲಿ 264/2: ರಾಹುಲ್ 152★, ನಿತೀಶ್ 91; ಅರ್ಷದೀಪ್ 49/1
ಪಂಜಾಬ್ 18.5 ಓವರ್‌ಗಳಲ್ಲಿ 265/4: ಪ್ರಭಸಿಮ್ರನ್ 76, ಶ್ರೇಯಸ್ 71; ಕುಲ್ದೀಪ್ 46/2

ಟಿ20 ಕ್ರಿಕೆಟ್‌ನಲ್ಲಿ 220 ಸಾವಿರ ರನ್ ಬಾರಿಸಿದ ವಿರಾಟ್

ಕೊಹ್ಲಿ ವಿರಾಟ ದಾಖಲೆ

ಸಿಕ್ಸರ್-ಫೋರ್ ಬಾರಿಸುವುದರಲ್ಲೂ ದಾಖಲೆ



ಬೆಂಗಳೂರು: ಅಬ್ಬರದ ಬ್ಯಾಟಿಂಗ್ ಮೂಲಕ ಪಂದ್ಯ ಗೆಲ್ಲಿಸಿರುವ ವಿರಾಟ್ ಕೊಹ್ಲಿ ಗುಜರಾತ್ ತಂಡವನ್ನು ದಂಡಿಸಿ ವಿವಿಧ ದಾಖಲೆಗಳನ್ನು ಮಾಡಿದ್ದಾರೆ. ಶುಕ್ರವಾರ ನಡೆದ ಐಪಿಎಲ್‌ನ 34ನೇ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ವಿರುದ್ಧ ಆರ್‌ಸಿಬಿ ಭರ್ಜರಿ ಗೆಲುವು ಸಾಧಿಸಿತ್ತು. ಈ ಪಂದ್ಯದಲ್ಲಿ ಕೊಹ್ಲಿ 44 ಎಸೆತಗಳಲ್ಲಿ 81 ರನ್ ಬಾರಿಸಿದ್ದರು. ಈ ಇನ್ನಿಂಗ್ಸ್‌ನಲ್ಲಿ 4 ಭರ್ಜರಿ ಸಿಕ್ಸ್ ಹಾಗೂ 8 ಫೋರ್‌ಗಳು ಸಹ ಮೂಡಿಬಂದಿದ್ದವು. ಈ ಸಿಕ್ಸ್-ಫೋರ್ಗಳೊಂದಿಗೆ ಕಿಂಗ್ ಕೊಹ್ಲಿ ಐಪಿಎಲ್‌ನಲ್ಲಿ ವಿಶೇಷ ಮೈಲುಗಲ್ಲುಗಳನ್ನು ದಾಟಿದ್ದಾರೆ.

ಕೊಹ್ಲಿ ದಾಖಲೆಗಳ ವಿವರ

10 ಸಾವಿರ ರನ್

ಗುಜರಾತ್ ಟೈಟಾನ್ಸ್ ವಿರುದ್ಧದ 81 ರನ್‌ಗಳೊಂದಿಗೆ ಒಂದೇ ದೇಶದಲ್ಲಿ ಟಿ20 ಕ್ರಿಕೆಟ್‌ನಲ್ಲಿ 10 ಸಾವಿರ ರನ್ ಕಲೆಹಾಕಿದ ವಿಶ್ವದ ಮೊದಲ ಬ್ಯಾಟರ್ ಎಂಬ ವಿಶ್ವ ದಾಖಲೆಯನ್ನು ಕಿಂಗ್ ಕೊಹ್ಲಿ ನಿರ್ಮಿಸಿದ್ದಾರೆ. ಅಂದರೆ ಕೊಹ್ಲಿ ಭಾರತದಲ್ಲೇ 10 ಸಾವಿರ ರನ್ ಕಲೆಹಾಕಿ ಈ ಸಾಧನೆ ಮಾಡಿದ ಏಕೈಕ ಆಟಗಾರ ಎನಿಸಿಕೊಂಡಿದ್ದಾರೆ. ಈ ಸಾಲಿನಲ್ಲಿ ರೋಹಿತ್ ಶರ್ಮ, ಕ್ರಿಸ್ ಗೇಲ್, ಆರೋನ್ ಫಿಂಚ್ ಕೂ ಸೇರಿದ್ದಾರೆ.

800 ಫೋರ್‌ಗಳು

ಗುಜರಾತ್ ಟೈಟಾನ್ಸ್ ವಿರುದ್ಧ ಬಾರಿಸಿದ 8 ಫೋರ್‌ಗಳೊಂದಿಗೆ ಕೊಹ್ಲಿ ಐಪಿಎಲ್‌ನಲ್ಲಿ 800 ಫೋರ್‌ಗಳನ್ನು ಬಾರಿಸಿದ ಆಟಗಾರ ಆನಿಸಿಕೊಂಡರು. ಈ ಸಾಧನೆ ಮಾಡಿದ ಏಕೈಕ ಬ್ಯಾಟರ್ ಕೊಹ್ಲಿಯವರೇ ಆಗಿದ್ದಾರೆ.

300 ಸಿಕ್ಸರ್

ಈ ಪಂದ್ಯದಲ್ಲಿ 4 ಸಿಕ್ಸ್ ಸಿಡಿಸುವುದರೊಂದಿಗೆ ಐಪಿಎಲ್ ಇತಿಹಾಸದಲ್ಲೇ ಒಂದೇ ಫ್ರಾಂಚೈಸಿ ಪರ 300 ಸಿಕ್ಸರ್‌ಗಳನ್ನು ಬಾರಿಸಿದ ಮೊದಲ ಬ್ಯಾಟರ್ ಎಂಬ ಭರ್ಜರಿ ದಾಖಲೆಯನ್ನು ವಿರಾಟ್ ಕೊಹ್ಲಿ ತಮ್ಮದಾಗಿಸಿಕೊಂಡಿದ್ದಾರೆ.

ಲುಂಗಿ ಎನ್‌ಗಿಡಿಗೆ ಗಂಭೀರ ಗಾಯ

ಹೊಸದಿಲ್ಲಿ: ದಿಲ್ಲಿ ಕ್ಯಾಪಿಟಲ್ಸ್‌ನ ವೇಗಿ ಲುಂಗಿ ಎನ್‌ಗಿಡಿ ಫೀಲ್ಡಿಂಗ್ ಮಾಡುತ್ತಿರುವಾಗ ತಲೆಗೆ ಗಂಭೀರ ಏಟಾಗಿದ್ದು, ಪಂದ್ಯದ ಮಧ್ಯೆ ಆಸ್ಪತ್ರೆಗೆ ದಾಖಲಾದರು. ಅಕ್ಷರ್ ಪಟೇಲ್ ಬೌಲಿಂಗ್ ಮಾಡುತ್ತಿದ್ದ ವೇಳೆ ಲಾಂಗ್ ಆನ್‌ನಲ್ಲಿ ನಿಂತಿದ್ದ ಲುಂಗಿ ಕ್ಯಾಚ್‌ಗೆ ಹೊರಟರು. ಆ ವೇಳೆ ಅವರು ಹಿಂಬದಿಯಿಂದ ಓಡುತ್ತಲೇ ಬಿದ್ದರು. ತಲೆಗೆ ಪೆಟ್ಟಾಯಿತು. ಮೈದಾನದಲ್ಲೇ ಪ್ರಜ್ಞೆ ತಪ್ಪಿ ಬಿದ್ದರು. ತ್ವರಿತವಾಗಿ ಚಿಕಿತ್ಸೆ ಕೊಟ್ಟರೂ ಸರಿಹೋಗದ ಅವರನ್ನು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ದಾಖಲಿಸಲಾಯಿತು. ಅವರ ಐಪಿಎಲ್ ಭವಿಷ್ಯ ಈಗ ಅನಿಶ್ಚಿತವಾಗಿದೆ. ಎನ್‌ಗಿಡಿ ಅವರ ಗಾಯದ ತೀವ್ರತೆ ಎಷ್ಟಿತ್ತೆಂದರೆ ಅವರಿಗೆ ಮೇಲೇಳಲು ಸಾಧ್ಯವಾಗಲಿಲ್ಲ. ಕೂಡಲೇ ಮೈದಾನಕ್ಕೆ ಆಗಮಿಸಿದ ದಿಲ್ಲಿ ತಂಡದ ಫಿಸಿಯೋ ಎನ್‌ಗಿಡಿ ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಿದರು. ಆದರೆ ಫಲಿಸದ ಕಾರಣ ಅವರನ್ನು ಆಸ್ಪತ್ರೆಗೆ ರವಾನಿಸಲಾಗಿಯಿತು. ಇದಕ್ಕೂ ಮೊದಲು ಶುಕ್ರವಾರ ಸಂಜೆಯೇ ದಿಲ್ಲಿ ನೆಟ್ ಬಾಲರ್ ಪಾಠಕ್ ಕೂಡ ಗಾಯಗೊಂಡಿದ್ದರು. ಅವರನ್ನೂ ಮೈದಾನದಿಂದ ಆಸ್ಪತ್ರೆಗೆ ರವಾನಿಸಲಾಗಿದೆ.

ಸೂರ್ಯವಂಶಿ ವೈಭವದ ಶತಕ

ಜೈಪುರ: ದಿನದಾಟದ ಎರಡನೇ ಪಂದ್ಯದಲ್ಲೂ ರನ್ ಮಳೆ. ರಾಜಸ್ಥಾನ ಹಾಗೂ ಹೈದರಾಬಾದ್ ನಡುವಿನ ಪಂದ್ಯದಲ್ಲಿ ಯುವ ಆಟಗಾರ ವೈಭೌವ್ ಸೂರ್ಯವಂಶಿ ಅಬ್ಬರಿಸಿದರು. ಶತಕದ ಇನ್ನಿಂಗ್ಸ್ ಕಟ್ಟಿದ್ದಲ್ಲದೆ, ದಾಖಲೆಗಳನ್ನೂ ಮಾಡಿದರು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ ಬರೋಬ್ಬರಿ 228/6 ರನ್ ಚಚ್ಚಿದೆ.

36 ಬಾಲ್‌ಗಳಲ್ಲಿ ಶತಕದಾಟ

ವೈಭವ್ ಸೂರ್ಯವಂಶಿ ಶತಕ ಬಾರಿಸಿದರೆ, ಧ್ರುವ್ ಜುರೇಲ್ ಅರ್ಧಶತಕ ಬಾರಿಸಿ ಮಿಂಚಿದರು. ಇತ್ತ ಹೈದರಾಬಾದ್ ಪಡೆ ಪಂದ್ಯದುದಕ್ಕೂ ವೈಭವ್ ಅವರನ್ನು ತಡೆಯುವುದರಲ್ಲೇ ಹೈರಾಣಾಯಿತು.

ವೈಭವ್ ಅಬ್ಬರ: ಯಥಾ ಪ್ರಕಾರ ವೈಭವ್ ಸೂರ್ಯವಂಶಿ ಬಂದ ಕೂಡಲೇ ಬೌಂಡರಿ, ಸಿಕ್ಸರ್‌ಗಳ ಸುರಿಮಳೆಗೈದರು. ಇತ್ತ ಜೈಸ್ವಾಲ್ 10 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಧ್ರುವ್ ಜುರೇಲ್ ಸೆಟ್ ಆಗುವತ್ತ ಸಾಗಿದರು. ವೈಭವ್ ಸೂರ್ಯವಂಶಿ 15 ಬಾಲ್‌ಗಳಲ್ಲಿ ಅರ್ಧಶತಕ ಪೂರೈಸಿಕೊಂಡರು. ಇತ್ತ ಜುರೇಲ್ ಕೂಡ ಕೈ ಮಿಲಾಯಿಸಿದರು. ಇವರಿಬ್ಬರ ಆಟಕ್ಕೆ ಹೈದರಾಬಾದ್ ತತ್ತರಿಸಿತು. ಪವರ್‌ಪ್ಲೇನಲ್ಲಿ 76 ರನ್ ಗಳಿಸಿತು. ಜುರೇಲ್ 51 ರನ್‌ಗೆ ವಿಕೆಟ್ ಕೊಟ್ಟರೆ, ಫೆರಾರಿಯಾ ಉತ್ತಮ ಬ್ಯಾಟಿಂಗ್ ಮಾಡಿದರು.



ಐಪಿಎಲ್‌ನ ವೇಗದ ಶತಕ

ಆಟಗಾರ	ಎಸೆತ
ಗೇಲ್	30
ವೈಭವ್	35
ವೈಭವ್	36
ಯುಸೂಫ್	37
ಕ್ಲಾಸೆನ್	37

ಶತಕದ ದಾಖಲೆ: 15 ವರ್ಷದ ವೈಭವ್ ಸೂರ್ಯವಂಶಿ ಮತ್ತೆ ದಾಖಲೆ ಮಾಡಿದರು. ಕಳೆದ ವರ್ಷ 35 ಬಾಲ್‌ಗಳಲ್ಲಿ ಶತಕ ಬಾರಿಸಿದ್ದ ಅವರು, 36 ಬಾಲ್‌ಗಳಲ್ಲಿ ಶತಕ ಬಾರಿಸಿದರು. ಈ ಇನ್ನಿಂಗ್ಸ್‌ನಲ್ಲಿ ಬರೋಬ್ಬರಿ 12 ಸಿಕ್ಸರ್ ಮತ್ತು 5 ಬೌಂಡರಿ ಸೇರಿವೆ. ಇದರೊಂದಿಗೆ ವೇಗದ ಶತಕ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿ ವೈಭವ್ ಸೇರಿಕೊಂಡರು. ಇದಕ್ಕೂ ಮುನ್ನ ದಾಖಲೆ ಯುಸೂಪ್ ಪಠಾಣ್ ಹೆಸರಲ್ಲಿತ್ತು.

ಇಂದು ಐತಿಹಾಸಿಕ ಟಿಸಿಎಸ್ ವಿಶ್ವ 10-ಕೆ | ಓಟದಲ್ಲಿ ಗಣ್ಯರು ಭಾಗಿ

10-ಕೆ ಓಟಕ್ಕೆ ಬೆಂಗಳೂರು ಸಿದ್ಧ

ಬೆಂಗಳೂರು: ಬಹು ನಿರೀಕ್ಷಿತ ಟಿಸಿಎಸ್ ವರ್ಲ್ಡ್ 10 ಕೆ ಬೆಂಗಳೂರಿನ 18ನೇ ಆವೃತ್ತಿ ಭಾನುವಾರದಂದು ಗಾರ್ಡನ್ ಸಿಟಿಯಲ್ಲಿ ನಡೆಯಲಿದೆ. ವಿಶ್ವದ ಅಗ್ರ ರನ್ನರ್‌ಗಳು ಭಾಗವಹಿಸುವ ಈ ಐತಿಹಾಸಿಕ ಕೂಟಕ್ಕಾಗಿ ಬೆಂಗಳೂರು ಸಿದ್ಧವಾಗಿದ್ದು, ಭಾರತೀಯ ರನ್ನರ್‌ಗಳು ಭವರವಸೆ ವ್ಯಕ್ತಪಡಿಸಿದ್ದಾರೆ.

ಹಾಲಿ ಚಾಂಪಿಯನ್ ಅಭಿಷೇಕ್ ಪಾಲ್ ಕಳೆದ ವರ್ಷ 29:12 ನಿಮಿಷಗಳಲ್ಲಿ ಗುರಿ ತಲುಪಿ ಭಾರತೀಯ ಪುರುಷರ ಕೂಟದ ದಾಖಲೆಯನ್ನು ಮಾಡಿದ್ದರು. ಅವರೊಂದಿಗೆ ಡಾ. ಕಾರ್ತಿಕ್ ಕರ್ಕೇರಾ ಕೂಡ ಸೇರಿದ್ದಾರೆ, ಅವರು ರಾಷ್ಟ್ರೀಯ ಮ್ಯಾರಥಾನ್ ಚಾಂಪಿಯನ್‌ಶಿಪ್ ಮತ್ತು ಟಾಟಾ ಮುಂಬೈ ಮ್ಯಾರಥಾನ್‌ನ ಚೊಚ್ಚಲ ಗೆಲುವುಗಳೊಂದಿಗೆ ಭಾಗವಹಿಸುತ್ತಿದ್ದಾರೆ. ಮಹಿಯರಲ್ಲಿ, ಭಾರತೀಯ ಓಟದಲ್ಲಿ ಅತ್ಯಂತ ಸ್ಥಿರವಾದ ಹೆಸರುಗಳಲ್ಲಿ ಒಬ್ಬರಾದ ಮತ್ತು ಬೆಂಗಳೂರಿನಲ್ಲಿ ಸತತವಾಗಿ ಇಂಡಿಯನ್ ಎಲೈಟ್ ವಿಜೇತರಾದ ಸಂಜೀವನಿ ಜಾಧವ್ ಅವರಿಗೆ ಐತಿಹಾಸಿಕ ಹ್ಯಾಟ್ರಿಕ್ ಪಡೆಯುವ ಅವಕಾಶ ಸಿಗಲಿದೆ.

ರಾಜ್ಯಪಾಲರಿಂದ ಉದ್ಘಾಟನೆ

10-ಕೆ ಬೆಂಗಳೂರು ಓಟ ಗಣ್ಯರಿಂದ ಚಾಲನೆ ಪಡೆಯಲಿದೆ. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್, ಕರ್ನಾಟಕ ಅಥ್ಲೆಟಿಕ್ಸ್ ಅಸೋಸಿಯೇಷನ್ ಅಧ್ಯಕ್ಷ, ಗೃಹ ಸಚಿವ ಡಾ. ಜಿ. ಪರಮೇಶ್ವರ ಮತ್ತು ಅಂತಾರಾಷ್ಟ್ರೀಯ ಕೂಟದ ರಾಯಭಾರಿ ಬ್ಲಾಂಕಾ ವ್ಲಾಸಿಕ್ ಓಟಕ್ಕೆ ಚಾಲನೆ ನೀಡಲಿದ್ದಾರೆ.

ಓಟದಲ್ಲಿ ಗಣ್ಯರು

ಓಟದಲ್ಲಿ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಹಿರೀಯ ರಾಜಕಾರಣಿಗಳು ಭಾಗವಗಿಸಲಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಸಂಸದ, ಮೈಸೂರು ಮಹರಾಜರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ ತೇಜಸ್ವಿ ಸೂರ್ಯ, ಬ್ರಿಗೇಡಿಯರ್ ರಂಜೀತ್ ಆಳ್ವಾ, ಮತ್ತು ಇಟಲಿಯ ಕಾನ್ಸುಲ್ ಜನರಲ್ ಜಿಯಾಂಡೊಮೆನಿಕೊ ಮಿಲಾನೊ ಅವರು ಭಾಗವಹಿಸಲಿದ್ದಾರೆ.

ಫ್ರಾಂಚೈಸಿ ಮಾದರಿಯ ಟಿಟಿಗೆ ಸಿದ್ಧತೆ

ಟಿಟಿ: ಸ್ಟಾರ್ ಆಟಗಾರರ ಪಟ್ಟಿ ಪ್ರಕಟ

ಹೊಸದಿಲ್ಲಿ: ಭಾರತದ ಟೇಬಲ್ ಟೆನಿಸ್ ತಾರೆಯರಾದ ಮನವ್ ಠಕ್ಕರ್, ಮನೂಷ್ ಶಾ ಮತ್ತು ದಿಯಾ ಚಿತಾಲೆ ಅಲ್ಟಿಮೇಟ್ ಟೇಬಲ್ ಟೆನಿಸ್ (ಯುಟಿಟಿ) ಸೀಸನ್ 7ರ ಆಟಗಾರರ ಪೂಲ್‌ನಲ್ಲಿ ಪ್ರಮುಖರಾಗಿದ್ದಾರೆ. ಇದೇ ವೇಳೆ ಅನುಭವಿಗಳಾದ ಜಿ ಸತ್ಯನ್ ಗಣೇಶಕರನ್ ಮತ್ತು ಮನಿಕಾ ಬಾತ್ರಾ ಅವರನ್ನು ಅವರ ತಂಡಗಳು ಉಳಿಸಿಕೊಂಡಿವೆ.

ಈ ಬಾರಿಯ ಯುಟಿಟಿ ಸೀಸನ್ ಜುಲೈ 9 ರಿಂದ 26ರವರೆಗೆ ಗೋವಾದ ಡಾ ಶ್ಯಾಮ ಪ್ರಸಾದ್ ಮುಖರ್ಜಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ. ಏಪ್ರಿಲ್ 28ರಂದು ಮುಂಬೈನಲ್ಲಿ ಹರಾಜು ಪ್ರಕ್ರಿಯೆ ನಡೆಯಲಿದೆ.

ಠಕ್ಕರ್ ಮತ್ತು ಶಾ ಕಳೆದ ಸೀಸನ್‌ಗೆ ಗೈರಾಗಿದ್ದರೂ, ಈ ಬಾರಿ ಹರಾಜಿಗೆ ಮರಳಿದ್ದಾರೆ. ಇವರಿಬ್ಬರೂ ಪುರುಷರ ಡಬಲ್ಸ್‌ನಲ್ಲಿ ವಿಶ್ವ ನಂ.5 ಸ್ಥಾನದಲ್ಲಿದ್ದಾರೆ. ಶಾ ಮತ್ತು ಚಿತಾಲೆ ಮಿಶ್ರ ಡಬಲ್ಸ್‌ನಲ್ಲಿ ವಿಶ್ವ ನಂ.6 ಸ್ಥಾನದಲ್ಲಿದ್ದು, ಡಬ್ಲ್ಯುಟಿಟಿ ಫೈನಲ್ಸ್‌ಗೆ ಅರ್ಹತೆ ಪಡೆದ ಮೊದಲ ಭಾರತೀಯ ಜೋಡಿಯಾಗಿ ಇತಿಹಾಸ ನಿರ್ಮಿಸಿದ್ದಾರೆ. ಹಿಂದಿನ ಸೀಸನ್‌ನ ಅತ್ಯಂತ ದುಬಾರಿ ಆಟಗಾರ್ತಿಯಾದ ಚಿತಾಲೆ ಈ ಬಾರಿ ಹರಾಜಿನಲ್ಲಿ ಭಾಗವಹಿಸುತ್ತಿದ್ದಾರೆ. ದಬಾಂಗ್ ದೆಹಲಿ ತಂಡ ಸತ್ಯನ್ ಅವರನ್ನು ಉಳಿಸಿಕೊಂಡಿದ್ದು, ಇದು ಅವರ ಏಳನೇ ನಿರಂತರ ಸೀಸನ್ ಆಗಿದೆ. ಗಾಯದ ಕಾರಣ ಕಳೆದ ಸೀಸನ್ ತಪ್ಪಿಸಿಕೊಂಡಿದ್ದ ಬಾತ್ರಾ ಅವರನ್ನು ಅಹಮದಾಬಾದ್ ತಂಡ ಉಳಿಸಿಕೊಂಡಿದೆ. ಕೊಲ್ಕತ್ತಾ ಮತ್ತು ಮುಂಬಾ ತಂಡಗಳು ತಮ್ಮ ಆಟಗಾರರನ್ನು ಉಳಿಸಿಕೊಂಡಿದ್ದರೆ, ಗೋವಾ ಮತ್ತು ಪುಣೆ ತಂಡಗಳು ಪೂರ್ಣ ಹಣದೊಂದಿಗೆ ಹರಾಜಿಗೆ ಪ್ರವೇಶಿಸಲಿವೆ.




ಪ್ರಮುಖ ಅಂಶಗಳು

- ಸೀಸನ್ ದಿನಾಂಕ: ಜುಲೈ 9 26
- ಸ್ಥಳ: ಗೋವಾ
- ಹರಾಜು: ಏಪ್ರಿಲ್ 28, ಮುಂಬೈ
- ಪ್ರತೀ ತಂಡಕ್ಕೆ ಬಜೆಟ್: 1 ಕೋಟಿ
- ಮೂಲ ಬೆಲೆ: 20 ಲಕ್ಷದಿಂದ 3 ಲಕ್ಷದವರೆಗೆ

ಪದಬಂಧ

ರಾಜಾ ಸಂಗಮೇಶ ಹಿರೇಮಠ



5965

ಎಡದಿಂದ ಬಲಕ್ಕೆ
1.ವ್ಯವಸಾಯವನ್ನು ಮಾಡುವವನು-ರೈತ (5)
3.ಮೂಗನ ನಡುವೆ ಇರುವ ಮೂರು ಲೋಕಗಳು (3)
5.ಎತ್ತರಕ್ಕೆ ಹಾರುವಿಕೆ-ಜಿಗಿ (2)
7.ಆತುರಪಡು-ತವಕಿಸು (5)
9.ಬುದ್ಧನ ಸಮಕಾಲೀನ-ಹರ್ಯಾಂಕ ರಾಜವಂಶದ ಅರಸ (4)
11.ಹಾವಿನ ಹೆಡೆಯಲ್ಲಿದೆಯೆನ್ನುವ ಮಣಿ (4)
13.ಆನಂದದಿಂದ ತುಂಬಿದುದರ ಕಡೆಯಲ್ಲಿ ಕಾಲವಿದೆ (5)
15.ಬೆಟ್ಟವೂ ಹೌದು-ಆಭರಣವೂ ಹೌದು (2)
17.ಕರಣಿಕನನ್ನು ಹೀಗೂ ಹೇಳಬಹುದು (3)
18.ಬುದ್ಧಿಯನ್ನು ಉಪಯೋಗಿಸು ಎಂಬರ್ಥದ ನುಡಿಗಟ್ಟು (5)

ಮೇಲಿನಿಂದ ಕೆಳಕ್ಕೆ
1.ಸೆಕೆಗಾಲ-ಬಿಸಿಲಿನಿಂದ ಕೂಡಿದ ದಿನಗಳು (3)
2.ಜನರು ತೆರಳಿದ್ದು ಈ ಬೆಳ್ಳಿಯನ್ನು ನೋಡಲು (3)
4.ತುಂಬ ಬಿರುಸು-ಗಟ್ಟಿ ಗುಣವುಳ್ಳದ್ದು (3)
6.ಕಬ್ಬಿಣದ ಅಂಶವುಳ್ಳ ತರಕಾರಿ ತಲೆಕೆಳಗಾಗಿದೆ (3)
8.ಯಾಗ ಮಾಡುವಿಕೆ ಕಡೆಯಲ್ಲಿ ದೀರ್ಘವಾಗಿದೆ (3)
10.ಹೊಟ್ಟೆಕಿಚ್ಚು ತಲೆಕೆಳಗಾಗಿದೆ (3)
12. ಕುಶನ ಕರದಲ್ಲಿರುವ ಲಗಾಮು (3)
13.ಬಂಧಿತ-ಸೆರೆಯಾಳಿನ ಕೈಗೆ ಹಾಕುವ ಬೇಡಿ (3)
14.ಮಗನಿಲ್ಲಿ ತಲೆಕೆಳಗಾಗಿದ್ದಾನೆ (3)
16.ಸಂಪಾದನೆ ಮಾಡು-ಆದಾಯವನ್ನು ಹೊಂದು (3)

5964 ಉತ್ತರ

ಎಡದಿಂದ ಬಲಕ್ಕೆ:
1.ನಿಗಿನಿಗಿಸು 3.ಅಡಗು
5.ಮನ 7.ತಸ್ಕರ 8.ಕಾಲ
9.ರಾಸು 10.ನಿಧಾನ
12.ತಮ 14.ಕ್ಷಪಣ
15.ಬಿಗಡಾಯಿಸು

ಮೇಲಿನಿಂದ ಕೆಳಕ್ಕೆ :
1.ನಿಗಮ 2.ಸುಲಲಿತ
3.ಅಹಂಕಾರ
4.ಗುರಕಾಯಿಸು
6.ಮಕುಲ
8.ಕಾರ್ಯಕಾರಣ
9.ರಾದ್ಧಾಂತ 10.ನಿಟಿಲಾಕ್ಷ
11.ಬಿಗುಮಾನ
13.ಮಣಿಸು

ಕಿರುಸುದ್ಧಿ

ಶಾಲೆಗೆ ಪ್ರಥಮ



ರೋಣ: ಸಮೀಪದ ಮಾರನಬಸರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಗೀತಾ ತಳವಾರ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಶೇ.88.12ರಷ್ಟು ಅಂಕಗಳನ್ನು ಗಳಿಸುವ ಮೂಲಕ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಮಿನಾಜ ಕಳಕಾಪೂರ ಶೇ.86.56, ರೇಣುಕಾ ಜಾಳಿಹಾಳ ಶೇ.84.80 ಅಂಕಗಳನ್ನು ಗಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಎಸ್‌ಡಿಎಂಸಿ ಹಾಗೂ ಶಾಲೆಯ ಶಿಕ್ಷಕರು ಹರ್ಷವ್ಯಕ್ತಪಡಿಸಿದ್ದಾರೆ.

ಶೇ.100ರಷ್ಟು ಫಲಿತಾಂಶ

ನರಗುಂದ: ತಾಲೂಕಿನ ಬೆನಕನಕೊಪ್ಪದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ 44 ವಿದ್ಯಾರ್ಥಿಗಳಲ್ಲಿ 31 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಹಾಗೂ 13 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಪಾಸಾಗಿ 100 ಫಲಿತಾಂಶ ಮಾಡಿದ್ದಾರೆ. ಇದು ಸತತ 15ನೇ ವರ್ಷ 100 ಫಲಿತಾಂಶ ದಾಖಲಾಗಿದೆ ಎಂದು ಶಾಲಾ ಪ್ರಾಂಶುಪಾಲ ತಿಳಿಸಿದ್ದಾರೆ.
ವಿಜಯ ತಳವಾರ 98.24 %, ಬೀರಪ್ಪ ಬೂದಿಹಾಳ 97.92 %, ವಿದ್ಯಾಶ್ರೀ ವೀರನಗೌಡ್ರ 97.76 %, ಕವಿತಾ ಹೊರಕೇರಿ 97.12%, ಸಂಜನಾ ಸಜ್ಜನ 97.12%, ವೀರೇಶ ಹದ್ಲಿ 96.96%, ಹಿಂದಿಯಲ್ಲಿ 10, ಗಣಿತದಲ್ಲಿ 1, ವಿಜ್ಞಾನದಲ್ಲಿ 1, ಸಮಾಜ ವಿಜ್ಞಾನದಲ್ಲಿ 7 ವಿದ್ಯಾರ್ಥಿಗಳು 100 ಕ್ಕೆ 100 ರಷ್ಟು ಅಂಕ ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಪ್ರಾಂಶುಪಾಲ ಡಿ.ಬಿ. ಅಡವಿ ಹಾಗೂ ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

ಶೇ.92ರಷ್ಟು ಫಲಿತಾಂಶ

ಶಿರಹಟ್ಟಿ: ಪಟ್ಟಣದ ಸಿ.ಸಿ.ಎನ್. ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡುವ ಮೂಲಕ ಜಿಲ್ಲೆಗೆ ದ್ವಿತೀಯ ಸ್ಥಾನ ಮತ್ತು ತಾಲೂಕಿನ ಪ್ರಥಮ ಸ್ಥಾನ ಪಡೆದಿದ್ದಾರೆ.
ವಿದ್ಯಾರ್ಥಿ ಸ್ನೇಹ ಕರ್ಜಗಿ ಶೇ.98.88 ಅಂಕ ಪಡೆದು ಕನ್ನಡ ಮಾಧ್ಯಮದಲ್ಲಿ ಜಿಲ್ಲೆಗೆ ದ್ವಿತೀಯ ಮತ್ತು ತಾಲೂಕಿಗೆ ಪ್ರಥಮ ಪಡೆದಿದ್ದಾಳೆ. ಶಾಲೆಗೆ ದ್ವಿತೀಯ ಸ್ಥಾನವನ್ನು ಅಶ್ವಿನಿ ಕಂಬಳಿ ಶೇ.96.48 ಹಾಗೂ ಚಿನ್ಮಯಿ ಬ್ಯಾಲಹುಣಸಿ ಶೇ.95.36 ತೃತೀಯ ಸ್ಥಾನ ಪಡೆದಿದ್ದಾರೆ. ಸ್ವಪ್ನ ಕರ್ಜಗಿ 94.72%, ಗೌರಮ್ಮ ಬೀದಿಮನಿ 93.76%, ಸಂಜನಾ ಚಿಕ್ಕತೋಟದ 92.48, ಕವನ ಕದಂ ಶೇ.92.16, ಅಮೃತ ಹಡಪದ 91.84ರಷ್ಟು ಶ್ರೇಣಿಯಲ್ಲಿ ಪಾಸಾಗಿದ್ದಾರೆ. ಶಾಲೆಯ ಫಲಿತಾಂಶ ಶೇ.92 ರಷ್ಟಾಗಿದೆ ಎಂದು ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ರಾಮಣ್ಣ ಕಂಬಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಕ್ಷ್ಮಮ್ಮ ಬಂದಪ್ಪಗೌಡ್ರ ನಿಧನ



ನರೇಗಲ್ಲ: ಇಲ್ಲಿನ ಮಜರೆ ಗ್ರಾಮ ದ್ಯಾಂಪುರದ ಶತಾಯುಷಿ ಲಕ್ಷ್ಮಮ್ಮ ಚನ್ನಪ್ಪಗೌಡ ಬಂದಪ್ಪಗೌಡ್ರ(101) ಶನಿವಾರ ನಿಧನರಾದರು. ಮೃತರು ಮೂವರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧುಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಏ.26 ರ ಮಧ್ಯಾಹ್ನ 12ಕ್ಕೆ ದ್ಯಾಂಪುರದಲ್ಲಿ ಜರುಗಲಿದೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಶೇಂಗಾ	3909-6577
ಅಜವಾನ	9200-10011
ಅಲಸಂದಿ	2477-6169
ಕಡಲೆ	1569-5516
ಉದ್ದು	2717-5889
ಔಡಲ	5329-5329
ಒಣಮೆಣಸಿಕಾಯಿ	3019-55009
ಹೆಸರು	1665-8351
ಜೋಳ	1511-1511
ಗೋವಿನಜೋಳ	1539-1719
ಸಾಸವಿ	4639-4639
ನವಣಿ	2044-2044
ಭತ್ತ	1179-1179
ಕುಸಬಿ	4749-5819
ಸೂರ್ಯಕಾಂತಿ	5739-6382
ತೊಗರಿ	2569-5899
ಗೋಧಿ	1599-4869
ಬಟಾಣೆ	5211-5525
ಮಡಕಿ	5800-5800
ತೊಗರಿ ಬ್ಯಾಳಿ	10400-10400
ಸಜ್ಜೆ	2500-2500



ಗಜೇಂದ್ರಗಡ: ನಗರದ ಪುರಸಭೆ ಸಭಾಭವನದಲ್ಲಿ ಜನಗಣತಿ 2026-27ರ ಅಡಿಯಲ್ಲಿ ಪಟ್ಟಿ ಕಾರ್ಯದಲ್ಲಿ ಶೀಘ್ರ, ಉತ್ತಮ ಕಾರ್ಯವನ್ನು ನಿರ್ವಹಿಸಿ ಪೂರ್ಣಗೊಳಿಸಿದ ಗಣತಿದಾರರಿಗೆ ಹಾಗೂ ಮೇಲ್ವಿಚಾರಕರಿಗೆ ಪುರಸಭೆ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ, ಕ್ಷೇತ್ರ ಶಿಕ್ಷಣಾಧಿಕಾರಿ ಅರ್ಜುನ ಕಾಂಬೋಗಿ ಸನ್ಮಾನಿಸಿ, ಶಿಕ್ಷಕರು ಸ್ಮಾರ್ಟ್ ವರ್ಕ್ ಮಾಡುವ ಮೂಲಕ ತಮಗೆ ನೀಡಿದ ಕಾರ್ಯವನ್ನು ಯಶಸ್ವುಗೊಳಿಸಬೇಕು ಎಂದರು. ಪುರಸಭೆ ಹಾಗೂ ಶಿಕ್ಷಣ ಇಲಾಖೆಯ ಸಿಬ್ಬಂದಿ ಇದ್ದರು.

ಪ್ರವೀಣಕುಮಾರ ಉನ್ನತ ಶಿಕ್ಷಣಕ್ಕೆ ಸಹಾಯ

ಗಜೇಂದ್ರಗಡ: ತಾಲೂಕಿನ ಸೂಡಿ ಹೊಬಳಿಯ ಪ್ರವೀನ ಸೋಬಗಿನ ಎಸ್. ಎಸ್. ಎಲ್. ಸಿ.ಯಲ್ಲಿ ಜಿಲ್ಲೆಗೆ ಟಾಪರ್ ಆದ ಹಿನ್ನೆಲೆಯಲ್ಲಿ ಪ್ರವೀಣ ನಿವಾಸಕ್ಕೆ ರೋಣ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಮಿಥುನ ಪಾಟೀಲ ಶನಿವಾರ ಭೇಟಿ ನೀಡಿ ಸನ್ಮಾನಿಸಿದರು.

ಬಳಿಕ ಮಾತನಾಡಿದ ಅವರು, ಬಡತನದ ನಡುವೆಯೂ ಎದೆಗುಂದದೆ ತಾನೇ ಮನೆಯಲ್ಲಿ ಓದಿಕೊಂಡು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಜಿಲ್ಲೆಯ ಟಾಪರ್ ಆಗಿ 625ಕ್ಕೆ 622 ಅಂಕಗಳನ್ನು ಪಡೆದು ಸಾಧನೆ ಮಾಡಿದ್ದಾನೆ. ಇವನ ಉನ್ನತ ಶಿಕ್ಷಣಕ್ಕೆ ಶಾಸಕ ಜಿ.ಎಸ್.ಪಾಟೀಲ ಹಾಗೂ ನಾನು ಅವನ ಜೊತೆ ಇರುತ್ತೇವೆ ಎಂದರು.

ರೋಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೀರಣ್ಣ ಶೆಟ್ಟರ ಮಾತನಾಡಿ, ನಮ್ಮ ಗ್ರಾಮದ ಹುಡುಗ ಜಿಲ್ಲೆಗೆ ಟಾಪರ್ ಆಗಿದ್ದು ಹೆಮ್ಮೆ. ಮುಂದಿನ ದಿನಗಳಲ್ಲಿ ಉನ್ನತ ಶಿಕ್ಷಣ ಪಡೆದು ಉನ್ನತ ಹುದ್ದೆಗೆ ಏರಿದರೆ ಗ್ರಾಮಕ್ಕೂ, ಕುಟುಂಬಕ್ಕೂ ಒಳ್ಳೆಯ ಹೆಸರು ಬರುತ್ತದೆ. ಈ ನಿಟ್ಟಿನಲ್ಲಿ ಪಾಲಕರು ಶ್ರಮವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಶಿವಕುಮಾರ ಪಟ್ಟಣಶೆಟ್ಟಿ, ಶರೀಫ ಡಾಲಾಯತ, ವಿರೇಶ ಪಟ್ಟಣಶೆಟ್ಟಿ, ಶಶಿಧರ ವಕ್ಕಲರ, ಪ್ರಕಾಶ ಕುಬಸದ, ಅನ್ವರ, ಅಮರೇಶ ಅಪಣ್ಣನವರ, ಶರಣಪ್ಪ ಗೋರವರ ಸೇರಿದಂತೆ ಇತರರಿದ್ದರು.



ಗಜೇಂದ್ರಗಡ: ತಾಲೂಕಿನ ಸೂಡಿ ಹೊಬಳಿಯ ಪ್ರವೀನ ಸೋಬಗಿನ ಎಸ್. ಎಸ್. ಎಲ್. ಸಿ.ಯಲ್ಲಿ ಜಿಲ್ಲೆಗೆ ಟಾಪರ್ ಆದ ಹಿನ್ನೆಲೆಯಲ್ಲಿ ಪ್ರವೀಣ ನಿವಾಸಕ್ಕೆ ರೋಣ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಮಿಥುನ ಪಾಟೀಲ ಶನಿವಾರ ಭೇಟಿ ನೀಡಿ ಸನ್ಮಾನಿಸಿದರು.

ನಿರ್ಲಕ್ಷ್ಯಕ್ಕೆ ಹಾಳು ಬಿದ್ದ ಉದ್ಯಾನವನಗಳು!



- ಉದ್ಯಾನವನಗಳಿಗೆ ಓರ್ವ ಕಾವಲುಗಾರರನ್ನು ನೇಮಿಸಿ
- ಪುರಸಭೆಗೆ ಜನಪ್ರತಿನಿಧಿಗಳು, ಮುಖ್ಯಾಧಿಕಾರಿಗಳು ಭೇಟಿ ನೀಡುತ್ತಿದ್ದರೂ ಉದ್ಯಾನವನಗಳನ್ನು ನೋಡುವವರು, ಅವುಗಳನ್ನು ಕಾಳಜಿ ಮಾಡುವವರು ಇಲ್ಲದಂತಾಗಿದೆ
- ಅಧಿಕಾರಿಗಳು ಕಾಳಜಿ ತೋರಲಿ ಎಂಬುದು ಜನರ ಆಗ್ರಹ

ಸಿ.ಎಸ್.ಅರಸನಾಳ

ಮುಂಡರಗಿ: ಪಟ್ಟಣದ ಅಂದ ಹೆಚ್ಚಿಸಲು ಉದ್ಯಾನವನಗಳುಇರಬೇಕು. ಆದರೆಮುಂಡರಗಿ ಪಟ್ಟಣದಲ್ಲಿ ಇರುವ 2–3 ಉದ್ಯಾನವನಗಳು ಪುರಸಭೆಯವರ ನಿರ್ಲಕ್ಷ್ಯದಿಂದ ಹದಗೆಟ್ಟು ಅಲ್ಲಿ ಅನೈತಿಕತೆಯ ಚಟುವಟಿಕೆಗಳು ನಡೆಯುವ ತಾಣವಾಗಿದೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

ಮುಂಡರಗಿ ಪಟ್ಟಣ ಬಹುವೇಗವಾಗಿ ಬೆಳೆಯುತ್ತಿರುವ ಪಟ್ಟಣ. ವಿವಿಧ ಬಡಾವಣೆಗಳು ಹುಟ್ಟಿಕೊಂಡು ಪಟ್ಟಣ ವಿಸ್ತಾರಗೊಳ್ಳುತ್ತಿದೆ. ಆದರೂ ಒಂದೂ ಹೇಳಿಕೊಳ್ಳುವ ಉದ್ಯಾನವನ ಇಲ್ಲಿ ಇಲ್ಲ. ಪುರಸಭೆಯ ಮುಂದೆ ಇರುವ ಉದ್ಯಾನವನ, ಪುರಸಭೆ ವ್ಯಾಪ್ತಿಯ ಬ್ಯಾಲವಾಡಗಿ ಹತ್ತಿರವಿರುವ ಉದ್ಯಾನವನ, ರಾಘವೇಂದ್ರಸ್ವಾಮಿ ದೇವಾಲಯದ ಹತ್ತಿರ ಇರುವ ಉದ್ಯಾನವನ, ಹುಡ್ಕೋ ಕಾಲನಿ ಉದ್ಯಾನವನ ಪುರಸಭೆಯವರ ಕಾಳಜಿ ಇಲ್ಲದೆ ಕುರಿಗಳು -ಆಡುಗಳು ವಿಶ್ರಾಂತಿ ಪಡೆಯುವ ಮತ್ತು ಪೋಕರಿಗಳ ಅನೈತಿಕ ಚಟುವಟಿಕೆಗಳನ್ನು ನಡೆಸುವ ಸ್ಥಳಗಳಾಗಿವೆ.

ಪಟ್ಟಣದ ಸುಂದರತೆಯನ್ನು ಕಾಪಾಡುವುದು ಪುರಸಭೆಯ ಕರ್ತವ್ಯ. ಪಟ್ಟಣ ಸುಂದರ ಕಾಣುವುದಾದರೆ ಉದ್ಯಾನವನಗಳು ಹಸಿರಾಗಿ ನಳನಳಿಸುತ್ತಿರಬೇಕು. ಆದರೆ ಇಲ್ಲಿಯ ಗಿಡಗಳು ಒಣಗಿವೆ, ಅಲ್ಲಿ ವಾಕಿಂಗ್ ಮಾಡಬಹುದಾದ ಪಾಥ್ ಸಂಪೂರ್ಣ ನಾಶವಾಗಿ ಅಂದಗೆಟ್ಟಿವೆ. ಇರುವ 3–4 ಉದ್ಯಾನವನಗಳು ಹಾಳಾಗಿವೆ.

ಇನ್ನು ಹೊಸ ಉದ್ಯಾನವನಗಳ ನಿರ್ಮಾಣದ ಬಗ್ಗೆ ಪುರಸಭೆಯು ತಲೆಗೆಡಿಸಿಕೊಳ್ಳುತ್ತಿಲ್ಲ ಎಂದು ಜನರು ದೂರುತ್ತಿದ್ದಾರೆ. ಸುಮಾರು 6–7 ವರ್ಷದ ಹಿಂದ 26 ಲಕ್ಷ ರೂ. ಖರ್ಚುಮಾಡಿ ನಿರ್ಮಿಸಿದ್ದ ಬ್ಯಾಲವಾಡಗಿ ಹತ್ತಿರದ ಉದ್ಯಾನವನ ಇವತ್ತು ಹಾಳುಬಿದ್ದ ಕೊಂಪೆಯಾಗಿದೆ. ಇಲ್ಲಿ ಜಾರುಬಂಡೆ, ಮಕ್ಕಳು ಕುಳಿತು ತಿರಗಲು ತಿರುಗು ಬಂಡಿ, ಅಲ್ಲಲ್ಲಿ ಕುಳಿತುಕೊಳ್ಳು ಆಸನಗಳು, ಇವೆಲ್ಲ ವ್ಯವಸ್ಥೆಯಿದ್ದು, ಕಾಳಜಿ ಇಲ್ಲದ ಪರಿಣಾಮ ಎಲ್ಲವೂ ಅವಸಾನದ ಅಂಚಿನಲ್ಲಿವೆ.ಮರಗಿಡಗಳು ಸಂಪೂರ್ಣ ಒಣಗಿದ್ದು, ಫುಟ್‌ಪಾತ್‌ನ ಸರದಿಯಾಗಿ ಬಣ್ಣದ ಲೈಟುಗಳು ಕಂಗೊಳಿಸುತ್ತಿದ್ದವು. ಕಾರಂಜಿ ಕಣ್ಣಿಗೆ ಹಬ್ಬ ನೀಡುತ್ತಿತ್ತು, ಆದರೆ ಈಗ ಯಾವವೂ ಇಲ್ಲ, ಅದೊಂದು ಹಾಳುಬಿದ್ದ ಸ್ಥಳವಾಗುತ್ತಿದೆ ಎಂಬುದು ಸಾರ್ವಜನಿಕರ ಆರೋಪ.

10 ಗುಂಟೆ ಮೀಸಲು

1995 ರಿಂದ ಈವರೆಗೆ ಪುರಸಭೆ ವ್ಯಾಪ್ತಿಯ ಸುಮಾರು 183 ಲೇಔಟ್‌ಗಳು ಆಗಿವೆ. ಪ್ರತಿ ಲೇಔಟ್‌ನಲ್ಲಿ ಕನಿಷ್ಠ 2 ರಿಂದ 10 ಗುಂಟೆಯವರೆಗೆ ಉದ್ಯಾನವನಕ್ಕಾಗಿ ಮೀಸಲಿರಿಸಲಾಗಿದೆ. ಅನೇಕ ಉದ್ಯಾನವನಗಳ ಸ್ಥಳಗಳು ಫೆನ್ಸಿಂಗ್ ಆಗಿವೆ. ಆದರೆ ಅಲ್ಲಿ ಉದ್ಯಾನವನಗಳ ಯಾವ ಕೆಲಸವೂ ನಡೆಯುತ್ತಿಲ್ಲ. ಈ ಎಲ್ಲ ಉದ್ಯಾನವನಗಳ ಜಾಗಗಳಲ್ಲಿ ಅಧಿಕಾರಿಗಳು ಸುಂದರವಾದ ಉದ್ಯಾನವನಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಬೇಕು ಎನ್ನುವುದು ಸಾರ್ವಜನಿಕರ ಒತ್ತಾಯವಾಗಿದೆ. ಈ ವರ್ಷದ ಬಜೆಟ್ ನಲ್ಲಿ ಉದ್ಯಾನವನ ಅಭಿವೃದ್ಧಿಗೆ ಹಣವನ್ನು ತೆಗೆದಿರಿಸಿದ್ದು, ಈಗಲಾದರೂ ಉದ್ಯಾನವನಗಳ ಅಭಿವೃದ್ಧಿ ಆಗಲೇಬೇಕು ಎಂದು ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ.

ಅಭಿವೃದ್ಧಿಗೆ ಒತ್ತಾಯ

ಬ್ಯಾಲವಾಡಗಿ ಹತ್ತಿರವಿರುವ ಉದ್ಯಾನವನ ಮೊದಲು ಬಹಳ ಚೆನ್ನಾಗಿತ್ತು. ಬಹಳಷ್ಟು ಮಕ್ಕಳು ಇಲ್ಲಿ ಸಂತೋಷದಿಂದ ಆಟವಾಡಿ ಪುಳಕಿತರಾಗುತ್ತಿದ್ದರು. ಕಳೆದ 4–5 ವರ್ಷದಿಂದ ಕಾಳಜಿ ಇಲ್ಲದೆ ಈಗ ಹಾಳು ಬಿದ್ದಿದೆ. ಇಲ್ಲಿಯ ವೈವಿಧ್ಯತೆ ಕೆಟ್ಟುಹೋಗಿದೆ. ಈ ಉದ್ಯಾನವನ ಮುಂಡರಗಿ ಪಟ್ಟಣಕ್ಕೆ ಶೋಭೆ ತರುತ್ತಿತ್ತು. ಪುರಸಭೆಯ ನಿಷ್ಕಾಳಜಿಗೆ ಹಿಡಿದ ಕನ್ನಡಿಯಾಗಿದೆ. ಅದನ್ನು ಮರುಪೂರ್ಣಗೊಳಿಸಬೇಕು. ಈ ವರ್ಷ ಪಟ್ಟಣದ ಉದ್ಯಾನವನ ಅಭಿವೃದ್ಧಿ ಸಂಘ ಮಾಡಿ, ಅಧಿಕಾರಿಗಳನ್ನು ಉದ್ಯಾನವನಗಳ ಅಭಿವೃದ್ಧಿಗೆ ಒತ್ತಾಯಿಸಲಾಗುವುದು ಎಂದು ಮುಂಡರಗಿ ಸಾಮಾಜಿಕ ಕಾರ್ಯಕರ್ತ ದೇವಪ್ಪ ಇಟಗಿ ಹೇಳಿದ್ದಾರೆ.

> ಉದ್ಯಾನವನಗಳ ಅಭಿವೃದ್ಧಿಗೆ ಹಣ ತಗೆದಿರಿಸಿ ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುವುದು. ಪುರಸಭೆಯಿಂದಲೇ ಸಿಬ್ಬಂದಿ ನೇಮಿಸಿ ಸಮರ್ಪಕ ನಿರ್ವಹಣೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
> ■ ಸಿದ್ದರಾಯ್ ಕಟ್ಟಿಮನಿ, ಮುಖ್ಯಾಧಿಕಾರಿ, ಪುರಸಭೆ, ಮುಂಡರಗಿ

ವಿಕೇಂದ್ರೀಕರಣವೇ ಗ್ರಾಮಾಭಿವೃದ್ಧಿಗೆ ದಿಕ್ಕು



ಗದಗ: ವಿಕೇಂದ್ರೀಕರಣ ವ್ಯವಸ್ಥೆ ಜಾರಿಯಲ್ಲಿ ಗದಗ ಜಿಲ್ಲೆ ಇತರ ಜಿಲ್ಲೆಗಳಿಗೆ ಮಾದರಿಯಾಗಬೇಕು. ಪಂಚಾಯತ್ ರಾಜ್ ವ್ಯವಸ್ಥೆ ರಾಜಕೀಯ ನಾಯಕತ್ವ ಬೆಳೆಸುವ ಪಾಠಶಾಲೆಯಾಗಿದ್ದು, ಅದನ್ನು ಸರಿಯಾಗಿ ಸದ್ಬಳಕೆ ಮಾಡಿಕೊಳ್ಳಬೇಕು. ಜನರಿಗೆ ನೀಡಿರುವ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಹಂಬಲ ಜನಪ್ರತಿನಿಧಿಗಳಲ್ಲಿ ಇರಬೇಕು. ವಿಕೇಂದ್ರೀಕರಣವೇ ಗ್ರಾಮಾಭಿವೃದ್ಧಿಗೆ ದಿಕ್ಕು ಎಂದು ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್. ಪಾಟೀಲ ಹೇಳಿದರು.

ನಗರದ ಜಿಲ್ಲಾಡಳಿತದ ಆಟಡಿಟೋರಿಯಂ ಸಭಾಂಗಣದಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜಿಲೆಯಲ್ಲಿ ಗಾಂಧೀಜಿ ಗ್ರಾಮ ರಾಜ್ಯದೊಂದಿಗೆ ರಾಮ ರಾಜ್ಯ ನಿರ್ಮಾಣವಾಗಬೇಕು ಎಂಬ ಆಶಯವ್ಯಕ್ತಪಡಿಸಿದ ಅವರು, ಆ ನಿಟ್ಟಿನಲ್ಲಿ ಎಲ್ಲರೂ ಕಾರ್ಯೋನ್ಮುಖರಾಗಬೇಕೆಂದರು. ಪಂಚಾಯತ್ ರಾಜ್ ಸಚಿವರಾಗಿದ್ದ ನಜೀರ್ ಸಾಬ್ ಅವರ ಪರಿಕಲ್ಪನೆಯ ವಿಕೇಂದ್ರೀಕರಣ ವ್ಯವಸ್ಥೆ ದೇಶದಲ್ಲಿ ಬಲಪಡಿಸಲು ಅವರು ಕಾನೂನು ರೂಪಿಸಿ ಅನುಷ್ಠಾನಕ್ಕೆ ಅಡಿಗಲ್ಲು ಹಾಕಿದ ವಿಚಾರವನ್ನು ಅವರು ಸ್ಮರಿಸಿದರು.

ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಮಾತನಾಡಿ, ಹಿಂದಿನ ಕಾಲದಲ್ಲಿ ಗ್ರಾಮ ಮಟ್ಟದಲ್ಲೇ ಪಂಚಾಯತಿ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಪದ್ಧತಿ ಇತ್ತು. ಇಂದಿನ ದಿನಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಮತ್ತಷ್ಟು ಬಲಿಷ್ಠವಾಗಿ ರೂಪುಗೊಂಡಿದ್ದು, ರಾಜ್ಯದಲ್ಲಿ ವಿಕೇಂದ್ರೀಕರಣ ವ್ಯವಸ್ಥೆ ಸಮರ್ಥವಾಗಿ ಜಾರಿಗೊಂಡಿದೆ.ಗ್ರಾಮ ಪಂಚಾಯತ್ ಸದಸ್ಯರು ತಮ್ಮ ವಾರ್ಡ್‌ನ್ನು ಮಾದರಿ ವಾರ್ಡನ್ನಾಗಿಸಲು ಸಂಕಲ್ಪಬದ್ಧರಾಗಿರಬೇಕು. ವಿಕೇಂದ್ರೀಕರಣವಿಲ್ಲದೆ ಗ್ರಾಮ ಆಡಳಿತ ಅಸಾಧ್ಯ ಎಂಬ ಹಂತಕ್ಕೆ ಸಮಾಜ ತಲುಪಿದೆ ಎಂದರು.

ಉಪನ್ಯಾಸಕ ಪ್ರಕಾಶ ಮಾಚೇನಹಳ್ಳಿ ಮಾತನಾಡಿ, ಗ್ರಾಮಗಳು ಸ್ವಾಯತ್ತತೆ ಸಾಧಿಸಿದಾಗ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯ ಎಂದು ಗಾಂಧೀಜಿ ಪ್ರತಿಪಾದಿಸಿದ್ದರು. ಜನರಿಗೆ ಹತ್ತಿರದ ಆಡಳಿತ ವ್ಯವಸ್ಥೆಯೇ ಪಂಚಾಯತ್ ಆಡಳಿತ ಎಂದು ಅವರು ದೃಢವಾಗಿ ನಂಬಿದ್ದರು ಎಂದು ಹೇಳಿದರು.

ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಬಿ.ಬಿ.ಅಸೂಟಿ, ಜಿಪಂ ಮಾಜಿ ಅಧ್ಯಕ್ಷ ವಾಸಣ್ಣ ಕುರಡಗಿ, ಸಿದ್ದು ಪಾಟೀಲ, ಪ್ರೊ.ಜೆ.ಕೆ. ಜಮಾದಾರ, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ ಕೆ.ಆರ್., ಡಿಎಸ್ ಸಿ.ಆರ್. ಮುಂಡರಗಿ, ಎಂ.ವೈ. ಪಾಟೀಲ ಇದ್ದರು.

ಹೋಟೆಲ್ ವ್ಯಾಪಾರಿ ಮಗ ಜಿಲ್ಲೆಗೆ ಪ್ರಥಮ

ಸೀತಲ ಓಲೇಕಾರ

ಗಜೇಂದ್ರಗಡ: ತಾಲೂಕಿನ ಸೂಡಿ ಗ್ರಾಮದ ಹೋಟೆಲ್ ವ್ಯಾಪಾರವನ್ನು ಮಾಡುವ ದಂಪತಿ ಈರಪ್ಪ–ಲಲಿತಾ ಸೋಬಗಿನ ಅವರ ಮಗ ಪ್ರವೀಣಕುಮಾರ ಸೊಬಗಿನ ತಂದೆ,ತಾಯಿಯ ಜೊತೆಗೆ ಶಾಲೆಯ ಬಿಡುವಿನ ಸಮಯದಲ್ಲಿ ಹೋಟೆಲ್‌ದಲ್ಲಿ, ಕೃಷಿ ಕೂಲಿ ಮಾಡುತ್ತಾ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶದಲ್ಲಿ ಗದಗ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾನೆ.

ಪ್ರವೀಣಕುಮಾರ ಬಡತನದ ನಡುವೆಯೂ ಕುಗ್ಗದೆ ತಾನೇ ಮನೆಯಲ್ಲಿ ಓದಿಕೊಂಡು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಜಿಲ್ಲೆಯ ಟಾಪರ್ ಆಗಿ 625ಕ್ಕೆ 622 ಅಂಕಗಳನ್ನು ಪಡೆದು ಓದಿದ ಶಾಲೆಗೆ ಹಾಗೂ ಗ್ರಾಮಕ್ಕೆ ಕೀರ್ತಿ ತಂದಿದ್ದಾನೆ. ತಾವು ಇದುವರೆಗೂ ಮಗನಿಗೆ ಚೆನ್ನಾಗಿ ಓದು ಎಂದೂ ಒತ್ತಡ ಹೇರುತ್ತಿರಲಿಲ್ಲ, ರಾತ್ರಿ ಹೆಚ್ಚು ಸಮಯದವರೆಗೂ ಓದಿದರೆ ಆರೋಗ್ಯ ಹಾಳಾಗುತ್ತದೆ. ನಿದ್ದೆಯೂ ಮಾಡಬೇಕು. ಓದುವ ಸಮಯದಲ್ಲಿ ಮಾತ್ರ ಓದು ಎಂದು ಹೇಳುತ್ತಿದ್ದ. ಇದೀಗ ಮಗನ ಸಾಧನೆ ನಮಗೆ ಅಪಾರ ಸಂತೋಷ ನೀಡಿದೆ ಎಂದು ಪಾಲಕರು ತಿಳಿಸಿದರು. ವಿದ್ಯಾರ್ಥಿಯ ತಾಯಿ ಲಲಿತಾ ಕೂಡಾ ಹೋಟೆಲ್ ಜೊತೆಗೆ ಕೃಷಿ ಕೂಲಿ ಮಾಡಿದರೂ ಒಬ್ಬ ಒಳ್ಳೆಯ ಗೃಹಿಣಿಯಾಗಿದ್ದು ತಾವು ಮಗನಿಗೆ ಸಮಯಕ್ಕೆ ಸರಿಯಾಗಿ ಊಟ, ತಿಂಡಿ ನೀಡಿದ್ದೇವೆಯೇ ಹೊರತು ಹೆಚ್ಚುವರಿಯಾಗಿ ನಾವೇನು ಮಾಡಲು ಸಾಧ್ಯವಾಗಿಲ್ಲ, ಅವನ ಈ ಫಲಿತಾಂಶಕ್ಕೆ, ಎಲ್ಲಾ ಪ್ರವೀಣನ ಶ್ರಮವೇ ಆಗಿದೆ ಎನ್ನುತ್ತಾರೆ ವಿದ್ಯಾರ್ಥಿಯ ತಾಯಿ ಲಲಿತಾ.



> ಪ್ರವೀಣಕುಮಾರ ಸೊಬಗಿನ ಎಲ್ಲಾ ವಿದ್ಯಾರ್ಥಿಗಳಿಗಿಂತ ಭಿನ್ನವಾಗಿದ್ದು, ತಂದೆ–ತಾಯಿಗೆ ಆಸರೆಯಾಗುವ ಮೂಲಕ ಶಾಲೆಯಲ್ಲೂ ಓದಿನಲ್ಲಿ ಮುಂದಿದ್ದ. ಇದರಿಂದಲೇ ಸಾಧನೆ ಸಾಧ್ಯವಾಗಿದೆ.
> ■ ಫರೀದಾ ಡಾಲಾಯತ, ಮುಖ್ಯೋಪಾಧ್ಯಾಯಿನಿ, ಪಿಎಂಶ್ರೀ ಆದರ್ಶ ಶಾಲೆ

> ಜಿಲ್ಲೆಗೆ ಟಾಪರ್ ಆಗುತ್ತೇನೆಂದು ನಿರೀಕ್ಷೆ ಇರಲಿಲ್ಲ, ಪ್ರಾರಂಭದ ಹಂತದಿಂದಲೂ ಹೆಚ್ಚುವರಿ ಶ್ರಮ ಹಾಕಿ ಏನೂ ಓದುತ್ತಿರಲಿಲ್ಲ. ನಂತರ ಶಾಲಾ ಶಿಕ್ಷಕರು ಪ್ರತಿವಾರ ಮನೆಗೆ ಬಂದು ಪೋಷಕರೊಂದಿಗೆ ಮಾತನಾಡಿದರು. ಬಳಿಕ ನಾನು ವಿಜ್ಞಾನ ಹಾಗೂ ಗಣಿತ ವಿಷಯಗಳಲ್ಲಿ ಹೆಚ್ಚಿನ ಗಮನ ಕೇಂದ್ರೀಕರಿಸಿದೆ. ಇದರಿಂದ ಉತ್ತಮ ಫಲಿತಾಂಶ ಬರಲು ಸಾಧ್ಯವಾಯಿತು.
> ■ ಪ್ರವೀಣಕುಮಾರ, ವಿದ್ಯಾರ್ಥಿ

ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ಇಂದು: ಜಿ.ಎಸ್.ಪಾಟೀಲ



ರೋಣ: ಪಟ್ಟಣದಲ್ಲಿ 4 ಕೋಟಿ 85 ಲಕ್ಷ ರೂ.ಗಳ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಏ.26ರಂದು ಚಾಲನೆ ನಿಡಲಾಗುತ್ತಿದೆ ಎಂದು ರಾಜ್ಯ ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ಜಿ.ಎಸ್.ಪಾಟೀಲ ಹೇಳಿದರು.

ಅವರು ಶನಿವಾರ ತಮ್ಮ ನಿವಾಸದಲ್ಲಿ ಮಾತನಾಡಿ, ಈಗಾಗಲೇ ಪಟ್ಟಣದ ಎಂಆರ್‌ಬಿಸಿ ಕಾಲುವೇಯಿಂದ ಮತ್ತು ಸೂಡಿ ರಸ್ತೆಯಲ್ಲಿ ದ್ವಿಪಥ ಸಿಸಿ ರಸ್ತೆ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ. ಫುಟ್‌ಪಾಥ್ ನಿರ್ಮಾಣವಾಗುತ್ತಿದ್ದು, ರಸ್ತೆ ಕಾಮಗಾರಿ ಮುಗಿಯುತ್ತಿದ್ದಂತೆ ಆಕರ್ಷಕ ವಿದ್ಯುತ್ ದೀಪಗಳನ್ನು ಅಳವಡಿಸಲಾಗುವುದು. ಮುಖ್ಯವಾಗಿ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ 38 ಕೋಟಿ ರೂ.ಗಳ ವೆಚ್ಚದಲ್ಲಿ ವಸತಿ ಶಾಲೆಯ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ ಎಂದ ಅವರು, 50 ಕೋಟಿ ರೂ. ವೆಚ್ಚದ ಜಿಟಿಟಿಸಿ ಕಾಲೇಜು ಕಟ್ಟಡ ಮೊದಲ ಹಂತ ಮುಗಿಯುವ ಹಂತದಲ್ಲಿದ್ದು ಬರುವ ಶೈಕ್ಷಣಿಕ ವರ್ಷದಿಂದ ಕಾಲೇಜನ್ನು ಪ್ರಾರಂಭಿಸಲಾಗುವುದು ಎಂದರು.

ರೋಣ ಪಟ್ಟಣದಲ್ಲಿರುವ 10 ಮತ್ತು 11ನೇ ಶತಮಾನದ ಪ್ರಾಚೀನ ದೇವಸ್ಥಾನಗಳ ಮರು ನಿರ್ಮಾಣಕ್ಕೆ 4 ಕೋಟಿ 50 ಲಕ್ಷ ರೂ.ಗಳ ಅನುದಾನವನ್ನು ಒದಗಿಸಿದ್ದು, ಕಾಮಗಾರಿಗಳು ನಡೆಯುತ್ತಿವೆ. ವಾಲ್ಮೀಕಿ ಸಮುದಾಯ ಭವನ, ಡಾ. ಬಿ.ಆರ್.ಅಂಬೇಡ್ಕರ್ ಭವನ, ಡಾ.ಬಾಬು ಜಗಜೀವನ್ ರಾಮ್ ಸಮುದಾಯ ಭವನ ನಿರ್ಮಾಣಕ್ಕೂ 4 ಕೋಟಿ ರೂ.ಗಳ ಅನುದಾನವನ್ನು ನೀಡಿ ಕಾಮಗಾರಿಗಳಿಗೆ ಚಾಲನೆ ನಿಡಲಾಗಿದೆ ಎಂದರು.

ಪಟ್ಟಣದಲ್ಲಿ ಪ್ರವಾಸಿ ತಾಣವಿಲ್ಲ ಎಂಬ ಕೊರಗುಯಿತ್ತು. ಈಗ ಆ ಕೊರಗನ್ನು ಹೊಗಲಾಡಿಸಲು ಜಿಗಳೂರ ಕೆರೆಯ ತಟದಲ್ಲಿ ಸಾಲು ಮರದ ತಿಮ್ಮಕ್ಕ ಉದ್ಯಾನವನ್ನು ಸಾರ್ವಜನಿಕರ ವಿಕ್ಷಣೆಗೆ ಲೋಕಾರ್ಪಣೆಗೊಳಿಸಿದ್ದು, ಉದ್ಯಾನವನದ ಮತ್ತಷ್ಟು ಅಭಿವೃದ್ಧಿ ಕಾರ್ಯಗಳಿಗೆ 1 ಕೋಟಿ ರೂ.ಗಳ ಅನುದಾವನ್ನು ಸರ್ಕಾರ ಮಂಜೂರು ಮಾಡಿದ್ದು ಕಾಮಗಾರಿಗೂ ಚಾಲನೆ ನೀಡಲಾಗಿದೆ. ರೈತರ ಹಿತದೃಷ್ಟಿಯಿಂದ 6 ಕೋಟಿ ರೂ.ಗಳ ವೆಚ್ಚದಲ್ಲಿ ಕೋಲ್ಡ್ ಸ್ಟೋರೇಜ್ ನಿರ್ಮಾಣಕ್ಕೆ ಶೀಘ್ರ ಭೂಮಿಪೂಜೆಯನ್ನು ನೆರವೇರಿಸಲಾಗುವುದು ಎಂದರು. ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗನಗೌಡ ಪಾಟೀಲ, ಬಸವರಾಜ ನವಲಗುಂದ, ವಿ.ಬಿ.ಸೋಮನಕಟ್ಟಿಮಠ, ಯೂಸುಪ್ ಇಟಗಿ, ಬಾವಾಸಾಬ ಬೆಟಗೇರಿ, ಸಂಗು ನವಲಗುಂದ, ಅಪ್ಪು ಗಿರಡ್ಡಿ, ಆನಂದ ಚಂಗಳಿ, ಮಲೀಕ ಯಲಿಗಾರ, ಸಂಜಯ ದೊಡ್ಡಮನಿ, ಸೋಮು ನಾಗರಾಜ ಸೇರಿದಂತೆ ಇತರರಿದ್ದರು.

ಎಸ್‌ಎಸ್‌ಎಲ್‌ಸಿಯಲ್ಲಿ ಜಿಲ್ಲೆಗೆ ಪ್ರಥಮ: ಪದ್ಮಾವತಿ ಶಾಬಾದಿಗೆ ಸನ್ಮಾನ

ಗಜೇಂದ್ರಗಡ: ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನಗಳಿಸಿದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿ ಪದ್ಮಾವತಿ ಶಾಬಾದಿ 625 ಕ್ಕೆ 619 ಅಂಕ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದ್ದಕ್ಕೆ ವಿದ್ಯಾರ್ಥಿನಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಸನ್ಮಾನಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಅರ್ಜುನ ಕಾಂಬೋಗಿ ಮಾತನಾಡಿ, ರೋಣ ತಾಲೂಕಿನಲ್ಲಿ ಶೇ.94.55ರಷ್ಟು ಫಲಿಂತಾಶವಾಗಿದೆ. ತಾಲೂಕಿನ 26 ಶಾಲೆಗಳಲ್ಲಿ 100ಕ್ಕೆ 100 ಫಲಿತಾಂಶ ಪಡೆದಿದೆ. ಈ ನಿಟ್ಟಿನಲ್ಲಿ ಪದ್ಮಾವತಿ ಶಾಬಾದಿಯ ಮುಂದಿನ ಭವಿಷ್ಯ ಉತ್ತಮವಾಗಲಿ ಹಾಗೂ ಆ ಶಾಲೆಯ ಸಿಬ್ಬಂದಿ ಶ್ರಮ ಶ್ಲಾಘನೀಯ ಎಂದರು.

ಸಿ.ಆರ್. ಪಿ. ಆರ್.ಜಿ. ಮ್ಯಾಕಲ್ ಮಾತನಾಡಿ, ಈ ವಿದ್ಯಾರ್ಥಿನಿ ಸಾಧನೆ ಮಾಡಿದ್ದು ಹೆಮ್ಮೆ ಯಸಂಗತಿ. ಕ್ಷೇತ್ರ ಶಿಕ್ಷಣಾಧಿಕಾರಿ ಅರ್ಜುನ ಕಾಂಬೋಗಿ ಮಾರ್ಗದರ್ಶನದಲ್ಲಿ ಶಾಲೆಯ ಎಲ್ಲಾ ಶಿಕ್ಷಕರ ನಿರ್ದೇಶನದಲ್ಲಿ ಮಕ್ಕಳ ಸಾಧನೆಯು ಮಾದರಿಯಾಗಿದೆ ಎಂದರು.

ಮುಖ್ಯಶಿಕ್ಷಕ ಬಸವರಾಜ ಕಡಬಿನ ಮಾತನಾಡಿ, ಪದ್ಮಾವತಿ ಶಾಬಾದಿಯ ತಂದೆ ಮಾರುತ ಶಾಬಾದಿ ನೇಕಾರಿಕೆ ಮಾಡುತ್ತಾ ಮಗಳಿಗೆ ಶಾಲೆಗೆ ಕಳಿಸುತ್ತಿದ್ದರು. ಪದ್ಮಾವತಿಯು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಯೂ ಸಹ ಮುಂದೆ



ಇದ್ದಳು ಎಂದರು.

ಎಸ್.ಡಿ.ಎಂ.ಸಿ ಬಸವರಾಜ ಗೊಂಗಡಶೆಟ್ಟಿ, ಇಸಿಓ ಮಲ್ಲನಗೌಡ ಪಾಟೀಲ, ಉತ್ತರ ವಲಯ ಸಿ.ಆರ್.ಪಿ. ಕಾಲೇಶ ವನ್ನಾಲ, ಆರ್.ಎಸ್. ಸಿಂಗಾರಪ್ಪೂರಿ, ಎಸ್.ಡಿ.ಕುರಿ, ಎ.ಜಿ.ಬೂದಿಹಾಳ, ಎಚ್. ಆರ್. ಭಜೇಂತ್ರಿ, ಸೋಮಶೇಖರ ಸಿ., ಎಸ್.ಎನ್. ಮಹೇಂದ್ರಕರ, ಎ.ಎನ್.ರೋಣದ, ಬಿ.ಆರ್. ಮ್ಯಾಗೇರಿ, ಜಿ.ಎನ್.ಹಾಸಲಕರ್, ಐ.ಎಚ್.ಬದಾಮಿ ಸೇರಿದಂತೆ ಅನೇಕರು ಇದ್ದರು.

ಸನ್ ಸ್ಟ್ರೋಕ್–ಹೀಟ್ ಸ್ಟ್ರೋಕ್‌ಗೆ ಸ್ಪೆಷಲ್ ಬೆಡ್ ವ್ಯವಸ್ಥೆ

ನರಗುಂದ: ರಾಜ್ಯದಲ್ಲಿ ರಣ ಬಿಸಿಲು ತಾಂಡವವಾಡುತ್ತಿದೆ. ಬಿಸಿಲಿನ ಹೊಡೆತಕ್ಕೆ ಜನರು ತತ್ತರಿಸಿ ಹೋಗಿದ್ದಾರೆ. ಅದರಲ್ಲೂ ಗದಗ ಜಿಲ್ಲೆಯಲ್ಲಿ ಸುಮಾರು 39–40 ಡಿಗ್ರಿ ಸೆಲ್ಸಿಯಸ್ ನಷ್ಟು ತಾಪಮಾನ ಹೆಚ್ಚಾಗಿದೆ. ನರಗುಂದ ಪಟ್ಟಣದಲ್ಲಿಯು ಜನರು ಮನೆಯಿಂದ ಹೊರಗಡೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಮುಂಜಾನೆ ಹೊತ್ತಿಗೆ ಶೇ.35 ರಷ್ಟು ತಾಪಮಾನ ಆರಂಭವಾಗುತ್ತಿದೆ. ಮಧ್ಯಾಹ್ನ 39–40 ಡಿಗ್ರಿ ಸೆಲ್ಸಿಯಸ್ ನಷ್ಟು ಉಷ್ಣಾಂಶ ಹೆಚ್ಚಾಗಿದೆ. ಜನರು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಅದರಲ್ಲೂ ಬಿಸಿಲು ಆರಂಭವಾಗುತ್ತಿದ್ದಂತೆ ಉಷ್ಣಾಂಶ ಹೆಚ್ಚಾಗುತ್ತಿದೆ. ಇದ್ರಿಂದ ಸನ್ ಸ್ಟ್ರೋಕ್,



ಹೀಟ್ ಸ್ಟ್ರೋಕ್ ನಂತಹ ಕಾಯಿಲೆಗಳು ಹೆಚ್ಚಾಗುತ್ತಿವೆ. ಹೀಗಾಗಿ ಆರೋಗ್ಯ ಇಲಾಖೆ ಮುಂಜಾಗ್ರತಾ ಕ್ರಮವಾಗಿ ಆಸ್ಪತ್ರೆಗಳಲ್ಲಿ ಬೆಡ್ ಗಳ ವ್ಯವಸ್ಥೆ ಸಹ ಮಾಡಿದ್ದಾರೆ. ನರಗುಂದ ತಾಲೂಕಾಸ್ಪತ್ರೆಯಲ್ಲಿ ಐಸಿಯು ಬೆಡ್‌ಗಳನ್ನು ಮೀಸಲಿಟ್ಟಿದ್ದಾರೆ. ನರಗುಂದ ತಾಲೂಕಾಸ್ಪತ್ರೆಯಲ್ಲಿ ಐದು ಬೆಡ್‌ಗಳನ್ನು ರಿಜರ್ವ್ ಇಡಲಾಗಿದೆ. ಬಿಸಿಲಿನಿಂದ ಬಸವಳಿದ ಜನರಿಗೆ ಚಿಕಿತ್ಸೆಗಾಗಿ ಮೆಡಿಸಿನ್ ವ್ಯವಸ್ಥೆಮಾಡಿದ್ದಾರೆ. ಸ್ಪೇಷಲ್ ವಾರ್ಡ್‌ಗೆ ಎಸಿ ವ್ಯವಸ್ಥೆ ಮಾಡಲಾಗಿದೆ. ಹೀಟ್ ಹಾಗೂ ಸನ್ ಸ್ಟ್ರೋಕ್ ನಿಂದ ಬಳಲುವ ರೋಗಿಗಳಿಗೆ ತಂಪಾಗಿಡಲು ವೈದ್ಯರು ತಯಾರಿ ಮಾಡಿದ್ದಾರೆ.

ಆರೋಗ್ಯದ ಕಾಳಜಿ ವಹಿಸಿ

ರಾಜ್ಯ ಸರ್ಕಾರದ ಆದೇಶದ ಮೇರೆಗೆ ತಾಲೂಕಾಸ್ಪತ್ರೆಯಲ್ಲಿ ಸನ್ ಸ್ಟ್ರೋಕ್ ಹಾಗೂ ಹಿಟ್ ಸ್ಟ್ರೋಕ್‌ನಿಂದ ಬಳಲುವ ರೋಗಿಗಳಿಗೆ ಬೆಡ್‌ಗಳನ್ನು ಮೀಸಲು ಇಡಲಾಗಿದೆ. ಐದು ಬೆಡ್‌ಗಳ ಸ್ಪೇಷಲ್ ವಾರ್ಡ್ ರೆಡಿ ಮಾಡಲಾಗಿದೆ. ಬಿಸಿಲಿನ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಹೀಗಾಗಿ ಜನರು ಬಿಸಿಲಿನಲ್ಲಿ ದೇಹವನ್ನು ತಂಪಾಗಿ ಇಟ್ಟಿಕೊಳ್ಳಬೇಕಿದೆ. ತಂಪು ಪಾನೀಯಗಳು, ಹಣ್ಣು ಹಂಪಲು, ಮಜ್ಜಿಗೆ ಸೇವನೆ ಮಾಡಬೇಕಿದೆ. ಬೆಳಗ್ಗೆ 11 ಗಂಟೆಯಿಂದ ಸಾಯಂಕಾಲ 4 ಗಂಟೆ ವರೆಗೆ ಜನರು ಹೊರಗಡೆ ಓಡಾಡಬಾರದು. ಬಿಸಿಲಿನ ತಾಪಮಾನ ಹೆಚ್ಚಾಗಿದೆ. ಸನ್ ಸ್ಟ್ರೋಕ್ ಹಾಗೂ ಹಿಟ್ ಸ್ಟ್ರೋಕ್ ಬರುವ ಸಾಧ್ಯತೆ ಇದೆ. ಹೀಗಾಗಿ ಜನರು ತಮ್ಮ ಆರೋಗ್ಯದ ಮೇಲೆ ಕಾಳಜಿ ವಹಿಸಬೇಕಿದೆ ಎಂದು ನರಗುಂದ ಸರ್ಕಾರಿ ತಾಲೂಕಾಸ್ಪತ್ರೆ ವೈದ್ಯಾಧಿಕಾರಿ ಡಾ.ಭದ್ರಗೌಡ ತಿಳಿಸಿದ್ದಾರೆ.

ಕೂಲಿಗೆ ಹೋಗಿದ್ದ ವಿದ್ಯಾರ್ಥಿನಿ ಮನವೊಲಿಸಿ ಪರೀಕ್ಷೆ ಬರೆಸಿದ್ದ ಬಿಇಓ

ಮುಂಡರಗಿ: ಬರದೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿನಿ ಪೇಠಾಲೂರು ಗ್ರಾಮದ ಪಲ್ಲವಿ ಹಳ್ಳಿಕೇರಿ ಶಾಲೆಯನ್ನು ಬಿಟ್ಟು ಕೂಲಿಗೆ ಹೋಗಿದ್ದ ವಿದ್ಯಾರ್ಥಿನಿಯ ಮಾಹಿತಿ ಪಡೆದು ಮುಂಡರಗಿ ಕ್ಷೇತ್ರ ಶಿಕ್ಷಣಾಧಿಕಾರಿ ಗಂಗಾಧರ ಅಣ್ಣಿಗೇರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವದಕ್ಕೆ ಆ ವಿದ್ಯಾರ್ಥಿಯ ಮನವೊಲಿಸಿದ್ದರಿಂದ ಆ ವಿದ್ಯಾರ್ಥಿನಿ ಗಮನಾರ್ಹ ಫಲಿತಾಂಶ ಸಾಧಿಸಿರುವ ಘಟನೆ ಈ ವರ್ಷದ ಪರೀಕ್ಷೆಯಲ್ಲಿ ಜರುಗಿದೆ.

ತಾಲೂಕಿನ ಪೇಠಾಲೂರು ಗ್ರಾಮದ ವಿದ್ಯಾರ್ಥಿನಿ ಬರದೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಅಭ್ಯಾಸ ಮಾಡುತ್ತಿದ್ದು, ಮನೆಯಲ್ಲಿನ ಬಡತನದ ಹಿನ್ನೆಲೆ ಪರೀಕ್ಷೆಯ ದಿನವೇ ಪರೀಕ್ಷೆ ತ್ಯಜಿಸಿ ತನ್ನ ತಾಯಿಯೊಂದಿಗೆ ದ್ರಾಕ್ಷಿ ತೋಟಕ್ಕೆ ಕೂಲಿಗೆ ತೆರಳಿದ್ದಳು. ಇದರ ಪರಿಣಾಮವಾಗಿ ಆಕೆ ಪರೀಕ್ಷೆಗೆ ಹಾಜರಾಗದೆ ಇರುವ ಪರಿಸ್ಥಿತಿನಿರ್ಮಾಣವಾಗಿತ್ತು. ಆದರೆ ಕ್ಷೇತ್ರ ಶಿಕ್ಷಣಾಧಿಕಾರಿ ಗಂಗಾಧರ ಅಣ್ಣಿಗೇರಿ ವಿದ್ಯಾರ್ಥಿಯ ಮಾಹಿತಿ ಪಡೆದು ತಕ್ಷಣವೇ ಶಿಕ್ಷಕರೊಂದಿಗೆ ದ್ರಾಕ್ಷಿ ತೋಟಕ್ಕೆ ತೆರಳಿ ವಿದ್ಯಾರ್ಥಿನಿ ಮತ್ತು ಆಕೆಯ ತಾಯಿಯನ್ನು ಮನವೊಲಿಸಿದರು. ಪರೀಕ್ಷೆ ಬರೆದ ಪಲ್ಲವಿ ಹಳ್ಳಿಕೇರಿ ಇದೀಗ ಪ್ರಕಟವಾದ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ 458 ಅಂಕಗಳನ್ನು ಪಡೆದು ಶೇ.73 ರಷ್ಟು ಸಾಧನೆ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರಳಾಗಿದ್ದಾಳೆ. ಈ ಸಾಧನೆಯನ್ನು ಗುರುತಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಪಲ್ಲವಿ ಹಳ್ಳಿಕೇರಿಯನ್ನು ಗೌರವಿಸಿ ಸನ್ಮಾನಿಸಲಾಗಿದೆ.



ಸಾಧನೆಗೆ ಶ್ಲಾಘನೆ

ವಿದ್ಯಾರ್ಥಿನೀಯ ಈ ಸಾಧನೆಗೆ ಖ್ಯಾತ ಸಾಹಿತಿ ನಾಗತಿಹಳ್ಳಿ ಚಂದ್ರಶೇಖರ ಹಾಗೂ ಮಾಜಿ ಶಿಕ್ಷಣ ಸಚಿವ ಎಸ್. ಸುರೇಶಕುಮಾರ ಅವರು ತಮ್ಮ ಟ್ವಿಟರ್ ಖಾತೆಗಳ ಮೂಲಕ ಈ ಕಾರ್ಯವನ್ನು ಶ್ಲಾಘಿಸಿ, ಶಿಕ್ಷಣ ಕ್ಷೇತ್ರದಲ್ಲಿ ಇಂತಹ ಹಸ್ತಕ್ಷೇಪಗಳು ಅಗತ್ಯವೆಂದು ಅಭಿಪ್ರಾಯಪಟ್ಟಿದ್ದಾರೆ.ಈ ವಿದ್ಯಾರ್ಥಿನೀಯ ಸಾಧನೆಗೆ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ, ರೋಣ ಕ್ಷೇತ್ರದ ಶಾಸಕರಾದ ಜಿ.ಎಸ್. ಪಾಟೀಲ, ಶಿರಹಟ್ಟಿ ಕ್ಷೇತ್ರದ ಶಾಸಕ ಡಾ.ಚಂದ್ರು ಲಮಾಣಿ ಮಾಜಿ ಸಚಿವರಾದ ಎಸ್.ಎಸ್. ಪಾಟೀಲ, ಕಳಕಪ್ಪ ಬಂಡಿ, ಮಾಜಿ ಶಾಸಕರಾದ ರಾಮಕೃಷ್ಣ ದೊಡ್ಡಮನಿ, ರಾಮಣ್ಣ ಲಮಾಣಿ, ಕ್ಷೇತ್ರ ಶಿಕ್ಷಣಾಧಿಕಾರಿ ಗಂಗಾಧರ ಅಣ್ಣಿಗೇರಿ, ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್., ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ವಿಶ್ವನಾಥ ಹೊಸಮನಿ ಹರ್ಷವ್ಯಕ್ತಪಡಿಸಿದ್ದಾರೆ.

ವಿಶ್ವ ಪಶುವೈದ್ಯಕೀಯ ದಿನಾಚರಣೆ | ಸಚಿವ ಕೆ.ವೆಂಕಟೇಶ ಅಭಿಪ್ರಾಯ

ಗ್ರಾಮೀಣ ಆರ್ಥಿಕತೆಗೆ ಹೈನುಗಾರಿಕೆ ಬಲ

•ಬೆಳಗಾವಿ: ಗ್ರಾಮೀಣ ಭಾಗದಲ್ಲಿ ಜನರು ಹಸುಗಳನ್ನು ಸಾಕುವುದ ಮೂಲಕ ಹೈನುಗಾರಿಕೆಯನ್ನು ಕುಲ ಕಸುಬಾಗಿ ಮಾಡಿಕೊಂಡಿದ್ದು, ಸರ್ಕಾರದ ವತಿಯಿಂದ ಹೈನುಗಾರಿಕೆಗೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದು ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾಪಂಚಾಯತ ಬೆಳಗಾವಿ, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪಶುವೈದ್ಯಕೀಯ ದಿನಾಚರಣೆ ನಿಮಿತ್ತ ಶನಿವಾರ ನಗರದ ಮಹಾಂತೇಶ ನಗರದ ಸ್ಪೆಷಾಲಿಟಿ ಪಶುವೈದ್ಯಕೀಯ ಆಸ್ಪತ್ರೆ ಆವರಣದಲ್ಲಿ 9ನೇ ಸುತ್ತಿನ ಕಾಲು ಬಾಯಿ ರೋಗದ ಲಸಿಕಾ ಕಾರ್ಯಕ್ರಮಕ್ಕೆ ಗೋವುಗಳಿಗೆ ಪೂಜೆ ಸಲ್ಲಿಸುವುದರ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ರಾಜ್ಯದಲ್ಲಿ 70ರಿಂದ 80 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಸರ್ಕಾರದ ವತಿಯಿಂದ ಹೈನುಗಾರಿಕೆಗೆ ಪ್ರೋತ್ಸಾಹಿಸಿದ ಹಿನ್ನೆಲೆಯಲ್ಲಿ ದಿನಕ್ಕೆ 1 ಕೋಟಿ ಲೀಟರ್‌ಗೂ ಅಧಿಕ ಹಾಲು ಉತ್ಪಾದನೆಯಾಗುತ್ತಿದೆ. ಬಡವರಿಗೆ ಹಸು ಖರೀದಿಸಲು ಶಕ್ತಿ ಇಲ್ಲದ ಕಾರಣ ಅವರಿಗೆ ಈ ಬಾರಿಯ ಬಜೆಟ್‌ನಲ್ಲಿ ಶೇ.25ರಷ್ಟು ಸಬ್ಸಿಡಿ ನೀಡಲಾಗಿದ್ದು, ಬೆಳಗಾವಿ ಮತ್ತು ಗುಲ್ಬರ್ಗಾ ಜಿಲ್ಲೆಗೆ ಸುಮಾರು 20 ಸಾವಿರ ಹಸುಗಳನ್ನು ವಿತರಿಸುವ ಕಾರ್ಯಕ್ರಮ ಕೈಗೊಳ್ಳಲಾಗಿದೆ ಎಂದರು.



ಪಶು ವೈದ್ಯಕೀಯ ಇಲಾಖೆಯು ಬಹಳ ವಿಸ್ತಾರವಾದ ಇಲಾಖೆ, ಹಾಲು ಉತ್ಪಾದನೆಯಲ್ಲಿ ದೊಡ್ಡ ಮಟ್ಟದಲ್ಲಿ ಸಾಧನೆ ಮಾಡಿದೆ. ಎಲ್ಲ ಕೆಲಸಗಾರರಿಗೆ ಉತ್ತಮ ತರಬೇತಿಯನ್ನು ನೀಡಿ ಒಂದು ತಿಂಗಳಿನಲ್ಲಿ ಲಸಿಕಾ ಕಾರ್ಯಕ್ರಮ ಸಂಪೂರ್ಣಗೊಳಿಸುತ್ತೇವೆ ಎಂದು ತಿಳಿಸಿದರು.

ಸಚಿವ ಸತೀಶ ಜಾರಕಿಹೊಳಿ ಮಾತನಾಡಿ, ಸರ್ಕಾರ ವಿಶೇಷವಾಗಿ ಈ ಕಾರ್ಯಕ್ರಮ ಹಮ್ಮಿಕೊಂಡಿದೆ. ರಾಜ್ಯದಲ್ಲಿ ಜಾನುವಾರುಗಳ ಸಂಖ್ಯೆ ಹೆಚ್ಚುರುವುದರಿಂದ ಅವುಗಳ ಸುರಕ್ಷಿತ ವ್ಯವಸ್ಥೆಗಾಗಿ ಈ ಕಾರ್ಯಕ್ರಮ ಸಹಕಾರಿಯಾಗಲಿದೆ ಎಂದು ಹೇಳಿದರು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾತನಾಡಿ, ಪಶು ಸಂಗೋಪನಾ ಇಲಾಖೆಯು ಮಹಿಳೆಯರಿಗೆ ಅತೀ ಸಮೀಪವಾಗಿದೆ. ದನಕರುಗಳ ಆರೋಗ್ಯವನ್ನು ಅವುಗಳ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದು ಸರ್ಕಾರದ ಕೆಲಸ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಬೆಳಗಾವಿ ಉತ್ತರ ಕ್ಷೇತ್ರದ ಶಾಸಕ ಆಸೀಫ್ ಸೇಠ್, ನಾವೆಲ್ಲರೂ ಪಶುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಾಕಾಣಿಕೆ ಮಾಡಬೇಕು. ಅವುಗಳ ಪೋಷಣೆ ವ್ಯವಸ್ಥಿತವಾಗಿ ಮಾಡಬೇಕು ಆತ್ಮ ವಿಶ್ವಾಸ ಇದ್ದರೆ ಎಲ್ಲವೂ ಸಾಧ್ಯ ಎಂದು ಹೇಳಿದರು.

ಶಾಸಕರಾದ ಗಣೇಶ ಹುಕ್ಕೇರಿ, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ, ಮಹಾನಗರ ಪಾಲಿಕೆ ಉಪಮಹಾಪೌರ ಹನುಮಂತ ಕೊಂಗಾಲಿ, ಕರ್ನಾಟಕ ಪಶು ವೈದ್ಯಕೀಯ ಸಂಘದ ಅಧ್ಯಕ್ಷ ಡಾ.ಶಿವಶರಣಪ್ಪ ಯಲಗೋಡ, ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ನಿರ್ದೇಶಕರ ಡಾ.ಪಿ. ಶ್ರೀನಿವಾಸು, ಅಪರ ನಿರ್ದೇಶಕ ಡಾ. ಶಿವರುದ್ರಪ್ಪ, ಕೆ.ಎಲ್.ಅಪರ ನಿರ್ದೇಶಕ ಡಾ. ಪ್ರಸಾದ ಮೂರ್ತಿ, ಬೆಳಗಾವಿ ನಗರ ಪೊಲೀಸ್ ಆಯುಕ್ತ ಭೂಷಣ್ ಬೊರಸೆ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ, ಜಂಟಿ ನಿರ್ದೇಶಕ ಡಾ.ಎಚ್. ನಾಗರಾಜ್, ಬೆಳಗಾವಿ ಹಾಲು ಒಕ್ಕೂಟ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಶ್ರೀಕಾಂತ ವಿ.ಎನ್, ಅಧಿಕಾರಿಗಳು ಉಪಸ್ಥಿತರಿದ್ದರು.

> **ರಾಜ್ಯದ ಮೊಟ್ಟ ಮೊದಲಿಗೆ ಎಲ್ಲ ಕಡೆಯೂ ಕಾಲು ಬಾಯಿ ರೋಗದ ಲಸಿಕಾ ಕಾರ್ಯಕ್ರಮ ಉದ್ಘಾಟನೆಯಾಗುತ್ತಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕಾಗಿದೆ. ಪ್ರತಿಯೊಂದು ಕುಟುಂಬಗಳ ಮನೆಯ ಬಾಗಿಲಿಗೆ ಈ ಎಲ್ಲ ಯೋಜನೆಯು ತಲುಪಬೇಕು.**
> ■ **ಶಿಲ್ಪಾ ಜಾಗ್, ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಆಯುಕ್ತರು**

ವರದಾ ನದಿಯಲ್ಲಿ ಚಿನ್ನಕ್ಕಾಗಿ ಹುಡುಕಾಟ!

•ಹಾವೇರಿ: ಬಿರು ಬೇಸಿಗೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಒಂದಡೆಯಾದರೆ, ಇನ್ನೊಂದಡೆ ನದಿಯ ಒಡಲು ಬರಿದಾಗಿರುವುದೇ ಕೆಲವು ಕುಟುಂಬಗಳಿಗೆ ವರವಾಗಿದೆ. ಸದ್ಯ ಜಿಲ್ಲೆಯ ವರದಾ ನದಿಯ ಗುಂಡಿಯಲ್ಲಿ ನಿಂತಿರುವ ನೀರಿನಲ್ಲಿ ಶಿವಮೊಗ್ಗ ಮೂಲಕ ಕುಟುಂಬಗಳು ಚಿನ್ನದ ಬೇಟೆ ನಡೆಸಿರುವುದು ಕಂಡು ಬಂದಿದೆ.

ಜಿಲ್ಲೆಯ ಜೀವನಾಡಿ ಆಗಿರುವ ವರದಾ ನದಿ ಒಡಲು ಸದ್ಯ ಬರಿದಾಗಿದ್ದು, ಸುಡುವ ಬೆಂಕಿ ಬಿಸಿಲನ್ನೂ ಲೆಕ್ಕಿಸದೇ ಕೆಲವು ಕುಟುಂಬಗಳು ನದಿಯ ಮಣ್ಣಿನಲ್ಲಿ ಬಂಗಾರ ಹುಡುಕಲು ಮುಂದಾಗಿದ್ದಾರೆ.

ನದಿಯ ಮಣ್ಣಿನ ಕಣದಲ್ಲಿ ಬಂಗಾರದ ಕನಸು ಕಾಣುವ ಮೂಲಕ ಶಿವಮೊಗ್ಗ ಮೂಲಕ ಇರ್ಲರ್ ಸಮುದಾಯದ ಈ ಕುಟುಂಬಗಳು ತಂಡೋಪ ತಂಡವಾಗಿ ನದಿಗೆ ಬಂದು ಚಿನ್ನಕ್ಕಾಗಿ ಬೇಟೆ ಆರಂಭಿಸಿದ್ದಾರೆ. ನದಿ ತುಂಬಿ ಹರಿಯುವ ಕಾಲದಲ್ಲಿ ಕಾಣಿಸದಿರುವ ಮರಳು, ಕಪ್ಪು ಮಣ್ಣು, ನದಿಯ ಅಡಿ ಡಿಗಲ್ಲುಗಳು ಎಲ್ಲವೂ ಈ ಸಮಯದಲ್ಲಿ ಬಯಲಾಗುತ್ತವೆ. ನೀರು ಕಡಿಮೆಯಾಗುತ್ತಿದ್ದಂತೆ ಈ ನದಿಯೊಳಗೆ ಇಳಿಯುವ ಈ ಕುಟುಂಬಗಳು ದಿನವಿಡಿ ಚಿನ್ನದ ಶೋಧಕ್ಕೆ ಮುಂದಾಗಿವೆ.

ಬಂಗಾರದ ಬೆಲೆ ದಿನೇದಿನೇ ಏರುತ್ತಿರುವ ಹೊತ್ತಿನಲ್ಲಿ, ನದಿಯ ತೀರದಲ್ಲಿ ಗೋಲ್ಡ್ ಪ್ಯಾನಿಂಗ್ ಜೋರಾಗಿದೆ. ನೀರು ಕಡಿಮೆಯಾಗುತ್ತಿದ್ದಂತೆ ನದಿಯ ತೀರದಲ್ಲಿ, ನದಿಯ ಮಧ್ಯಭಾಗದ ಒಣ ಹಾಸಿನಲ್ಲಿ, ಮರಳಿನ ಕೆಳಗಿನ ಕಪ್ಪು ಮಣ್ಣಿನಲ್ಲಿ ಜನರು ಗಂಟೆಗಟ್ಟಲೆ ಕೂತು ಚಿನ್ನದ ಬೇಟೆ ನಡೆಸಿದ್ದಾರೆ. ಇವರ ಕೈಯಲ್ಲಿ ಜಾಲಿ, ಪಾತ್ರೆ, ಸಣ್ಣ ಉಪಕರಣಗಳ ಮೂಲಕ ನದಿಯ ಮರಳನ್ನು ತೊಳೆಯುತ್ತಾ, ಮಣ್ಣು ಬೇರ್ಪಡಿಸಿ ಕೊನೆಯಲ್ಲಿ ಉಳಿಯುವ ಆ ಭಾರವಾದ ಬಂಗಾರದ ಕಣಗಳನ್ನು ಹುಡುಕುತ್ತಿದ್ದಾರೆ.



> **ಬೇಸಿಗೆ ಹಿನ್ನೆಲೆಯಲ್ಲಿ ನದಿಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿರುತ್ತದೆ. ಈ ವೇಳೆ ನದಿಗೆ ಇಳಿದು ದಿನವಿಡಿ ಶ್ರಮಪಟ್ಟು ಬಂಗಾರದ ಕಣಗಳ ಹುಡುಕಾಟ ನಡೆಸಲಾಗುತ್ತಿದೆ. ಕೆಲವೊಮ್ಮೆ ಬಂಗಾರದ ಕಣಗಳು ಸಿಕ್ಕರೇ, ಕೆಲವೊಮ್ಮೆ ದಿನವಿಡಿ ಶ್ರಮಕ್ಕೆ ಫಲ ಸಿಗದೆ ನಿರಾಸೆ ಅನುಭವಿಸುತ್ತೇವೆ. ಮಳೆಗಾಲದ ತನಕ ಅಲ್ಲಲ್ಲಿ ಬಂಗಾರದ ಕಣಕ್ಕಾಗಿ ನಮ್ಮ ಕುಟುಂಬ ಶೋಧಕಾರ್ಯ ನಡೆಸುತ್ತದೆ.**
> ■ **ನಾಗಣ್ಣ, ಬಂಗಾರ ಕಣಕಾಗಿ ಶೋಧ ನಡೆಸುತ್ತಿರುವವರು**

ಈ ಕೆಲಸಕ್ಕೆ ವಿಶೇಷ ವಿಧಾನವಿದ್ದು, ಮೊದಲು ನದಿಯ ತಳದಿಂದ ಮರಳು ಮತ್ತು ಕಪ್ಪು ಮಣ್ಣನ್ನು ತೆಗೆದು ಒಂದು ಪಾತ್ರೆಯಲ್ಲಿ ಹಾಕುತ್ತಾರೆ. ನಂತರ ನೀರು ಸುರಿದು, ಪಾತ್ರೆಯನ್ನ ನಿಧಾನವಾಗಿ ಅಲೆಯುತ್ತಾ, ಹಗುರವಾದ ಮರಳು, ಮಣ್ಣು ಹೊರಗೆ ಹೋಗುವಂತೆ ಮಾಡಿ ತಳದಲ್ಲಿ ಭಾರವಾದ ಕಣಗಳು ಮಾತ್ರ ಉಳಿಯುತ್ತವೆ. ಆ ತಳದಲ್ಲಿ ಉಳಿಯುವ ಕಪ್ಪು ಮಣ್ಣಿನ ನಡುವೆ ಕೆಲವೊಮ್ಮೆ ಸಣ್ಣ ಬಂಗಾರದ ಕಣಗಳು ಮಿನುಗುತ್ತವೆ. ಅವನ್ನು ಗುರುತಿಸಿ ಶೇಖರಿಸಿಸುವುದೇ ಇವರ ಕಾಯಕವಾಗಿದೆ.

ಕೆಲವೊಮ್ಮೆ ಸಣ್ಣ ಕಣ ಒಂದೇ ಸಿಕ್ಕರೂ ಅದೇ ಅವರಿಗೆ ದೊಡ್ಡ ಸಂಭ್ರಮ. ಆ ಒಂದು ಕಣವೇ ದಿನಪೂರ್ತಿ ಮಾಡಿದ ಶ್ರಮಕ್ಕೆ ಸಿಕ್ಕ ಬಹುಮಾನವಾಗಲಿದೆ. ಇದರಿಂದ ಅವರು ಕುಟುಂಬ ನಿರ್ವಹಣೆ ಮಾಡುತ್ತಿದ್ದಾರೆ.

ಕಿರುಸುದ್ದಿ

ವಿಷ ಸೇವಿಸಿ ಪೊಲೀಸ್ ಸಿಬ್ಬಂದಿ ಆತ್ಮಹತ್ಯೆ

•ಬೆಳಗಾವಿ: ನಗರದ ಸಿಇಎನ್ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಬಸವರಾಜ ಗೌಡ್ಡರ್ (46) ಅವರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ದುರ್ಘಟನೆ ನಡೆದಿದೆ.



ಮೃತರು ಹಲವು ವರ್ಷಗಳಿಂದ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸುತ್ತಿದ್ದರು ಎಂದು ಸಹೋದ್ಯೋಗಿಗಳು ತಿಳಿಸಿದ್ದಾರೆ. ಆದರೆ, ಅವರು ಈ ರೀತಿಯ ತೀವ್ರ ನಿರ್ಧಾರಕ್ಕೆ ಏಕೆ ಮುಂದಾದರು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಘಟನೆ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಲಾಗಿದೆ. ಪ್ರಕರಣ ಸಂಬಂಧ ತನಿಖೆ ಮುಂದುವರಿದಿದ್ದು, ಆತ್ಮಹತ್ಯೆಗೆ ಕಾರಣಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ.

ಮಾಲಗಂಭಕ್ಕೆ ಸಿಡಿಲು ಬಡಿದು ಛಿದ್ರ

•ಬಸವನಬಾಗೇವಾಡಿ: ತಾಲೂಕಿನ ಉಕ್ಕಲಿ ಗ್ರಾಮದ ಅಮೋಘಸಿದ್ದೇಶ್ವರ ದೇವಸ್ಥಾನದ ಇನ್ನೂ ಉದ್ಘಾಟನೆಗೊಳ್ಳದೆ ಇರುವ ಮಾಲಗಂಭಕ್ಕೆ ಸಿಡಿಲು ಬಡಿದು ಛಿದ್ರ ಛಿದ್ರವಾಗಿ ಬಿದ್ದಿರುವ ಘಟನೆ ಗುರುವಾರ ತಡರಾತ್ರಿ ನಡೆದಿದೆ.



ಇಳಕಲ್‌ನಿಂದ ಕಲ್ಲು ತರಿಸಿ ಅಮೋಘಸಿದ್ದೇಶ್ವರ ದೇವಸ್ಥಾನದ ಮುಂದೆ 36ಫೂಟ್ ಎತ್ತರದ ಮಾಲಗಂಭ ಮರದ ಕಟ್ಟಿಗೆ ತರಹದ ಕೆತ್ತನೇ ಮಾಡಿ ಸು.48ಲಕ್ಷ ರೂ. ಖರ್ಚು ಮಾಡಿ ನಿರ್ಮಿಸಲಾಗುತ್ತಿತ್ತು. ಇದಕ್ಕೆ ಗುರುವಾರ ತಡರಾತ್ರಿ ಸಿಡಿಲು ಬಡಿದು 11ಅಡಿ ಎತ್ತರದ ವರೆಗೆ ಮಾಲಗಂಭ ಛಿದ್ರ ಛಿದ್ರವಾಗಿ ಬಿದ್ದಿರುವುದನ್ನು ಕಂಡು ಗ್ರಾಮಸ್ಥರು ಭಯ ಭೀತರಾಗಿದ್ದಾರೆ. ಇನ್ನೂ ಉದ್ಘಾಟನೆಗೊಳ್ಳದ ಮಾಲಗಂಭದ ತಳ ಸರಿದು ಮಾಲಗಂಭ ಬೆಂಡ್ ಆಗಿದೆ ಎಂಬುವುದು ಗ್ರಾಮಸ್ಥರು ಮಾತು.

ಕಾರಾಗೃಹದಲ್ಲಿ ಕೈದಿ ಆತ್ಮಹತ್ಯೆ

•ಧಾರವಾಡ: ಕೈದಿಯೊಬ್ಬ ಆತ್ಮಹತ್ಯೆಗೆ ಶರಣಾದ ಘಟನೆ ನಗರದ ಕೇಂದ್ರ ಕಾರಾಗೃಹದಲ್ಲಿ ನಡೆದಿದೆ. ಮಹಾಂತೇಶ ಕುಂಬಾರ (29) ಆತ್ಮಹತ್ಯೆಗೆ ಶರಣಾದ ಕೈದಿ. ಪೋಕ್ಸೋ ಪ್ರಕರಣದಲ್ಲಿ ಜೈಲು ಸೇರಿದ್ದ ಈ ಕೈದಿ ಜೈಲಿನಲ್ಲಿಯೇ ನೇಣು ಬಿಗಿದುಕೊಂಡಿದ್ದಾನೆ. ಉಪನಗರ ಠಾಣೆಯ ಪೊಲೀಸರು ಕಾರಾಗೃಹ ಪರಿಶೀಲಿಸಿ ಮೃತದೇಹ ಮರಣೋತ್ತರ ಪರೀಕ್ಷೆಗೆ ಜಿಲ್ಲಾಸ್ಪತ್ರೆ ರವಾನಿಸಿದ್ದು, ಈ ಕುರಿತಂತೆ ಉಪನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭೀಕರ ಹತ್ಯೆ: ಹಂತಕರು ಪರಾರಿ

•ಮುಂಡಗೋಡ: ಪಟ್ಟಣದ ಬಸ್ ನಿಲ್ದಾಣದ ಎದುರಿನ ಅಂಬಿಕಾ ಹೋಟೆಲ್‌ನಲ್ಲಿ ಊಟಕ್ಕೆ ಬಂದಿದ್ದ ಜಮೀರ್ ಅಹ್ಮದ್ ದರ್ಗಾವಾಲೆನನ್ನು(ಎನ್‌ಎಂಡಿ) ನಾಲ್ಕೈದು ಜನ ಹಂತಕರು ಭೀಕರ ಹತ್ಯೆ ಮಾಡಿ ಪರಾರಿಯಾಗಿದ್ದಾರೆ.



ಜಮೀರ್ ಅಹ್ಮದ್ ತನ್ನ ಒಬ್ಬ ಸ್ನೇಹಿತನ ಜತೆ ಶುಕ್ರವಾರ ರಾತ್ರಿ 11 ಗಂಟೆಗೆ ಅಂಬಿಕಾ ಹೋಟೆಲ್‌ನಲ್ಲಿ ಊಟಕ್ಕೆ ಬಂದಿದ್ದ ಈ ವೇಳೆ ತನ್ನ ಸ್ನೇಹಿತನಿಗೆ ಸಿಗರೇಟ್ ತರಲು ಹೊರಗೆ ಕಳಸಿದ್ದ, ಆ ವೇಳೆ ಹಂತಕರು ನಾಲ್ಕೈದು ಜನ ಹಂತಕರು ಏಕಾಏಕಿ ಹೋಟೆಲ್‌ಗೆ ನುಗ್ಗಿ ಜಮೀರನಿಗೆ ಖಾರದಪುಡಿ ಎರಚಿದ್ದಾರೆ. ಇವರಿಂದ ತಪ್ಪಸಿಕೊಳ್ಳಲು ಜಮೀರ ಹೋಟೆಲ್‌ನ ಅಡುಗೆಕೊಣೆಗೆ ಓಡಿದ್ದಾನೆ. ಆದರೂ ಬಿಡದ ಹಂತಕರು ಜಮೀರನನ್ನು ಹಿಡಿದು ಹರಿತವಾದ ಮಚ್ಚಿನಿಂದ ಕುತ್ತಿಗೆಗೆ ಹೊಡೆದಿದ್ದಾರೆ. ಅಷ್ಟರಲ್ಲಿ ಹೋಟೆಲ್ ಮಾಲೀಕ ಗಾಬರಿಯಿಂದ ಓಡಿ ಹೋಗಿ ಪೊಲೀಸರಿಗೆ ಮಾಹಿತಿ ನೀಡಿದ್ದಾನೆ ಎನ್ನಲಾಗಿದೆ.

ಕಳೆದ ಒಂದೂವರೆ ವರ್ಷಗಳ ಹಿಂದೆ ಜಮೀರನನ್ನು ಹಣದ ಆಸೆಗೆ ಅಪಹರಣ ಮಾಡಲಾಗಿತ್ತು. ನಂತರ ಮೂವತ್ತು ಲಕ್ಷ ರೂ.ಹಣ ನೀಡುವಂತೆ ಬೇಡಿಕೆ ಇಟ್ಟಿದ್ದರು. ಆ ವೇಳೆ ಸಿನೀಮಿಯ ರೀತಿಯಲ್ಲಿ ಮುಂಡಗೋಡ ಪೊಲೀಸರು ಅಪಹರಣಕಾರರನ್ನ ಪತ್ತೆ ಹಚ್ಚಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದರು.

ಘಟನೆಯ ಮಾಹಿತಿ ತಿಳಿದ ತಕ್ಷಣ ಮುಂಡಗೋಡ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ ಶವವನ್ನು ಮರಣೋತ್ತರ ಪರೀಕ್ಷೆಗೆ ಕಾರವಾರ ಆಸ್ಪತ್ರೆಗೆ ರವಾನಿಸಿದ್ದಾರೆ. ಸ್ಥಳಕ್ಕೆ ಜಿಲ್ಲಾ ವರಿಷ್ಠಾಧಿಕಾರಿ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದರು.

ತಾಲೂಕು ಆಸ್ಪತ್ರೆಯಲ್ಲಿ ಬೆಂಕಿ ಅವಘಡ ಲಕ್ಷಾಂತರ ರೂ. ಮೌಲ್ಯದ ಔಷಧಿ ಸಾಮಗ್ರಿ ಭಸ್ಮ



•ಹಾನಗಲ್ಲ: ಇಲ್ಲಿನ ತಾಲೂಕು ಆಸ್ಪತ್ರೆಗೆ ವಿದ್ಯುತ್ ಅವಘಡದಿಂದ ಬೆಂಕಿ ತಗುಲಿ ಲಕ್ಷಾಂತರ ರೂ. ಮೌಲ್ಯದ ಔಷಧಿ ಸಾಮಗ್ರಿಗಳು ಸುಟ್ಟು ಭಸ್ಮವಾದ ಘಟನೆ ಶನಿವಾರ ಸಂಜೆ ನಡೆದಿದೆ.

ಹಾನಗಲ್ ಅಗ್ನಿಶಾಮಕ ಠಾಣೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದರು. ಸುಮಾರು ಎರಡು ತಾಸು ಬೆಂಕಿ ನಿಯಂತ್ರಣಕ್ಕೆ ಬರಲಿಲ್ಲ, ಸುಮಾರು 40 ಲಕ್ಷ ರೂ. ಮೌಲ್ಯದ ಔಷಧಿ, ಮಾತ್ರೆಗಳು 50 ಲಕ್ಷ ರೂ. ಮೌಲ್ಯದ ವೈದ್ಯಕೀಯ ಉಪಕರಣಗಳು ಸೇರಿದಂತೆ ಸುಮಾರು 1 ಕೋಟಿ ರೂ. ಮೊತ್ತದ ಹಾನಿಯಾಗಿರುವ ಬಗ್ಗೆ ಅಂದಾಜಿಸಲಾಗಿದೆ.

ಆಸ್ಪತ್ರೆ ಎರಡನೇ ಮಹಡಿಯಲ್ಲಿ ಔಷಧ ಮತ್ತು ಸಾಮಗ್ರಿಗಳನ್ನು ಸಂಗ್ರಹಿಸಲಾಗಿತ್ತು. ಈ ಭಾಗದಲ್ಲಿ ಬೆಂಕಿ ಹತ್ತಿಕೊಂಡಿತ್ತು. ಮೊದಲಿಗೆ ಬೆಂಕಿ ಕಾಣಿಸಿಕೊಂಡ ತಕ್ಷಣ ಎಚ್ಚೆತ್ತು ಆಸ್ಪತ್ರೆ ಸಿಬ್ಬಂದಿ ಒಳ ರೋಗಿಗಳನ್ನು ಸುರಕ್ಷಿತವಾಗಿ ಹೊರಗೆ ಕಳಿಸಿದ್ದಾರೆ. ಔಷಧಿ ವಿಭಾಗದ ಪಕ್ಕದಲ್ಲಿ ಸಂಗ್ರಹಿತ ಆಕ್ಸಿಜನ್ ಸಿಲಿಂಡರ್‌ಗಳನ್ನು ತೆರವು ಮಾಡಿದರು.

ಶಾಸಕ ಶ್ರೀನಿವಾಸ ಮಾನೆ ಮತ್ತು ತಹಶೀಲ್ದಾರ್ ಎಸ್.ರೇಣುಕಾ ಸೇರಿದಂತೆ ಸ್ಥಳೀಯ ನಾಯಕರು ಪೊಲೀಸ್ ಅಧಿಕಾರಿಗಳು ಸ್ಥಳದಲ್ಲಿದ್ದರು.

ಪ್ರಯಾಣ ದರ ಹೆಚ್ಚಿಸುವ ಪದ್ಧತಿ ಜಾರಿ



•ಹುಬ್ಬಳ್ಳಿ: ಪ್ರಸ್ತುತ ಜನಸಂದಣಿ, ಸಂಚಾರ ಒತ್ತಡ ದಿನಗಳು ಪ್ರಾರಂಭವಾಗಿದ್ದು, ಪ್ರಸ್ತುತ ಬೆಂಗಳೂರು ಮಾರ್ಗದ ಮತ್ತು ಬೆಂಗಳೂರು ಮಾರ್ಗದ ಮೂಲಕ ಕಾರ್ಯಾಚರಣೆಯಾಗುವ ಪ್ರತಿಷ್ಠಿತ ಸಾರಿಗೆಗಳಿಗೆ ವಾರಾಂತ್ಯ ದಿನಗಳಲ್ಲಿ ಶೇ.10ರಷ್ಟು ಹಾಗೂ ಹಬ್ಬದ, ಸರ್ಕಾರಿ ಸರಣಿ ರಜೆ ದಿನಗಳಂದು ಶೇ.20ರಷ್ಟು ಪ್ರಯಾಣ ದರ ಹೆಚ್ಚಿಸುವ ಪದ್ಧತಿ ಜಾರಿಯಲ್ಲಿದೆ ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ತಿಳಿಸಿದೆ. ಈ ಕುರಿತು ಪ್ರಕಟಣೆಗೆ ತಿಳಿಸಿದ ಸಂಸ್ಥೆ, ರಾಜ್ಯ ಮತ್ತು ಅಂತರ್ ರಾಜ್ಯದ ಮಾರ್ಗದಲ್ಲಿ ಕಾರ್ಯಾಚರಣೆಯಾಗುವ ಎಲ್ಲಾ ಪ್ರತಿಷ್ಠಿತ ರಾತ್ರಿ ಸೇವೆ ಸಾರಿಗೆಗಳಿಗೆ (ರಾಜಹಂಸ ಸಾರಿಗೆ ಹೊರತುಪಡಿಸಿ) ಅವತಾರ ತಂತ್ರಾಂಶದಲ್ಲಿ (ಆನ್‌ಲೈನ್ ಮುಂಗಡ) ದಿನಾಂಕ: 26/04/2026 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿರುತ್ತದೆ. ಈ ಮೊದಲು 73 ವೇಗಧೂತ ಸಾರಿಗೆಗಳು ಅವತಾರ ತಂತ್ರಾಂಶದಲ್ಲಿದ್ದವು (ಆನ್‌ಲೈನ್ ಮುಂಗಡ) ಅವುಗಳನ್ನು ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ 424ಕ್ಕೆ ಹೆಚ್ಚಿಸಿ ಅವತಾರ ತಂತ್ರಾಂಶದಲ್ಲಿ (ಆನ್‌ಲೈನ್ ಮುಂಗಡ) ಅಳವಡಿಸಲಾಗಿರುತ್ತದೆ. ಪ್ರಯಾಣಿಕರು ಸೇವೆಯ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಸಂಸ್ಥೆಯ ತಿಳಿಸಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಮೊದಲ ಮಾದರಿ ಯುವ ಗ್ರಾಮ ಸಭೆ



◆**ಕಾರವಾರ:** ಜನಾಂಗೀಯ ಪ್ರಜಾಪ್ರಭುತ್ವದಲ್ಲಿ ಯುವಜನರ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಮೊದಲ ಉಪಕ್ರಮದಲ್ಲಿ, ಉತ್ತರ ಕನ್ನಡದ ಮೈಭಾರತ್ ಕೇಂದ್ರವು ಅಂಕೋಲಾ ಬ್ಲಾಕ್‌ನ ಶೆಟ್ಗೇರಿ ಗ್ರಾಪಂ ನ ಪೂಜಾಗೆರೆ ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ಮಾದರಿ ಯುವ ಗ್ರಾಮ ಸಭೆ ಶುಕ್ರವಾರ ಜರುಗಿತು.ಮಾದರಿ ಯುವ ಗ್ರಾಮ ಸಭೆಯು ಯುವ ನಾಗರಿಕರಿಗೆ ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯವೈಖರಿಯ ಬಗ್ಗೆ ಶಿಕ್ಷಣ ನೀಡುವುದು ಮತ್ತು ಸಕ್ರಿಯ ನಾಗರಿಕ ತೊಡಗಿಸಿಕೊಳ್ಳುವಿಕೆಯನ್ನು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದ್ದು, ಈ ಕಾರ್ಯಕ್ರಮಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಮತ್ತು ಮಾಹಿತಿಯುಕ್ತ ಮತ್ತು ಜವಾಬ್ದಾರಿಯುತ ಭವಿಷ್ಯದ ನಾಯಕರನ್ನು ನಿರ್ಮಿಸುವತ್ತ ಪ್ರಮುಖ ಹೆಜ್ಜೆಯಾಯಿತು. ಅಣಕು ಗ್ರಾಮ ಸಭೆಯಲ್ಲಿ ಸಕ್ರಿಯವಾಗಿ ಒಟ್ಟು 64 ಯುವಕರು ಭಾಗವಹಿಸಿದ್ದರು.

ವಿದ್ಯಾರ್ಥಿಗಳ ಸಾಧನೆ





◆**ಸಿದ್ದಾಪುರ:** ತಾಲೂಕಿನ ಹಾರ್ಸಿಕಟ್ಟಾ ಅಶೋಕ ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ ಫಲಿತಾಂಶ ನೂರಕ್ಕೆ ನೂರರಷ್ಟಾಗಿದ್ದು ಪ್ರೌಢಶಾಲೆಗೆ ಆದಿತ್ಯ ರಘುಪತಿ ಹೆಗಡೆ ಶೇ.94.56ಅಂಕ ಪಡೆದು ಪ್ರಥಮ, ಶಶಾಂಕ ಸುಬ್ರಾಯ ಗೌಡ ಶೇ. 93.92 ಅಂಕ ದ್ವಿತೀಯ ಹಾಗೂ ಯಶಸ್ವಿನಿ ಅಚ್ಯುತ ಗೌಡ ಶೇ.93.28ರಷ್ಟು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ ಎಂದು ಪ್ರೌಢಶಾಲಾ ಮುಖ್ಯಾಧ್ಯಾಪಕ ರಾಜೇಂದ್ರ ಎ.ಕಾಂಬಳೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆ

◆**ಹೊನ್ನಾವರ:** ತಾಲೂಕಿನ ಸರ್ಕಾರಿ ಪ್ರೌಢಶಾಲೆ ಹಡಿನಬಾಳ, ಇಲ್ಲಿನ ವಿದ್ಯಾರ್ಥಿಗಳು ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ -1ರ ಫಲಿತಾಂಶದಲ್ಲಿ ಅತ್ಯುತ್ತಮ ಸಾಧನೆಗೈದಿದ್ದಾರೆ.ಪರೀಕ್ಷೆಗೆ ಕುಳಿತ ಎಲ್ಲಾ 81 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 16 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ, 48 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಸೌಜನ್ಯ ವೆಂಕಟೇಶ ನಾಯ್ಕ (598) ಪ್ರಥಮ ಸ್ಥಾನ,ಜಿ.ವಿ. ಧನುಷ್ (591) ದ್ವಿತೀಯ ಸ್ಥಾನ ಮತ್ತು ವರ್ಷಿಣಿ ಪಾಂಡುರಂಗ ನಾಯ್ಕ (581) ತೃತೀಯ ಸ್ಥಾನ ಗಳಿಸಿದ್ದಾರೆ. ಈ ಸಾಧನೆಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲೆಯ ಮುಖ್ಯಾಧ್ಯಾಪಕರು ಹಾಗೂ ಶಿಕ್ಷಕರು,ಸಿಬ್ಬಂದಿ ಪಾಲಕರು ಹರ್ಷ ವ್ಯಕ್ತಪಡಿಸಿದ್ದಾರೆ.



ದಾಂಡೇಲಿ: ಜನತಾ ಕಾಲೋನಿಯಲ್ಲಿ ಮರ ಬಿದ್ದು ಹಾನಿಗೊಳಗಾದ ಮನೆಗೆ ಕ್ಷೇತ್ರ ಧ.ಗ್ರಾ. ಯೋಜನೆಯಿಂದ ರೂ.7,500 ರೂ.ಪರಿಹಾರ ಧನವನ್ನು ವಿತರಿಸಲಾಯ್ತು.

ರೇಣುಕಾ ಸುರ್ವೆ ನಿಧನ



◆**ದಾಂಡೇಲಿ :** ನಿವೃತ್ತ ಬಿಎಸ್‌ಎನ್‌ಎಲ್ ಅಧಿಕಾರಿ ಹಾಗೂ ಟೌನಶಿಪ್ ನಿವಾಸಿಯಾಗಿರುವ ರೇಣುಕಾ ಸುರ್ವೆ (63)ನಿಧನರಾದರು. ಕಳೆದ ಅನೇಕ ವರ್ಷಗಳಿಂದ ನಗರದ ಬಿಎಸ್‌ಎನ್‌ಎಲ್ ಸಂಸ್ಥೆಯಲ್ಲಿ ಅನುಪಮ ಸೇವೆಯನ್ನು ಸಲ್ಲಿಸಿ, ಇತ್ತೀಚಿನ ಕೆಲ ವರ್ಷಗಳ ಹಿಂದೆ ನಿವೃತ್ತರಾಗಿದ್ದರು. ಮೃತರು ಸರಳ ಸಜ್ಜನಿಕೆಯ ವ್ಯಕ್ತಿತ್ವದವರಾಗಿದ್ದು, ಪರೋಪಕಾರಿ ಗುಣ ಸ್ವಭಾವದವರಾಗಿದ್ದರು. ಮೃತರು ಓರ್ವ ಪುತ್ರಿ, ಹಾಗೂ ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವಿದೆ. ಮೃತರ ನಿಧನಕ್ಕೆ ನಗರದ ಗಣ್ಯರನೇಕರು ಸಂತಾಪವನ್ನು ಸೂಚಿಸಿದ್ದಾರೆ.



ಗೋಕರ್ಣ: ನಾಡುಮಾಸ್ಕೇರಿ ಗ್ರಾಪಂ ಗ್ರಂಥಾಲಯದಲ್ಲಿ ಬೇಸಿಗೆ ಶಿಬಿರ ಆರಂಭಗೊಂಡಿತು. ಮುಖ್ಯ ಅತಿಥಿಯಾಗಿ ಇಂಜಿನೀಯರ್ ಸ್ವಾತಿ ಗಾಂವಕರ, ಗ್ರಾಪಂ ಕಾರ್ಯದರ್ಶಿ ಭಾರತಿ ಕಾಂಬಳೆ, ಗ್ರಾಪಂ ಸಿಬ್ಬಂದಿ ಮತ್ತು ಮಕ್ಕಳು ಉಪಸ್ಥಿತರಿದ್ದರು. ಮೇಲ್ವಿಚಾರಕ ದೀಪಕ ನಾಯಕ ಕಾರ್ಯಕ್ರಮ ಸಂಘಟಿಸಿದ್ದರು.

ವೇದಗಳ ಅಧ್ಯಯನ ಅವಶ್ಯಕ: ಶ್ರೀಗಳು

◆**ಸಿದ್ದಾಪುರ:** ವೇದಗಳು ಬಹುದೊಡ್ಡವು, ಅವುಗಳಿಗೆ ಮುಕ್ತಾಯವಿಲ್ಲ, ಈಗ ಲಭ್ಯವಿರುವ ವೇದಗಳನ್ನು ಅಧ್ಯಯನ ಮಾಡಲು ಒಂದು ಜೀವನ ಸಾಲದು ಎನ್ನಲಾಗಿದೆ. ಅವುಗಳ ತುಣುಕುಗಳು, ಅಂಶಗಳನ್ನಾದರೂ ಓದುವುದು ಮುಖ್ಯ ಎಂದು ರಾಘವೇಶ್ವರ ಭಾರತೀ ಶ್ರೀಗಳು ಹೇಳಿದರು. ತಾಲೂಕಿನ ಭಾನ್ಕುಳಿಯ ರಾಮದೇವಮಠದಲ್ಲಿ ರಾಘವೇಂದ್ರಭಾರತೀ ವಟು ಶಿಕ್ಷಣ ಶಿಬಿರಕ್ಕೆ ಚಾಲನೆ ನೀಡಿ ಶ್ರೀಗಳು ಶಿಬಿರಾರ್ಥಿಗಳನ್ನುದ್ದೇಶಿಸಿ ಆಶೀರ್ವಚನ ನೀಡಿ, ವೇದವನ್ನು ಅಕ್ಷರ, ಸ್ವರ ಲೋಪವಿಲ್ಲದೇ ಸಮಾಧಾನದಲ್ಲಿ ಹೇಳಲು ಬಂದರೆ ದೇವರು ವಶವಾಗುತ್ತಾನೆ ಎನ್ನಲಾಗಿದೆ. ಇಡೀ ಜೀವನದುದ್ದಕ್ಕೂ ನೀವು ಕಲಿತ ವಿದ್ಯೆ ನಿಮಗೆ ಪ್ರಯೋಜನ ನೀಡುತ್ತದೆ. ದುರ್ಗಾ ಸೂಕ್ತವನ್ನು ತಪ್ಪಿಲ್ಲದೇ ಹೇಳಿದರೆ ದುರ್ಗೆ ನಿಮಗೆ ಕೇಳಿದ್ದನ್ನು ಕೊಡುತ್ತಾಳೆ. ಈ ಶಿಬಿರದಲ್ಲಿ ನೀವು ಮಂತ್ರಗಳನ್ನು ಶ್ರದ್ಧೆಯಿಂದ ಕಲಿಯಿರಿ. ಶುದ್ಧವಾಗಿ ಕಲಿತು ಸ್ಪಷ್ಟವಾಗಿ ಹೇಳುವುದನ್ನೂ ರೂಢಿಸಿಕೊಳ್ಳಬೇಕು. ನಿಮ್ಮ ತಂದೆ-ತಾಯಿಯರು ನಿಮ್ಮ ಮೇಲೆ ಬಹಳ ನಿರೀಕ್ಷೆಯನ್ನು ಇಟ್ಟುಕೊಂಡಿದ್ದಾರೆ. ಅವರ ನಿರೀಕ್ಷೆಯನ್ನು ಹುಸಿ ಮಾಡದಂತೆ ಸರಿಯಾದ ದಾರಿಯಲ್ಲಿ ಸಾಗಬೇಕು. ದಿನಚರಿಯನ್ನು ಸರಿಯಾಗಿ ನಡೆಸಬೇಕು. ತಂದೆ-ತಾಯಿಯರಿಗೆ, ಗುರು ಹಿರಿಯರಿಗೆ ಗೌರವ ನೀಡಬೇಕು. ದೇಶದ ಸತ್ಪ್ರಜೆಗಳಾಗಿ ಉತ್ತಮ ಹೆಸರು ತರಬೇಕು ಎಂದು ಹೇಳಿ ಸಕಲರಿಗೂ ಒಳಿತಾಗಲೆಂದು ಹರಸಿದರು. ಶಿಬಿರದ ಸಂಚಾಲಕರಾದ ಜಯರಾಮ ಭಟ್ಟ ಗುಂಜಗೋಡ, ರಮಾನಂದ ತಲವಾಟ, ಶಿಬಿರದ ಶಿಕ್ಷಕರು ಸೇರಿದಂತೆ ಅನೇಕ ಪ್ರಮುಖರು ಉಪಸ್ಥಿತರಿದ್ದರು.



ಸಿದ್ದಾಪುರ: ತಾಲೂಕಿನ ಭಾನ್ಕುಳಿಯ ರಾಮದೇವಮಠದಲ್ಲಿ ರಾಘವೇಂದ್ರಭಾರತೀ ವಟು ಶಿಕ್ಷಣ ಶಿಬಿರಕ್ಕೆ ರಾಘವೇಶ್ವರ ಭಾರತೀ ಶ್ರೀಗಳು ಚಾಲನೆ ನೀಡಿದರು.

ಟವರ್ ಲೈನ್ ಕಂಬಗಳ ನಿರ್ಮಾಣಕ್ಕೆ ರೈತರು ಹಿಂದೇಟು: ನಿರಾಸೆ
ವಿದ್ಯುತ್ ಗ್ರಿಡ್ ಕಾರ್ಯಾರಂಭ ಯಾವಾಗ?

▸ಸುಧೀರ ನಾಯರ್

ದಿಗಂತ ವಿಶೇಷ

◆**ಬನವಾಸಿ:** ಬನವಾಸಿಯಲ್ಲಿ ವಿದ್ಯುತ್ ಗ್ರಿಡ್ ಸಿದ್ಧಗೊಂಡು ಐದು ವರ್ಷಗಳು ಕಳೆದರೂ ಇನ್ನೂ ಕಾರ್ಯಾರಂಭ ಮಾಡಿಲ್ಲ, ಗ್ರಿಡ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಟವರ್ ಲೈನ್ ಕಂಬಗಳ ನಿರ್ಮಾಣಕ್ಕೆ ರೈತರು ಹಿಂದೇಟು ಹಾಕಿರುವುದು ಬನವಾಸಿ ಭಾಗದ ಅನೇಕ ಯೋಜನೆಗಳಿಗೆ, ಸಮರ್ಪಕ ವಿದ್ಯುತ್ ಕನಸು ಕಂಡಿದ್ದ ಇಲ್ಲಿಯ ಜನತೆಗೆ ನಿರಾಸೆ ಮೂಡಿಸಿದೆ.

15 ಸಾವಿರ ಮನೆಗಳನ್ನು ಹೊಂದಿರುವ, ಕನ್ನಡಿಗರ ಮೊದಲ ರಾಜಧಾನಿ ಎಂಬ ಹೆಗ್ಗಳಿಕೆ ಹೊಂದಿರುವ ಬನವಾಸಿಗೆ ಶಿರಸಿ ಮುಖ್ಯ ಗ್ರಿಡ್‌ನಿಂದಲೇ ಸಂಪರ್ಕವಿದೆ. ರಾತ್ರಿ ವೇಳೆ ವಿದ್ಯುತ್ ಬಳಕೆ ಜಾಸ್ತಿಯಾಗುತ್ತಿದ್ದಂತೆಯೇ ವೋಲ್ಟೇಜ್ ಕೊರತೆ ಉಂಟಾಗುತ್ತಿದೆ. ಪದೇ ಪದೇ ಲೈನ್ ಟ್ರಿಪ್ ಆಗುತ್ತಿದೆ. ಹಗಲು ವೇಳೆಯಲ್ಲಿ ರೈತರು ಕೃಷಿ ಕಾರ್ಯಗಳಿಗಾಗಿ ಪಂಪ್ ಬಳಕೆ ಮಾಡುವುದರಿಂದಲೂ ವಿದ್ಯುತ್ ಸಮಸ್ಯೆ ಉಂಟಾಗುತ್ತಿದೆ.

ಆದರೆ, ಈ ಗ್ರಿಡ್‌ಗೆ ವಿದ್ಯುತ್ ಸಂಪರ್ಕವನ್ನು 27 ಕಿ.ಮೀ. ದೂರದ ಶಿರಸಿಯಿಂದ ತರುವ ಬದಲು 10 ಕಿ.ಮೀ. ದೂರದ ಶಿವಮೊಗ್ಗ ಜಿಲ್ಲೆ ಜಡೆ ಗ್ರಿಡ್‌ನಿಂದ ತರಲು ಯೋಜನೆ ರೂಪಿಸಲಾಗಿದೆ. ಒಟ್ಟೂ 37 ಕಂಬಗಳನ್ನು ನಿರ್ಮಿಸಿ ಟವರ್ ಲೈನ್ ಮೂಲಕ ವಿದ್ಯುತ್ ಸಂಪರ್ಕ ಜೋಡಿಸುವ ಕೆಲಸವೂ ಭರದಿಂದ ಸಾಗಿತ್ತು. ಆದರೆ, 13 ಕಡೆಗಳಲ್ಲಿ ರೈತರ ಹೊಲದಲ್ಲಿಯೇ ವಿದ್ಯುತ್ ಕಂಬ ನಿರ್ಮಿಸಬೇಕಿತ್ತಲ್ಲದೇ 10 ಕಡೆಗಳಲ್ಲಿ ವಿದ್ಯುತ್ ಕಂಬ ನಿರ್ಮಾಣಕ್ಕೆ ಜಾಗ ಬಿಟ್ಟುಕೊಡಲು ರೈತರು ಮುಂದಾಗಲಿಲ್ಲ, ರೈತರ ಮನವೊಲಿಸಿ ವಿದ್ಯುತ್



> ಮೂವರು ರೈತರು ಕಂಬಕ್ಕಾಗಿ ಜಾಗ ನೀಡಿದರೆ ತಮ್ಮ ಜೀವನವೇ ಮುಳುಗಿಹೋಗುತ್ತದೆ ಎಂದು ಟಾವರ್ ಲೈನ್ ನ ಕಂಬ ನಿರ್ಮಾಣಕ್ಕೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ಅವರಿಗೆ ಪರಿಹಾರವನ್ನು ಹೆಚ್ಚಿಸುವ ಭರವಸೆ ನೀಡಿ ಮಾತುಕತೆ ನಡೆಸಿದ್ದೇವೆ. ಇನ್ನೊಮ್ಮೆ ಅವರೊಂದಿಗೆ ಮಾತನಾಡುತ್ತೇವೆ.
>
> ■ ಶಿವರಾಮ ಹೆಬ್ಬಾರ್, ಶಾಸಕ

ಕಂಬ ನಿರ್ಮಿಸಲು ಶಾಸಕ ಶಿವರಾಮ ಹೆಬ್ಬಾರ್ ಕಳೆದ ಮೂರು ವರ್ಷಗಳಿಂದ ಸತತ ಪ್ರಯತ್ನದಿಂದ ಜಾಗ ನೀಡಲು 8 ಜನ ರೈತರು ಜಾಗ ಬಿಟ್ಟುಕೊಟ್ಟಿದ್ದಾರೆ. ಆದರೆ, ಬನವಾಸಿ ಭಾಗದಲ್ಲಿ ನಿರ್ಮಾಣವಾಗಬೇಕಿದ್ದ ಇನ್ನೆರಡು ಕಂಬಕ್ಕೆ ಜಾಗ ಬಿಟ್ಟುಕೊಡಲು ರೈತರು ಒಪ್ಪದೇ ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದಿರುವುದು ಇದುವರೆಗೆ ಮಾಡಿದ ಎಲ್ಲ ಪ್ರಯತ್ನವೂ ನನೆಗುದಿಗೆ ಬಿದ್ದಂತಾಗಿದೆ.

ಪರಿಹಾರವೇನು? ಎರಡು ಕಂಬ ನಿರ್ಮಾಣಕ್ಕೆ ನ್ಯಾಯಾಲಯದ ತಡೆಯಾಜ್ಞೆ ತಂದವರು ಸಣ್ಣ ಹಿಡುವಳಿ ರೈತರಾಗಿದ್ದಾರೆ. ಕಂಬಕ್ಕಾಗಿ ಭೂಮಿ

> ಬನವಾಸಿ ಗ್ರಿಡ್ ವಿಚಾರ ಬಹಳ ಸೂಕ್ಷ್ಮ ಇದೆ. 19ಕಂಬಗಳಲ್ಲಿ ಸೊರಬ ತಾಲೂಕಿನಲ್ಲಿರುವ ಕಂಬಗಳ ಸಮಸ್ಯೆ ಮುಗಿದಿದೆ. ಇನ್ನು ಬನವಾಸಿ ವಲಯ ವ್ಯಾಪ್ತಿಯ ಎರಡು ಕಂಬ ನಿರ್ಮಾಣಕ್ಕಾಗಿ ಸಮಸ್ಯೆ ಬಗೆಹರಿಯಲಾರದ ಕಗ್ಗಂಟು ಆಗಿದೆ. ಶಾಸಕ ಶಿವರಾಮ ಹೆಬ್ಬಾರ ಸತತ ಪ್ರಯತ್ನ ಮಾಡುತ್ತಿದ್ದಾರಾದರೂ, ಸಮಸ್ಯೆ ಇನ್ನೂ ಕಗ್ಗಂಟು ಆಗುವ ಮೊದಲು ಆ ರೈತರ ಮನವೊಲಿಸುವ ಕಾರ್ಯ ನಡೆಯಲಿ.
>
> ■ ಉದಯ ಕುಮಾರ ಕಾನಳ್ಳಿ, ಅಧ್ಯಕ್ಷರು, ತಾಲೂಕು ಹೋರಾಟ ಸಮಿತಿ

ಬಿಟ್ಟರೆ ನಮಗೆ ಸಂಪೂರ್ಣವಾಗಿ ಕೃಷಿ ಭೂಮಿಯೇ ಇರದಂತಾಗುತ್ತದೆ. ನಮ್ಮ ಜಾಗದಲ್ಲಿ ನಮಗೆ ಅಸ್ತಿತ್ವವೇ ಇಲ್ಲದಂತಾಗುತ್ತದೆ ಎಂಬುದು ಈ ರೈತರ ಅಸಮಾಧಾನ.

ಕೆರೆ ತುಂಬಿಸುವ ಯೋಜನೆಯೂ ವಿಳಂಬ: ಮಳೆಗಾಲದಲ್ಲಿ ಉಕ್ಕಿ ಹರಿಯುವ ವರದಾ ನದಿ ನೀರನ್ನು ಇಲ್ಲಿಯ 10 ಕೆರೆಗಳಿಗೆ ತುಂಬಿಸಿ ಬನವಾಸಿ ಭಾಗದ ಬೇಸಿಗೆ ಅವಧಿಯ ನೀರಿನ ಕೊರತೆ ನೀಗಿಸುವ ಮಹತ್ವಾಕಾಂಕ್ಷಿ ಏತ ನೀರಾವರಿ ಯೋಜನೆ ಸಹ ಬನವಾಸಿಯ ಗ್ರಿಡ್ ಕಾರ್ಯಾರಂಭ ಮಾಡದ ಹಿನ್ನೆಲೆಯಲ್ಲಿ ಹಿನ್ನಡೆ ಅನುಭವಿಸಿದೆ. ಕೆರೆ ತುಂಬಿಸಲು ಪಂಪ್, ಪೈಪ್ ಮಾರ್ಗ ಎಲ್ಲವೂ ಸಿದ್ಧಗೊಂಡಿದ್ದರೂ ಈಗಿನ ವಿದ್ಯುತ್ ವ್ಯವಸ್ಥೆಯಲ್ಲಿ ಪಂಪ್ ಕಾರ್ಯ ನಿರ್ವಹಿಸುತ್ತಿಲ್ಲ, ಹೊಸ ಗ್ರಿಡ್ ಕಾರ್ಯಾರಂಭ ಮಾಡಿದ ಬಳಿಕವೇ ಈ ಪಂಪ್‌ಗಳೂ ಕಾರ್ಯಾರಂಭ ಮಾಡಬೇಕಿದ್ದು, ಅಲ್ಲಿಯವರೆಗೂ ಬನವಾಸಿ ಭಾಗದ ಜನತೆ ಕಾಯಬೇಕಿದೆ.

ನಡೆದು ನುಡಿದವರು ಕೃತಿ ಲೋಕಾರ್ಪಣೆ



◆**ಅಂಕೋಲಾ:** ಕರ್ನಾಟಕ ಸಂಘ ಅಂಕೋಲಾ ಹಾಗೂ ಕೆ.ಎಲ್.ಇ ಶೇಷಗಿರಿ ಶಿಹಳೆ ಶಿಕ್ಷಣ ಮಹಾವಿದ್ಯಾಲಯದ ಸಹಯೋಗದಲ್ಲಿ ವಿಶ್ರಾಂತ ಶಿಕ್ಷಕ ವಾಸುದೇವ ನಾಯಕ ಅವರ ನಡೆದು ನುಡಿದವರು ಕೃತಿಯ ಲೋಕಾರ್ಪಣೆ ಕಾರ್ಯಕ್ರಮ ನಡೆಯಿತು.ಕೃತಿ ಲೋಕಾರ್ಪಣೆಗೊಳಿಸಿದ ಕರ್ನಾಟಕ ಸಂಘದ ಗೌರವಾಧ್ಯಕ್ಷ ಕೆ.ವಿ.ನಾಯಕ ಮಾತನಾಡಿ, ಮನುಷ್ಯರು ಪ್ರಾಣಿ ಪಕ್ಷಿಗಳಿಂದ ಕೂಡ ಹಲವಾರು ವಿಷಯಗಳನ್ನು ಅರಿಯಬಹುದಾಗಿದ್ದು, ಶಿಕ್ಷಕ ವೃತ್ತಿಯಲ್ಲಿ ಸತ್ಯ, ಪ್ರಾಮಾಣಿಕತೆ, ನಿಷ್ಠೆ ಆತ್ಮಗತ್ಯ ಇವೆಲ್ಲವನ್ನೂ ಮೈಗೂಡಿಸಿಕೊಂಡ ವಾಸುದೇವ ನಾಯಕರ ಕೃತಿ ಪ್ರಶಿಕ್ಷಣಾರ್ಥಿಗಳಿಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿ ಕೈಪಿಡಿಯಾಗಿದೆ ಎಂದರು.ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಸಂಘದ ಅಧ್ಯಕ್ಷ ರಾಮಕೃಷ್ಣ ಗುಂದಿ ಮಾತನಾಡಿ, ವಾಸ್ತವಿಕ ಬದುಕಿಗೆ ಹತ್ತಿರವಾದ ವೈಚಾರಿಕತೆ ವಾಸುದೇವ ನಾಯಕ ಅವರ ಕೃತಿಯಲ್ಲಿದೆ ಎಂದರು.

ಕೃತಿಕಾರ ವಾಸುದೇವ ನಾಯಕ ಮಾತನಾಡಿ, ಕೃತಿ ರಚನೆಯ ಅಗತ್ಯತೆಯ ಕುರಿತು ಹೇಳಿದರು.ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ವಿನಾಯಕ ಹೆಗಡೆ ಕೃತಿ ಪರಿಚಯ ಮಾಡಿ ಸಾಧಕರು ನಡೆದು ನುಡಿದ ಕೈಪಿಡಿಯಾಗಿ ಕೃತಿ ಹೊರಹೊಮ್ಮಿದೆ ಎಂದರು.ಪ್ರಾಧ್ಯಾಪಕಿ ಪುಷ್ಪಾ ನಾಯ್ಕ ಸ್ವಾಗತಿಸಿದರು. ಪ್ರಶಿಕ್ಷಣಾರ್ಥಿ ಬಸವರಾಜ ಶೀಲವಂತರ್‌ಕಾರ್ಯಕ್ರಮನಿರ್ವಹಿಸಿದರು. ಮಂಜುನಾಥ ಇಟಗಿ ವಂದಿಸಿದರು. ಕರ್ನಾಟಕ ಸಂಘದ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

ಪಿಎಚ್‌ಡಿ ಪ್ರದಾನ



◆**ಕುಮಟಾ:** ಸ್ಥಳೀಯ ಕಮಲಾ ಬಾಳಿಗಾಶಿಕ್ಷಣಮಹಾವಿದ್ಯಾಲಯದಲ್ಲಿ ಪೂರ್ಣಾವಧಿ ತಾತ್ಕಾಲಿಕ ಉಪನ್ಯಾಸಕರಾಗಿ ಕಳೆದ 07 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ರೇಖಾ ಸಿ. ಯೆಲಿಗಾರ ಇವರಿಗೆ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರದವರು ಶಿಕ್ಷಣ ಶಾಸ್ತ್ರದಲ್ಲಿ ಇವರು ಮಂಡಿಸಿದ ಮಹಾಪ್ರಬಂಧಕ್ಕೆ ಪಿ.ಹೆಚ್‌ಡಿ ಪದವಿ ನೀಡಿ ಗೌರವಿಸಿದೆ. ಇದಕ್ಕೆ ವಿಜಯಪುರ ವಿಶ್ವವಿದ್ಯಾಲಯದ ಕುಲಸಚಿವರು, (ಮೌಲ್ಯಮಾಪನ) ಆದ ಪ್ರೊ. ಬಿ.ಎಲ್ ಲಕ್ಕಣ್ಣನವರವರು ಮಾರ್ಗದರ್ಶನ ನೀಡಿದ್ದಾರೆ.

ದೇವರ ವಾರ್ಷಿಕೋತ್ಸವ ಸಂಪನ್ನ



◆**ಅಂಕೋಲಾ:**ತಾಲೂಕಿನ ಪೂಜಗೇರಿಯ ರಣಮಾಸ್ತಿ, ಕೆಂಡ ಮಾಸ್ತಿ ಮತ್ತು ಮಸಣ ಮಾಸ್ತಿ ದೇವರ ವಾರ್ಷಿಕೋತ್ಸವ ಸಾಂಪ್ರದಾಯಿಕ ವಿಧಿ-ವಿಧಾನಗಳೊಂದಿಗೆ ನಡೆಯಿತು.

ದೇವರ ಸನ್ನಿಧಿಯಲ್ಲಿ ಹಣ್ಣುಕಾಯಿ, ಉಡಿಸೇವೆ ಮೊದಲಾದ ಸೇವಾ ಕಾರ್ಯಕ್ರಮ ನಡೆದವು. ದೇವರ ಮಹಾಪೂಜೆಯ ನಂತರ ಅನ್ನ ಸಂತರ್ಪಣೆ ನಡೆಯಿತು.

ಸುತ್ತ ಮುತ್ತಲಿನ ನೂರಾರು ಜನರು ದೇವರ ಸನ್ನಿಧಿಯಲ್ಲಿ ವಿವಿಧ ಸೇವೆಗಳನ್ನು ಸಲ್ಲಿಸಿ ಅನ್ನ ಪ್ರಸಾದ ಸ್ವೀಕರಿಸಿದರು. ಮಾಜಿ ಶಾಸಕಿ ರೂಪಾಲಿ ನಾಯ್ಕ ಅವರು ಮಗ ಪರ್ಬತ್ ಅವರೊಂದಿಗೆ ಭೇಟಿ ನೀಡಿ ದೇವರಿಗೆ ಉಡಿ ಸೇವೆ ಸಲ್ಲಿಸಿದರು.

ಗಾಂವಕರ ಕುಟುಂಬದವರು ದೇವರ ಪೂಜಾ ಕಾರ್ಯ ನೆರವೇರಿಸಿದರು.

ಇಂದು ಶಿಖರ ಪ್ರತಿಷ್ಠಾಪನೆ



◆**ಹೊನ್ನಾವರ:** ತಾಲೂಕಿನ ಪೌರಾಣಿಕ ಹಿನ್ನಲೆ ಹೊಂದಿರುವ ಮುಗ್ವಾದ ಸುರಕಟ್ಟೆಯ ಬಿಳಿಯಮ್ಮ (ಶ್ವೇತಾಂಬಿಕಾ) ದೇವಿ ದೇವಸ್ಥಾನದ ಕಲಾವೃದ್ಧಿ, ಶಿಖರ ಪ್ರತಿಷ್ಠಾಪನೆ, ಚಂಡಿಹವನ ನಡೆಯಲಿದೆ ಎಂದು ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ವಿ.ಜಿ.ಹೆಗಡೆ ಗುಡ್ಗೆ ತಿಳಿಸಿದರು. ಸುರಕಟ್ಟೆಯ ಬಿಳಿಯಮ್ಮ ದೇವಿ ದೇವಸ್ಥಾನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.ಏ.26ರಂದು ಶಿಖರ ಪ್ರತಿಷ್ಠಾಪನೆ, ಏ.27ರಂದು ಚಂಡಿಹವನ ನಡೆಯಲಿದೆ. ದೇವಸ್ಥಾನಕ್ಕೆ 25 ಲಕ್ಷರೂ. ವೆಚ್ಚದಲ್ಲಿ ತಾಮ್ರದ ಹೊದಿಕೆ ಮಾಡಲಾಗಿದೆ ಎಂದುತಿಳಿಸಿದರು. ವಾರ್ಷಿಕವಾಗಿ ಚಂಡಿಹವನ, ಸಪ್ತಶತಿ ಪಾರಾಯಣ ಮುಂತಾದವು ನಡೆಯುತ್ತವೆ ಎಂದು ತಿಳಿಸಿದರು.ವಿದ್ವಾನ್ ಗಣೇಶ ಭಟ್ ಮಾತನಾಡಿ, ಶ್ವೇತಾಂಬಿಕೆ ಪರಿವಾರ ಸಮೇತ ವಲ್ಮೀಕವಾಗಿದೆ. ವೀರಭದ್ರ, ಬಂಡಿಬಕ್ಕ, ಕೆಂಡದವೀರ ಪರಿವಾರದ ದೇವರಾಗಿದೆ ಎಂದು ತಿಳಿಸಿದರು.ಆಡಳಿತ ಸಮಿತಿಯ ಕಾರ್ಯದರ್ಶಿ ಲಕ್ಷ್ಮೀನಾರಾಯಣ ಹೆಗಡೆ, ಉಪಾಧ್ಯಕ್ಷ ಎಂ.ಎಸ್.ಹೆಗಡೆ ಕಣ್ಣಿಮನೆ, ಜಂಟಿ ಕಾರ್ಯದರ್ಶಿ ಮಂಜುನಾಥ ಹೆಗಡೆ, ಪ್ರಕಾಶ ಹೆಗಡೆ, ರವಿ ಭಟ್ ಇದ್ದರು.

ಎಸ್ಸೆಸ್ಸೆಲ್ಸಿ: ಶೇ.100ರಷ್ಟು ಫಲಿತಾಂಶ



◆**ಅಂಕೋಲಾ:** ಪಟ್ಟಣದ ಹೃದಯ ಭಾಗದಲ್ಲಿರುವ ಪ್ರತಿಷ್ಠಿತ ವಿದ್ಯಾ ಸಂಸ್ಥೆ ಜೈಹಿಂದ್ ಎಜುಕೇಷನ್ ಸೊಸೈಟಿಯ ಜೈಹಿಂದ್ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳು 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆಯನ್ನು ಮಾಡಿದ್ದಾರೆ. ಪರೀಕ್ಷೆಗೆ ಕುಳಿತ 45 ವಿದ್ಯಾರ್ಥಿಗಳೂ ಪಾಸಾಗಿ ಶೇ.100ರಷ್ಟು ಫಲಿತಾಂಶ ದಾಖಲಿಸಿದ್ದಾರೆ. ನಂದೀಶ ರಾಜು ನಾಯ್ಕ 625ಕ್ಕೆ 615 ಅಂಕ ಪಡೆದು ಶಾಲೆಗೆ ಮತ್ತು ತಾಲೂಕಿಗೆ ಪ್ರಥಮ, ಪುರುಷೋತ್ತಮ ವಿನಾಯಕ ಭಟ್ 625ಕ್ಕೆ 614 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ. ಸನಾ ನಾಗರಾಜ ಗಾಂವಕರ 605, ಚೇತನ ಮೋಹನ ಮಡಿವಾಳ 594, ಅಂಶಿ ಕೇಶವ ನಾಯ್ಕ 592, ಅಪೇಕ್ಷಾ ಸತೀಶ ಶೇಡಗೇರಿ 586, ಪೂರ್ವಿ ಜಗದೀಶ ಹರಿಕಂತ್ರ 586, ತನಯ ರವೀಂದ್ರ ನಾಯ್ಕ 578, ರಜತ ರಾಜೇಶ ನಾಯ್ಕ 576, ಸುಜನ ದೇವು ಗೌಡ 572 ಅಂಕಗಳನ್ನು ಗಳಿಸಿ ಶಾಲೆಗೆ ಕೀರ್ತಿ ತಂದಿರುತ್ತಾರೆ. ಪರೀಕ್ಷೆಗೆ ಕುಳಿತ 45 ವಿದ್ಯಾರ್ಥಿಗಳಲ್ಲಿ 15 ವಿದ್ಯಾರ್ಥಿಗಳು ಉನ್ನತ ದರ್ಜೆ, 29 ವಿದ್ಯಾರ್ಥಿಗಳು ಪ್ರಥಮ ದರ್ಜೆ, ಒಬ್ಬ ವಿದ್ಯಾರ್ಥಿ ದ್ವಿತೀಯ ದರ್ಜೆಯಲ್ಲಿ ಪಾಸಾಗಿ ಶಾಲೆಯ ಕೀರ್ತಿಯನ್ನು ಹೆಚ್ಚಿಸಿರುತ್ತಾರೆ. ಜೈಹಿಂದ್ ಎಜುಕೇಷನ್ ಸೊಸೈಟಿಯ ಆಡಳಿತ ಮಂಡಳಿಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರು, ಮುಖ್ಯಾಧ್ಯಾಪಕ ಮಹೇಶ ಆರ್. ನಾಯ್ಕ ಹಾಗೂ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.



ಸಿದ್ದಾಪುರ: ತಾಲೂಕಿನ ಭಾನ್ಕುಳಿಯ ಗೋಸ್ವರ್ಗದಲ್ಲಿ ನಡೆದ ಶಂಕರಪಂಚಮೀ ಧರ್ಮ ಸಭೆಯಲ್ಲಿ ಗೋವಿನ ಪಾಲನೆಯಲ್ಲಿ ಸಹಭಾಗಿತ್ವ ನೀಡುತ್ತಿರುವ ಮಾತೆಯರಿಗೆ ಶ್ರೀ ರಾಘವೇಶ್ವರಭಾರತೀ ಶ್ರೀಗಳು ಭಾಗಿನ, ತಾರೆ, ಸುತಾರೆ, ಮಹಾತಾರೆ ಆಶೀರ್ವಾದ ನೀಡಿದರು.

ಚಿತ್ರಾಕ್ಷಿ ಕಲ್ಯಾಣ ಯಕ್ಷಗಾನ ಪ್ರದರ್ಶನ



◆**ಸಿದ್ದಾಪುರ:** ತಾಲೂಕಿನ ಇಟಗಿಯ ಕಲಾಭಾಸ್ಕರ ತಂಡದವರಿಂದ ಯಲ್ಲಾಪುರ ತಾಲೂಕಿನ ಕುಪ್ಪಳ್ಳಿ ನಾರಾಯಣ ಭಟ್ಟ ಅವರ ಮೊಮ್ಮಗ ಅಭಿನವನ ಉಪನಯನ ಸಂಸ್ಕಾರದ ನಿಮಿತ್ತ ಚಿತ್ರಾಕ್ಷಿ ಕಲ್ಯಾಣ ಯಕ್ಷಗಾನ ಪ್ರದರ್ಶಿಸ ಲಾಯಿತು. ಭಾಗವತರಾಗಿ ಸೃಜನ ಗಣೇಶ ಹೆಗಡೆ ಸಾಗರ, ಮದ್ದಳೆ ವಾದನದಲ್ಲಿ ಶರತ್ ಹೆಗಡೆ ಜಾನಕೈ, ಚಂಡೆವಾದನದಲ್ಲಿ ಕೆ.ಎನ್.ಭಾರ್ಗವ ಸಾಗರ ಸಹಕರಿಸಿದರು. ರಕ್ತಜಂಗನಾಗಿ ಸುಬ್ರಹ್ಮಣ್ಯ ಹೆಗಡೆ ಚಿಟ್ಟಾಣಿ, ನಾರದನಾಗಿ ಇಟಗಿ ಮಹಾಬಲೇಶ್ವರ, ಚಂದ್ರಸೇನನಾಗಿ ಶ್ರೀಧರ ಅಣಲಗಾರ, ಸತ್ಯಶೀಲೆಯಾಗಿ ದೀಪಕ ಕುಂಕಿ, ರಕ್ತಕೇಶಿಯಾಗಿ ವೆಂಕಟೇಶಹೆಗಡೆಬೊಗರಿಮಕ್ಕಿ, ರುದ್ರಕೋಪನಾಗಿ ಪ್ರವೀಣ ತಟ್ಟೀಸರ, ಚಿತ್ರಾಕ್ಷಿಯಾಗಿ ಸದಾಶಿವ ಭಟ್ಟ ಮಲವಳ್ಳಿ, ಹಾಸ್ಯ ಪಾತ್ರದಲ್ಲಿ ಚಪ್ಪರಮನೆ ಶ್ರೀಧರ ಹೆಗಡೆ ರಂಜಿಸಿದರು. ರಾಘವೇಂದ್ರ ಭಟ್ಟ ಪ್ರಾಯೋಜಕತ್ವವಹಿಸಿದ್ದರು.



ಕಾರವಾರ: ಕ್ರೀಮ್ಸ್ ಟೀಚರ್ಸ್ ಅಸೋಸಿಯೇಷನ್ ಸಂಘವನ್ನು, ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕುವೆಂಪು ಕಲಾಭವನದಲ್ಲಿ ಸಂಸ್ಥೆಯ ಡೀನ್ ಹಾಗೂ ನಿರ್ದೇಶಕಿ ಡಾ. ಪೂರ್ಣಿಮಾ ಶುಕ್ರವಾರ ಉದ್ಘಾಟಿಸಿದರು.

ಕರಾವಳಿಯಲ್ಲಿ ಬಂಡಿ ಹಬ್ಬಗಳ ವೈಭವ ಆರಂಭ

▸ನಾಗರಾಜ ಶೆಟ್ಟಿ

◆**ಅಂಕೋಲಾ:** ಉ.ಕ ಜಿಲ್ಲೆಯ ಕರಾವಳಿಯಲ್ಲಿ ಬಂಡಿ ಹಬ್ಬಗಳ ವೈಭವ ಆರಂಭವಾಗಿದ್ದು, ಗ್ರಾಮ ದೇವರ ಜಾತ್ರೆಯ ಸಂಭ್ರಮ ಎಲ್ಲಡೆ ಮನೆ ಮಾಡಿದೆ, ಕಾರವಾರ,ಅಂಕೋಲಾ, ಕುಮಟಾ, ಹೊನ್ನಾವರ ತಾಲೂಕುಗಳ ವಿವಿಧಡೆ ದೇವರ ಕಳಸದ ಮೆರವಣಿಗೆ ವಿವಿಧ ಬಗೆಯ ಸಾಂಪ್ರದಾಯಿಕ ಆಚರಣೆಗಳು ಪ್ರತಿದಿನ ನಡೆಯುತ್ತಿದ್ದು, ಈ ಬಾರಿ ಮಿತಿಯಂತೆ ಸುಮಾರು 15 ದಿನಗಳ ಮೊದಲೇ ಬಂಡಿಹಬ್ಬಗಳು ಎದುರಾಗಿವೆ.

ಸಾಮಾನ್ಯವಾಗಿ ಕೃಷಿಕರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವ ಜಿಲ್ಲೆಯ ಕರಾವಳಿಯಲ್ಲಿ ಪ್ರಕೃತಿಯನ್ನು ಮತ್ತು ಗ್ರಾಮಗಳನ್ನು ರಕ್ಷಿಸುವ ಶಕ್ತಿಗಳನ್ನು ದೈವೀ ಸ್ವರೂಪದಲ್ಲಿ ಪೂಜಿಸಿ ಆರಾಧಿಸಲಾಗುತ್ತಿದ್ದು, ಪ್ರತಿಯೊಂದು ಮಹತ್ವದ ಕೆಲಸ ವ್ಯವಹಾರಗಳಿಗೆ ಗ್ರಾಮ ದೇವರಲ್ಲಿ ಒಪ್ಪಿಗೆ ಪಡೆದು ಹರಕೆಗಳನ್ನು ಹೊತ್ತು ಕೈ ಹಾಕುವ ಇಲ್ಲಿನ ಜನರು ಬಂಡಿಹಬ್ಬದ ಆಚರಣೆಗೆ ವಿಶೇಷ ಮಹತ್ವ ನೀಡಿ ಗ್ರಾಮ ದೇವರ ವಾರ್ಷಿಕ ಜಾತ್ರೆಯಲ್ಲಿ ತಮ್ಮ ಹರಕೆಗಳನ್ನು ಪೂರೈಸುತ್ತಾರೆ. ಜಿಲ್ಲೆಯ ಕಾರವಾರದಿಂದ ಹೊನ್ನಾವರದವರೆಗೆ ಸುಮಾರು 32 ಕಡೆಗಳಲ್ಲಿ ಬಂಡಿ ಹಬ್ಬಗಳ ಆಚರಣೆ ಕಾಣಬಹುದಾಗಿದ್ದು, ಅಂಕೋಲಾ ತಾಲೂಕೊಂದರಲ್ಲೇ ಸುಮಾರು 20 ಕಡೆಗಳಲ್ಲಿ ಬಂಡಿ ಹಬ್ಬ ಮತ್ತು ಗಿಡಿ ಹಬ್ಬಗಳು ನಡೆಯುತ್ತವೆ. ವಿವಿಧ ಭಾಗಗಳ ಬಂಡಿಹಬ್ಬಗಳ ಆಚರಣಾ ಶೈಲಿ ಸ್ವಲ್ಪ ಬೇರೆ ಇದ್ದರೂ ಮೂಲ ಪದ್ಧತಿ ಒಂದೇ ಆಗಿದೆ. ಸಾಮಾನ್ಯವಾಗಿ ಮೇ ಮತ್ತು ಜೂನ್ ತಿಂಗಳ ಮಧ್ಯಂತರದವರೆಗೆ ಬಂಡಿಹಬ್ಬಗಳ ಆಚರಣೆ ನಡೆಸಲಾಗುತ್ತಿದ್ದು ಗ್ರಾಮ ದೇವರುಗಳನ್ನು ಗಿಂಡಿ ಅಥವಾ ಕಳಸದ ರೂಪದಲ್ಲಿ ಹೊತ್ತು ಗ್ರಾಮಗಳ ದೇವಾಲಯಗಳು,



ಪರಿವಾರ ದೇವರುಗಳ ಗುಡಿಗಳಿಗೆ ತೆರಳುವುದು, ಆಡುಕಟ್ಟೆಗಳಲ್ಲಿ ಪರಿವಾರ ದೇವರುಗಳ ಮುಖವಾಡ ಕುಣಿತ,ಮಹಾಸತಿ ಪೂಜೆ, ದೇವರನ್ನು ಹಬ್ಬಕ್ಕೆ ಕರೆಯುವುದು, ಕಳಸ ಹೊತ್ತು ಮಂಡಿಯೂರಿ ನಮಸ್ಕರಿಸುವುದು ಮೊದಲಾದ ಆಚರಣೆಗಳು ಬಂಡಿಹಬ್ಬದ ಸೊಬಗನ್ನು ಹೆಚ್ಚಿಸುತ್ತಿವೆ. ಅಕ್ಷಯ ತದಿಗೆ ಇಲ್ಲವೇ ಅದರ ನಂತರದ ದಿನಗಳಲ್ಲಿ ಬಂಡಿಹಬ್ಬದ ಪ್ರಮುಖ ಆಚರಣೆಗಳು ಆರಂಭವಾಗುತ್ತವೆ. ಹಿಂದಿನಿಂದ ನಡೆದು ಬಂದಷ್ಟು ದಿನಗಳ ಕಾಲ ಹಬ್ಬದ ಪ್ರಕ್ರಿಯೆಗಳನ್ನು ನಡೆಸಲಾಗುತ್ತಿದ್ದು, ಬಂಡಿಹಬ್ಬದ ದಿನದಂದು ವಿಶೇಷ ಜಾತ್ರೆಯ ಸಂಭ್ರಮ ಕಾಣಬಹುದಾಗಿದೆ.

ಬಂಧು ಮಿತ್ರರ ಆಗಮನ

ಬೇರೆ ಬೇರೆ ಕಾರಣಗಳಿಂದ ಹುಟ್ಟೂರಿನಿಂದ ದೂರ ಇರುವ ಗ್ರಾಮಗಳ ಜನರು ಬಂಡಿ ಹಬ್ಬಗಳ ಸಂದರ್ಭದಲ್ಲಿ ತಮ್ಮ ಮೂಲ ಗ್ರಾಮಗಳಿಗೆ ಬಂದು ದೇವರ ಸೇವೆ ಸಲ್ಲಿಸುವ ಜೊತೆಗೆ ಕುಟುಂಬದ ಜನರ ಜೊತೆ ಬೆರೆತು ಸಂತಸದ ಕ್ಷಣಗಳನ್ನು ಕಳೆಯಲು ಬಂಡಿಹಬ್ಬಗಳು ದಾರಿ ಮಾಡಿಕೊಡುತ್ತಿದ್ದು, ಜಿಲ್ಲೆಯ ಕರಾವಳಿಯ ಜನ ದೇಶದ ವಿವಿಧ ಭಾಗಗಳಲ್ಲಿ ನೆಲೆಸಿದ್ದರೂ ಬಂಡಿಹಬ್ಬದ ಸಂದರ್ಭದಲ್ಲಿ ಆಗಮಿಸಿ ಬಂಧು ಮಿತ್ರರೊಂದಿಗೆ ಕಾಲ ಕಳೆಯುವುದನ್ನು ಕಾಣಬಹುದು.

ಕೃಷಿ ಪದ್ಧತಿ ನಂಟು

ಬಂಡಿಹಬ್ಬಗಳ ಬಹುತೇಕ ಆಚರಣೆ ಕೃಷಿ ಪದ್ಧತಿಯೊಂದಿಗೆ ನಂಟನ್ನು ಹೊಂದಿದ್ದು ಒಂದು ಗ್ರಾಮಕ್ಕೆ ಸಂಬಂಧಿಸಿದ ಪ್ರತಿಯೊಂದು ಸಮಾಜದ ಜನರು ಬಂಡಿ ಹಬ್ಬದಲ್ಲಿ ಭಾಗಿಯಾಗಿ ತಮ್ಮ ಸೇವೆಯನ್ನು ಸಲ್ಲಿಸುವುದು ಸಾಮಾಜಿಕ ಸಾಮರಸ್ಯ ಬೆಳೆಯಲು ಬಂಡಿಹಬ್ಬಗಳು ಕಾರಣವಾಗಿವೆ. ಮಳೆಗಾಲದಲ್ಲಿ ಯಾವುದೇ ಅನಾಹುತ ಸಂಭವಿಸದಂತೆ, ಕೃಷಿ ಕಾರ್ಯಗಳು ಉತ್ತಮವಾಗಿ ನಡೆದು ಸಮೃದ್ಧಿಯುಂಟಾಗಲಿ ಎಂದು ಮಳೆಗಾಲದ ಪೂರ್ವ ಗ್ರಾಮ ದೇವರುಗಳ ಜಾತ್ರೆ ನಡೆಸಿ ದೇವರಲ್ಲಿ ಪ್ರಾರ್ಥಿಸಿ ಹರಕೆ ಸಲ್ಲಿಸುವುದು ಬಂಡಿಹಬ್ಬಗಳ ಆಚರಣೆ ಹಿಂದಿನ ಆಶಯವಾಗಿದೆ.

ವಿಜೃಂಭಣೆಯ ಭದ್ರಕಾಳಿ, ಪರಿವಾರ ದೇವರ ಬಂಡಿಹಬ್ಬ



◆**ಗೋಕರ್ಣ:** ಗ್ರಾಮದೇವತೆ ಭದ್ರಕಾಳಿ ಹಾಗೂ ಪರಿವಾರ ದೇವರ ಬಂಡಿಹಬ್ಬದ ಬಂಡಿತೇರು ಶನಿವಾರ ಸಂಜೆ ವಿಜೃಂಭಣೆಯಿಂದ ನಡೆಯಿತು.

ರಥಬೀದಿಯಲ್ಲಿರುವ ಕಳಸದ ಮನೆಯ ಎದರು ಮರದ ವಿಶಿಷ್ಟ ಬಂಡಿತೇರಿಗೆ ಮಧ್ಯಾಹ್ನದಿಂದ ಭಕ್ತರು ವಿವಿಧ ಹಣ್ಣುಕಾಯಿ, ಹಣವನ್ನ ಸಮರ್ಪಿಸಿ ಇಷ್ಟಾರ್ಥ ಸಿದ್ದಿಗೆ ಪ್ರಾರ್ಥಿಸಿದರು.

ಈ ಹಣ್ಣು ಕಾಯಿಗಳನ್ನ ಬಂಡಿತೇರಿಗೆ ಬಹು ಆಕರ್ಷಕವಾಗಿ ಜೋಡಿಸಲಾಗಿತ್ತು. ಸಂಜೆ ಕಳಸದ ಮನೆಯಲ್ಲಿ ಕಳಸಕ್ಕೆ ಪೂಜೆ ವಿವಿದ ದೈವಿಕ ಕಾರ್ಯ ನೆರವೇರಿದ ಬಳಿಕ ಕಳಶೋತ್ಸವ ಮಹಾಬಲೇಶ್ವರ ಮಂದಿರಕ್ಕೆ ತೆರಳಿ, ಪುನಃ ಕಳಸದ ಮನೆಯ ಬಳಿ ಆಗಮಿಸಿ ಪೂಜಾ ಕೈಂಕರ್ಯ ನೆರವೇರಿದ ಬಳಿಕ ಬಂಡಿ ಎಳೆಯುವ ಮಾದನಗೇರಿ ಗೌಡರಿಂದ ಅಪ್ಪಣೆ ನೀಡಿ, ಹೂವು, ಹಣ್ಣಿನಿಂದ ಅಲಂಕೃತಗೊಂಡ ಬಂಡಿಯ ಜೊತೆ, ಶ್ರೀದೇವಿಯ ಕಳಸ ಭದ್ರಕಾಳಿ ಸಾನಿಧ್ಯಕ್ಕೆ ತೆರಳಿತು. ವೆಂಕಟ್ರಮಣ ದೇವಾಲಯದ ಬಳಿ ಬಂಡಿಯನ್ನ ತಿರುಗಿಸುವುದು ಬಹು ಆಕರ್ಷಕವಾಗಿತ್ತು. ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸಿದ ಭಕ್ತರು ಬಂಡಿತೇರು ಎಳೆದು ಸಂಭ್ರಮಿಸಿದರು.

ಬಂಡಿತೇರಿನ ಮುಂದೆ ಅಪಾರ ಸಂಖ್ಯೆಯಲ್ಲಿ ಹಾಲಕ್ಕಿ ಸಮಾಜದ ಮಹಿಳೆಯರು ತೆರಳುವುದು ಎಲ್ಲರ ಗಮನ ಸೆಳೆಯಿತು. ಇವರಿಗೆ ಸಾಂಪ್ರದಾಯಿಕ ಭಾಷೆಯಲ್ಲಿ ಬೊಗಣಗಿತ್ತಿಯರು ಎಂದು ಕರೆಯುತ್ತಾರೆ. ತಮ್ಮ ಕುಟುಂಬದ ಒಳಿತು, ಇಷ್ಟಾರ್ಥ ಸಿದ್ದಿಗಾಗಿ ಈ ದಿನದಂದು ಮಹಿಳೆಯರು ಹೂವಿನ ಅಲಂಕಾರದೊಂದಿಗೆ ಬಂಡಿತೇರಿನ ಜೊತೆ ಸಾಗಿ ಹರಕೆ ಸೇವೆ ಪೂರೈಸುತ್ತಾರೆ. ಹಲಸು, ಬಾಳೆಹಣ್ಣುಮತ್ತಿತರಹಣ್ಣುಗಳನ್ನ ಬಂಡಿಗೆ ಜೋಡಿಸಿದ್ದು, ಇದರ ಜೊತೆ ನೋಟಿನ ಸರ, ಹೂವಿನ ಅಲಂಕಾರ ಮಾಡಿರುವುದು ಭಕ್ತರನ್ನ ಆಕರ್ಷಿಸಿತು. ಚಂಡೆನಾದ, ವಾದ್ಯಘೋಷ ಬಂಡಿತೇರಿಗೆ ಮೆರಗು ತಂದಿತ್ತು.

ಕಿರುಸುದ್ದಿ

ಶೇ. 97.85ರಷ್ಟು ಫಲಿತಾಂಶ





◆**ರಾಣೇಬೆನ್ನೂರ:** ತಾಲೂಕಿನ ಹನುಮಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಪ್ರಸ್ತುತ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶವು ಶೇ.97.85ರಷ್ಟಾಗಿದೆ. ಡಿಸ್ಟಿಂಕ್ಷನ್‌ನಲ್ಲಿ 7 ವಿದ್ಯಾರ್ಥಿಗಳು, ಪ್ರಥಮ ಶ್ರೇಣಿಯಲ್ಲಿ 32, ದ್ವಿತೀಯ ಶ್ರೇಣಿ 06, ಉತ್ತೀರ್ಣ 03 ವಿದ್ಯಾರ್ಥಿಗಳು ತೇರ್ಗಡೆ ಹೊಂದಿ ಶಾಲೆಗೆ ಹಾಗೂ ಗ್ರಾಮಕ್ಕೆ ಕೀರ್ತಿ ತಂದಿದ್ದಾರೆ.

ರಾಕೇಶ ಕಣದಮನಿ 573 ಅಂಕಗಳನ್ನು ಪಡೆದು ಶೇ.92.22ರಷ್ಟು ಫಲಿತಾಂಶ ಪಡೆದು ಶಾಲೆಗೆ ಪ್ರಥಮ, ಸರಸ್ವತಿ ಡೊಳ್ಳಿನ 561 ಅಂಕಗಳನ್ನು ಪಡೆದು ಶೇ.90ರಷ್ಟು ಫಲಿತಾಂಶ ಪಡೆದು ಶಾಲೆಗೆ ದ್ವಿತೀಯ ಸ್ಥಾನ ಪಡೆದಿರುತ್ತಾಳೆ. ವಿನಾಯಕ ಅಜ್ಜೇವಡಿಮಠ 559 ಅಂಕಗಳನ್ನು ಪಡೆದು ಶೇ.89.05 ರಷ್ಟು ಫಲಿತಾಂಶ ಪಡೆದು ಶಾಲೆಗೆ ತೃತೀಯ ಸ್ಥಾನ ಪಡೆದಿರುತ್ತಾನೆ. ಸಧನೆಗೈದ ಎಲ್ಲ ವಿದ್ಯಾರ್ಥಿಗಳನ್ನು ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಸಹ ಶಿಕ್ಷಕರು ಮತ್ತು ಎಸ್‌ಡಿಎಂಸಿ ಅಧ್ಯಕ್ಷರು ಮತ್ತು ಸರ್ವ ಸದಸ್ಯರು ಹಾಗೂ ಗ್ರಾಮದ ಗಣ್ಯರು ಅಭಿನಂದಿಸಿದ್ದಾರೆ.

ಇಂದು ಮಹರ್ಷಿ ವಾಲ್ಮೀಕಿ ಪುತ್ಥಳಿ ಅನಾವರಣ

◆**ಹಾವೇರಿ:** ಇಲ್ಲಿನ ಹಳೆ ಪಿ.ಬಿ.ರಸ್ತೆಗೆ ಹೊಂದಿಕೊಂಡಿರುವ ಪಿಡಬ್ಲೂಡಿ ಕ್ವಾರ್ಟರ್ಸ ಹತ್ತಿರದ ನಗರದ ವಾಲ್ಮೀಕಿ ಸರ್ಕಲ್‌ನಲ್ಲಿ ಮಹರ್ಷಿ ವಾಲ್ಮೀಕಿಯವರ ನೂತನ ಪುತ್ಥಳಿ ಅನಾವರಣ ಸಮಾರಂಭವನ್ನು ಏ.26ರಂದು ಭಾನುವಾರ ಬೆಳಿಗ್ಗೆ ಹಮ್ಮಿಕೊಳ್ಳಲಾಗಿದೆ. ಸಮಾಜ ಬಾಂಧವರು, ಸರ್ವಸಮಾಜದವರು ಸದರಿ ಸಮಾರಂಭವನ್ನು ಭಾಗವಹಿಸುವ ಮೂಲಕ ಯಶಸ್ವಿಗೊಳಿಸುವಂತೆ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಹಾವೇರಿ ಜಿಲ್ಲಾ ಘಟಕದ ಅಧ್ಯಕ್ಷ ರಮೇಶ ಆನವಟ್ಟಿ ಕರೆ ನೀಡಿದರು.

ಇಲ್ಲಿನ ವಾಲ್ಮೀಕಿ ಸರ್ಕಲ್‌ನಲ್ಲಿ ನಡೆದ ಸಮಾಜದ ಪ್ರಮುಖರ ಸಭೆಯಲ್ಲಿ ಮಾತನಾಡಿದ ಅವರು, ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಬೆಂಗಳೂರ, ಜಿಲ್ಲಾ ಘಟಕದ ವತಿಯಿಂದ ಆದಿಕವಿ, ಮಹರ್ಷಿ ವಾಲ್ಮೀಕಿಯವರ ನೂತನ ಪುತ್ಥಳಿಯ ಅನಾವರಣ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಸಾನಿಧ್ಯವನ್ನು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಜಗದ್ಗುರು ಡಾ.ವಾಲ್ಮೀಕಿ ಪ್ರಸನ್ನಾನಂದಪುರಿ ಮಹಾಸ್ವಾಮೀಜಿ, ಸಾನಿಧ್ಯವನ್ನು ಹುಕ್ಕೇರಿಮಠದ ಡಾ.ಸದಾಶಿವ ಮಹಾಸ್ವಾಮೀಜಿ ವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ವಾಲ್ಮೀಕಿ ನಾಯಕ ಮಹಾಸಭಾ ಹಾವೇರಿ ಜಿಲ್ಲಾ ಘಟಕದ ಅಧ್ಯಕ್ಷ ರಮೇಶ ಆನವಟ್ಟಿ ವಹಿಸುವರು, ಕಾರ್ಯಕ್ರಮದ ಉದ್ಘಾಟನೆಯನ್ನು ಲೋಕೋಪಯೋಗಿ ಸಚಿವರಾದ ಸತೀಶ ಜಾರಕಿಹೊಳಿ ನೆರವೇರಿಸಲಿದ್ದಾರೆ. ಮಹರ್ಷಿ ವಾಲ್ಮೀಕಿಯವರ ನೂತನ ಪುತ್ಥಳಿಗೆ ಉಪಸಭಾಧ್ಯಕ್ಷರು ಹಾಗೂ ಶಾಸಕರಾದ ರುದ್ರಪ್ಪ ಲಮಾಣಿ ಹಾಗೂ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಮಾಜಿ ಸಚಿವರಾದ ರಾಜುಗೌಡ ಪುಷ್ಪಾರ್ಚನೆಯನ್ನು ನೆರವೇರಿಸುವರು. ಪ್ರಾಸ್ತಾವಿಕವಾಗಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ರಾಜ್ಯಾಧ್ಯಕ್ಷ ಜಿ.ಟಿ. ಚಂದ್ರಶೇಖರಪ್ಪ ಮಾತನಾಡುವರು. ಮುಖ್ಯ ಅತಿಥಿಗಳಾಗಿ ಮಾಜಿ ಸಂಸದ ವಿ.ಎಸ್.ಉಗ್ರಪ್ಪ, ಮಾಜಿ ಸಚಿವ ಬಿ.ಶ್ರೀರಾಮುಲು, ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ, ಜಿ. ಕುಮಾರನಾಯಕ, ಈ.ತುಕಾರಾಮ, ಪ್ರಿಯಾಂಕ ಜಾರಕಿಹೊಳಿ, ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ, ಜಿಲ್ಲೆಯ ಎಲ್ಲ ಶಾಸಕರುಗಳು, ವಿಧಾನ ಪರಿ?ತ ಮುಖ್ಯ ಸಚೇತಕ ಸಲೀಂ ಅಹ್ಮದ, ಶಾಸಕರುಗಳಾದ ಕೆ.ಎನ್. ರಾಜಣ್ಣ, ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ, ಬಸವನಗೌಡ ದದ್ದಲ್, ಟಿ.ರಘುಮೂರ್ತಿ ಸೇರಿದಂತೆ ಸಮಾಜದ ಪ್ರಮುಖರು ಅತಿಥಿಗಳಾಗಿ ಆಗಮಿಸಲಿದ್ದಾರೆ. ಹಲವು ಕ್ಷೇತ್ರಗಳಲ್ಲಿ ಸಾಧನೆ ತೋರಿದ ಸಮಾಜದ ಹಲವರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶೇಖರ ಕಳ್ಳಿಮನಿ, ಬಸವರಾಜ ಭೀಮಕ್ಕವರ, ದ್ಯಾಮಣ್ಣ ಕೊಟ್ಟೂರ, ವೀರೇಶ ಹ್ಯಾಡ್ಲ, ಮಾಲತೇಶ ರಿತ್ತಿ ಸೇರಿದಂತೆ ಅನೇಕ ಯುವ ಮುಖಂಡರು ಹಾಜರಿದ್ದರು.

ನಿಧನ ಸುದ್ದಿ

ನಿಂಗನಗೌಡ ಹುಲ್ಯಾಳದ



◆ **ಹಾವೇರಿ:** ಕೃಷಿ ಇಲಾಖೆಯ ನಿವೃತ್ತ ಸಿಬ್ಬಂದಿ, ಕೊಂಡವಾಡ ಗಲ್ಲಿಯ ನಿವಾಸಿ ನಿಂಗನಗೌಡ ಹುಲ್ಯಾಳದ ಶನಿವಾರ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವಿದೆ.



ಹಾವೇರಿ: ಜಿಲ್ಲೆಯ ಹಾನಗಲ್ ತಾಲೂಕಿನ ನಾಲ್ಕರ ಕ್ರಾಸ್‌ನಿಂದ ಸಮ್ಮಸಗಿ ಗ್ರಾಮದವರೆಗೆ ಸಾಗರಮಾಲಾ ಯೋಜನೆಯಡಿ ನಿರ್ಮಾಣ ಹಂತದಲ್ಲಿರುವ ಹಾವೇರಿ-ಶಿರಸಿ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿಯನ್ನು ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ವೀಕ್ಷಿಸಿದರು. ಈ ಸಂದರ್ಭದಲ್ಲಿ ಹೊನ್ನಾವರ ವಿಭಾಗದ ಪಿಡಿ ಎಂ.ಶಿವಕುಮಾರ, ಅಧಿಕಾರಿ ವಿನಾಯಕ ಸೊಂಟಕ್ಕೆ, ಮಾಜಿ ಶಾಸಕ ಶಿವರಾಜ ಸಜ್ಜನರ, ಮುಖಂಡರಾದ ಕೃಷ್ಣ ಇಳಿಗೇರ, ರಾಘವೇಂದ್ರ ತಹಶೀಲ್ದಾರ ಹಾಗೂ ಬಾಳೆಹಳ್ಳಿ, ಕಂತ್ರಿಕೊಪ್ಪ ಮತ್ತು ಸಮ್ಮಸಗಿ ಗ್ರಾಮಸ್ಥರು ಉಪಸ್ಥಿತರಿದ್ದರು.

ಅಶೋಕ ನಾಡಿಗೇರಗೆ ಸ್ವರನಿಧಿ ಪ್ರಶಸ್ತಿ ಪ್ರದಾನ

◆**ಧಾರವಾಡ:** ನಗರದ ಕರ್ನಾಟಕ ಆಲೂರು ವೆಂಕಟರಾವ್ ಭವನದಲ್ಲಿ ಪಂಡಿತ ಭೀಮಸೇನೆ-ಮಾಧವ ಸಂಗೀತೋತ್ಸವ ಹಾಗೂ ಸ್ವರನಿಧಿ ರಾಷ್ಟ್ರೀಯ ಸಂಗೀತ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಿತು. ಪದ್ಮಶ್ರೀ ಸಂಗೀತ ಪ್ರತಿಷ್ಠಾನ ಮತ್ತು ಕಿರಾಣಾ ಸಂಗೀತ ಅಕಾಡೆಮಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರೂ.10 ಸಾವಿರ ನಗದು ಒಳಗೊಂಡ ಪ್ರಶಸ್ತಿ ಪಂ. ಅಶೋಕ ನಾಡಿಗೇರ ಅವರಿಗೆ ಪ್ರದಾನ ಮಾಡಲಾಯಿತು. ಪ್ರಶಸ್ತಿ ಪ್ರದಾನಿಸಿದ ಕೆ.ಇ.ಬೋರ್ಡ್ ಶಾಲೆಯ ನಿವೃತ್ತ ಶಿಕ್ಷಕ ಎನ್.ಜಿ.ಗಲಗಲಿ, ಮಾಧವ ಗುಡಿ ಅವರು, ಭಾರತರತ್ನ ಪಂ.ಭೀಮಸೇನ ಜೋಶಿ ಅವರ ಶಿಷ್ಯರಾಗಿ ಅಪಾರ ವಿದ್ವತ್ ಸಾಧಿಸಿದ್ದಾಗಿ ಸ್ಮರಿಸಿದರು. ಭೀಮಸೇನ ಜೋಶಿ ಅವರ ಗಾಯನದ ಸಂಪೂರ್ಣ ಛಾಯೆ ಬೆಳೆಸಿಕೊಂಡಿದ್ದ ಮಾಧವ ಗುಡಿ ಅವರು ಕೂಡ ಅಪಾರ ಶಿಷ್ಯರನ್ನು ಹಿಂದೂಸ್ತಾನಿ ಕ್ಷೇತ್ರಕ್ಕೆ ನೀಡಿದ ಶ್ರೇಯಸ್ಸು ಹೊಂದಿದ್ದಾರೆ ಎಂದರು. ರಂಗಕರ್ಮಿ ಡಾ.ಶಶಿಧರ ನರೇಂದ್ರ ಮಾತನಾಡಿ, ಭೀಮಸೇನ ಜೋಶಿ ಅವರು ಬಹಳ ಕಷ್ಟಪಟ್ಟು, ಕಠಿಣ ಪರಿಶ್ರಮದಿಂದ ಸಂಗೀತ ಸಿದ್ಧಿಸಿಕೊಂಡು, ಸಂಗೀತ ಲೋಕದಲ್ಲಿ ಗುರು-ಶಿಷ್ಯ ಪರಂಪರೆ ಹುಟ್ಟು ಹಾಕಿದ್ದಾಗಿ ಎಂದರು. ಪಂ.ಪ್ರಸನ್ನ ಗುಡಿ ಸೇರಿದಂತೆ ಅನೇಕರು ಇದ್ದರು. ಮೈಸೂರಿನ ರಾಮಚಂದ್ರಾಚಾರ್ಯ ಅವರು ಪ್ರಸ್ತುತಪಡಿಸಿದ ದಾಸವಾಣಿ ಸಂಗೀತ ಸಭಾಂಗಣದಲ್ಲಿ ಸೇರಿದ ಪ್ರೇಕ್ಷಕರಿಗೆ ಮುದ ನೀಡಿತು. ಪಂ. ಅಶೋಕ ನಾಡಿಗೇರ, ವಿದೂಷಿ ಗಾಯತ್ರಿ ಟೋಣಪಿ, ಪಂ. ಶೇಷಗಿರಿ ಗುಡಿ ಗಾಯನಕ್ಕೆ ಪ್ರಕಾಶ ಹೆಗಡೆ ಹಾರ್ಮೋನಿಯಂ, ಮಳೆಮಲ್ಲೇಶ ಹೂಗಾರ ಮತ್ತು ಶ್ರೀನಿವಾಸ ಸವಾಯಿ ತಬಲಾ ಸಾಥ್ ನೀಡಿದರು. ಅನುಪಮಾ ಮಂಗಳವೇಡೆ ಪ್ರಾಸ್ತಾವಿಸಿದರು. ವಿದೂಷಿ ಭಾರ್ಗವಿ ಕುಲಕರ್ಣಿ ಸ್ವಾಗತಿಸಿದರು. ರವಿ ಕುಲಕರ್ಣಿ ನಿರೂಪಿಸಿದರು. ಪಂ.ಪ್ರಸನ್ನ ಗುಡಿ ವಂದಿಸಿದರು.



ಧಾರವಾಡ: ನಗರದ ಕರ್ನಾಟಕ ಆಲೂರು ವೆಂಕಟರಾವ್ ಭವನದಲ್ಲಿ ಪಂಡಿತ ಭೀಮಸೇನೆ-ಮಾಧವ ಸಂಗೀತೋತ್ಸವ ಹಾಗೂ ಸ್ವರನಿಧಿ ರಾಷ್ಟ್ರೀಯ ಸಂಗೀತ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಿತು.

ನಾರೀಶಕ್ತಿ ವಂದನ್ ಅಧಿನಿಯಮ ಮಸೂದೆಗೆ ವಿರೋಧ

ಕಾಂಗ್ರೆಸ್ ನಡೆ ಖಂಡಿಸಿ ಪ್ರತಿಭಟನೆ

◆**ಹಾವೇರಿ:** ಲೋಕಸಭೆ, ವಿಧಾನಸಭೆಗಳಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿ (ನಾರೀಶಕ್ತಿ ವಂದನ್ ಅಧಿನಿಯಮ) ಅಂಗೀಕಾರಗೊಳ್ಳದಂತೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಹಾಗೂ ಇಂಡಿಯಾ ಒಕ್ಕೂಟದ ಪ್ರತಿಪಕ್ಷಗಳ ನಡೆ ಖಂಡಿಸಿ ಹಾವೇರಿ ಜಿಲ್ಲಾ ಬಿಜೆಪಿ ನಾರಿಶಕ್ತಿ ಫೋರಂ ವತಿಯಿಂದ ನಗರದಲ್ಲಿ ಶನಿವಾರ ಮಹಿಳಾ ಮುಖಂಡರು ಪ್ರತಿಭಟನೆ ನಡೆಸಿದರು.

ನಗರದ ಪುರಸಿದ್ದೇಶ್ವರ ದೇವಸ್ಥಾನದಿಂದ ಪ್ರತಿಭಟನಾ ಪಾದಯಾತ್ರೆ ನಡೆಸಿದ ಬಿಜೆಪಿ ಮಹಿಳಾ ಕಾರ್ಯಕರ್ತೆಯರು ಜೆ.ಪಿ ವೃತ್ತದವರೆಗೆ ಸಂಚರಿಸಿ ಸಮಾವೇಶಗೊಂಡರು. ಈ ವೇಳೆ ರಾಜ್ಯ ಕಾಂಗ್ರೆಸ್ ಸರ್ಕಾರದ ಮಹಿಳಾ ವಿರೋಧಿ ಧೋರಣೆ ಹಾಗೂ ಕೇಂದ್ರದಲ್ಲಿ ಕಾಂಗ್ರೆಸ್ ಮತ್ತು ಇಂಡಿಯಾ ಒಕ್ಕೂಟದ ಬೆಂಬಲಿತ ಪಕ್ಷಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಜಿಲ್ಲಾಧ್ಯಕ್ಷರು, ಮಾಜಿ ಸಚಿವರು, ಮಾಜಿ ಶಾಸಕರು ಸೇರಿದಂತೆ ವಿವಿಧ ಮೋರ್ಚಾಗಳ ಮುಖಂಡರು ನಾರಿಶಕ್ತಿ ಫೋರಂ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಮಾಜಿ ಸಚಿವ ಬಿ.ಸಿ ಪಾಟೀಲ ಮಾತನಾಡಿ, ಕೇಂದ್ರ ಸರ್ಕಾರ ರಾಜಕಾರಣದಲ್ಲಿ ಮಹಿಳಾ ಮೀಸಲಾತಿ ಅಂಗೀಕಾರ ಮಾಡಲು ಹೊರಟರೆ ಕಾಂಗ್ರೆಸ್ ಸೇರಿದಂತೆ ಇಂಡಿಯಾ ಕೂಟವು ವಿರೋಧ ವ್ಯಕ್ತಪಡಿಸಿರುವ ಮೂಲಕ ದೇಶದ ಮಹಿಳೆಯರಿಗೆ ಮಹಾಮೋಸ ಮಾಡಿವೆ. ಗೃಹಲಕ್ಷ್ಮಿ ಕೊಟ್ಟ ತಕ್ಷಣ ಮಹಿಳೆಯರು ಮುಂದೆ ಬರಲ್ಲ, ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಮಹಿಳೆಯರಿಗೆ ಶಕ್ತಿ ಕೊಡಬೇಕೆಂದು ಆಗ್ರಹಿಸಿದರು.

ಕಾಂಗ್ರೆಸ್‌ನವರು ಮಹಿಳಾ ವಿರೋಧಿ ಧೋರಣೆ ಅನುಸರಿಸುತ್ತಾರೆ. ಮಹಿಳೆಯರ ಹಕ್ಕುಗಳನ್ನು ಕಸಿಯುವ ಯತ್ನ ಮಾಡುತ್ತಿದ್ದಾರೆ. ಹಾಗಾಗಿ ದೇಶದ ಪ್ರಧಾನಿ ಏನೇ ಒಳ್ಳೆಯ ಕೆಲಸ ಮಾಡಿದರೂ ವಿರೋಧ ಮಾಡುವುದೇ ತಮ್ಮ ಪ್ರವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಮೋದಿಯವರು ಮಹಿಳಾ ಸ್ವಾತಂತ್ರ್ಯ ರಕ್ಷಣೆ ಮಾಡುತ್ತಿದ್ದಾರೆ. ಮುಂದೊಂದು ದಿನ ಮಹಿಳಾ ಮೀಸಲಾತಿ ಜಾರಿಗೆ ಮಾಡಿಯೇ ಮಾಡುತ್ತಾರೆ ಎಂದರು.



> ದೇಶದ ಪ್ರಧಾನಿ ನರೇಂದ್ರ ಮೋದಿಯವರು ವಿಶೇಷ ಅಧಿವೇಶನ ನಡೆಸುವ ಮೂಲಕ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಅನುಷ್ಠಾನಗೊಳಿಸಲು ಮುಂದಾದರೆ ಇಂಡಿಯಾ ಒಕ್ಕೂಟದ ಮಹಿಳಾ ವಿರೋಧಿಗಳು ಅಂಗೀಕಾರಕ್ಕೆ ಸೋಲಾಗುವಂತೆ ಮಾಡಿವೆ. ಈ ದೇಶದ ಮಹಿಳೆಯರು ಯಾವತ್ತಿಗೂ ಕಾಂಗ್ರೆಸ್ ಹಾಗೂ ಇಂಡಿಯಾ ಒಕ್ಕೂಟದ ನಡೆಯನ್ನು ಕ್ಷಮಿಸಲ್ಲ.
>
> ■ ವಿರೂಪಾಕ್ಷಪ್ಪ ಬಳ್ಳಾರಿ, ಬಿಜೆಪಿ ಜಿಲ್ಲಾಧ್ಯಕ್ಷ

ರಾಜ್ಯ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶೋಭಾ ನಿಸ್ಸೀಮಗೌಡ್ರ ಮಾತನಾಡಿ, ಭಾರತದಲ್ಲಿ ಮಹಿಳೆಯರಿಗೆಪೂಜ್ಯನೀಯಸ್ಥಾನಮಾನಕೊಡಲಾಗಿದೆ. ಅಂತಹ ಮಹಿಳೆಯರಿಗೆ ರಾಜಕಾರಣದಲ್ಲಿ ಅವಕಾಶ ನೀಡಬೇಕಾದರೆ, ದುಷ್ಟ ಕಾಂಗ್ರೆಸ್ ಒಕ್ಕೂಟದವರು ವಿರೋಧ ಮಾಡುತ್ತಿದ್ದಾರೆ. ಕರ್ನಾಟಕ ಸೇರಿ ದೇಶದ ಮಹಿಳೆಯರಿಗೆ ಅನ್ಯಾಯ ಮಾಡಿದ್ದಾರೆ. ಕೇವಲ ಮಹಿಳೆಯರ ವೋಟ್ ಬ್ಯಾಂಕಿಗೋಸ್ಕರ ಗ್ಯಾರಂಟಿ ಕೊಟ್ಟು, ಸುಮ್ಮನೆ ಕೂರಿಸಿದ್ದಾರೆ. ಇಂತಹ ಕಾಂಗ್ರೆಸ್‌ನವರ ಮನಸ್ಥಿತಿಯನ್ನು ಖಂಡಿಸುತ್ತೇವೆ ಎಂದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಶಿವರಾಜ ಸಜ್ಜನರ, ಮುಖಂಡ ಗವಿಸಿದ್ದಪ್ಪ ದ್ಯಾಮಣ್ಣವರ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಬಸಮ್ಮ ಅಬಲೂರ, ಯಲ್ಲಮ್ಮ ಚಲವಾದಿ, ರೇಷ್ಮಾ ಮೇಲಗಿರಿ ಮಾತನಾಡಿದರು.

ಈ ವೇಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ನಂಜುಂಡೇಶ ಕಳ್ಳೇರ, ಸಂತೋಷ ಆಲದಕಟ್ಟಿ, ನೀಲಪ್ಪ ಚಾವಡಿ, ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ವಿದ್ಯಾ ಶೆಟ್ಟಿ, ಜಿಲ್ಲಾ ಉಪಾಧ್ಯಕ್ಷ ವೆಂಕಟೇಶ ನಾರಾಯಣಿ, ಯುವ ಮೋರ್ಚಾ ಅಧ್ಯಕ್ಷ ಕಿರಣ ಕೋಣನವರ, ವಕ್ತಾರ ನಿರಂಜನ ಹೆರೂರ, ವಿಜಯಕುಮಾರ ಚಿನ್ನಿಕಟ್ಟಿ, ಕಿರಣ ಕೊಳ್ಳಿ, ರೋಹಿಣಿ ಪಾಟೀಲ ಸೇರಿದಂತೆ ಪಕ್ಷದ ವಿವಿಧ ಮೋರ್ಚಾಗಳ ಕಾರ್ಯಕರ್ತರು, ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಕಾಮಗಾರಿಗೆ ಶಾಸಕ ಭೂಮಿಪೂಜೆ

◆**ಬ್ಯಾಡಗಿ:** ಮತಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯೇ ನಮ್ಮ ಪ್ರಮುಖ ಆದ್ಯತೆ ಎಂದು ಶಾಸಕ ಬಸವರಾಜ್ ಶಿವಣ್ಣನವರು ಹೇಳಿದರು.

ಪಟ್ಟಣದ ಪೊಲೀಸ್ ಸ್ಟೇಷನ್ ಹತ್ತಿರ ಸುಮಾರು 50 ಲಕ್ಷರೂ.ಅನುದಾನದಲ್ಲಿ ಶ್ರೀ ಗಂಗಾಪರಮೇಶ್ವರಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಕಳೆದ ಬಾರಿ ಶಾಸಕನಾಗಿದ್ದಾಗ ಸಮುದಾಯ ಭವನಕ್ಕೆ 5 ಲಕ್ಷ ರೂ. ಅನುದಾನವನ್ನು ನೀಡಲಾಗಿತ್ತು ಆದರೆ ಅದು ಸಾಕಾಗಿರಲಿಲ್ಲ ಇದೀಗ ಮತ್ತೆ ತಮ್ಮ ಅಧಿಕಾರದಲ್ಲಿ 50 ಲಕ್ಷ ರೂ.ಅನುದಾನ ನೀಡಲಾಗಿದ್ದು, ತಮ್ಮ ಅಧಿಕಾರವಧಿಯಲ್ಲಿ ವಿವಿಧಸಮುದಾಯಗಳ ದೇವಸ್ಥಾನಗಳಲ್ಲಿ ಸಮುದಾಯ ಭವನನಿರ್ಮಾಣಕ್ಕೆ ಸಾಕಷ್ಟು ಅನುದಾನ ಬಿಡುಗಡೆಗೊಳಿಸಿದ್ದೇನೆ ಆಯಾ ಸಮುದಾಯಗಳು ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಿಗೆ ಅನುಕೂಲ ಕಲ್ಪಿಸುವ ಮೂಲಕ ತಮ್ಮ ಅನುದಾನವನ್ನು ಸದ್ಬಳಕೆ ಮಾಡಲಾಗಿದೆ ಎಂದು ಹೇಳಿದರು.

ಚೌಡದಾನಪುರದ ಶ್ರೀ ಶಾಂತ ಭೀಷ್ಮೀ ಸ್ವಾಮೀಜಿಗಳು ಮಾತನಾಡಿ, ಕಳೆದ ಫೆಬ್ರವರಿ ತಿಂಗಳಲ್ಲಿ ಸಮುದಾಯ ಭವನದ ಭೂಮಿಪೂಜೆ ಆಗಬೇಕಿತ್ತು, ಆದರೆ ಶಾಸಕರ ಆರೋಗ್ಯದಲ್ಲಿ ಏರುಪೇರು ಆಗಿದ್ದರಿಂದ ಏಪ್ರಿಲ್ ತಿಂಗಳಲ್ಲಿ ದಿಢೀರನೆ ಭೂಮಿ ಪೂಜೆ ಮಾಡಲಾಗಿದೆ ಸಮುದಾಯ ಭವನವು ಮುಂದಿನ ದಿನಗಳಲ್ಲಿ ಪಟ್ಟಣದ ಸಮಾಜದ ಧಾರ್ಮಿಕ ಮತ್ತು ಸಾರ್ವಜನಿಕ ಕಾರ್ಯಕ್ರಮಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಉಪಯುಕ್ತವಾಗಲಿದೆ ಎಂದರು.

ಚನ್ನಬಸಪ್ಪ ಹುಲ್ಲತ್ತಿ, ಸಮಾಜದ ತಾಲೂಕು ಅಧ್ಯಕ್ಷ ನಿಂಗಪ್ಪ ಹೆಗ್ಗಣ್ಣನವರ್, ಗ್ಯಾರಂಟಿ ಯೋಜನೆಯ ಜಿಲ್ಲಾ ಉಪಾಧ್ಯಕ್ಷ ಸುರೇಶ್ ಹುಳಬುತ್ತಿ, ಸಮಾಜದ ಜಿಲ್ಲಾಧ್ಯಕ್ಷ ಮಂಜುನಾಥ್ ಭೋವಿ, ಮಾಜಿ ನಿಗಮ ಮಂಡಳಿ ಅಧ್ಯಕ್ಷ ಜಿತೇಂದ್ರ ಸುಣಗಾರ, ಗುಡಪ್ಪ ಬಾರ್ಕಿ, ಮಂಜುನಾಥ್ ಸುಣಗಾರ, ಹನುಮಂತಪ್ಪ ಸಣ್ಣಬಾರ್ಕಿ, ಎಸ್.ಜಿ.ಮುಳಗುಂದ, ಚಂದ್ರು ಮುಳುಗುಂದ ಹಾಗೂ ಸಮಾಜದವರು ಉಪಸ್ಥಿತರಿದ್ದರು.



ವಿವಿಧ ಕಾಮಗಾರಿಗೆ ಶಾಸಕ ಭೂಮಿಪೂಜೆ

◆**ಹಾನಗಲ್ಲ:** ಕೇಂದ್ರ ಸರ್ಕಾರ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಸ್ವರೂಪ ಬದಲಿಸಿ ಗ್ರಾಮೀಣಾಭಿವೃದ್ಧಿಗೆ ಧಕ್ಕೆ ತಂದಿದೆ. ಇದನ್ನೇ ಅವಲಂಬಿಸಿದ್ದ ಗ್ರಾಮೀಣ ಭಾಗದ ಕೂಲಿ ಕಾರ್ಮಿಕ ಕುಟುಂಬಗಳಲ್ಲಿ ಆತಂಕ ಆವರಿಸಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಸಾಂವಸಗಿ ಗ್ರಾಮದಲ್ಲಿ 72 ಲಕ್ಷ ರೂ. ವೆಚ್ಚದಲ್ಲಿ ಸಿಸಿರಸ್ತೆ, ಸಿಸಿ ಗಟಾರ ನಿರ್ಮಾಣ, ರಸ್ತೆ ಸುಧಾರಣೆ ಹೀಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದ ಅವರು, ಉದ್ಯೋಗ ಖಾತ್ರಿ ಯೋಜನೆಯಡಿ ಗ್ರಾಮೀಣ ಪ್ರದೇಶದ ಸ್ವರೂಪ ಬದಲಿಸುವ ರೀತಿಯಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಅವಕಾಶ ಇತ್ತು. ಆದರೀಗ ಯೋಜನೆಯ ಇಡೀ ಸ್ವರೂಪ ಬದಲಿಸಲಾಗಿದೆ. ಆದರೆ ಹೊಸ ಸ್ವರೂಪದ ಯೋಜನೆಗಳಲ್ಲಿನ ಅಂಶಗಳ ಬಗ್ಗೆ ಸರಿಯಾದ ಮಾಹಿತಿ ಇಲ್ಲದೇ ಇಡೀ ಯೋಜನೆ ಸ್ಥಗಿತಗೊಂಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು ಕನಿಷ್ಠ ಒಂದೊಂದು ಗ್ರಾಪಂ ವಾರ್ಷಿಕವಾಗಿ ಒಂದು ಕೋಟಿ ರೂ. ಗಿಂತ ಹೆಚ್ಚು ಅನುದಾನ ಪಡೆದುಕೊಳ್ಳುತ್ತಿದ್ದವು. ವಲಸೆ ತಡೆಗಟ್ಟಿ ದುಡಿಯುವ ಕೈಗಳಿಗೂ ಉದ್ಯೋಗಾವಕಾಶ ಸಿಗುತ್ತಿತ್ತು. ಆದರೀಗ ಉದ್ಯೋಗಕ್ಕೆ ಮತ್ತೆ ವಲಸೆ ಆರಂಭವಾಗುವ ಭೀತಿ ಸೃಷ್ಟಿಯಾಗಿದೆ. ಸಾಮಾನ್ಯವಾಗಿ ಬೇಸಿಗೆ ಅವಧಿಯಲ್ಲಿ ಯೋಜನೆಯಡಿ ಕೆರೆ, ಕಟ್ಟೆ ಸೇರಿದಂತೆ ಜಲಮೂಲಗಳನ್ನು ಪುನಶ್ಚೇತನಗೊಳಿಸಲಾಗುತ್ತಿತ್ತು. ಬದಲಾದ ಯೋಜನೆ ಬಗ್ಗೆ ಮಾಹಿತಿ ಇಲ್ಲದೇ ಪುನಶ್ಚೇತನ ಕಾರ್ಯಕ್ಕೆ ಗರ ಬಡಿದಿದೆ ಎಂದರು.

ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ವಿಜಯಕುಮಾರ ದೊಡ್ಡಮನಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತಪ್ಪ ಮರಗಡಿ, ಮಂಜು ಗೊರಣ್ಣನವರ, ಮುಖಂಡರಾದ ಜಗದೀಶ ಬೆಣ್ಣಿ, ರುದ್ರಪ್ಪ ಬಡಿಗೇರ, ಬಸನಗೌಡ ಪಾಟೀಲ, ಮಹ್ಮದಹನೀಫ್ ಕಾಲೇಬಾಗ, ಗುಡ್ಡಪ್ಪ ಹರಿಜನ, ಹನುಮಂತಪ್ಪ ಈಳಿಗೇರ, ಜಗದೀಶ ಕೊರಗರ, ಫಕ್ಕೀರಪ್ಪ ಬಾಳೂರ, ವಡಕಪ್ಪ ಮಾಸನಕಟ್ಟಿ, ಬಸಪ್ಪ ಭಜಂತ್ರಿ, ಮಹಾಂತೇಶ ಮೂರೂರ, ರಮೇಶ ನಂದಿಕೊಪ್ಪ, ಫಕ್ಕೀರಯ್ಯ ಈಳಿಗೇರ, ಶಂಕ್ರಯ್ಯ ಈಳಿಗೇರ, ಹುತ್ತಯ್ಯ ಈಳಿಗೇರ, ಈರಣ್ಣ ಬೈಲವಾಳ, ಆದರ್ಶ ಶೆಟ್ಟಿ, ಶಿವು ತಳವಾರ ಇದ್ದರು.



ಭಗೀರಥ ಜಯಂತಿ ಆಚರಣೆಗೆ ಒತ್ತಾಯ

◆**ರಟ್ಟೀಹಳ್ಳಿ:** ಪಟ್ಟಣದ ರಟ್ಟೀಹಳ್ಳಿ ತಾಲೂಕ ಪಂಚಾಯತ ಕಾರ್ಯಾಲಯದಲ್ಲಿ ಭಗೀರಥ ಜಯಂತಿ ಆಚರಣೆ ಮಾಡದ ಹಿನ್ನಲೆಯಲ್ಲಿ ಉಪ್ಪಾರ ಸಮಾಜ ಬಾಂಧವರು ತಾಲೂಕ ಪಂಚಾಯತ ಕಚೇರಿಗೆ ಭೇಟಿ ನೀಡಿ ಆಕ್ರೋಶ ವ್ಯಕ್ತ ಪಡಿಸಿದರು.



ರಾಜರ್ಷಿ ಭಗಿರಥರ ಜಯಂತಿ ಅಂಗವಾಗಿ ರಾಜ್ಯ ಸರ್ಕಾರ ಹಾಗೂ ಜಿಲ್ಲಾಧಿಕಾರಿಗಳಿಂದ ಸ್ಪಷ್ಟ ಆದೇಶದನ್ವಯ ತಾಲೂಕಿನ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಸಾಂಕೇತಿಕವಾಗಿ ಭಗೀರಥ ಜಯಂತಿಯನ್ನು ಆಚರಿಸಲು ಸೂಚಿಸಲಾಗಿತ್ತು. ಆದರೆ ವಿಷಾದನೀಯವೇನೆಂದರೆ ರಟ್ಟೀಹಳ್ಳಿ ತಾಲೂಕ ದಂಡಾಧಿಕಾರಿಗಳು ಹಾಗೂ ರಾಷ್ಟ್ರೀಯ ಹಬ್ಬಗಳ ಆಡಳಿತಾಧಿಕಾರಿಗಳಾದ ತಹಶೀಲ್ದಾರ್ ಶ್ವೇತಾ ಅಮರಾವತಿ ಅವರು ಜಯಂತಿಯಲ್ಲಿ ಭಾಗವಹಿಸಿಲ್ಲ, ಕಾರಣ ಕೇಳಿದರೆ ಪಕ್ಕದ ಹಳ್ಳಿಯಲ್ಲಿ ದೇವಸ್ಥಾನದ ವಿಚಾರವಾಗಿ ಸಮಸ್ಯೆಯಾಗಿತ್ತು ನಾನು ಅಲ್ಲಿಗೆ ಹೋಗಿದ್ದಾಗಿ ತಿಳಿಸಿದರು. ಈ ಹಿಂದಿನ ವರ್ಷವು ಆಚರಣೆ ಮಾಡಿಲ್ಲ, ಇದರ ಬಗ್ಗೆ ಕೇಳಿದರೆ ತಹಶೀಲ್ದಾರ ಆದೇಶ ಮಾಡಿಲ್ಲ ಎಂದು ತಿಳಿಸಿದ್ದಾರೆ.

ಮಹನೀಯರ ಜಯಂತಿ ಆಚರಿಸುವುದು ಕೇವಲ ಒಂದು ಆಚರಣೆಯಲ್ಲ, ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವ ಮಹತ್ವದ ಕಾರ್ಯವಾಗಿದೆ. ಆದರೂ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಉಪ್ಪಾರ ಸಮಾಜ ಬಾಂಧವರು ಆಗ್ರಹಿಸುತ್ತೇವೆ ಎಂದು ತಿಳಿಸಿದ್ದಾರೆ.

ಹೈಕೋರ್ಟ ವಕೀಲರಾದ ಎಂ.ಜಿ.ಘೋರ್ಪಡೆ ಶೇರೇಗಾರ, ಪಪಂ ಉಪಾಧ್ಯಕ್ಷ ಶಿವಕುಮಾರ ಉಪ್ಪಾರ, ಉಪ್ಪಾರ ಸಮಾಜದ ಅಧ್ಯಕ್ಷ ರಾಜು ಉಪ್ಪಾರ, ಲಕ್ಷ್ಮಣ ಹುಲ್ಲತ್ತಿ, ಹನುಮಂತಪ್ಪ ಉಪ್ಪಾರ, ತಿರುಕಪ್ಪ ಉಪ್ಪಾರ, ನಾಗರಜ ಉಪ್ಪಾರ, ರಾಮು ಬಳ್ಳೇಶ್ವರ ಇದ್ದರು.

ಪೋಕ್ಸೋ ಸಂತ್ರಸ್ತರಿಗೆ ಧೈರ್ಯ ನೀಡಿ: ನ್ಯಾ.ದೇವಿಂದ್ರಪ್ಪಾ

◆**ಹಾವೇರಿ:** ಪೋಕ್ಸೋ ಕಾಯ್ದೆ ಬಗ್ಗೆ ತಿಳಿದುಕೊಳ್ಳಬೇಕು ಹಾಗೂ ಸಂತ್ರಸ್ತರಿಗೆ ಧೈರ್ಯ ತುಂಬುವ ಮೂಲಕ ಪಟ್ಟಭದ್ರ ಹಿತಾಸಕ್ತಿಗಳು ಸಾಕ್ಷಿ ನಾಶಪಡಿಸದಂತೆ, ಸಂತ್ರಸ್ಥರು ಧೈರ್ಯವಾಗಿ ಹೇಳಿಕೆ ನೀಡುವಂತೆ ತಿಳುವಳಿಕೆ ನೀಡಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಿರಾದಾರ ದೇವಿಂದ್ರಪ್ಪ ಅವರು ಹೇಳಿದರು.

ನಗರದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಭಾಭವನದಲ್ಲಿ ಬುಧವಾರ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದಲ್ಲಿ ಪೋಕ್ಸೋ ಕಾಯ್ದೆ -2012ರ ನಿಯಮ 39ರ ಅಡಿಯಲ್ಲಿ ಸಂತ್ರಸ್ಥ ಮಕ್ಕಳಿಗೆ ಬೆಂಬಲ ವ್ಯಕ್ತಿಗಳಾಗಿ ಆಯ್ಕೆಯಾಗಿರುವ ಓರಿಯಂಟೇಶನ್ ತರಬೇತಿ ಕಾರ್ಯಾಗಾರ ಹಾಗೂ ಬಾಲ್ಯ ವಿವಾಹ ನಿಷೇಧ, ವರದಕ್ಷಿಣೆ ನಿಷೇಧ, ಮಾನವ ಕಳ್ಳ ಸಾಗಾಣಿಕೆ ಕುರಿತು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೆಲವು ಪೋಕ್ಸೋ ಪ್ರಕರಣಗಳಲ್ಲಿ ಸಂತ್ರಸ್ಥರು ಹಣದ ಆಸೆಯಿಂದ ಪ್ರಕರಣದಿಂದ ಹಿಂದೆ ಸರಿದ ಉದಾಹರಣೆಗಳಿವೆ. ಆದ್ದರಿಂದ ಇಂತಹ



ಪ್ರಕರಣಗಳಲ್ಲಿ ಬೆಂಬಲ ವ್ಯಕ್ತಿಗಳ ಪಾತ್ರ ಬಹಳ ಮುಖ್ಯವಾಗಿದೆ ಎಂದು ಹೇಳಿದರು. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಗೀತಾ ಪಾಟೀಲ ಅವರು ಪೋಕ್ಸೋ ಕಾಯ್ದೆ -2012ರ, ಬೆಂಬಲ ವ್ಯಕ್ತಿಗಳ ಕರ್ತವ್ಯ, ಬಾಲ್ಯ ವಿವಾಹ ನಿಷೇಧ, ವರದಕ್ಷಿಣೆ ನಿಷೇಧ, ಮಾನವ ಕಳ್ಳ ಸಾಗಾಣಿಕೆ ಕುರಿತು ಉಪನ್ಯಾಸ ನೀಡಿದರು. ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಎಚ್.ವಿ., ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಯಶ್ರೀ ಪಾಟೀಲ ಉಪಸ್ಥಿತರಿದ್ದರು.

ಕನ್ನಡ ಸಂಸ್ಕೃತಿ, ಪರಂಪರೆ ಮೌಲ್ಯ ಎತ್ತಿ ಹಿಡಿದ ನಟ ಡಾ.ರಾಜ್

◆**ಹಾವೇರಿ:** ಚಲನಚಿತ್ರಗಳು, ಚಳುವಳಿಗಳ ಮೂಲಕ ಕನ್ನಡದ ಭಾಷೆ, ಕನ್ನಡಿಗರ ಸ್ವಾಭಿಮಾನ, ಸಂಸ್ಕೃತಿ, ನಮ್ಮ ಪರಂಪರೆಗಳ ಮೌಲ್ಯಗಳನ್ನು ಎತ್ತಿಹಿಡಿದ ಕರ್ನಾಟಕ ಕಂಡ ಮೇರು ವ್ಯಕ್ತಿತ್ವದ ಮಹೋನ್ನತ ನಟ ಡಾ.ರಾಜಕುಮಾರ್ ಎಂದು ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ ಅವರು ಹೇಳಿದರು.

ನಗರದ ಗಾಂಧಿ ಭವನದಲ್ಲಿ ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ ಸಹಯೋಗದಲ್ಲಿ ಆಯೋಜಿಸಿದ ವರನಟ ಡಾ.ರಾಜಕುಮಾರ್ ಅವರ 97ನೇ ಜಯಂತಿ ಅಂಗವಾಗಿಡಾ.ರಾಜ್ ಭಾವಚಿತ್ರಕ್ಕೆಪುಷ್ಪಾರ್ಚನೆ ಮಾಡಿ ಉದ್ಘಾಟಿಸಿ ಅವರು ಮಾತನಾಡಿ, ಅವರು ಕೇವಲ ನಟರಾಗಿ ಉಳಿಯದೆ ಗಾಯಕರಾಗಿ, ಕನ್ನಡ ನಾಡು-ನುಡಿಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆಗೆ ವಿಶಿಷ್ಟವಾದ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ರಂಗಭೂಮಿ, ಚಲನಚಿತ್ರ, ಗಾಯನದಲ್ಲಿ ಅತ್ಯುತ್ತಮವಾದ ಪ್ರತಿಭೆ ಹೊಂದಿದ ಡಾ.ರಾಜಕುಮಾರ್ ಅವರು ಅಭಿನಯಿಸಿದ ಚಲನಚಿತ್ರಗಳು, ಹಾಡಿದ ಹಾಡುಗಳು ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿವೆ ಹಾಗೂ ಸಾಮಾಜಿಕವಾಗಿ ಉತ್ತಮ ಪರಿಣಾಮ ಬೀರಿವೆ. ಅವರು ಅಭಿನಯಿಸಿದ ಹಲವು ಆಧ್ಯಾತ್ಮಿಕ ಪೌರಾಣಿಕ ಪಾತ್ರಗಳು ಜನರ ಮನಸಿನಲ್ಲಿ ಇನ್ನೂ ಆಳವಾಗಿ ಬೇರೂರಿವೆ ಎಂದು ಹೇಳಿದರು.



ಚಲನಚಿತ್ರ ಗೀತೆಗಳು: ಸಮಾರಂಭದ ಅಂಗವಾಗಿ ಆಯೋಜಿಸಲಾದ ಡಾ.ರಾಜಕುಮಾರ್ ಅವರ ಚಲನಚಿತ್ರಗಳ ಗೀತೆಗಳ ಗಾಯನ ಕಾರ್ಯಕ್ರಮ ಸಮಾರಂಭಕ್ಕೆ ವಿಶೇಷ ಮೆರಗು ನೀಡಿತು. ಗಾಯಕರಾದ ಶಿವಬಸವ ಬಣಕಾರ ಅವರು ಹಾಡಿದ ಡಾ.ರಾಜಕುಮಾರ್ ಅಭಿಯನದ ಹಳೆಯ ಚಿತ್ರಗೀತೆಗಳು ಎಲ್ಲರನ್ನೂ ರಂಜಿಸಿತು.

ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂ. ಹಿರೇಮಠ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕಿ ಭಾರತಿ ಎಚ್., ಹಾನಗಲ್ ಬಿಇಒ ಆರ್.ವಿ. ಚಿನ್ನಿಕಟ್ಟಿ, ಹಾವೇರಿ ವೈದ್ಯಕೀಯ ಕಾಲೇಜ್ ಆಡಳಿತ ಮಂಡಳಿ ಸದಸ್ಯ ಶಂಕರ ಸುತಾರ ಉಪಸ್ಥಿತರಿದ್ದರು.

ಬಾರದ ಗಣತಿ ಕಿಟ್: ಶಿಕ್ಷಕರ ಪರದಾಟ

◆**ರಾಣೇಬೆನ್ನೂರ:** ರಾಜ್ಯದಾದ್ಯಂತ ನಡೆಯುತ್ತಿರುವ ಗಣತಿ ಕಾರ್ಯದಲ್ಲಿ ತೊಡಗಿರುವ ಶಿಕ್ಷಕರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಗಣತಿ ಕಾರ್ಯಕ್ಕೆ ನಿಯೋಜಿತಗೊಂಡಿರುವ ಶಿಕ್ಷಕರಿಗೆ ಸರ್ಕಾರ ಅಗತ್ಯವಾದ ಕಿಟ್‌ಗಳನ್ನು ನೀಡದೇ, ಬಿಸಿಲಿನಲ್ಲಿಯೇ ಕೆಲಸ ಮಾಡಿಸುತ್ತಿರುವುದು ನಿಜಕ್ಕೂ ಆತಂಕಕಾರಿ ವಿಷಯವಾಗಿದೆ.

ಗಣತಿ ಕಾರ್ಯವೆಂದರೆ ಮನೆಮನೆಗೆ ತೆರಳಿ ಮಾಹಿತಿ ಸಂಗ್ರಹಿಸುವುದು. ಈ ಸಂದರ್ಭದಲ್ಲಿ ಶಿಕ್ಷಕರು ದಿನವಿಡೀ ಬಿಸಿಲಿನಲ್ಲಿ ಸಂಚರಿಸಬೇಕಾಗುತ್ತದೆ. ಆದರೆ ಅವರಿಗೆ ಕುಡಿಯುವ ನೀರು, ಟೋಪಿ, ಛತ್ರಿ, ಅಥವಾ ಪ್ರಾಥಮಿಕ ಚಿಕಿತ್ಸೆ ಕಿಟ್ ಸೇರಿದಂತೆ ಯಾವುದೇ ಸುರಕ್ಷತಾ ವ್ಯವಸ್ಥೆಗಳನ್ನು ಒದಗಿಸದೇ ಇರುವುದರಿಂದ ಆರೋಗ್ಯ ಸಮಸ್ಯೆಗಳು ಹೆಚ್ಚಾಗುವ ಭೀತಿ ಎದುರಾಗಿದೆ. ರಾಣೇಬೆನ್ನೂರ ತಾಲೂಕಿನಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶ ಸೇರಿ ಒಟ್ಟು 550 ಶಿಕ್ಷಕರು ಗಣತಿ ಕಾರ್ಯದಲ್ಲಿ ತೊಡಗಿದ್ದಾರೆ. ಅತಿಯಾದ ಬಿಸಲಿನ ಧಗೆಗೆ ಬಸವಳಿದು ಬೆಂಡಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ಗಣತಿ ಕಾರ್ಯ ಮುಗಿಯುವ ಹಂತಕ್ಕೆ ಬಂದರೂ ಸರ್ಕಾರ ಶಿಕ್ಷಕರಿಗೆ ಕಿಟ್ ನೀಡದೆ ಇರುವುದು ವಿಪರ್ಯಾಸವೇ ಸರಿ.



> ಶಿಕ್ಷಕರಿಗೆ ತಕ್ಷಣವೇ ಅಗತ್ಯವಾದ ಕಿಟ್‌ಗಳನ್ನು ಒದಗಿಸಬೇಕು. ಬಿಸಿಲಿನಲ್ಲಿ ಶಿಕ್ಷಕರು ಮನೆಮನೆಗಳಿಗೆ ತೆರಳಿ ಪಡುತ್ತಿರುವ ಕಷ್ಟ ನಿಜಕ್ಕೂ ಬೇಸರವೆನಿಸುತ್ತದೆ. ಸರ್ಕಾರಕ್ಕೆ ಕರುಣೆಯೇ ಇಲ್ಲದಂತಾಗಿದೆ. ಗಣತಿ ಕಾರ್ಯದ ಗುಣಮಟ್ಟವನ್ನು ಕಾಪಾಡಲು ಶಿಕ್ಷಕರಿಗೆ ಸೂಕ್ತ ಸೌಲಭ್ಯಗಳು ಶೀಘ್ರವೇ ಒದಗಿಸಬೇಕು.
>
> ■ ಸಂತೋಷಕುಮಾರ ಪಾಟೀಲ್, ಮಾಜಿ ಜಿಪಂ ಸದಸ್ಯರು

ನಾವು ಶಿಕ್ಷಣ ಕಾರ್ಯ ಬಿಟ್ಟು ಸರ್ಕಾರದ ಕರ್ತವ್ಯ ನಿರ್ವಹಿಸುತ್ತಿದ್ದೇವೆ. ಆದರೆ ನಮ್ಮ ಮೂಲಭೂತ ಅಗತ್ಯಗಳಿಗೂ ಸ್ಪಂದನೆ ಇಲ್ಲ ಎಂದು ಕೆಲ ಶಿಕ್ಷಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಬಿಸಿಲಿನ

> ನಮ್ಮತಾಲೂಕಿನಲ್ಲಿ ಒಟ್ಟು 550 ಶಿಕ್ಷಕರನ್ನು ಗಣತಿ ಕಾರ್ಯಕ್ಕೆ ನೇಮಿಸಲಾಗಿದೆ. ಇನ್ನೂ ಮೂರು-ನಾಲ್ಕು ದಿನಗಳಲ್ಲಿ ಗಣತಿ ಕಾರ್ಯ ಮುಗಿಯುವ ಹಂತಕ್ಕೆ ತಲುಪಿದೆ. ಅವರಿಗೆ ಇನ್ನೂ ಕಿಟ್ ನೀಡಿಲ್ಲ. ನಾಳೆ ಕೊಡುತ್ತೇವೆ ಡಿಸಿ ಆಫೀಸ್‌ನಲ್ಲಿ ಕಿಟ್ ಬಂದಿವೆ.
>
> ■ ಶ್ಯಾಮಸುಂದರ ಅಡಿಗ, ಕ್ಷೇತ್ರ ಶಿಕ್ಷಣಾಧಿಕಾರಿ, ರಾಣೇಬೆನ್ನೂರ.

ತಾಪಮಾನ ದಿನೇದಿನೇ ಏರುತ್ತಿರುವ ಹಿನ್ನೆಲೆ, ಶಿಕ್ಷಕರು ದಣಿವು, ತಲೆನೋವು, ನೀರಿಳಿಕೆ ಸಮಸ್ಯೆಗಳಿಂದ ಬಳಲುತ್ತಿರುವುದಾಗಿ ತಿಳಿಸಿದ್ದಾರೆ. ಒಟ್ಟಿನಲ್ಲಿ ಸರ್ಕಾರ ಶಿಕ್ಷಕರನ್ನು ಎಲ್ಲ ಹಂತಗಳಲ್ಲೂ ಅವರ ಸೇವೆಯನ್ನು ಬಳಸಿಕೊಂಡು ಅವರ ಸಮಸ್ಯೆಗಳಿಗೆ ಸ್ಪಂದನೆ ನೀಡದೆ ಇರವುದು ದುರ್ದೈವದ ಸಂಗತಿಯಾಗಿದೆ.

ಬಿಸಿಲಿನ ಕಾಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಕನಿಷ್ಠ ಸೌಲಭ್ಯಗಳಾದರೂ ಒದಗಿಸುವುದು ಸರ್ಕಾರದ ತುರ್ತು ಕರ್ತವ್ಯವಾಗಿದೆ. ಆದ್ದರಿಂದ ಕೂಡಲೇ ಶಿಕ್ಷಕರಿಗೆ ಕಿಟ್ ನೀಡಿ ಅವರ ಆರೋಗ್ಯ ಹಾಗೂ ಸೇವೆಗೆ ಸಹಕರಿಸಬೇಕೆಂಬುದು ಪ್ರಜ್ಞಾವಂತರ ಒತ್ತಾಯವಾಗಿದೆ.

ಕಿರುಸುದ್ದಿ

ಪಾಮಲದಿನ್ನಿ ಸರ್ಕಾರಿ ಪ್ರೌಢ ಶಾಲೆ ಉತ್ತಮ ಸಾಧನೆ



ಘಟಪ್ರಭಾ: ಸಮೀಪದ ಪಾಮಲದಿನ್ನಿ ಸರ್ಕಾರಿ ಪ್ರೌಢ ಶಾಲೆಯವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಶಾಲೆಗೆ ಪ್ರಥಮ ಸ್ಥಾನವನ್ನುಮುತ್ತು ರಾಜಕಲ್ಲಪ್ಪ ನಿರ್ವಾಣಿ (96.64%), ದ್ವಿತಿಯ ಸ್ಥಾನವನ್ನು ಮಮತಾ ನರಸಿಂಗ್ ಹಂಜಿ (95.68%)ಮತ್ತು ಶ್ರುತಿ ಸತ್ತಪ್ಪ ಪ್ರಧಾನಿ (95.68%) ಹಾಗೂ ತ್ರತೀಯ ಸ್ಥಾನವನ್ನು ಸ್ವಪ್ನಾ ಮಲ್ಲಪ್ಪ ಹಿರೇಹೋಳಿ (95.28%) ಪಡೆದಿದ್ದಾರೆ. ವಿದ್ಯಾರ್ಥಿಗಳು ಉತ್ತಮ ಸಾಧನೆಯನ್ನು ಮಾಡಿ ಶಾಲೆಗೂ ಹಾಗೂ ಪಾಲಕರಿಗೂ ಕೀರ್ತಿ ತಂದಿದ್ದಾರೆ. 20 ವಿದ್ಯಾರ್ಥಿಗಳು ಶೇ.90% ಕಿಂತ ಹೆಚ್ಚು ಅಂಕ ಪಡೆದಿದ್ದಾರೆ.25 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 63 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದು, ಈ ವಿದ್ಯಾರ್ಥಿಗಳ ಸಾಧನೆಗೆ ಎಸ್‌ಡಿಎಂಸಿ ಅಧ್ಯಕ್ಷರು,ಸದಸ್ಯರು,ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ ವರ್ಗ ಮತ್ತುಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.

ಗ್ರ್ಯಾಂಡ್ ಮಾಸ್ಟರ್ ಪ್ರಮಾಣ ಪತ್ರ



ಹಿರೇಬಾಗೇವಾಡಿ: ಎಐ ತಂತ್ರಜ್ಞಾನ ಬಳಸಿ ಹಿರೇಬಾಗೇವಾಡಿಯ ಎಫ್‌ಎಂ ಹಾದಿಮನಿ ಅವರು ವಿಶ್ವಗುರು ಬಸವಣ್ಣನವರ 432 ವಚನಗಳಿಗೆ ಸಂಗೀತ ಸಂಯೋಜನೆ ಮಾಡಿದ್ದು, ಅದರಲ್ಲಿನ 409 ವಚನಗಳನ್ನು ಆಯ್ಕೆ ಮಾಡಿದ ಏಷ್ಯಾ ಬುಕ್ ಆಫ್ ರೆಕಾರ್ಡ್ಸ್ ಸಂಸ್ಥೆ ಇತ್ತೀಚೆಗೆ ದಾಖಲೆ ಮಾನ್ಯತೆಯೊಂದಿಗೆ ಗ್ರ್ಯಾಂಡ್ ಮಾಸ್ಟರ್ ಪ್ರಮಾಣ ಪತ್ರ ನೀಡಿ ಅವರನ್ನು ಗೌರವಿಸಿದೆ.

ಪ್ರತಿಕ್ಷಾ ಹೂಗಾರ ಸಾಧನೆ



ಸವದತ್ತಿ: ತಾಲೂಕಿನ ಹಂಚಿನಾಳ ಗ್ರಾಮದ ನಿವಾಸಿ ಹಾಗೂ ಅಣ್ಣಿಗೇರಿ ಅಮೃತೇಶ್ವರ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಪ್ರತಿಕ್ಷಾ ಹೂಗಾರ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 580 ಅಂಕ ಪಡೆದು ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿನಿ ಸಾಧನೆಗೆ ತಂದೆ ಯಲ್ಲಪ್ಪ, ತಾಯಿ ಶೋಭಾ ಹಾಗೂ ಶಿಕ್ಷಕರು ಹರ್ಷ ವ್ಯಕ್ತಪಡಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಉತ್ತಮ ಫಲಿತಾಂಶ



ಯಮಕನಮರಡಿ : 2025-26 ನೇ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಸಿಐಎಸ್ ಪ್ರೌಢಶಾಲೆಯ ರಶ್ಮಿ ರ ವಡ್ಡರ (94.40%) ಪ್ರಥಮ, ಸಮೀಕ್ಷಾ ಮ ಬಡಿಗೇರ 89.28% ದ್ವಿತೀಯ, ಸೌಂದರ್ಯ ಶಿ ತೇಲಿ 86.08% ತ್ರತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷರು ಉಪಾಧ್ಯಕ್ಷರು ಸರ್ವ ಆಡಳಿತ ಮಂಡಳಿಯ ಸದಸ್ಯರು ಕಾರ್ಯದರ್ಶಿಗಳು ಮತ್ತು ಮುಖ್ಯೋಪಾಧ್ಯಾಯರು ಹಾಗೂ ಸರ್ವ ಸಿಬ್ಬಂದಿವರ್ಗದವರು ಅಭಿನಂದಿಸಿದ್ದಾರೆ.

ಅಪರಿಚಿತ ವ್ಯಕ್ತಿ ಸಾವು

ಬೆಳಗಾವಿ : ದೇಸೂರ - ಖಾನಾಪೂರ ರೈಲು ನಿಲ್ದಾಣಗಳ ಮಧ್ಯ ಏ.24 ರಂದು 35 ರಿಂದ 40 ವಯಸ್ಸಿನ ಅಪರಿಚಿತ ವ್ಯಕ್ತಿ ಚಲಿಸುವ ರೈಲು ಗಾಡಿಯಿಂದ ಆಕಸ್ಮಿಕವಾಗಿ ಬಿದ್ದು ಮೃತಪಟ್ಟಿದ್ದು, ಈ ಕುರಿತು ಬೆಳಗಾವಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಮೃತನ ಚಹರೆ 5-6 ಅಡಿ ಎತ್ತರ, ಸಾದಗಪ್ಪು ಮೈ ಬಣ್ಣ, ಮೈಯಿಂದಾ ತೆಳ್ಳಗೆ, ಉದ್ದು ಮೂಖ, ಚೂಪಾದ ಮೂಗೂ, ತಲೆಯಲ್ಲಿ 2 ಕಪ್ಪು ಕೂದಲು, ಸಣ್ಣಗೆ ಮೀಸೆ ದಾಡಿ ಬಿಟ್ಟಿರುತ್ತಾನೆ, ಮೃತನ ಎಡಗೈ ಮೇಲೆ ಇಂಗ್ಲಿಷ್‌ನಲ್ಲಿ ಮತ್ತು ಬಲಗೈ ಮೇಲೆ ಮತ್ತು ಗುಜರಾತಿ ಭಾಷೆ ಹಚ್ಚೆ ಗುರುತು ಇರುತ್ತದೆ, ಕೆಂಪು ಬಣ್ಣದ ಫುಲ್ ಶರ್ಟ್, ನೀಲಿ ಜೀನ್ಸ ಪ್ಯಾಂಟ್ ಮತ್ತು ಕಪ್ಪು ಬಣ್ಣದ ಹಾಫ್ ಪ್ಯಾಂಟ್ ಧರಿಸಿರುತ್ತಾನೆ. ಈ ರೀತಿ ಚಹರೆಯುಳ್ಳ ಅಪರಿಚಿತ ವ್ಯಕ್ತಿಯ ಬಗ್ಗೆ ತಮ್ಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೆ ಅಥವಾ ಮೃತನ ರಕ್ತ ಸಂಬಂಧಿಗಳು ಯಾರಾದರೂ ಪತ್ತೆಯಾದರೆ ಬೆಳಗಾವಿ ರೈಲ್ವೆ ಪೊಲೀಸ್ ಠಾಣೆ ಅಥವಾ ರೈಲ್ವೆ ಪೊಲೀಸ್ ನಿಯಂತ್ರಣ ಕೊಠಡಿ ದೂರವಾಣಿ ಸಂಪರ್ಕಿಸಬಹುದು ಎಂದು ಬೆಳಗಾವಿ ರೈಲ್ವೆ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯಮಕನಮರಡಿ: ಭಕ್ತರಿಗಾಗಿ ಭವ್ಯವಾದ ಬಸವೇಶ್ವರರ ಮಂದಿರ ನಿರ್ಮಾಣ ಕಾರ್ಯ ಮಾಡಿರುವ ಸಮೀಪದ ಮನಗುತ್ತಿ ಗ್ರಾಮದ ಪವಾಡ ಪುರುಷ, ಆಧ್ಯಾತ್ಮಿಕ ಚಿಂತಕ, ಬಸವೇಶ್ವರ ಆರಾಧಕರಾದ ಮುತ್ಯಪ್ಪಜ್ಜನವರಿಗೆ ಭಕ್ತರು ಗೌರವಾರ್ಪಣೆ ಸಲ್ಲಿಸಿದರು.

ಜಾತ್ರೆಗಳು ನಮ್ಮ ಸಂಸ್ಕೃತಿಯ ಪ್ರತೀಕ

ಯರಗಟ್ಟಿ: ಸಮೀಪದ ಸೊಪ್ಪಡ್ಲ ಗ್ರಾಮದ ಆರಾಧ್ಯ ದೈವ ಶ್ರೀ ಗ್ರಾಮದೇವಿಯ ಜಾತ್ರಾ ಮಹೋತ್ಸವದ ಧಾರ್ಮಿಕ ಸಂಭ್ರಮದಲ್ಲಿ ಭಾಗಿಯಾದ ಶಾಸಕ ವಿಶ್ವಾಸ ವೈದ್ಯ ದೇವಿ ದರ್ಶನ ಪಡೆದರು. ನಂತರ ಮಾತನಾಡಿದ ಅವರು ಸವದತ್ತಿ ಮತಕ್ಷೇತ್ರದ ಸೊಪ್ಪಡ್ಲ ಗ್ರಾಮದಲ್ಲಿ ಇಂದು ಅತ್ಯಂತ ಶ್ರದ್ಧಾ ಭಕ್ತಿಯಿಂದ ಜರುಗಿದ

ಶ್ರೀ ಗ್ರಾಮದೇವಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ತಾಯಿಯ ದರ್ಶನ ಪಡೆದು ಧನ್ಯನಾದೆನು ಎಂದರು.

ಜಾತ್ರೆಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬ ಹಾಗೂ ಗ್ರಾಮದ ಜನರ ಒಗ್ಗಟ್ಟಿನ ಸಂಕೇತ. ಈ ಶುಭ ಸಂದರ್ಭದಲ್ಲಿ ಗ್ರಾಮದ ಹಿರಿಯರು, ತಾಯಂದಿರು ಹಾಗೂ ನನ್ನ ಆತ್ಮೀಯ ಯುವ ಮಿತ್ರರೊಂದಿಗೆ ಬೆರೆತು, ಗ್ರಾಮದ ಸುಖ, ಶಾಂತಿ ಮತ್ತು ಸಮೃದ್ಧಿಗಾಗಿ ತಾಯಿಯಲ್ಲಿ ಪ್ರಾರ್ಥಿಸಿದೆನು. ಗ್ರಾಮಸ್ಥರ ಪ್ರೀತಿಯ ಸ್ವಾಗತ ಮತ್ತು ಭಕ್ತಿ ನನ್ನ ಸೇವೆಯ ಹಾದಿಗೆ ಸದಾ ಚೈತನ್ಯ ನೀಡುತ್ತದೆ. ತಾಯಿ ಗ್ರಾಮದೇವಿಯು ಕ್ಷೇತ್ರದ ಸಮಸ್ತ ಜನತೆಗೆ ಸನ್ಮಂಗಳವನ್ನುಂಟು ಮಾಡಲಿ ಎಂದು ಹೇಳಿದರು.

ಈ ವೇಳೆ ಈರಣ್ಣಾ ಗೌಡರ, ಪ್ರಜ್ವಲ ಗೌಡರ, ಆಯ್. ಕೆ. ಗೌಡರ, ಮಹಾದೇವಪ್ಪ ಹುರಕಡ್ಲಿ, ಶೇಖಪ್ಪ ಹರಳಿ, ಮಹಾಂತೇಶ ಇಟ್ನಾಳ, ಮಾರುತಿ ಗೊರಗುದ್ದಿ, ಕುಮಾರ ಹಲ್ಯಾಳ, ಸತೀಶ ಕುರುಬಗಟ್ಟಿ, ಬಾಳೇಶ ಬಡೆನ್ನವರ, ಈಶ್ವರ ತುಪ್ಪದ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಯರಗಟ್ಟಿ: ಸಮೀಪದ ಸೊಪ್ಪಡ್ಲ ಗ್ರಾಮದ ಆರಾಧ್ಯ ದೈವ ಶ್ರೀ ಗ್ರಾಮದೇವಿಯ ಜಾತ್ರಾ ಮಹೋತ್ಸವದ ಧಾರ್ಮಿಕ ಸಂಭ್ರಮದಲ್ಲಿ ಭಾಗಿಯಾದ ಶಾಸಕ ವಿಶ್ವಾಸ ವೈದ್ಯ ದೇವಿ ದರ್ಶನ ಪಡೆದರು.

ಪಶುಗಳ ಕಾಲು ಬಾಯಿ ರೋಗದ 9ನೇ ಸುತ್ತಿನ ಲಸಿಕಾ ಅಭಿಯಾನಕ್ಕೆ ಚಾಲನೆ

ಯೋಜನೆಗಳು ರೈತರಿಗೆ ತಲುಪಲಿ

ಬೆಳಗಾವಿ: ಸರ್ಕಾರದ ಯೋಜನೆಗಳು ಕೇವಲ ಪುಸ್ತಕಕ್ಕೆ ಸೀಮಿತವಾಗದೇ ರೈತರ ಮನೆ ಬಾಗಿಲಿಗೆ ಮುಟ್ಟಬೇಕು. ರೈತ ಸಂತೋಷವಾಗಿದ್ದರೆ, ಇಡೀ ದೇಶವೇ ಸಮೃದ್ಧಿಯಾಗಿರುತ್ತದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಬೆಳಗಾವಿಯ ಮಹಾಂತೇಶ ನಗರದ ಸ್ಪೆಷಾಲಿಟಿ ಪಶುವೈದ್ಯಕೀಯ ಆಸ್ಪತ್ರೆ ಆವರಣದಲ್ಲಿ ಶನಿವಾರ ನಡೆದ ವಿಶ್ವ ಪಶುವೈದ್ಯಕೀಯ ದಿನಾಚರಣೆ ಹಾಗೂ ಪಶುಗಳ ಕಾಲು ಬಾಯಿ ರೋಗದ 9ನೇ ಸುತ್ತಿನ ಲಸಿಕಾ ಅಭಿಯಾನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರೈತ ಬೆಳೆದರೆ ಗ್ರಾಮ ಬೆಳೆದಂತೆ, ಗ್ರಾಮ ಬೆಳೆದರೆ ಜಿಲ್ಲೆ ಬೆಳೆದಂತೆ, ಜಿಲ್ಲೆ ಬೆಳೆದರೆ ರಾಜ್ಯ, ದೇಶ ಬೆಳೆದಂತೆ ಎಂದರು.

ತಾನು ಸಾಕಿದ ಪಶುಗಳು ಆರೋಗ್ಯವಾಗಿದ್ದರೆ, ರೈತ ಸಂತೋಷವಾಗಿರುತ್ತಾನೆ. ರೈತ ಯಾವಾಗಲೂ ಸಂತೋಷವಾಗಿದ್ದರಷ್ಟೇ ದೇಶ ಸಮೃದ್ಧಿಯಾಗಿರುತ್ತದೆ. ಸರ್ಕಾರದ ಯೋಜನೆಗಳನ್ನು ರೈತರ ಮನೆ ಬಾಗಿಲಿಗೆ ಮುಟ್ಟಿಸುವ ಸಲುವಾಗಿಯೇ ಪಶು ಸಖಿಯರನ್ನು ನೇಮಿಸಿಕೊಳ್ಳಲಾಗಿದೆ ಎಂದು ಹೇಳಿದರು.

ಪಶುಸಂಗೋಪನಾ ಇಲಾಖೆ ಹಾಗೂ ಹೈನುಗಾರಿಕೆ ಜೊತೆ ಮಹಿಳೆಯರಿಗೆ ಹತ್ತಿರದ ಸಂಬಂಧವಿದೆ. ಹೈನುಗಾರಿಕೆಯಿಂದ ಅದೆಷ್ಟೋ ಮಹಿಳೆಯರು ಹಾಲು ಉತ್ಪಾದನೆ ಮಾಡುವ ಮೂಲಕ ಜೀವನ ಕಂಡುಕೊಂಡಿದ್ದಾರೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ರೈತರಿಗೆ ಆಶ್ರಯದಾತ ಆಗಿರುವುದೇ ಮೇಕೆ, ಕುರಿ, ಹಸು, ಧನ, ಕರುಗಳು. ಇವುಗಳಿಗಾಗಿ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಲಸಿಕೆ ನೀಡುವ ಕಾರ್ಯಕ್ರಮ ಯಶಸ್ವಿಯಾಗಲಿ ಎಂದು ಸಚಿವರು ಹಾರೈಸಿದರು

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಹಾಗೂ ಲೋಕೋಪಯೋಗಿ ಇಲಾಖೆಯ ಸಚಿವರಾದ ಸತೀಶ್ ಜಾರಕಿಹೊಳಿ, ಪಶುಸಂಗೋಪನೆ ಹಾಗೂ ರೇಷ್ಮೆ ಇಲಾಖೆಯ ಸಚಿವರಾದ ಕೆ.ವೆಂಕಟೇಶ್, ಶಾಸಕರಾದ ಆಸೀಫ್ ಸೇಠ್, ಗಣೇಶ್ ಹುಕ್ಕೇರಿ, ಬುಡಾ ಅಧ್ಯಕ್ಷರಾದ ಲಕ್ಷ್ಮಣರಾವ್ ಚಿಂಗಳೆ, ಪಶುಸಂಗೋಪನೆ ಹಾಗೂ ರೇಷ್ಮೆ ಇಲಾಖೆಯ ಆಯುಕ್ತರಾದ ಶಿಲ್ಪಾ ನಾಗ್, ನಗರ ಪೊಲೀಸ್ ಆಯುಕ್ತರಾದ ಬೋರಸೆ ಭೂಷಣ್ ಗುಲಾಬರಾವ್, ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ, ಡಾ.ಪಿ.ಶ್ರೀನಿವಾಸ್, ಡಾ.ಯಲಗೌಡ, ಡಾ.ನಾಗರಾಜ, ಡಾ.ರವಿ ಸಾಲಿಗೌಡ್ರ, ಡಾ.ಕೂಡಗಿ, ಡಾ.ಗುರವ್ ಮುಂತಾದವರು ಉಪಸ್ಥಿತರಿದ್ದರು.



ಕ್ರಿಯಾಶೀಲ ಸಚಿವ ಕೆ.ವೆಂಕಟೇಶ್

ಹಿರಿಯರಾದ ಸಚಿವ ಸಂಪುಟ ಸಹದ್ಯೋಗಿ ಕೆ.ವೆಂಕಟೇಶ್ ಅವರು ಈ ಇಲಾಖೆಯ ಜವಾಬ್ದಾರಿ ತೆಗೆದುಕೊಂಡ ಮೇಲೆ ತುಂಬಾ ಕಾಳಜಿಯಿಂದ ಕೆಲಸ ಮಾಡುತ್ತಿದ್ದಾರೆ. ರೈತರ, ಪಶುಗಳ ಸಮಸ್ಯೆಗಳ ಬಗ್ಗೆ ತಿಳಿದುಕೊಂಡಿರುವ ಅವರು, ಸಚಿವ ಸಂಪುಟ ಸಭೆಯಲ್ಲಿ ಯಾವಾಗಲೂ ಇದರ ಬಗ್ಗೆ ಮಾತನಾಡುತ್ತಿದ್ದಾರೆ. ಅವರೊಬ್ಬ ಕ್ರಿಯಾಶೀಲ ಸಚಿವ ಎಂದು ಸಚಿವೆ ಹೆಬ್ಬಾಳ್ಕರ್ ಹೇಳಿದರು.

ಜೀವನ ಪರಿವರ್ತನೆಗೆ ಶಿಕ್ಷಣ ಅವಶ್ಯಕ

ಮೂಡಲಗಿ: ಜನಸಾಮಾನ್ಯರ ಜೀವನ ಪರಿವರ್ತನೆ ಮತ್ತು ಬದಲಾವಣೆ ಆಗಬೇಕಾದರೆ, ಶಿಕ್ಷಣ ಅತ್ಯ ಅವಶ್ಯಕ. ಆ ನಿಟ್ಟಿನಲ್ಲಿ ಮೂಡಲಗಿ ಶಿಕ್ಷಣ ಸಂಸ್ಥೆ ಏಳು ದಶಕಗಳಿಂದ ಗ್ರಾಮೀಣ ಪ್ರದೇಶವಾದ ಮೂಡಲಗಿಯಲ್ಲಿ ಶಿಕ್ಷಣ ನೀಡುತ್ತಾ ಬಂದಿರುವುದು ಶ್ಲಾಘನೀಯವಾದದ್ದು ಎಂದು ಶಾಸಕ ಮತ್ತು ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಮೆಚ್ಚುಗೆ ವ್ಯಕ್ತಪಡಿಸಿದರು

ಅವರು ಇಂದು ಮೂಡಲಗಿ ಶಿಕ್ಷಣ ಸಂಸ್ಥೆಯ ವಾಣಿಜ್ಯ ಸಂಕೀರಣ ಉದ್ಘಾಟನೆ ನೆರವೇರಿಸಿ ಸಂಸ್ಥೆಯ ಸನ್ಮಾನ ಸ್ವೀಕರಿಸಿ ಮಾತನಾಡಿದ್ದರು.

ಈ ಸಂದರ್ಭದಲ್ಲಿ ಮೂಡಲಗಿ ಶಿಕ್ಷಣ ಸಂಸ್ಥೆ ಅಂಗ ಸಂಸ್ಥೆಯಾದ ಶ್ರೀ ಶಿವಬೋದ ರಂಗ ಪ್ರೌಢಶಾಲೆ ವಿಭಾಗದ ಎಸ್‌ಎಸ್ ಎಲ್‌ಸಿ ವಿದ್ಯಾರ್ಥಿನಿ ನಸ್ರೀನ ನಧಾಪ್ 595 ಅಂಕ ಪಡೆದು ಶಾಲೆಗೆ ಕೀರ್ತಿ ತಂದ ಹಿನ್ನೆಲೆಯಲ್ಲಿ ಶಾಸಕರು ಸನ್ಮಾನಿಸಿ ಮಾತನಾಡಿದರು.

ಮೂಡಲಗಿ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿ ಶಿಕ್ಷಣ ಸಂಸ್ಥೆಯ ಸಮುದಾಯ ಭವನ ಕಟ್ಟಡಕ್ಕೆ ಅನುದಾನ ಕೋರಿ ಸಲ್ಲಿಸಿದ ಮನವಿಗೆ ಸ್ಪಂದಿಸಿದ ಶಾಸಕರು, ಶಾಸಕರ ಹಾಗೂ ಸಂಸದರ ಅನುದಾನದಲ್ಲಿ ತಮಗೆ ಸಾಧ್ಯವಾದಷ್ಟು ಆರ್ಥಿಕ ನೆರವು ನೀಡುವದಾಗಿ ಭರವಸೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಮೂಡಲಗಿ ಶಿಕ್ಷಣ ಸಂಸ್ಥೆಯ ಚೇರಮನ್ ವೆಂಕಟೇಶ್ ಸೋನವಾಲ್ಕರ ವಹಿಸಿದ್ದರು.

ಸಮಾರಂಬದಲ್ಲಿ, ಸಂಸ್ಥೆಯ ಉಪಾಧ್ಯಕ್ಷರಾದ ಆರ್.ಪಿ. ಸೋನವಾಲ್ಕರ ನಿರ್ದೇಶಕರುಗಳಾದ ಎಸ್.ಆರ್. ಸೋನವಾಲ್ಕರ ವಿಜಯಕುಮಾರ ಸೋನವಾಲ್ಕರ ಬಿ.ಎಚ್. ಸೋನವಾಲ್ಕರ್, ಎ.ವಿ. ಹೊಸಕೋಟೆ, ಎ.ಟಿ. ಗಿರಡ್ಡಿ, ಎ. ಆಯೂ ಸತರಡ್ಡಿ ಎಸ್. ಎಮ್ ಸೋನವಾಲ್ಕರ ಡಾ. ಎಸ್ ವ್ಹಿ ಹೊಸೂರ ಆಡಳಿತಾಧಿಕಾರಿ ಡಾ. ಎಸ್ ಎಲ್ ಚಿತ್ರಗಾರ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಆಡಳಿತಾಧಿಕಾರಿ ಡಾ. ಎಸ್ ಎಲ್ ಚಿತ್ರಗಾರ ಸ್ವಾಗತಿಸಿ ವಂದಿಸಿದರು ಕಾರ್ಯಕ್ರಮವನ್ನು ಸಂತೋ? ಮುಗಳಿ ವೇದಾ ದೇಶಪಾಂಡ ಲೋಕೇಶ ಹಿಡ್ಕಲ ನಿರ್ವಹಿಸಿದರು.



ಗಾಳಿ ಮಳೆಗೆ ಹಾರಿದ ಮನೆಯ ಮೇಲ್ಛಾವಣಿ

ಚನ್ನಮ್ಮನ ಕಿತ್ತೂರು: ಇತ್ತೀಚೆಗೆ ಸುರಿದ ಮಳೆ, ಗಾಳಿಗೆ ಪಟ್ಟಣದಲ್ಲಿನ ಒಂದು ಮನೆಯ ಮೇಲ್ಛಾವಣಿ ಹಾರಿ ಹೋಗಿ ಭಾಗಶಃ ಹಾನಿಯಾಗಿದ್ದು ಯಾವುದೇ ಅನಾಹುತಗಳು ಸಂಭವಿಸಿಲ್ಲ.

ಪಟ್ಟಣದ ಗುರುವಾರ ಪೇಠೆಯ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಮಹಾದೇವಿ ಈರಪ್ಪ ಮೊರಬದ ಎಂಬುವವರಿಗೆ ಸೇರಿದ ಮನೆಯಾಗಿದ್ದು, ಗುರುವಾರ ರಾತ್ರಿ ಸುರಿದ ಮಳೆ, ಗಾಳಿಗೆ ಈ ಘಟನೆ ಸಂಭವಿಸಿದೆ. ಮನೆಯ ಮೇಲ್ಛಾವಣಿ ಹಾರಿ ಹೋಗಿ ಗೋಡೆಯು ಬಿರುಕು ಬಿಟ್ಟಿದೆ. ವಾಸಕ್ಕೆ ಬೇರೆ ಮನೆಯ ಆಶ್ರಯ ಪಡೆದಿದ್ದಾರೆ. ಘಟನಾ ಸ್ಥಳಕ್ಕೆ ಕಂದಾಯ ಇಲಾಖೆಯ ಹಾಗೂ ಪಟ್ಟಣ ಪಂಚಾಯತಿ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ.



ಸಹಕಾರ ರತ್ನ ರಾಜಶೇಖರ ಪಾಟೀಲ ದಂಪತಿಗೆ ಸನ್ಮಾನ



ಹಾರೂಗೇರಿ: ಸ್ಥಳೀಯ ವಿವೇಕಾನಂದ ನಗರದಲ್ಲಿರುವ ಎಸ್ ಎಲ್ ಬಾಡಗಿ ಅವರ ಮನೆಯಲ್ಲಿ ಎಸ್. ಎಲ್. ಬಾಡಗಿ , ಉಮರೆ ,ಹಣಮಂತ ಯಲಶೆಟ್ಟಿ ದಂಪತಿ ಜೊತೆಯಾಗಿ ಜಿಲ್ಲಾ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ, ಜನತಾ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ರಾಜಶೇಖರ ಪಾಟೀಲ ಹಾಗೂ ಅವರ ಧರ್ಮಪತ್ನಿ ಜಯಶ್ರೀ ಪಾಟೀಲ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶರಣ ಐ ಆರ್ ಮಠಪತಿ, ಬಾಗಪ್ಪ ಬಾಡಗಿ ದಂಪತಿಗಳು,ಪರಮೇಶ್ವರ ಬಾಡಗಿ ಮುಂತಾದವರು ಉಪಸ್ಥಿತರಿದ್ದರು.

ಜಾತಿಗಳ ಮಧ್ಯೆ ಭೇದ ಹೋಗಲಾಡಿಸಿದ್ದ ಬಸವಣ್ಣನವರು

ಬೆಳಗಾವಿ: ಜಾತಿ ಜಾತಿಗಳ ನಡುವಿನ ಭೇದ ಹೋಗಲಾಡಿಸಿ ಎಲ್ಲರನ್ನೂ ನಮ್ಮವರೆಂದು ಕೇವಲ ಗಂಡು ಹೆಣ್ಣು ಎರಡೇ ಜಾತಿ ಎಂಬುದನ್ನು ಸಾರಿದ ಬಸವಣ್ಣನವರನ್ನು ಎಂದಿಗೂ ಮರೆಯಬಾರದು ಎಂದು ಬೆಳಗಾವಿ ನಾಗನೂರು ರುದ್ರಾಕ್ಷಿ ಮಠದ ಪೀಠಾಧಿಕಾರಿ ಡಾ. ಅಲ್ಲಮಪ್ರಭು ಮಹಾ ಸ್ವಾಮೀಜಿ ಹೇಳಿದರು.

ಅವರು ಜಾಗತಿಕ ಲಿಂಗಾಯಿತ ಮಹಾಸಭಾ ಜಿಲ್ಲಾ ಘಟಕವು ನಾಗನೂರು ರುದ್ರಾಕ್ಷಿ ಮಠದ ಸಹಯೋಗದೊಂದಿಗೆ ವಿಶ್ವಗುರು ಬಸವಣ್ಣನವರ ಜಯಂತಿ ಉತ್ಸವ ಅಂಗವಾಗಿ ಎರಡು ದಿನಗಳ ವಚನ ದರ್ಶನ ಪ್ರವಚನ, ಇಷ್ಟ ಲಿಂಗ ಪೂಜೆ, ಪ್ರಾತ್ಯಕ್ಷಿಕೆ , ಹಾಗೂ ವಚನ ಪಠಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಸವಣ್ಣವರ ವಿಚಾರಧಾರೆಗಳನ್ನು ಚಿಂತನೆಗಳನ್ನು ಅನುಸರಿಸುತ್ತ ಬಸವಣ್ಣನವರ ಹಿಂದೆ ಹೋದರೆ ಸಾಕು ಅವರು ನಮ್ಮನ್ನು ಕೈ ಹಿಡಿದು ಮುಂದೆ ನಡೆಸುತ್ತಾರೆ ಎಂದರು.



ಶಿರಸಂಗಿ ಮಹಾಲಿಂಗೇಶ್ವರ ಮಠದ ಬಸವ ಮಹಾಂತ ಸ್ವಾಮೀಜಿ, ಮಹಾರಾಷ್ಟ್ರ ಗಡಹಿಂಗಲಜ ಜಡಿ ಸಿದ್ದೇಶ್ವರ ಬಿಲ್ವಾಶ್ರಮ ಮಠದ ಮಹಾಂತ ಸಿದ್ದೇಶ್ವರ ಸ್ವಾಮೀಜಿ, ಶಿವಮೊಗ್ಗದ ಸಿದ್ದಲಿಂಗ ದೇವರು, ಬೆಳಗಾವಿಯ ವಿಶ್ವನಾಥ ದೇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಜಾಗತಿಕ ಲಿಂಗಾಯಿತಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ರೊಟ್ಟಿ ಯವರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು.

ಇದೇ ಸಂದರ್ಭದಲ್ಲಿ ಜಯ ಶೀಲಾ ಬ್ಯಾಕೋಡ ವಿರಚಿತ ''ಬಸವ ಪ್ರಭೆ''ಗ್ರಂಥವನ್ನು ಲೋಕಾರ್ಪಣೆಗೊಳಿಸಲಾಯಿತು. ನಯನಾ ಗಿರಿಗೌಡರ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಭಾಗ್ಯಶ್ರೀ ಹಿರೇಮಠ ಮತ್ತು ತಂಡದವರಿಂದ ವಚನ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮವನ್ನು ಎ.ಕೆ. ಪಾಟೀಲ ನಿರ್ವಹಿಸಿದರು. ರಾಜಶೇಖರ್ ಪಾಟೀಲ್ ವಂದಿಸಿದರು.

ಮಹೇಶ ಬೆಲ್ಲದರಿಗೆ ಗೌರವ ಡಾಕ್ಟರೇಟ್: ಸನ್ಮಾನ

ಕಬ್ಬೂರ: ಪಟ್ಟಣದ ಬೆಂಗಳೂರ ಉದ್ಯಮಿ ಶಿಕ್ಷಣಪ್ರೇಮಿ ಮಹೇಶ ಬೆಲ್ಲದರವರಿಗೆ ಕರ್ನಾಟಕ ಸರ್ಕಾರದ ಬಾಗಲಕೋಟ ವಿಶ್ವವಿದ್ಯಾಲಯದಿಂದ ಅತ್ಯುನ್ನತ ಗೌರವ ಡಾಕ್ಟರೇಟ್ ಪ್ರಶಸ್ತಿಗೆ ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರದಿಂದ ಆಯ್ಕೆಯಾದ ಹಿನ್ನೆಲೆಯಲ್ಲಿ ಪಟ್ಟಣದ ವಿವಿಧ ಸಂಘ ಸಂಸ್ಥೆಗಳ ಪಧಾಧಿಕಾರಿಗಳುಸೇರಿದಂತೆಹಲವಾರುಗಣ್ಯರಿಂದ ಸತ್ಕಾರ ಸಮಾರಂಭ ಗಣೇಶನಗರದಲ್ಲಿರುವ ಓಂ ಸೆಂಟ್ರಲ್ ಪಬ್ಲಿಕ್ ಸ್ಕೂಲ್ ಸಭಾಂಗಣದಲ್ಲಿ ಸತ್ಕಾರ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು.

ಶರಣ ವಿರೇಶ ಪಾಟೀಲ, ಮಹೇಶ ಗೂಜ ಗೂಜಿ ಮಾತನಾಡಿದರು.

ಈ ವೇಳೆ ಪಟ್ಟಣದ ಸುತ್ತಮುತ್ತಲಿನ ಅನೇಕ ಸಂಘಸಂಸ್ಥೆಗಳ ಪಧಾಧಿಕಾರಿಗಳು ಸೇರಿದಂತೆ ಹಲವಾರು ಗಣ್ಯರಿಂದ ಸತ್ಕರಿಸಿ ಶುಭಹಾರೈಸಿದರು. ಕಾರ್ಯದರ್ಶಿ ಡಾ.ಪ್ರಕಾಶ ಬೆಲ್ಲದ,ಸುರೇಶ ಬೆಲ್ಲದ,ರಮೇಶ ಬೆಲ್ಲದ, ಶಿವಾನಂದ ಐಹೋಳಿ,ಪ್ರಾನ್ಸುಪಾಲ ಕಲ್ಪನಾ ನಗರ,ಲಕ್ಷ್ಮೀ ಮಂತ್ರನ್ನವರ,ಶ್ರೀಪಾದಕುಂಬಾರ, ,ಡಾ.ಆರ್.ಕೆ.ಬಾಗಿ, ಸಿದ್ದಪ್ಪ ಮುರಚಟ್ಟಿ ನಿರೂಪಿಸಿದರು.



ವೀರಶೈವ ಧರ್ಮದ ಅವಹೇಳನ ಸಲ್ಲ: ಕಾಶಿ ಶ್ರೀ

ಗೋಕಾಕ: ವೀರಶೈವ ಧರ್ಮದ ಕುರಿತು ಅವಹೇಳನ ಕುರಿತು ಮಾತನಾಡುವುದನ್ನು ಖಂಡಿಸಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಕಾಶಿಯ ಡಾ.ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಅವರು, ಶನಿವಾರದಂದು ನಗರದ ಶ್ರೀ ವಿಠ್ಠಲ ರುಕ್ಮಿಣಿ ಸಭಾ ಭವನದಲ್ಲಿ ಇಲ್ಲಿಯ ಜಂಗಮ ಕ್ಷೇಮಾಭಿವೃದ್ಧಿ ಸಂಘದವರು ಆಯೋಜಿಸಿದ್ದ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಸಮಾರಂಭವನ್ನು ಉದ್ಘಾಟಿಸಿ, ಸಾನ್ನಿಧ್ಯವಹಿಸಿ ಮಾತನಾಡಿದರು.

ವೀರಶೈವ ಧರ್ಮದಲ್ಲಿ ಯಾರನ್ನು ಟೀಕಿಸಿಲ್ಲ. ಈ ಸಿದ್ಧಾಂತವನ್ನು ಟೀಕಿಸಬಾರದು. ಪರಸ್ಪರ ಗೌರವದಿಂದ ಬಾಳಬೇಕು. ಅಗ್ಗದ ಪ್ರಚಾರ ಪಡೆಯುವ ನಿಟ್ಟಿನಲ್ಲಿ ಶ್ರೀ ಸಿದ್ಧಾಂತ ಶೀಖಾಮಣಿ ಗ್ರಂಥವನ್ನು ಟೀಕಿಸಿದ್ದಾರೆ. ಇದನ್ನು ನಾವು ಖಂಡಿಸುತ್ತೇವೆ. ಪುರಾತನ ಕಾಲದಿಂದ ಬಂದ ಈ ಪರಂಪರೆಯನ್ನು ಟೀಕಿಸಿದರೆ ನಾವು ಸುಮ್ಮನೆ ಕೂಡುವದಿಲ್ಲವೆಂದು ಹೇಳಿದರು.

ವೀರಶೈವ ಲಿಂಗಾಯತ ಧರ್ಮ ಷಟಸ್ಥಲ, ವಚನಗಳನ್ನು ಅನುಸರಿಸುತ್ತದೆ. ಶರಣ ಸಾಹಿತ್ಯವನ್ನು ಪಂಚಾಚಾರ್ಯರು ಗೌರವಿಸುತ್ತಿದ್ದಾರೆ. ಈ ಎರಡು ಒಂದೆ. ಇವುಗಳಲ್ಲಿ ಬೇಧಭಾವವಿಲ್ಲ. ವೀರಶೈವ ಲಿಂಗಾಯತ ಧರ್ಮವು ಪ್ರಾಚೀನವಾದದ್ದು ಅದನ್ನು ಶ್ರದ್ಧೆನಿಷ್ಠೆಯಿಂದ ಪಾಲಿಸಬೇಕು. ಸಮಾಜದಲ್ಲಿ ದ್ವಂದ್ವ ಸೃಷ್ಟಿ ಮಾಡುವವರಿಗೆ ಭಕ್ತರೇ ಸರಿಯಾದ ಉತ್ತರ ನೀಡಬೇಕು. ಇಂತಹ ಧರ್ಮ ಜಾಗೃತಿಯ ಕಾರ್ಯಕ್ರಮವನ್ನು ಆಯೋಜಿಸಿ ಮಕ್ಕಳಿಗೂ ಯೋಗ್ಯ ಸಂಸ್ಕಾರ ನೀಡಿ ನಮ್ಮ ಪರಂಪರೆಯನ್ನು ಮುಂದುವರೆಸುವಂತೆ ತಿಳಿಸಿದರು.

ಅಖಿಲಭಾರತ ವೀರಶೈವಾಚಾರ್ಯ ಸಂಸ್ಥೆಯ ರಾಷ್ಟ್ರೀಯ ಉಪಾಧ್ಯಕ್ಷರು ಹಾಗೂ ಹಿರೇಮಠ ಹುಕ್ಕೇರಿಯ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಸಿದ್ಧಾಂತ ಶಿಖಾಮಣಿ ಗ್ರಂಥವು 18ಭಾಷೆಗಳಿಗೆ ಭಾಷಾಂತರಗೊಂಡು ಜಗತ್ತಿನಾದ್ಯಂತ ಧರ್ಮ ಜಾಗೃತಿ ಮೂಡಿಸುತ್ತಿದೆ. ಇದನ್ನು ನಾವೆಲ್ಲ ಗೌರವಿಸಿ ಆಚರಣೆಗೆ ತರಬೇಕು. ಇದನ್ನು ವಿರೋಧಿಸುವವರನ್ನು ನಾವೆಲ್ಲ ಖಂಡಿಸೋಣ ಎಂದರು.

ವೇದಿಕೆಯ ಮೇಲೆ ನಗರದ ಶೂನ್ಯ ಸಂಪಾದನ ಮಠದ ಮುರುಘರಾಜೇಂದ್ರ ಸ್ವಾಮೀಜಿ, ಮುಪ್ಪಯ್ಯನ ಮಠದ ರಾಚೋಟೇಶ್ವರ ಶಿವಾಚಾರ್ಯ ಸ್ವಾಮೀಜಿ, ಮರಡಿಮಠದ ಡಾ.ಪವಾಡೇಶ್ವರ ಸ್ವಾಮೀಜಿ, ಬಾಗೋಜಿಕೊಪ್ಪದ ಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮೀಜಿ, ಹುಬ್ಬಳ್ಳಿಯ ರಾಜಶೇಖರ ಶಿವಾಚಾರ್ಯ ಸ್ವಾಮೀಜಿ, ಕಬ್ಬೂರಿನ ರೇವಣಸಿದ್ಧ ಶಿವಾಚಾರ್ಯರು, ಬಟಕುರ್ಕಿಯ ಬಸವಲಿಂಗ ಸ್ವಾಮಿಗಳು ಹಾಗೂ ಅತಿಥಿ ಅಶೋಕ ಪೂಜಾರಿ, ಜಂಗಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪ್ರಕಾಶ ಕಂಬಿ ಇದ್ದರು.



ಶ್ರೀಗಳಿಗೆ ಭವ್ಯ ಸ್ವಾಗತ

ಸಮಾರಂಭಕ್ಕೂ ಮುನ್ನ ನಗರ ಶ್ರೀ ಬನಶಂಕರಿ ದೇವಸ್ಥಾನದಿಂದ ಸಕಲ ವಾದ್ಯ ವೈಭವದೊಂದಿಗೆ, ಶ್ರೀ ಸಿದ್ಧಾಂತಶಿಖಾಮಣಿ ಗ್ರಂಥ ಹಾಗೂ ಸುಮಂಗಲಿಯರ ಪೂರ್ಣಕುಂಭದೊಂದಿಗೆ ಕಾಶಿ ಜಗದ್ಗುರುಗಳನ್ನು ಸ್ವಾಗತಿಸಲಾಯಿತು.

ಭಗೀರಥರ ಪ್ರಯತ್ನ ನಮ್ಮದಾಗಲಿ

ತೆಲಸಂಗ: ಭಗೀರಥ ಪ್ರಯತ್ನ ಎಂಬ ಮಾತು ಇಂದಿಗೂ ಜನಪ್ರಿಯ. ಇಂದು ನಾವು ಯಾವುದೇ ಕ್ಷೇತ್ರದಲ್ಲಿ ಯಶಸ್ಸು ಪಡೆಯಬೇಕಾದರೂ ಭಗೀರಥನ ಅಚಲ ಸಂಕಲ್ಪ ನಮಗೆ ಮಾದರಿಯಾಗಬೇಕು ಎಂದು ಸಾವಳಗಿಯ ಮುಟ್ಟು ಮಹಾರಾಜರು ಹೇಳಿದರು.

ಸಮೀಪದ ಬನ್ನೂರ ಗ್ರಾಮದಲ್ಲಿ ಭಗಿರತ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಭಗೀರಥನ ಜೀವನ ನಮಗೆ ಕಲಿಸುವ ದೊಡ್ಡ ಪಾಠವೆಂದರೆ ಛಲ. ಎಷ್ಟೇ ವಿಘ್ನಗಳು ಎದುರಾದರೂ, ಗುರಿ ತಲುಪುವವರೆಗೆ ವಿಶ್ರಮಿಸಬಾರದು ಎಂಬ ಸಂದೇಶವನ್ನು ಅವರು ಜಗತ್ತಿಗೆ ನೀಡಿದ್ದಾರೆ. ಗಂಗೆಯನ್ನು ಭೂಮಿಗೆ ತರಲು ಭಗೀರಥನು ಮಾಡಿದ ಹೋರಾಟ ಸಾಮಾನ್ಯವಾದುದಲ್ಲ, ಸಾವಿರಾರು ವರ್ಷಗಳ ಕಾಲ ಕಠಿಣ ತಪಸ್ಸು ಮಾಡಿ, ಶಿವನ ಜಟೆಯಲ್ಲಿ ಗಂಗೆಯ ವೇಗವನ್ನು ನಿಯಂತ್ರಿಸಿ, ಈ ಪುಣ್ಯ ಭೂಮಿಗೆ ಗಂಗೆಯನ್ನು ಹರಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ಕೃಷಿ ಅಧಿಕಾರಿ ಯಂಕಪ್ಪಾ ಉಪ್ಪಾರ ಮಾತನಾಡಿ, ಭಗೀರಥರು ಕೇವಲ ಒಂದು ಸಮುದಾಯಕ್ಕೆ ಸೀಮಿತವಾದವರಲ್ಲ, ಅವರು ತಂದ ಗಂಗೆ ಇಂದು ಕೋಟ್ಯಂತರ ಜನರ ಹಸಿವನ್ನು ನೀಗಿಸುತ್ತಿದೆ, ಭೂಮಿಯನ್ನು ಹಚ್ಚಹಸಿರಾಗಿಸಿದೆ. ನೀರಿಲ್ಲದ ಜಾಗದಲ್ಲಿ ನದಿಯನ್ನು ಹರಿಸಿದ ಅವರ ಕಾರ್ಯವು ಇಂದಿನ ಜಲ ಸಂರಕ್ಷಣೆ ಮತ್ತು ಪರಿಸರ ಕಾಳಜಿಗೆ ದೊಡ್ಡ ಪ್ರೇರಣೆಯಾಗಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಮತ್ತು ಯುವಜನತೆ ಭಗೀರಥರ ವ್ಯಕ್ತಿತ್ವವನ್ನು ಅಳವಡಿಸಿಕೊಳ್ಳಬೇಕು. ಸೋಲಿಗೆ ಹೆದರದೆ, ಶ್ರದ್ಧೆಯಿಂದ ಕೆಲಸ ಮಾಡಿದರೆ ಯಶಸ್ಸು ಖಂಡಿತ ಸಿಗುತ್ತದೆ ಎಂಬ ವಿಶ್ವಾಸ ನಮ್ಮದಾಗಲಿ. ಭಗೀರಥರ ತತ್ವಗಳು ನಮ್ಮ ಬದುಕಿನ ದಾರಿದೀಪವಾಗಲಿ.

ಅಡಿವೆಪ್ಪಾ ಗುಗ್ಗರಿ, ಸದಾಶಿವ ಮುಂಜಿ, ಮನಿಗಿನಿ ಗುಗ್ಗರಿ, ಪುಂಡಲಿಕ ರಾಣಗಟ್ಟಿ, ಅಣ್ಣಪ್ಪಾ ಹನಗಂಡಿ, ಚಿನ್ನಪ್ಪಾ ಶೇಗಾವಿ, ಸುಭಾಸ ಪೂಜಾರಿ, ಮಲ್ಲಪ್ಪಾ ಗಲಗಲಿ, ಬಾಳಪ್ಪಾ ಶಿಂದೂರ, ಸದಾಶಿವ ಗೊರವ, ರಮೇಶ ತಳಕೇರಿ, ವಿಠ್ಠಲ ಚೌರಿ, ಬಸವರಾಜ ರಾಣಗಟ್ಟಿ, ಗೂಳಪ್ಪಾ ಚೌರಿ, ಸತೀಶ ರಾಣಗಟ್ಟಿ, ಪ್ರಶಾಂತ ಗುಗ್ಗರಿ, ಜಕ್ಕಪ್ಪಾ ಗುಗ್ಗರಿ, ಮಾಳಪ್ಪಾ ಗುಗ್ಗರಿ, ತುಳಜಪ್ಪಾ ಮುಂಜಿ, ಮಲ್ಲಪ್ಪಾ ಚೌರಿ, ಆನಂದ ಮುಂಜಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಕಿರುಸುದ್ದಿ

ಡಾ.ಮೂರ್ತಿ .ಎಲ್ ಪ್ರವಾಸ ನಾಳೆ

ರಾಯಬಾಗ: ರಾಜ್ಯ ಅನುಸೂಚಿತ ಜಾತಿ, ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ.ಮೂರ್ತಿ .ಎಲ್ ಅವರು ಸೋಮವಾರ ಏ.27 ರಂದು ಬೆಳಿಗ್ಗೆ 10.30 ಗಂಟೆಗೆ ಬೆಳಗಾವಿ ಸುವರ್ಣ ವಿಧಾನಸೌಧ ಕೊಠಡಿ ಸಂಖ್ಯೆ 354ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಘ, ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ಸಭೆ, ಮಧ್ಯಾಹ್ನ 2.15 ಗಂಟೆಗೆ ಪತ್ರಿಕಾಗೋಷ್ಠಿ, ಮಧ್ಯಾಹ್ನ 3 ಗಂಟೆಯಿಂದ ಜಿಲ್ಲಾ ಮಟ್ಟದ ಎಲ್ಲ ಇಲಾಖೆಗಳ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ ಎಂದು ರಾಯಬಾಗ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ (ಗ್ರೇಡ್-1) ವ್ಹಿ.ಎಸ್.ಚಂದರಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

15 ದಿನಗಳ ನಂತರ ಲೆಕ್ಕ ನೀಡಿ: ಶಿವು



ಅಡಹಳ್ಳಿ: ಹರಿಹರ ಪಂಚಮಸಾಲಿ ಪೀಠದ ಆಡಳಿತದಲ್ಲಿ ಇತ್ತೀಚಿಗೆ ಬೆಳಕಿಗೆ ಬಂದಿರುವ ಅವ್ಯವಹಾರಗಳು ಹಾಗೂ ಅವ್ಯವಸ್ಥೆಗಳು ಸಮಾಜದ ವಿಶ್ವಾಸಕ್ಕೆ ಧಕ್ಕೆ ಉಂಟು ಮಾಡಿರುವುದು ವಿಷಾದನೀಯ ಸಂಗತಿ.ಈ ಹಿನ್ನೆಲೆಯಲ್ಲಿ ಹರಿಹರ ಪೀಠದ ಟ್ರಸ್ಟ್‌ನವರು ಏ.27 ರಂದು ಲೆಕ್ಕಕೊಡುವ ಗಡುವು ನೀಡಿದ್ದು, ಅದನ್ನು 15 ದಿನಗಳ ಕಾಲ ಮುಂದೂಡಬೇಕೆಂದು ಅಥಣಿ ತಾಲೂಕಿನ ಪಂಚಮಸಾಲಿ ಸಮಾಜದ ಎಲ್ಲ ಬಾಂಧವರ ಪರವಾಗಿ ಅಥಣಿ ತಾಲೂಕು ಸಮಾಜದ ಹರಿಹರ ಪೀಠದ ರಾಜ್ಯ ಸಮಿತಿ ಸದಸ್ಯ ಮುಖಂಡ ಶಿವು ಗುಡ್ಡಾಪುರ ಆಗ್ರಹಿಸಿದರು. ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಹರಿಹರ ಪಂಚಮಸಾಲಿ ಪೀಠದ ಕೈಗೊಂಡ ಈ ಈ ನಿರ್ಣಯಗಳಲ್ಲಿ ಪಂಚಮಸಾಲಿ ಪೀಠದ ಮಹತ್ವದ ಪುನರುಚ್ಚರಣೆ, ಹಣಕಾಸು ಪಾರದರ್ಶಕತೆ, ದೇಣಿಗೆ ವಿವರಗಳ ಪಾರದರ್ಶಕತೆ, ಆಸ್ತಿಗಳ ಕಾನೂನು ಬದ್ಧ ವರ್ಗಾವಣೆ, ಟ್ರಸ್ಟ್ ಆಡಳಿತದ ಜವಾಬ್ದಾರಿ ಮತ್ತು ರಾಜೀನಾಮೆ, ಬೈಲಾ ಉಲ್ಲಂಘನೆ, ಹೊಸ ಟ್ರಸ್ಟ ರಚನೆ, ಹೊಸ ಆಡಳಿತ ಮಂಡಳಿ ರಚನೆ, ಪೀಠಾಧಿಪತಿಗಳ ಸ್ಥಾನ ಕುರಿತು ಸ್ಪಷ್ಟನೆ, ಮಠದ ಗೌರವ ಮತ್ತು ಭವಿಷ್ಯದ ಭದ್ರತೆ ಸೇರಿದಂತೆ ಹರಹರ ಪೀಠದ ಟ್ರಸ್ಟನವರು ಏ.27ರಂದು ಲೆಕ್ಕ ಕೊಡುವ ದಿನ ಪ್ರಕಟಿಸಿದ್ದಾರೆ. ಸಮಾಜದ ಮುಖಂಡರಿಗೆ 15 ದಿನಗಳ ಕಾಲಾವಕಾಶ ನೀಡಬೇಕು. ನಂತರ ಸಮಾಜದ ಪೀಠದಲ್ಲಿ ಬಹಿರಂಗ ಸಭೆಯನ್ನು ನಡೆಸಿ ಸೂಕ್ತ ದಾಖಲಾತಿಗಳೊಂದಿಗೆ ಪಂಚಮಸಾಲಿ ಸಮಾಜದ ಎಲ್ಲ ಮುಖಂಡರ ಸಮ್ಮುಖದಲ್ಲಿ ಪೀಠದ ಲೆಕ್ಕವನ್ನು ನೀಡಬೇಕೆಂದು ಆಗ್ರಹಿಸಿದ್ದಾರೆ.

ಸೇನಾ ತರಬೇತಿಗೆ ಅರ್ಜಿ ಆಹ್ವಾನ

ಬೆಳಗಾವಿ: ಭಾರತೀಯ ಸೇನೆ, ಇತರೆ ಯೂನಿಫಾರ್ಮ ಸೇವೆಗಳಿಗೆ ಸೇರ ಬಯಸುವ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1, 2(ಎ), 3(ಎ) ಹಾಗೂ (3ಬಿ)ಗಳ ಅರ್ಹ ಪುರುಷ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಮೇ 11ಅರ್ಜಿ ಸಲ್ಲಿಸುವ ಕೊನೆಯ ದಿನವಾಗಿದ್ದು, ಅರ್ಜಿ ನಮೂನೆಯನ್ನು ಆಯಾ ಜಿಲ್ಲೆಯ ಜಿಲ್ಲಾ, ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪಡೆದು ಭರ್ತಿ ಮಾಡಿ ಉಪ ನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗೆ ಅರ್ಜಿಯನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಉಪನಿರ್ದೇಶಕರ ಕಚೇರಿ, ಕೊಠಡಿ ಸಂಖ್ಯೆ 204, 2ನೇ ಮಹಡಿ, ಸುವರ್ಣ ವಿಧಾನಸೌಧ, ಹಲಗಾ ಈ ವಿಳಾಸಕ್ಕೆ ಸಲ್ಲಿಸಬಹುದಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಗೀತ ಸಂಜೆ ಇಂದು

ಧಾರವಾಡ: ಭಾರತೀಯ ಸಂಗೀತ ವಿದ್ಯಾಲಯದಿಂದ ಗಾಯನ-ವಾದನಗಳ ಆವಾನ್ ಬೈಠಕ್ ಸಂಗೀತ ಸಂಜೆ ಏ.26ರಂದು ಸಂಜೆ 5.30ಕ್ಕೆ ನಗರದ ಆಲೂರು ವೆಂಕಟರಾವ್ ಭವನದಲ್ಲಿ ಹಮ್ಮಿಕೊಂಡಿದೆ ಎಂದು ಗಾಯಕ ಶಫೀಖಾನ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಕಾರ್ಯಕ್ರಮಕ್ಕೆ ಸಂತೂರ ಹಾಗೂ ಸಿತಾರ ವಾದನಗಳ ಜುಗಲಬಂದಿಯೊಂದಿಗೆ ಚಾಲನೆ ದೊರೆಯಲಿದೆ. ಬಳಿಕ ಸುಮಾ ಹೆಗಡೆ ಸಂತೂರ ಮತ್ತು ಸೃಷ್ಟಿ ಸುರೇಶ ತಂತು ವಾದನ ಜರುಗಲಿದೆ. ಇವರಿಗೆ ಯುವ ತಬಲಾ ವಾದಕ ಹೇಮಂತ ಜೋಶಿ ತಬಲಾ ಸಾಥ್ ನೀಡಲಿದ್ದು, ಶ್ರೀಧರ ಮಾಂಡ್ರೆ ತಬಲಾ ಮತ್ತು ಸತೀಶ ಭಟ್ಟ ಹೆಗ್ಗಾರ ಹಾರ್ಮೋನಿಯಂ ಸಾಥ್ ನೀಡಲಿದ್ದು, ಧಾರವಾಡದ ಪ್ರಶಾಂತ ಆಸ್ಪತ್ರೆ, ಕನ್ನಡ-ಸಂಸ್ಕೃತಿ ಇಲಾಖೆ ಹಾಗೂ ನ್ಯೂಯಾರ್ಕ್ ರವಿ ಮತ್ತು ಜಯಾ ಭೂಪಲಾಪುರ ಫೌಂಡೇಶನ್ ಕೈಜೋಡಿಸಿವೆ ಎಂದರು.



ಬೆಳಗಾವಿ : ಕಡೋಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಹಂದಿಗನೂರು ಗ್ರಾಮದಲ್ಲಿ ಜರುಗಿದ ಶ್ರೀಲಕ್ಷ್ಮೀದೇವಿ ಜಾತ್ರಾ ಮಹೋತ್ಸವದ ಹಿನ್ನಲೆ ಅಪೆಕ್ಸ್, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ರಾಹುಲ್ ಜಾರಕಿಹೊಳಿ ಅವರು ಗ್ರಾಮಕ್ಕೆ ಭೇಟಿ ನೀಡಿ ದೇವಿಯ ದರ್ಶನ ಪಡೆಕೊಂಡರು.

ಕಾಂಗ್ರೆಸ್ ವಿರುದ್ಧ ಪ್ರತಿಭಟನೆ

ಬೆಳಗಾವಿ : ನಾರೀಶಕ್ತಿ ವಂದನ್ ಅಧಿನಿಯಮವನ್ನು ಜಾರಿಯಾಗದಂತೆ ತಡೆದು ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳ ಮಹಿಳಾ ವಿರೋಧಿ ನೀತಿಗಳನ್ನು ಅನುಸರಿಸುತ್ತಿವೆ ಎಂದು ಆರೋಪಿಸಿ ನಾರಿ ಶಕ್ತಿ ಫೋರಂನ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಿದರು.ಶನಿವಾರ ಬೆಳಗಾವಿ ನಗರದ ಕನ್ನಡ ಸಾಹಿತ್ಯ ಭವನದಲ್ಲಿನೂರಾರು ಮಹಿಳಾ ಕಾರ್ಯಕರ್ತರು ಜಮಾವಣೆಗೊಂಡು, ನಾರಿ ಶಕ್ತಿ ಫೋರಂನ ವತಿಯಿಂದ ನಾರಿ ಶಕ್ತಿ ವಂದನಾ ಅಧಿನಿಯಮವನ್ನು ಜಾರಿಯಾಗದಂತೆ ತಡೆದು ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳ ಮಹಿಳಾ ವಿರೋಧಿ ನೀತಿಗಳನ್ನು ಅನುಸರಿಸುತ್ತಿವೆ ಎಂದು ಆರೋಪಿಸಿ ಪ್ರತಿಭಟನಾ ರ್‍ಯಾಲಿಯನ್ನು ನಡೆಸಿದರು. ನಗರದ ರಾಣಿ ಚೆನ್ನಮ್ಮ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಮಹಿಳಾ ವಿರೋಧಿ ಹಾಗೂ ಭ್ರಷ್ಟ ಕಾಂಗ್ರೆಸ್ ವಿರುದ್ಧ ಆಕ್ರೋಶವನ್ನು ವ್ಯಕ್ತಪಡಿಸಿ ಪ್ರತಿಭಟನೆಯನ್ನು ನಡೆಸಿದರು. ಪ್ರತಿಭಟನೆಯಲ್ಲಿ ಮಾತನಾಡಿದ ಪ್ರತಿಭಟನಾಕಾರರು, ಪ್ರಧಾನ ಮಂತ್ರಿ ಮೋದಿ ಸೇರಿದಂತೆ ಎನ್.ಡಿ.ಎ ಸರ್ಕಾರವು ಮಹಿಳೆಯನ್ನು ಕೆಳಮಟ್ಟದಿಂದ ಮೇಲಕ್ಕೆತ್ತಿ, ಮಹಿಳೆಗೆ ರಾಜಕೀಯ ಬಲವನ್ನು ತುಂಬುವ ಮಹದಾಸೆಯನ್ನು ಹೊಂದಿದ್ದರು. ಅದಕ್ಕೆ ಕಾಂಗ್ರೆಸ್ ನಿಂದ ಸೋಲಾಗಿದ್ದು, ಹೋರಾಟದ ಮೂಲಕ ಪಡೆಯುವ ಪರಿಸ್ಥಿತಿ ಬಂದಿದೆ ಎಂದು ಆರೋಪಿಸಿದರು. ಈ ವೇಳೆ ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಕಾರ್ಯದರ್ಶಿ ಡಾ. ಸೋನಾಲಿ ಸರ್ನೋಬತ್, ಮಹಾನಗರ ಅಧ್ಯಕ್ಷೆ ಗೀತಾ ಸುತಾರ್, ಶಿಲ್ಪಾ ಕೆಕ್ರೆ, ಡಾ. ನಯನಾ ಭಸ್ಮ ಹಾಗೂ ಉಜ್ವಲಾ ಬಡವನ್ನಾಚೆ ಸೇರಿದಂತೆ ಕಾರ್ಯಕರ್ತರು ಇದ್ದರು.



ಬೆಳಗಾವಿ: ನಾರೀಶಕ್ತಿ ವಂದನ್ ಅಧಿನಿಯಮವನ್ನು ಜಾರಿಯಾಗದಂತೆ ತಡೆದು ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳ ಮಹಿಳಾ ವಿರೋಧಿ ನೀತಿಗಳನ್ನು ಅನುಸರಿಸುತ್ತಿವೆ ಎಂದು ಆರೋಪಿಸಿ ನಾರಿ ಶಕ್ತಿ ಫೋರಂನ ವತಿಯಿಂದ ಬೃಹತ್ ಪ್ರತಿಭಟನೆ ನಡೆಯಿತು.

ಜೈನ ಸಮಾಜದ ಕೊಡುಗೆ ಅಪಾರ

ಬೆಳಗಾವಿ : ದೇಶಕ್ಕೆ ಜೈನ ಸಮಾಜದ ಕೊಡುಗೆ ಬಹಳಷ್ಟಿದೆ. ಇತಿಹಾಸದ ಪುಟದಲ್ಲಿ ಅಚ್ಚಳಿಯದ ಸೇವೆ ಸಲ್ಲಿಸಿದ್ದಾರೆ. ಕೃಷಿ, ವ್ಯಾಪಾರ, ಶೈಕ್ಷಣಿಕ ಮತ್ತು ಕನ್ನಡ ಭಾಷೆಗೆ ಸಮಾಜದ ಕೊಡುಗೆ ಅಪಾರ ಎಂದು ಸಚಿವ ಸತೀಶ ಜಾರಕಿಹೊಳಿ ಬಣ್ಣಿಸಿದರು.

ನಗರದ ಕಮಲ ಬಸದಿ ಮಂದಿರದ ಆವರಣದಲ್ಲಿ ಶನಿವಾರ ಆಯೋಜಿಸಲಾದ ಮದ್ದೇವಾಧಿದೇವ 1008 ಭಗವಾನ ನೇಮಿನಾಥ ದಿಗಂಬರ ಐತಿಹಾಸಿಕ ಪುರಾತನ ಜಿನಮಂದಿರ ಶ್ರೀ ಧರ್ಮಚಕ್ರ ಆರಾಧನಾ ಮಹಾಮಹೋತ್ಸವದಲ್ಲಿ ಭಾಗಿಯಾಗಿ ಅವರು ಮಾತನಾಡಿದರು.

ಇಲ್ಲಿರುವ ಕಮಲ ಬಸದಿಯು ಐತಿಹಾಸಿಕ ಸ್ಥಳವಾಗಿದ್ದು, ಜೈನ್ ಸಮಾಜದ ಮುಖಂಡ ಸುನೀಲ್ ಹನಮಣ್ಣವರ್ ಮನವಿ ಮೇರೆಗೆ ಕಮಲ ಬಸ್ತಿ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆಯಿಂದ ಅನುದಾನ ನೀಡಿದ್ದೇನೆ. ಮುಂದಿನ ದಿನಗಳಲ್ಲಿ ಕಮಲ ಬಸದಿಯನ್ನು ಇನ್ನಷ್ಟು ಅಭಿವೃದ್ಧಿ ಪಡಿಸಿ ಪ್ರವಾಸಿ ಸ್ಥಳವನ್ನಾಗಿ ಮಾಡಲಾಗುವುದು ಎಂದು ಲೋಕೋಪಯೋಗಿ ಸಚಿವ ಸತೀಸ್ ಜಾರಕಿಹೊಳಿ ಭರವಸೆ ನೀಡಿದರು.

ಜೈನ್ ಸಮುದಾಯಕ್ಕೆ ಸಂಬಂಧಿಸಿದ ರಾಜ್ಯದ ನಾಲ್ಕು ಮಠಗಳಿಗೆ ನಮ್ಮ ಇಲಾಖೆಯಿಂದ ಅನುದಾನ ನೀಡಿದ್ದೇನೆ. ಹಾಸನ, ಶಿವಮೊಗ್ಗ ಸೇರಿದಂತೆ ವಿವಿಧೆಡೆ ಮಠಗಳಿಗೆ ಅಷ್ಟೇ ಅಲ್ಲ, ಜೈನ್ ಸಮುದಾಯದ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗುವ ಊರುಗಳಿಗೆ ಉತ್ತಮ ರಸ್ತೆ ಮಾಡಿ ಕೊಟ್ಟಿದ್ದೇವೆ. ಹಾಸನ, ಶಿವಮೊಗ್ಗ ಜಿಲ್ಲೆಯ ಸಮುದಾಯದ ಸ್ವಾಮೀಜಿಗಳು ಮನವಿ ಸಲ್ಲಿಸದಿದ್ದರೂ ಕರೆ ಮಾಡಿ ಹೇಳಿದಕ್ಕೆ ಅನುದಾನ ನೀಡಿದ್ದೇವೆ ಎಂದು ತಿಳಿಸಿದರು.

ಹುಕ್ಕೇರಿ ತಾಲೂಕಿನ ಯರನಾಳ ಗ್ರಾಮದಲ್ಲಿಯೂ 2023ರ ಅವಧಿಯಲ್ಲಿ ಸಮುದಾಯಕ್ಕೆ ಬೇಕಾದ ಕೆಲಸಗಳನ್ನು ಮಾಡಿದ್ದೇವೆ. ಅಲ್ಪಸಂಖ್ಯಾರ ಬಗ್ಗೆ ನಮ್ಮ ಸರ್ಕಾರ ವಿಶೇಷ ಕಾಳಜಿ ವಹಿಸಿದೆ. ಮುಂದೆಯೂ ಅಲ್ಪಸಂಖ್ಯಾರ ಅಭಿವೃದ್ಧಿಗೆ ನಮ್ಮ ಸರ್ಕಾರ ಆದ್ಯತೆ ನೀಡುತ್ತದೆ. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಜೈನ್ ಸಮುದಾಯಕ್ಕೆ ತಮ್ಮದೇಯಾದ ಕೊಡುಗೆ ನೀಡಿದ್ದಾರೆ. ಬರುವ ದಿನಗಳಲ್ಲಿ ಹೆಚ್ಚಿನ ಅಭಿವೃದ್ಧಿ ಮಾಡಿ ಹೆಚ್ಚು ಅನುದಾನ ನೀಡಲಾಗುವುದು ಎಂದು ಹೇಳಿದರು.

ಡಾ. ವಿನೋದ ದೊಡ್ಡಣ್ಣವರ ಮಾತನಾಡಿದರು.

ಜಿನಮಂದಿರ ಶ್ರೀ ಧರ್ಮಚಕ್ರ ಆರಾಧನಾ ಮಹಾಮಹೋತ್ಸವದಲ್ಲಿ ಶ್ರೀ 108 ಧರ್ಮಸೇನ ಮನಿಮಹಾರಾಜರು ಆಶೀರ್ವಚನ ನುಡಿದರು. ನಂತರ ಈ ವೇಳೆ ವಿಶ್ವ ಶಾಂತಿಗಾಗಿ ಜೈನ್ ಧರ್ಮದ ಐತಿಹಾಸಿಕ ಕಾರ್ಯಕ್ರಮದಲ್ಲಿ ಧರ್ಮಚಕ್ರ, ಆರಾಧನೆ, ವಿಶೇಷ ಪೂಜೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಸಲಾಯಿತು.ಈ ಸಂದರ್ಭದಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಶಾಸಕ ಆಸಿಫ್ ಸೇಠ್, ಬಾಬಾಸಾಹೇಬ್ ಪಾಟೀಲ, ಗಣೇಶ ಹುಕ್ಕೇರಿ, ವಿಪ ಸದಸ್ಯ ಚನ್ನರಾಜ ಹೊಟ್ಟಿಹೊಳಿ, ಮಾಜಿ ಶಾಸಕ ವೀರಕುಮಾರ ಪಾಟೀಲ್, ಜಿ. ರಾವಾಸಾಹೇಬ ಪಾಟೀಲ್ , ಬುಡಾ ಅಧ್ಯಕ್ಷ ಲಕ್ಷಣರಾವ್ ಚಿಂಗಳೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಉಪಾಧ್ಯಕ್ಷರಾದ ಸುನೀಲ್ ಹನಮಣ್ಣನವರ, ಹಿರಾಚಂದ ಕಲಮನಿ , ಅಭಿನಂದನ ಪಾಟೀಲ, ಉತ್ತಮ ಪಾಟೀಲ್, ರವಿರಾಜ ಪಾಟೀಲ್ ,ಸನ್ಮತಿ ಕಸ್ತೂರಿ ಸೇರಿದಂತೆ ಜೈನ ಸಮುದಾಯದ ಮುಖಂಡರು ಹಾಗೂ ಶ್ರಾವಕ- ಶ್ರಾವಕಿಯರು ಇದ್ದರು.



» ಶ್ರೀ ಧರ್ಮಚಕ್ರ, ಆರಾಧನಾ ಮಹಾಮಹೋತ್ಸವ
» ಸಚಿವ ಸತೀಶ ಜಾರಕಿಹೊಳಿ ಹೇಳಿಕೆ

ಕಮಲ ಬಸದಿ ವೀಕ್ಷಿಸಿದ ಸಚಿವರು

ಸಚಿವ ಸತೀಶ್ ಜಾರಕಿಹೊಳಿ ಅವರು ಕಮಲ ಬಸದಿಗೆ ಭೇಟಿಕೊಟ್ಟು 1008 ಭಗವಾನ ನೇಮಿನಾಥ ಭಗವಾನರಿಗೆ ಪೂಜೆ ಸಲ್ಲಿಸಿದರು. ನಂತರ ಐತಿಹಾಸಿಕ ಸ್ಥಳವಾದ ಕಮಲ ಬಸದಿಯನ್ನು ವೀಕ್ಷಿಸಿದರು. ನಂತರ ಅಲ್ಲೇ ವೇದಿಕೆ ಮೇಲಿದ್ದ ಜೈನ ಮುನಿಗಳ ಆಶೀರ್ವಾದ ಪಡೆದರು.

ಮಹಾಲಕ್ಷ್ಮೀ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿಗೆ 4.30 ಕೋಟಿ ರೂ. ಲಾಭ: ಪಾರ್ಶಿ

ಮೂಡಲಗಿ : ನಗರದ ಪ್ರತಿಷ್ಠಿತ ಸಹಕಾರಿ ಸಂಘಗಳಲ್ಲಿ ಒಂದಾದ ಮಹಾಲಕ್ಷ್ಮೀ ಅರ್ಬನ್ ಕೋ-ಆಪ ಕ್ರೆಡಿಟ್ ಸೊಸೈಟಿ ಆರ್ಥಿಕ ವರ್ಷ 2025-2026 ಕ್ಕೆ ರೂ 4.30 ಕೋಟಿ ನಿವ್ವಳ ಲಾಭಗಳಿಸಿದೆ ಎಂದು ಸಂಘದಅಧ್ಯಕ್ಷ ಸಂತೋಷ ತಮ್ಮಣ್ಣಾ ಪಾರ್ಶಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಂಘದ ಪ್ರಧಾನ ಕಚೇರಿಯಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸಂಘವು 2026 ರ ಮಾರ್ಚ್ ಅಂತ್ಯಕ್ಕೆ 3.15 ಕೋಟಿ ಶೇರು ಬಂಡವಾಳ, 142.85 ಕೋಟಿ ಠೇವುಗಳು, 22.77 ಕೋಟಿ ನಿಧಿಗಳನ್ನು ಹೊಂದಿ ವಿವಿಧ ಬ್ಯಾಂಕ್‌ಗಳಲ್ಲಿ ಠೇವಣಿದಾರರ ಭದ್ರತೆಗಾಗಿ 50.14 ಕೋಟಿಗುಂತಾವಣಿ ಮಾಡಿ, 117.42. ಕೋಟಿರೂ ಸಾಲ ವಿತರಿಸಿದ್ದು ದುಡಿಯುವ ಬಂಡವಾಳ 179.47 ಕೋಟಿರೂ ಹೊಂದಿದೆ ಎಂದು ಹೇಳಿದರು.

ಸಂಘವು ಪ್ರಧಾನ ಕಚೇರಿ ಹಾಗೂ 10 ಶಾಖೆಗಳನ್ನು ಹೊಂದಿದ್ದು, ಪ್ರಧಾನ ಕಚೇರಿ, ಖಾನಟ್ಟಿ ಮತ್ತು ಸುಣಧೋಳಿ ಶಾಖೆಗಳು ಸಂಘದ ಸ್ವಂತ ಭವ್ಯವಾದ ಕಟ್ಟಡಗಳನ್ನು ಹೊಂದಿವೆ. ಕಟಕೋಳ ಶಾಖೆಗೆ ನಿವೇಶನ ಖರೀದಿಸಲಾಗಿದೆ.ಎಲ್ಲ ಶಾಖೆಗಳು ಗಣಕೀಕೃತವಾಗಿವೆ. ಪ್ರಾರಂಭದಿಂದಲೂ ಪ್ರತಿಶತ ಹದಿನೈದು (15%) ರಂತೆ ಶೇರು ಲಾಭಾಂಶ ವಿತರಿಸುತ್ತಾ ಶೇರುದಾರರ ವಿಶ್ವಾಸವನ್ನು ಗಳಿಸಿರುತ್ತದೆ.

ಸಂಘವು 1992 ನೇ ಇಸ್ವಿಯಲ್ಲಿ ಪ್ರಾರಂಭವಾಗಿದ್ದು, 34 ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ.ಕಡಿಮೆ ಬಂಡವಾಳದಲ್ಲಿ ಅತೀ ಹೆಚ್ಚು ಲಾಭ ಗಳಿಸಿದ್ದು, ಹೆಚ್ಚಿನ ಪ್ರಮಾಣದಲ್ಲಿ ಸಾಲ ವಸೂಲಾತಿಆಗಿದೆ.ಇದಕ್ಕೆಲ್ಲ ಸಂಘದ ಆಡಳಿತ ಮಂಡಳಿ ಸದಸ್ಯರು, ಸರ್ವ ಸಿಬ್ಬಂದಿ ವರ್ಗ ಹಾಗೂ ಶಾಖೆಗಳ ಸಲಹಾ ಸಮಿತಿ ಸದಸ್ಯರ ನಿಸ್ವಾರ್ಥ ಸೇವೆಯೇ ಪ್ರಮುಖ ಕಾರಣವಾಗಿದೆ ಎಂದರು

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಮಹಾದೇವ ಗೋಕಾಕ, ಸಂಘದ ನಿರ್ದೇಶಕರಾದ ಮುತ್ತಪ್ಪಈರಪ್ಪನವರ, ಶಿವಬಸು ಖಾನಟ್ಟಿ, ಮಲ್ಲಪ್ಪಗಾಣಿಗೇರ, ಡಾ.ಪ್ರಕಾಶ ನಿಡಗುಂದಿ, ಸಚಿನ ಮುನ್ಯಾಳ, ಸಾಂವಕ್ಕ ಶೆಕ್ಕಿ, ಭಾರತಿ ಪಾಟೀಲ, ವಿದ್ಯಾಶ್ರೀ ಮುರಗೋಡ, ಗೌರವ್ವ ಪಾಟೀಲ, ಶೋಭಾಕದಂ, ಸಂಘದ ಪ್ರಧಾನ ಕಾರ್ಯದರ್ಶಿಚನ್ನಬಸಪ್ಪ ಬಗನಾಳ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.



ಪಟ್ಟಣಕುಡಿಯಲ್ಲಿ 77.40 ಲಕ್ಷ ರೂ. ಮೊತ್ತದ ಕಾಮಗಾರಿಗೆ ಭೂಮಿಪೂಜೆ

ಚಿಕ್ಕೋಡಿ: ಪಟ್ಟಣಕುಡಿ ಗ್ರಾಮದಲ್ಲಿ ರಸ್ತೆ, ಚರಂಡಿ, ಸಮುದಾಯ ಭವನ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಶಾಸಕ ಗಣೇಶ ಹುಕ್ಕೇರಿ ಹಾಗೂ ವಿಧಾನ ಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ ಪ್ರಯತ್ನದಿಂದ ಗ್ರಾಮ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ ಎಂದು ಪಟ್ಟಣಕುಡಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ವಿದ್ಯಾಧರ ಕಾಗೆ ಹೇಳಿದರು.

ತಾಲೂಕಿನ ಪಟ್ಟಣಕುಡಿಯಲ್ಲಿ ಶಾಸಕ ಗಣೇಶ ಹುಕ್ಕೇರಿ ಹಾಗೂ ವಿಧಾನಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ ಪ್ರಯತ್ನದಿಂದ ಬಿಡುಗಡೆಯಾದ 77.40 ಲಕ್ಷ ರೂ. ಮೊತ್ತದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಈಗಾಗಲೇ 2 ಕೋಟಿ ರೂ. ಮೊತ್ತದಲ್ಲಿ ಶಾಂತಿನಗರ ರಸ್ತೆ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, 75 ಲಕ್ಷ ರೂ. ಮೊತ್ತದಲ್ಲಿ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಹೇಳಿದರು.

50 ಲಕ್ಷ ರೂ. ಮೊತ್ತದಲ್ಲಿ ಪಟ್ಟಣಕುಡಿ ಗ್ರಾಮದಲ್ಲಿ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿ, 27.40 ಲಕ್ಷ ರೂ. ಮೊತ್ತದಲ್ಲಿ ನಾಯಿಂಗ್ಲಜ-ಶಾಂತಿನಗರ ರಸ್ತೆಗೆ ಹೊಂದಿಕೊಂಡು ತಡೆಗೋಡ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆಯನ್ನು ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಸುಕುಮಾರ ಡಿಗ್ರೆ, ಲಖನ್ ಪರೀಟ, ಶಾನಬಾಜ ಮುಲ್ಲಾ, ಅನಿಲ ಮಾಳಿ, ಅಣ್ಣಪ್ಪ ಬೇರಡ, ಇಮ್ರಾನ್ ಮುಲ್ಲಾ, ಪಾಂಡುರಂಗ ಚಂದಗುಡೆ, ಅಣ್ಣಪ್ಪ ಕದಮ, ರವಿ ಖೋತ, ಮಹಾವೀರ ಠಾಣೆ, ರಾಜು ಸುಲ್ತನ್ನವರ, ರಾವಸಾಹೇಬ ಪಾಟೀಲ, ಅಶೋಕ ನಾಯಿಕ, ಅಣ್ಣಪ್ಪ ಗೌರಾಯಿ, ಗುತ್ತಿಗೆದಾರ ಮಿಲಿಂದ ಸಲಗರ, ಅಮರ ಕೋಳಿ ಇತರರು ಇದ್ದರು.



ಧಾರ್ಮಿಕ ಚಿಂತನೆ ಅಗತ್ಯ: ಶ್ರೀಗಳು

ಯರಗಟ್ಟಿ: ಪ್ರಸ್ತುತ ಜಗತ್ತು ಯುದ್ಧ ಭೀತಿಯಿಂದ ತಲ್ಲಣಿಸುತ್ತಿರುವ ಪ್ರಸಕ್ತ ಸಂದರ್ಭದಲ್ಲಿ ಸಮಾಜದಲ್ಲಿ ಶಾಂತಿ, ಸಮಾಧಾನ ನೆಲೆಸಲು ಆಧ್ಯಾತ್ಮಿಕ, ಧಾರ್ಮಿಕ ಚಿಂತನೆ ಅಗತ್ಯ ಎಂದು ಮುನವಳ್ಳಿಯ ಸೋಮಶೇಖರ ಮಠದ ಮುರುಘರಾಜೇಂದ್ರ ಶ್ರೀಗಳು ಹೇಳಿದರು.

ಪಟ್ಟಣದ ಶ್ರೀ ರಾಜರಾಜೇಶ್ವರಿ ಆಶ್ರಮದಲ್ಲಿ ನಡೆದ ಎರಡನೇ ದಿನದ ಜಾತ್ರಾ ಮಹೋತ್ಸವ, 17ನೇ ವರ್ಷದ ವೇದಾಂತ ಪರಿಷತ್ತು ಹಾಗೂ ಗಣಪತಿ ಮಹಾರಾಜರ 65ನೇ ಜಯಂತೋತ್ಸವ ಕಾರ್ಯಕ್ರಮದ ಎರಡನೆಯ ದಿನದ ವೇದಾಂತ ವೇದಿಕೆಯ ಸಾನ್ನಿಧ್ಯವನ್ನು ವಹಿಸಿ ಆಶೀರ್ವಚನ ನೀಡಿದ ಅವರು ಪಾಲಕರು ಮತ್ತು ಶಿಕ್ಷಕರು ಮಕ್ಕಳಿಗೆ ಬಾಲ್ಯದಿಂದಲೇ ಶಿಕ್ಷಣದೊಂದಿಗೆ ಒಳ್ಳೆಯ ಸಂಸ್ಕಾರವನ್ನು ಬೆಳೆಸುವುದು ಅಗತ್ಯವಾಗಿದೆ ಎಂದು ಹೇಳಿದರು.

ಶ್ರೀ ಸಿದ್ಧಾರೂಢ ಮಠ ಬಳ್ಳೂರು ಹಂಪಿ ಚಿಕ್ಕಮುನವಳ್ಳಿಯ ಶ್ರೀ ವಿದ್ಯಾನಂದ ಭಾರತಿ ಮಹಾಸ್ವಾಮಿಗಳು ಹಾಗೂ ಶ್ರೀ ನಿತ್ಯಾನಂದ ಆಶ್ರಮ ಸಿಂಧೋಗಿಯ ಮುಕ್ತಾನಂದ ಮಹಾಸ್ವಾಮಿಗಳು ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ ಆಧಾರಿತ 'ವಿನಮಿತನ ಹುದರಿಂದುಪಚಾರಮುಂಟೆ' ಎಂಬ ವಿಷಯದ ಕುರಿತು ಚಿಂತನ ನಡೆಸಿದರು.

ಶ್ರೀ ರಾಜರಾಜೇಶ್ವರಿ ಆಶ್ರಮದ ವತಿಯಿಂದ ಬೆಳಗಾವಿಯ ವಿಜಯ ಆಸ್ಪತ್ರೆಯ ವೈದ್ಯರಾದ ಡಾ. ರವಿ ಪಾಟೀಲ ಅವರಿಗೆ ವೈದ್ಯರತ್ನ ಪ್ರಶಸ್ತಿ, ಡಾ. ರಾಜಶೇಖರ ಬಿರಾದಾರ ಹಾಗೂ ಡಾ. ಕುಮಾರ ದಾಸರ ಅವರಿಗೆ ರಾಜರಾಜೇಶ್ವರಿ ಜ್ಞಾನರತ್ನ ಪ್ರಶಸ್ತಿ, ಸುರೇಶ್ ಗೌಡರ ಹಾಗೂ ಕೆಂಚಪ್ಪ ಬೆಳ್ಳಿಕುಂಪಿ ಅವರಿಗೆ ರಾಷ್ಟ್ರ ಸೇವಾ ಗೌರವ ರತ್ನ ಪ್ರಶಸ್ತಿ, ಡಿ ಮನೋಹರ ಹಾಗೂ ಪಿಎಂ ತಳವಾರ ಅವರಿಗೆ ಜ್ಞಾನಜ್ಯೋತಿ ಪ್ರಶಸ್ತಿ ರಾಜೇಂದ್ರಗೌಡ ಪಾಟೀಲ ಹಾಗೂ ಮಡಿವಾಳಪ್ಪ ಹೊನ್ನೂರ ಅವರಿಗೆ ಕೃಷಿ ಕಿರಣ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರದ ಶಾಸಕರಾದ ವಿಶ್ವಾಸ ವೈದ್ಯ, ಬೆಳಗಾವಿಯ ವಿಜಯ ಆಸ್ಪತ್ರೆಯ ವೈದ್ಯರಾದ ಡಾ. ರವಿ ಪಾಟೀಲ, ಗೋಕಾಕದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಜಿ.ಬಿ. ಬಳಿಗಾರ, ಡಾ. ರಾಜಶೇಖರ ಬಿರಾದಾರ, ಡಾ. ಕುಮಾರ ದಾಸರ, ಡಾ. ಸಂತೋಷ ಮಾದರ, ಮನೋಹರ ಹಾಗೂ ಕುಮಾರ ಹಿರೇಮಠ ಅವರು ಮಾತನಾಡಿದರು.

ಯರಗಟ್ಟಿ ತಹಸೀಲ್ದಾರರಾದ ಎಂ. ವೈ. ಗುಂಡಪ್ಪಗೋಳ, ಮುರಗೋಡ ಸಿ. ಪಿ. ಐ. ಮಠಪತಿ, ರಾಜು ಶೆಟ್ಟಿ, ಭಾಸ್ಕರ ಹಿರೇಮೇತ್ರಿ, ರಾಜೇಂದ್ರ ವಾಲಿ ಸೇರಿದಂತೆ ಯರಗಟ್ಟಿ ಹಾಗೂ ಸುತ್ತಲಿನ ಗ್ರಾಮಗಳ ಸದ್ಭಕ್ತರು ಹಾಜರಿದ್ದರು. ಎಂ. ಬಿ. ಕಟ್ಟಿಯವರು ನಿರೂಪಿಸಿದರು. ಆಶಾ ಪರೀಟ ವಂದಿಸಿದರು.



ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಕರ್ನಾಟಕ ಪಬ್ಲಿಕ್ ಶಾಲೆ ಸಾಧನೆ

ರಾಯಬಾಗ: ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾಗಿದ್ದು, ಕರ್ನಾಟಕ ಪಬ್ಲಿಕ್ ಶಾಲೆಯ ಒಟ್ಟು 79 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಅದರಲ್ಲಿ 71 ವಿದ್ಯಾರ್ಥಿಗಳು ಉತ್ತೀರ್ಣ ರಾಗಿರುತ್ತಾರೆ. ನಿರ್ಮಲಾ ದಯಾನಂದ ಮೇತ್ರಿ 584 (93.44) ಅಂಕ ಪಡೆದು ಸಾಧನೆ ಮಾಡಿ ಶಾಲೆಗೆ ಪ್ರಥಮ ಸ್ಥಾನ ಪಡೆದಿರುತ್ತಾಳೆ. ಸುನಿಲ್ ಭುಜಪ್ಪ ನಾಯಿಕ್ವಾಡಿ 563 ಅಂಕ (90.08) ಪಡೆದು ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ., ಹಾಲಪ್ಪ ಸಿದ್ದಪ್ಪ ನಾಯಿಕ್ 549 (ಶೇ.87.84)ಅಂಕ ಪಡೆದು ತೃತೀಯ ಸ್ಥಾನದಲ್ಲಿ ಸಾಧನೆ ಗೈದಿದ್ದಾರೆ. ಸಾಕ್ಷಿ ರಾಮಚಂದ್ರ ಕೊಚೇರಿ, 544 (87.04) ಅಂಕ ಪಡೆದು ಸಾಧನೆಗೈದಿದ್ದಾಳೆ. ಸಮಾಜ ವಿಜ್ಞಾನ ವಿಷಯದಲ್ಲಿ ಅಕ್ಕವ್ವ ಪ್ರಧಾನಿ ಗಡ್ಕರಿ 100ಕ್ಕೆ 100ರಷ್ಟು ಸಾಧನೆ ತೋರಿದ್ದಾಳೆ. ಒಟ್ಟಾರೆ ಶಾಲೆಯ ಫಲಿತಾಂಶ ಶೇ.90ರಷ್ಟು ದಾಖಲಾಗಿದ್ದು, ಶಾಲೆ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು ಹಾಗೂ ಶಾಲೆ ಉಪ ಪ್ರಾಚಾರ್ಯರು, ಗುರು ಬಳಗ, ಸರ್ವ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳಿಗೆ ಶುಭ ಕೋರಿ ಹರ್ಷ ವ್ಯಕ್ತಪಡಿಸಿರುತ್ತಾರೆ.





ಗ್ರಾಮಗಳ ಅಭಿವೃದ್ಧಿಗೆ ಸರ್ಕಾರ ಬದ್ಧ: ಸಚಿವ ಜಾರಕಿಹೊಳಿ

ಬೆಳಗಾವಿ: ಗ್ರಾಮಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರಗಳಿಂದ ಅನೇಕ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಗಳು ತಳ ಮಟ್ಟದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ಪಂಚಾಯತ ರಾಜ್ ಇಲಾಖೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಅವರು ಹೇಳಿದರು.

ಶನಿವಾರ ಸುವರ್ಣ ವಿಧಾನ ಸೌಧದ ಸೆಂಟ್ರಲ್ ಹಾಲನಲ್ಲಿ ಜರುಗಿದ ರಾಷ್ಟ್ರೀಯ ಪಂಚಾಯತ ರಾಜ್ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜನರಿಂದ ಜನರಿಗಾಗಿ ನಡೆಯುವ ಆಡಳಿತ ಗ್ರಾಮ ಮಟ್ಟದಲ್ಲೇ ಆರಂಭವಾಯಿತು. ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಈ ಮೂರು ಹಂತಗಳ ವ್ಯವಸ್ಥೆಯಡಿ ಗ್ರಾಮಗಳ ಅಭಿವೃದ್ಧಿಗೆ ಬಲವಾದ ಅಡಿಪಾಯ ಹಾಕಲಾಗಿದೆ ಎಂದರು.

ಗ್ರಾಮಗಳ ಅಭಿವೃದ್ಧಿಗಾಗಿ ಸರಕಾರ ಸದಾ ಬದ್ಧವಾಗಿದೆ. ಮಹಾತ್ಮಾ ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕನಸು ನನಸಾಗಿಸಲು ರಾಜ್ಯ ಸರಕಾರವು ಗ್ರಾಮ ಆಡಳಿತಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ ಮಾತನಾಡಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ ಶಿಂಧೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷರಾದ ಮಹಾಂತೇಶ ಕೌಜಲಗಿ, ಶಾಸಕರುಗಳಾದ ಬಾಬಾಸಾಹೇಬ ಪಾಟೀಲ, ಗಣೇಶ ಹುಕ್ಕೇರಿ, ಆಸೀಫ್ ಸೇಠ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷರಾದ ವಿನಯ ನಾವಲಗಟ್ಟಿ, ಬುಡಾ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಸಂಜಯ ಶೆಟ್ಟಣ್ಣವರ, ಪೋಲಿಸ್ ಆಯುಕ್ತರಾದ ಬೋರಸೆ ಗುಲಾಬರಾವ್ ಭೂಷಣ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಸೇರಿದಂತೆ ಮತ್ತಿತರರು ಇದ್ದರು.

ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ಬಸವರಾಜ ಹೆಗನಾಯಕ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಪ್ರಾರ್ಥನಾ ಪಾಟೀಲ ಅವರನ್ನು ಹಾಗೂ ಪಂಚಾಯತ ರಾಜ್ ಇಲಾಖೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಅಧಿಕಾರಿ, ಸಿಬ್ಬಂದಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಗಣ್ಯರುಗಳು ಸನ್ಮಾನಿಸಿ ಗೌರವಿಸಿದರು.



ಪ್ರಜಾಪ್ರಭುತ್ವದ ಆಧಾರಸ್ತಂಭ

ಬೆಳಗಾವಿ: ದೇಶದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯು ಪ್ರಜಾಪ್ರಭುತ್ವದ ಆಧಾರಸ್ತಂಭವಾಗಿ ಕೆಲಸ ನಿರ್ವಹಿಸುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು. ಅಧಿಕಾರ ವಿಕೇಂದ್ರೀಕರಣದಲ್ಲಿ ಪಂಚಾಯತ್ ರಾಜ್ ಇಲಾಖೆ ಪ್ರಮುಖ ಪಾತ್ರವಹಿಸಿದೆ ಎಂದು ಹೇಳಿದರು. ಪಂಚಾಯತ್ ರಾಜ್ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಿದ್ದು ನಮ್ಮ ಕಾಂಗ್ರೆಸ್ ಪಕ್ಷ. ಮಹಾತ್ಮ ಗಾಂಧಿ ಕಂಡ ಕನಸುಗಳಲ್ಲಿ ಒಂದು ಗ್ರಾಮಸ್ವರಾಜ್, ಇನ್ನೊಂದು ಮಹಿಳಾ ಅಭಿವೃದ್ಧಿ. ಮಹಿಳೆಯರಿಗೆ ಹೆಚ್ಚು ಹತ್ತಿರವಾಗಿರುವ ಮತ್ತೊಂದು ಇಲಾಖೆ ಎಂದರೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಎಂದರು. ಗ್ರಾಮದ ಸಮಸ್ಯೆಗಳಿಗೆ ಗ್ರಾಮದಲ್ಲೇ ಪರಿಹಾರ ಕಂಡುಕೊಳ್ಳುವುದು, ಜನರು ತಮ್ಮ ಅಭಿವೃದ್ಧಿಯಲ್ಲಿ ತಾವೇ ಭಾಗಿಯಾಗುವುದು, ಇದೇ ಪಂಚಾಯತ್ ರಾಜ್ ವ್ಯವಸ್ಥೆಯ ಉದ್ದೇಶ ಎಂದು ಹೇಳಿದರು. ಅಭಿವೃದ್ಧಿ ವಿಷಯದಲ್ಲಿ ಜನಪ್ರತಿನಿಧಿಗಳ ಜೊತೆ ಕೈಜೋಡಿಸುವುದೇ ಮೊದಲಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ). ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುವ 50ಕ್ಕೂ ಹೆಚ್ಚು ಗ್ರಾಮ ಪಂಚಾಯತಿಗಳಲ್ಲಿ ಪಿಡಿಓಗಳು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ನಾನು ತರುವ ಅನುದಾನವನ್ನು ಸಮರ್ಪಕವಾಗಿ ಬಳಸಲಾಗುತ್ತಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

ಅಥಣಿ: ಸ್ಥಳೀಯ ಜೆ ಇ ಶಿಕ್ಷಣ ಸಂಸ್ಥೆಯ ಶ್ರೀ ಪ್ರತಾಪ್ ಜಾಧವಜಿ ಬಾಟೆ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಆದೀತಿ ವ್ಹಿ ಕುಲಕರ್ಣಿ 625 ಕ್ಕೆ 613 (98.80), ಆರ್ಯ ಎಮ್ ಕಟವಟೆ 625 ಕ್ಕೆ 605 (96.80), ಪ್ರತೀಕ್ಷಾ ಎಮ್ ಬನಸೋಡೆ 625 ಕ್ಕೆ 559 (89.44) ಸೇರಿದಂತೆ ಅನೇಕ ವಿದ್ಯಾರ್ಥಿಗಳು 625 ಕ್ಕೆ 545 (87.2) ಪ್ರತಿ ಶತ ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ,ದ್ವಿತಿಯ, ತೃತೀಯ ಸ್ಥಾನಗಳನ್ನು ಪಡೆದ ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿಯು ಗೌರವಿಸಿ ಸನ್ಮಾನಿಸಿ ಅಭಿನಂದಿಸಿ ಶುಭ ಹಾರೈಸಿದರು.

ಈ ವೇಳೆ ಸಂಸ್ಥೆಯ ಕಾರ್ಯಾಧ್ಯಕ್ಷ ಡಾ,ರಾಮ ಕುಲಕರ್ಣಿ, ಉಪ ಕಾರ್ಯಾಧ್ಯಕ್ಷ ಸಂದೀಪ ಸಂಗೂರಾಮ,ಜಂಟಿ ಕಾರ್ಯದರ್ಶಿ ಆನಂದ ಟೋಣಪಿ, ಆಡಳಿತ ಮಂಡಳಿ ಸದಸ್ಯರು ಶ್ರೀವತ್ಸ ಕುಲಕರ್ಣಿ, ಶ್ರೀರಂಗ ಜೋಶಿ,ಅಥರ್ವ ದೇಶಪಾಂಡೆ, ಮುಖ್ಯೋಪಾಧ್ಯಾಯ ಆರ್ ಡಿ ದೊಡಮನಿ, ಎಸ್. ಎಚ್. ಪಾಟೀಲ, ಡಿ.ಟಿ. ಪಾಟೀಲ ಸೇರಿದಂತೆ ಸರ್ವ ಸದಸ್ಯರು ಹಾಗೂ ಸಹ ಶಿಕ್ಷಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಕಿರುಸುದ್ದಿ

ಮದಭಾವಿ ಸರ್ಕಾರಿ ಪ್ರೌಢ ಶಾಲೆಯ ಮಕ್ಕಳ ಸಾಧನೆ



ಮಹಾಲಿಂಗಪುರ: ಸಮೀಪದ ಮದಭಾವಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಮಕ್ಕಳು ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಪಡೆದು ಮತ್ತೆ ಗ್ರಾಮೀಣ ಪ್ರದೇಶದ ಕನ್ನಡ ಮಾಧ್ಯಮದಲ್ಲಿ ಓದಿದರೂ ಪಟ್ಟಣ ಪ್ರದೇಶದ ಆಂಗ್ಲ ಮಾಧ್ಯಮದ ಮಕ್ಕಳಿಗಿಂತ ಯಾವುದರಲ್ಲೂ ತಾವು ಕಮ್ಮಿ ಇಲ್ಲ ಎಂಬುದನ್ನು ಸಾಬೀತು ಮಾಡಿದ್ದಾರೆ. ಸುಪ್ರೀತಾ ಮುಗಳಖೋಡ 613(98.08%) ಪ್ರಥಮ, ಸೌಭಾಗ್ಯ ಸು.ತಿಮ್ಮಾಪುರ 611(97.79%) ಕಲ್ಮೇಶ ಮಟಗಾರ ಮತ್ತು ಸೃಷ್ಟಿ ಡುಮ್ಮನ್ನವರ ತಲಾ 578 ಅಂಕದೊಂದಿಗೆ ತೃತೀಯ ಸ್ಥಾನ ಪಡೆದಿದ್ದು ಪರೀಕ್ಷೆಗೆ ಕುಳಿತ 76 ವಿದ್ಯಾರ್ಥಿಗಳಲ್ಲಿ 69 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶಾಲೆಯು 90.78% ಫಲಿತಾಂಶ ಪಡೆದಿದ್ದು, ಎಸ್ ಡಿಎಂಸಿ ಅಧ್ಯಕ್ಷ ಸದಾಶಿವ ಪಟ್ಟಣಶೆಟ್ಟಿ, ಉಪಾಧ್ಯಕ್ಷ ನಾರಾಯಣ ಸುತಾರ, ಮುಖಂಡರಾದ ವಿನೋದಗೌಡ ಉಳ್ಳಾಗಡ್ಡಿ, ಮುಖ್ಯೋಪಾಧ್ಯಾಯ ಆಯ್.ಜಿ.ಯರಗಾಣಿ ಮತ್ತು ಗುರುವೃಂದ ಸಾಧಕ ಮಕ್ಕಳ ಮನೆಗಳಿಗೆ ತೆರಳಿ ಸನ್ಮಾನಿಸಿ ಅಭಿನಂದಿಸಿದರು.

ಉತ್ತಮ ಫಲಿತಾಂಶ



ಗುಳೇದಗುಡ್ಡ: ಪಟ್ಟಣದ ಬಾಲಕೀಯರ ಸರ್ಕಾರಿ ಪ್ರೌಢ ಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.96.61ರಷ್ಟು ಫಲಿತಾಂಶ ಬಂದಿದ್ದು, 171 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು ಉಪಪ್ರಾಚಾರ್ಯ ಎಂ.ಪಿ.ಮಾಗಿ ತಿಳಿಸಿದ್ದಾರೆ. ಪರೀಕ್ಷೆಗೆ 177 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು, ಅದರಲ್ಲಿ 171 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 20 ವಿದ್ಯಾರ್ಥಿಗಳು ಡಿಸ್ಟಿಂಗಶನ್, 81 ವಿದ್ಯಾರ್ಥಿಗಳು ಪ್ರಥಮ ಶ್ರೇಣೀಯಲ್ಲಿ, 38 ದ್ವಿತಿಯ ಶ್ರೇಣೀಯಲ್ಲಿ, 31 ವಿದ್ಯಾರ್ಥೀಗಳು ಉತ್ತಿರ್ಣರಾಗಿದ್ದಾರೆ. ನವಶ್ರೀ ಪಾಟೀಲ 616 ಅಂಕ ಪಡೆದು ಶಾಲೆಗೆ ಪ್ರಥಮ ಬಂದಿದ್ದು, ಅಲ್ಲದೇ ಗುಳೇದಗುಡ್ಡ ವಲಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ಸುಧಾ ಮುತ್ತಲಗೇರಿ 601 ಅಂಕ ಪಡೆದು ದ್ವಿತಿಯ, ಹುಮೆರಾ ನಬೀವಾಲೆ 598 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ ಎಂದು ಉಪಪ್ರಾಚಾರ್ಯ ಎಂ.ಪಿ.ಮಾಗಿ ತಿಳಿಸಿದ್ದಾರೆ.

ಸತ್ಸಂಗ ಕಾರ್ಯಕ್ರಮ ಇಂದು

ಜಮಖಂಡಿ: ತಾಲೂಕಿನ ಹುಲ್ಯಾಳ ಗ್ರಾಮದ ಶ್ರೀಗುರುದೇವಾಶ್ರಮದ ಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಏ.26ರಂದು ಸಂಜೆ 6.30 ಗಂಟೆಗೆ ನಾಲ್ಕನೇ ಭಾನುವಾರದ ಮಾಸಿಕ ಕಾರ್ಯಕ್ರಮ ಶ್ರೀಗುರುದೇವ ಸತ್ಸಂಗ ಹಮ್ಮಿಕೊಳ್ಳಲಾಗಿದೆ ಎಂದು ಹರ್ಷಾನಂದ ಸ್ವಾಮಿಗಳು ತಿಳಿಸಿದ್ದಾರೆ. ತಾಲೂಕಿನ ಹಿಪ್ಪರಗಿ ಗ್ರಾಮದ ಸಿದ್ಧಾರೂಢ ಶರಣರು ಹಾಗೂ ಕಾಜಿಬೀಳಗಿ ಗ್ರಾಮದ ಮಲ್ಲಿಕಾರ್ಜುನ ಶರಣರು ಸುಖಕ್ಕೆ ಸಾಧನಗಳು ಯಾವುವು ವಿಷಯ ಕುರಿತು ಅನುಭಾವ ಹಂಚಿಕೊಳ್ಳುವರು. ಶ್ರೀಗುರುದೇವ ಸಂಗೀತ ಬಳಗದಿಂದ ಸಂಗೀತ ಸೇವೆ ನಡೆಯಲಿದೆ. ಆಲಬಾಳ ಗ್ರಾಮದ ಸಂಗಮೇಶ ತೇಲಿ ಅವರು ಮಹಾಪ್ರಸಾದದ ಸೇವೆ ಸಲ್ಲಿಸುವರು ಎಂದು ತಿಳಿಸಿದ್ದಾರೆ.

ಇಂದು ಗುರುವಂದನ ಕಾರ್ಯಕ್ರಮ

ಮುಧೋಳ: ಸ್ಥಳೀಯ ಕೆ.ಆರ್ ಲಕ್ಕಮ್ ಡಿ.ಇಡಿ ಕಾಲೇಜಿನ 2009– 11ನೇ ಸಾಲಿನ ಪ್ರಶಿಕ್ಷಣಾರ್ಥಿಗಳಿಂದ ಗುರುವಂದನ ಹಾಗೂ ಸ್ನೇಹ ಸಂಗಮ ಕಾರ್ಯಕ್ರಮ ಏ.26ರಂದು ಭಾನುವಾರ ಬೆಳಗ್ಗೆ 10 ಗಂಟೆಗೆ ಕೆ.ಆರ್. ಲಕ್ಕಂ ವಿದ್ಯಾಲಯದಲ್ಲಿ ನಡೆಯಲಿದೆ. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪ.ಪೂ ಲಕ್ಷ್ಮಣ ಗುರೂಜಿ ಧರ್ಮಾಧಿಕಾರಿಗಳು ಸುರಗಿರಿ ಬೆಟ್ಟ ಕುಂದರಗಿ, ಅಧ್ಯಕ್ಷತೆ ಎಸ್.ಬಿ ಮಾಯಾಚಾರಿ ವಿಶ್ರಾಂತ ಪ್ರಾಂಶುಪಾಲರು, ಉಪನ್ಯಾಸಕರಾಗಿ ರಾಯಲ್ ಶಾಲೆ ಆಡಳಿತಧಿಕಾರಿ ಇಂದಿರಾ ಸಾತನೂರು, ಮುಖ್ಯ ಅತಿಥಿಗಳಾಗಿ ಎ.ಎಸ್ .ಬಿರಾದಾರ ಮುಖ್ಯಗುರು ಕೆ.ಆರ್ ಲಕ್ಕಮ್ ಪ್ರೌಢಶಾಲೆ ಮತ್ತು ಅತಿಥಿಗಳಾಗಿವಿವಿಧ ಕಾಲೇಜಿನ ಉಪನ್ಯಾಸಕರು ಆಗಮಿಸುವರೆಂದು ಪ್ರಶಿಕ್ಷಣಾರ್ಥಿ ಮಂಜುನಾಥ್ ಭಜಂತ್ರಿ ತಿಳಿಸಿದ್ದಾರೆ.



ಇಳಕಲ್: ಎಸಿಒ ಕನ್ನಡ ಮಾಧ್ಯಮ ಪ್ರೌಢಶಾಲೆಯ ಎಸ್ ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಸ್ವಪ್ನಾ ಆರ್.ಬುದಾರಪುರ ಹಾಗೂ ಅನನ್ಯಾ ಬಿ.ನೀಲಪ್ಪಗೋಳ ಮುಂತಾದ ವಿದ್ಯಾರ್ಥಿಗಳ ಮನೆಗೆ ತೆರಳಿ ವಿದ್ಯಾರ್ಥಿನಿಯರನ್ನು ಅಭಿನಂದಿಸಿದ್ದಾರೆ. ಮುಖ್ಯೋಪಾಧ್ಯಾಯ ಬಸವರಾಜ ಕವಡಿಮಟ್ಟಿ ಅವರ ನೇತೃತ್ವದಲ್ಲಿ ಶಿಕ್ಷಕ-ಶಿಕ್ಷಕಿಯರು ವಿದ್ಯಾರ್ಥಿನಿಯರನ್ನು ಅಭಿನಂದಿಸಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬಾಗಲಕೋಟೆ: ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 90ಕ್ಕೂ ಹೆಚ್ಚು ಅಂಕಗಳಿಸಿದ ಪತ್ರಕರ್ತರ ಮಕ್ಕಳ ಪ್ರತಿಭಾ ಪುರಸ್ಕಾರಕ್ಕಾಗಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ)ಅರ್ಜಿ ಆಹ್ವಾನಿಸಿದೆ. ವಿದ್ಯಾರ್ಥಿಯ ಅಂಕ ಪಟ್ಟಿಯ ನಕಲನ್ನು ಶಾಲಾ, ಕಾಲೇಜಿನ ಮುಖ್ಯಸ್ಥರಿಂದ ದೃಢೀಕರಿಸಿರಬೇಕು. ಸಂಘದ ಸದಸ್ಯರ ಆಧಾರ್ ಮತ್ತು ವಿದ್ಯಾರ್ಥಿಯ ಆಧಾರ್ ಝರಾಕ್ಸ್ ಮತ್ತು ಸಂಘದ ಐಡಿ ಕಾರ್ಡ್ (ಕಡ್ಡಾಯ) ಜೆರಾಕ್ಸ್ ಹಾಗೂ ವಿದ್ಯಾರ್ಥಿಯ ಭಾವಚಿತ್ರ ಸಹಿತ ಅರ್ಜಿ ಸಲ್ಲಿಸಬೇಕು. (ವಿದ್ಯಾರ್ಥಿ ಭಾವಚಿತ್ರ ಹಿಂಬದಿ ತಪ್ಪದೇ ಅವರ ಹೆಸರು ಬರೆಯಿರಿ) ಶೇ.90ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಸಂಘವು ನಿಗಧಿಪಡಿಸಿರುವ ನಮೂನೆಯಲ್ಲಿ ಜಿಲ್ಲಾ ಸಂಘದ ದೃಢೀಕರಣದೊಂದಿಗೆ 10-5-2026 ರೊಳಗಾಗಿ ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, 3ನೇ ಮಹಡಿ, ಕಂದಾಯ ಭವನ, ಕೆಜಿ ರಸ್ತೆ, ಬೆಂಗಳೂರು-09 ಇಲ್ಲಿಗೆ ತಲಪುವಂತೆ ಕಳುಹಿಸಬೇಕು. ಅರ್ಜಿ ಮತ್ತು ಇತರೆ ಮಾಹಿತಿಗಾಗಿ ಜಿಲ್ಲಾ ಸಂಘವನ್ನು ಸಂಪರ್ಕಿಸಿ ಪಡೆಯಬೇಕು ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಗದೀಶ ಎಂ.ಗಾಣಿಗೇರ ತಿಳಿಸಿದ್ದಾರೆ.



ಬಾದಾಮಿ: ಸಮೀಪದ ಚಿಕ್ಕಮುಚ್ಚಳಗುಡ್ಡ ಮುರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿ ಪ್ರಿಯಾಂಕ ಬಸವರಾಜ ಪೂಜಾರ ಇವಳು ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 609 ಅಂಕಗಳನ್ನು ಪಡೆದು ವಸತಿ ಶಾಲೆಗೆ ಪ್ರಥಮ ಸ್ಥಾನ ಪಡೆದ ಪ್ರಯುಕ್ತ ಅಧಿಕಾರಿಗಳು ಸನ್ಮಾನಿಸಿ ಗೌರವಿಸಿದರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಎಂ.ಎಸ್.ಮಳಿಮಠ, ಪ್ರಾಚಾರ್ಯ ಬಸವರಾಜ ವಾಲೀಕಾರ, ವಸತಿ ಶಾಲೆಯ ಶಿಕ್ಷಕರು, ಬೋಧಕೇತರ ಸಿಬ್ಬಂದಿ, ವಾರ್ಡನ್, ಪಾಲಕರು, ಯರಗೊಪ್ಪ ಎಸ್.ಬಿ ಗ್ರಾಮದ ಹಿರಿಯರು ಉಪಸ್ಥಿತರಿದ್ದರು.

ಡಿಸಿ, ಸಿಇಒ ಸಮೀಕ್ಷೆ ವೀಕ್ಷಣೆ | ಜನಗಣತಿಯಲ್ಲಿ ಅತ್ಯುತ್ತಮ ಸಾಧನೆ

ಶಿಕ್ಷಕಿಯರಿಗೆ ರಾಜ್ಯಪಾಲರಿಂದ ಸನ್ಮಾನ

ಬಾಗಲಕೋಟೆ: ಜಿಲ್ಲೆಯಲ್ಲಿ ನಡೆಯುತ್ತಿರುವ ಜನಗಣತಿ ಮನೆ ಮನೆ ಸಮೀಕ್ಷೆ ಕಾರ್ಯದಲ್ಲಿ ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸಿ ಅತ್ಯುತ್ತಮ ಸಾಧನೆ ಮಾಡಿದ ಜಮಖಂಡಿ ತಾಲೂಕಿನ ಶಿಕ್ಷಕಿಯರಿಯಾದ ನಂದಿನಿ ಆರ್.ಎಸ್, ರುಕ್ಮವ್ವ ವಾಲಿಕಾರ್ ಅವರನ್ನು ಜಮಖಂಡಿ ನಗರದ ಬಿಎಲ್‌ಡಿಇಎ ಸಂಸ್ಥೆಯಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಶುಕ್ರವಾರ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ಉಪ ವಿಭಾಗಾಧಿಕಾರಿ ಶ್ವೇತಾ ಬೀಡಿಕರ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಸಮೀಕ್ಷೆ ವೀಕ್ಷಿಸಿದ ಡಿಸಿ, ಸಿಇಒ ಜಿಲ್ಲೆಯಲ್ಲಿ ನಡೆಯುತ್ತಿರುವ ಮನೆಮನೆ ಜನಗಣತಿ ಸಮೀಕ್ಷೆಯ ಭಾಗವಾಗಿ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿ.ಪಂ ಸಿಇಒ ಶಶಿಧರ ಕುರೇರ ಅವರು ಸ್ವತಃ ಕ್ಷೇತ್ರಕ್ಕೆ ಭೇಟಿ ನೀಡಿ ಸಮೀಕ್ಷಾ ಕಾರ್ಯದಲ್ಲಿ ಪಾಲ್ಗೊಂಡು, ಸಮೀಕ್ಷಾ ತಂಡದೊಂದಿಗೆ ಮನೆ ಮನೆಗೆ ತೆರಳಿ ಸಾರ್ವಜನಿಕರಿಂದ ಮಾಹಿತಿಯನ್ನು ಸಂಗ್ರಹಿಸುವ ಕಾರ್ಯವನ್ನು ನೇರವಾಗಿ ಪರಿಶೀಲಿಸಿದರು.



ಶುಕ್ರವಾರ ಜಮಖಂಡಿಯ ಪ್ರಭಾತ ನಗರ ಹಾಗೂ ಕಡಪಟ್ಟಿಯ ಗ್ರಾಮೀಣ ಭಾಗ, ಮುಧೋಳ ತಾಲೂಕಿನ ಲೋಕಾಪೂರ ಪಟ್ಟಣದಲ್ಲಿರುವ ಕೆಲವೊಂದು ಮನೆಗಳಿಗೆ ಭೇಟಿ ನೀಡಿ ಮನೆಮನೆ ಜನಗಣತಿ ಸಮೀಕ್ಷೆ ಕಾರ್ಯವನ್ನು ಪ್ರತ್ಯಕ್ಷವಾಗಿ ವೀಕ್ಷಣೆ ಮಾಡಿ, ಸಮೀಕ್ಷೆ ನಡೆಸುತ್ತಿರುವ ತಂಡದ ಸದಸ್ಯರೊಂರಿಗೆ ಮಾತನಾಡಿದ ಜಿಲ್ಲಾಧಿಕಾರಿಗಳು ಮಾಹಿತಿಯನ್ನುನಿಖರವಾಗಿಮತ್ತುಸಂಪೂರ್ಣವಾಗಿ ದಾಖಲಿಸುವಂತೆ ಸೂಚನೆ ನೀಡಿದರು. ಯಾವುದೇ ಮನೆ ಬಿಟ್ಟು ಹೋಗದಂತೆ ನೋಡಿಕೊಂಡು ಮಾಹಿತಿ ಸರಿಯಾಗಿ ದಾಖಲಿಸಬೇಕೆಂದು ತಿಳಿಸಿದರು.

ಜಿಪಂ ಸಿಇಒ ಶಶಿಧರ ಕುರೇರ ಮಾತನಾಡಿ, ಮನೆ ಮನೆಗೆ ಗಣತಿದಾರರು ಬಂದಾಗ ಸರಿಯಾದ ಮಾಹಿತಿಯನ್ನು ನೀಡುವ ಮೂಲಕ ಸಹಕರಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು. ಜನಗಣತಿ ಅಂಕಿ-ಅಂಶಗಳು ಸರ್ಕಾರದ ಯೋಜನೆ ರೂಪಿಸಲು ಆಧಾರವಾಗಿರುವುದರಿಂದ ಎಲ್ಲರೂ ಜವಾಬ್ದಾರಿಯಿಂದ ಭಾಗವಹಿಸಬೇಕು ಎಂದು ಹೇಳಿದರು. ಪರಿಶೀಲನೆ ಸಂದರ್ಭದಲ್ಲಿ ಉಪ ವಿಭಾಗಾಧಿಕಾರಿ ಶ್ವೇತಾ ಬೀಡಿಕರ, ಜಮಖಂಡಿ

ಸಾಮೂಹಿಕ ವಿವಾಹ ಬಡವರಿಗೆ ವರದಾನ

ಗುಳೇದಗುಡ್ಡ: ಆಡಂಬರದ, ದುಂದುವೆಚ್ಚದ ಮದುವೆಗಾಗಿ ಸಾಲಸೋಲ ಮಾಡಿ ಜೀವನಪೂರ್ತಿ ಸಂಕಷ್ಟಕ್ಕೆ ಸಿಲುಕ ಬೇಕಾಗುತ್ತದೆ. ಆದರೆ ಸಾಮೂಹಿಕ ವಿವಾಹಗಳು ದುಂದುವೆಚ್ಚಕ್ಕೆ ಕಡಿವಾಣ ಹಾಕಿ, ಪಾಲಕರ ಆರ್ಥಿಕ ಹೊರೆಯನ್ನು ಇಳಿಸುತ್ತವೆ ಅಲ್ಲದೆ ಮಧುಮಕ್ಕಳ ಜೀವನ ಸುಂದರವಾಗಿಸುತ್ತವೆ. ಸಾಮೂಹಿಕ ಮದುವೆಗಳು ಬಡವರಿಗೆ ವರದಾನವಾಗಿದ್ದು, ಸಮಾಜದಲ್ಲಿ ಸಾಮೂಹಿಕ ಮದುವೆಗಳು ಹೆಚ್ಚುಹೆಚ್ಚು ನಡೆಯಬೇಕು ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ ಹೇಳಿದರು.

ಸಮೀಪದ ಪರ್ವತಿ ಗ್ರಾಮದಲ್ಲಿ ರಾಜಋಷಿ ಭಗೀರಥ ಉಪ್ಪಾರರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಭಗೀರಥ ಮಹಾಋಷಿ ಜಯಂತ್ಯೋತ್ಸವ ಹಾಗೂ ಸರ್ವಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿ, ನವದಂಪತಿಗಳು ದಾಂಪತ್ಯ ಜೀವನದಲ್ಲಿ ಒಬ್ಬರಿಗೊಬ್ಬರು ಅರಿತುಕೊಂಡು ಕಷ್ಟ ಸುಖಗಳನ್ನು ಸಮಾನವಾಗಿ ಸ್ವೀಕರಿಸಿ, ಬದುಕು ಸಾಗಿಸಬೇಕು ಎಂದರು.

ಮುರುಘಾಮಠದ ಕಾಶೀನಾಥ ಸ್ವಾಮೀಜಿ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಸಾಮೂಹಿಕ ವಿವಾಹ ಅತ್ಯಂತ ಶ್ರೇಷ್ಠವಾದದ್ದು, ಇದು ಸೌಭಾಗ್ಯವಂತರ ಮದುವೆ. ನವದಾಂಪತ್ಯಕ್ಕೆ ಕಾಲಿಟ್ಟಿರುವ ನವದಂಪತಿಗಳು ಕಷ್ಟಸುಖಗಳಲ್ಲಿ ಭಾಗಿಯಾಗಿ, ಹಿರಿಯ ಮಾರ್ಗದರ್ಶನದಲ್ಲಿ ಸುಂದರವಾದ



ಬದುಕು ಕಟ್ಟಿಕೊಳ್ಳಬೇಕು ಎಂದರು.

9 ಜೋಡಿ ವಧುವರರು ನವಜೀವನಕ್ಕೆ ಕಾಲಿಟ್ಟರು. ಹುಲಿಕಟ್ಟಿ ಆಶ್ರಮದ ಭಾರ್ಗವಾನಂದಗಿರಿ ಸ್ವಾಮೀಜಿ, ಗುರುಸಿದ್ದೇಶ್ವರ ಮಠದ ಗುರುಸಿದ್ಧ ಪಟ್ಟದಾರ್ಯ ಸ್ವಾಮಿಗಳು, ಸಾನಿಧ್ಯ ವಹಿಸಿ ಮಾತನಾಡಿದರು. ಬಸನಗೌಡ ಗೌಡ್ರ, ಮಹಾಂತೇಶ ಸರಗಣಾಚಾರಿ, ನಿಂಗಪ್ಪ ಗಾಜಿ, ಮಳಿಯಪ್ಪ ಹಾವಡಿ, ರಾಮಣ್ಣ ಪೂಜಾರಿ, ನಾಗೇಶ ಹಾವಡಿ, ಹನಮಂತ ಶೆಡ್ಡಿ, ಕಾಶಪ್ಪ ಆಸಂಗಿ, ಮರಿಯಪ್ಪ ತೋಗುಣಶಿ, ಗಂಗಾಧರ ಆಸಂಗಿ, ಮುದಕಪ್ಪ ನರಿ, ಮುಕುಂದಪ್ಪ ಪೂಜಾರಿ, ರಂಗಪ್ಪ ಹಾಲಕ್ಕಿ, ಮಲ್ಲೇಶ ಪೂಜಾರಿ, ಹನಮಂತ ಹುನಗುಂದ, ಯಮನಪ್ಪ ತೋಗುಣಶಿ, ರಾಜು ಪತ್ತಾರ, ಹನಮಂತ ತಳವಾರ, ಪರಸಪ್ಪ ಜೋಗಿನ, ಸತ್ಯಪ್ಪ ಜೋಗಿನ, ಮುಖ್ಯೋಪಾಧ್ಯಾಯ ಎಚ್.ಕೆ. ಗುಡೂರ, ಭೀಮಪ್ಪ ಗಾಜಿ, ಸಂಗಪ್ಪ ಹಡಪದ, ರಂಗಪ್ಪ ಗುನಾರಿ, ಹನಮಂತ ಗಾಜಿ, ಶಾಂತಪ್ಪ ಮುಶಿಗೇರಿ, ಸಣ್ಣಪ್ಪ ಡುಮ್ಮಳ್ಳಿ, ಅನ್ವರಖಾನ ಪಠಾಣ, ಮಲ್ಲೇಶ ತೋಗುಣಶಿ, ಪ್ರಕಾಶ ಪೂಜಾರಿ, ಶೇಖರಯ್ಯ ಮಾಚಕನೂರ, ರಂಗಪ್ಪ ಗುನ್ನಳ್ಳಿ, ನಾಗಪ್ಪ ಈರಣ್ಣವರ ಹಾಗೂ ರಾಜಋಷಿ ಭಗೀರಥ ಉಪ್ಪಾರರ ಸಂಘ ಹಾಗೂ ಸಮಾಜ ಬಾಂಧವರು, ಗ್ರಾಮಸ್ಥರು ಇದ್ದರು.

ಇಂದಿನಿಂದ ಉತ್ಸವ

ಗಲಗಲಿ: ಸ್ಥಳೀಯ ಪ್ರಸಿದ್ಧ ಲಕ್ಷ್ಮೀ ನರಸಿಂಹ ದೇವಸ್ಥಾನದಲ್ಲಿ ಲಕ್ಷ್ಮಿ ನರಸಿಂಹ ದೇವರ ಉತ್ಸವದ ಕಾರ್ಯಕ್ರಮ ಏ.26ರಂದು ಭಾನುವಾರದಿಂದ ಪ್ರಾರಂಭಗೊಂಡು ಮೇ 4 ಸೋಮವಾರದವರೆಗೆ ಜರುಗಲಿದೆ. ಪ್ರತಿದಿನ ಬೆಳಗ್ಗೆ ಲಕ್ಷ್ಮಿ ನರಸಿಂಹ ದೇವರಿಗೆ ಅಭಿಷೇಕ, ಹೋಮ, ಹವನ ಮಧ್ಯಾಹ್ನ ಪ್ರಸಾದ ವಿತರಣೆ ಹಾಗೂ ಸಂಜೆ ಆಕರ್ಷಕ ವಾಹನೋತ್ಸವ ಸೇರಿದಂತೆ ಮಾಲಿಸವಾಲ್ ಜರುಗಲಿದೆ. ಏ.29ರಂದು ಬುಧವಾರ ವೇದವ್ಯಾಸ ಜಯಂತಿ ಕಾರ್ಯಕ್ರಮ ಜರಗಲಿದೆ. ಏ.30ರಂದು ಗುರುವಾರ ನರಸಿಂಹ ಜಯಂತಿ ಆಚರಣೆ ನಡೆಯಲಿದೆ ಮೇ 1ರಂದು ಶುಕ್ರವಾರ ಮಧ್ಯಾಹ್ನ ತೇರಿನ ಮನೆಯಿಂದ ಗಾಲವೇಶ್ವರ ದೇವಸ್ಥಾನದವರೆಗೆ ಲಕ್ಷ್ಮಿ ನರಸಿಂಹ ದೇವರ ರಥೋತ್ಸವ ಜರುಗಲಿದೆ. ಮೇ 2ರಂದು ಶನಿವಾರ ಗೋಪಾಲ ಕವಲಿ ನಡೆಯಲಿದ್ದು, ಸದ್ಭಕ್ತರು ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ದೇವಸ್ಥಾನದ ಟ್ರಸ್ಟ್ ಕಮಿಟಿ ಮನವಿ ಮಾಡಿದ್ದಾರೆ.

ಮನಸ್ಸು ಪರಿವರ್ತನೆಗೆ ಜಾತ್ರೆಗಳು ಅಗತ್ಯ

ಬೀಳಗಿ: ಜಾತ್ರೆಗಳು ನಮ್ಮ ಹಿರಿಕರು ನಮಗೆ ಕೊಟ್ಟು ಹೋದ ಬಳುವಳಿ. ಜಾತ್ರೆಗಳಿಂದ ಮನಸ್ಸು ಪರಿಶುದ್ಧ ಮಾಡಿಕೊಳ್ಳಲು ಸಾಧ್ಯ. ಪರಿವರ್ತನೆ ಜಗದ ನಿಯಮ. ಮನಸ್ಸು ಪರಿವರ್ತನೆ ಮಾಡಿಕೊಳ್ಳಲು ಜಾತ್ರೆ ಮಾಡಬೇಕು ಎಂದು ಮುರನಾಳ ಮಳೆರಾಜೇಂದ್ರಸ್ವಾಮಿ ಮಠದಗುರುನಾಥ ಸ್ವಾಮೀಜಿ ಹೇಳಿದರು.

ತಾಲೂಕಿನ ಅರಕೇರಿ ಗ್ರಾಮದಲ್ಲಿ ಜರುಗಿದ ಗ್ರಾಮದೇವತೆ ಜಾತ್ರಾ ಮಹೋತ್ಸವದ ಧರ್ಮಸಭೆಯಲ್ಲಿ ಪಾಲ್ಗೊಂಡು ಮಾತನಾಡಿ, ಧಾರ್ಮಿಕ ಕಾರ್ಯಗಳು ಸಂಸ್ಕಾರ ಕೊಡುತ್ತವೆ. ಉತ್ತಮ ಗುರುವಿನ ಮೂಲಕ ಸಂಸ್ಕಾರ ಪಡೆಯಬೇಕು. ಪಾಲಕರು ಮಕ್ಕಳಿಗೆ ಚಿಕ್ಕವರಿದ್ದಾಗಲೇ ಉತ್ತಮ ಸಂಸ್ಕಾರ, ಶಿಕ್ಷಣ ಕೊಡಬೇಕುಎಂದು ಹೇಳಿದರು.

ಬಕ್ಕೇಶ್ವರ ಮಠದ ಬಕ್ಕಯ್ಯ ಸ್ವಾಮೀಜಿ ಮಾತನಾಡಿ, ತಾಯಿಯ ಋಣ ತೀರಿಸಲು ಸಾಧ್ಯವಿಲ್ಲ. ತಾಯಿಯಲ್ಲಿ ಏನೇ ಕಷ್ಟ, ಸುಖ ಬಂದರೂ ಸಹಿಸುವಂತ ಶಕ್ತಿ ಕೊಡಬೇಕೆಂದು ಬೇಡಿಕೊಳ್ಳಬೇಕು. ತಾಯಿ ಮತ್ತು ಗುರುವನ್ನು ನಂಬಬೇಕು.ದೇವಿಯ ಪಾರಾಯಣ ಮಾಡಬೇಕು ಎಂದರು.

ಅನಗವಾಡಿಯ ಮಾತೋಶ್ರೀ ಅನಸೂಯಾ ತಾಯಿ ಮಾತನಾಡಿದರು.

ಕೌದೇಶ್ವರ ಮಠದ ಮಾಧವಾನಂದ ಸ್ವಾಮಿಗಳು ಮಾತನಾಡಿ, ಮನುಷ್ಯನಿಗೆ ಅಧಿಕಾರ ಶಾಶ್ವತವಲ್ಲ. ಶ್ರದ್ಧಾ, ಭಕ್ತಿ ಆರಾಧನೆ ಮಾಡಿದರೆ ಬೇಡಿದ್ದನ್ನು ದೇವಿ ಕರುಣಿಸುವಳು. ಒಳ್ಳೆಯ ಸದ್ಗುಣಗಳನ್ನು ಕೊಡು ಎಂದು ದೇವಿಯಲ್ಲಿ ಬೇಡಿಕೊಳ್ಳಬೇಕು ಎಂದರು.ಮುರನಾಳ ಮಳೇರಾಜೇಂದ್ರ ಮಠದ ಮಳಿಯಪ್ಪಯ್ಯ



ಶ್ರೀಗಳು ಸಮುದಾಯ ಭವನ ಉದ್ಘಾಟಿಸಿ ಮಾತನಾಡಿ, ಭಗವಂತ ಮತ್ತು ಭಗವತಿಯ ಹತ್ತಿರ ಸ್ಮರಣೆ ಮಾಡಲು ಸ್ವಚ್ಛ ಮನಸ್ಸುಕೊಡು ಎಂದು ಬೇಡಿಕೊಳ್ಳಬೇಕು. ಸತ್ಕಾರ್ಯಕ್ಕೆದಾನ ಮಾಡಿದರೆ ಬ್ಯಾಂಕಿನಲ್ಲಿ ಡಿಪಾಜಿಟ್ ಇಟ್ಟಂತೆ ಎಂದು ಹೇಳಿದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ.ಸಾವಕಾರ ಮಾತನಾಡಿ, ಗ್ರಾಮದೇವತೆ ದೇವಸ್ಥಾನ ಜೀರ್ಣೋದ್ಧಾರ ಸೇವಾ ಸಮಿತಿ ಸದಸ್ಯರಅವಿರತ ಪರಿಶ್ರಮ, ಗ್ರಾಮಸ್ಥರ ಸಹಾಯ, ಸಹಕಾರದಿಂದ ದೇವಾಲಯ ವರ್ಷ ವರ್ಷಕ್ಕೆ ಅಭಿವೃದ್ಧಿ ಪಥದತ್ತ ಸಾಗಿದ್ದು ಶ್ಲಾಘನೀಯ ಎಂದು ಹೇಳಿದರು.ದೇವಸ್ಥಾನಕ್ಕೆ ಜಾಗದಾನ ಮಾಡಿದ ಬಶೆಟ್ಟೆಪ್ಪ ಅಂಟೀನ, ಹನಮಂತ ಪತ್ತಾರ, ದಿ.ದುಂಡಪ್ಪ ಕಂಬಾರ ಅವರಕುಟುಂಬ ಪರಿವಾರವನ್ನು ಹಾಗೂ ದ್ವಿತೀಯ ಪಿಯುಸಿ, ಎಸ್ಸೆಸ್ಸೆಲ್ಸಿ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿಸಲಾಯಿತು. ಗ್ರಾಮದೇವತೆ ದೇವಸ್ಥಾನ ಜೀರ್ಣೋದ್ಧಾರ ಸೇವಾ ಸಮಿತಿ ಅಧ್ಯಕ್ಷ ಬಶೆಟ್ಟೆಪ್ಪ ಅಂಟೀನ, ಮುಖಂಡರಾದಆರ್. ವಿ.ಪಾಟೀಲ, ಎಚ್.ಬಿ.ಗುರಣ್ಣವರ, ಆರ್. ಎಚ್. ಚಂಡಕಿ, ರಾಮಾಚಾರಿ ಶಾಸ್ತ್ರಿಗಳು, ರಾಮಣ್ಣ ಬೆನಕಟ್ಟಿ, ಎಂ.ಕೆ.ಕಂಬಾರ ಉಪಸ್ಥಿತರಿದ್ದರು. ಬಿ.ಬಿ.ಬೆನಕಟ್ಟಿ ನಿರೂಪಿಸಿದರು. ಎಸ್ .ಎ.ಕರಿಗೌಡರ ವಂದಿಸಿದರು.

ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ

ಬದಾಮಿ: ತಾಲೂಕಿನಶಿವಯೋಗ ಮಂದಿರದ ಕುಮಾರೇಶ್ವರ ಪ್ರಾಚ್ಯ ವಿದ್ಯಾ ಮಾಧ್ಯಮಿಕ ಶಾಲೆಯ 2026ನೇ ಸಾಲಿನಲ್ಲಿ ನಡೆದ ಎಸ್ ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.91.17% ರಷ್ಟು ಫಲಿತಾಂಶ ಬಂದಿದೆ.

ಶಾಲೆಯ ಒಟ್ಟು 68 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಇದರಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ 6 ವಿದ್ಯಾರ್ಥಿಗಳು, ಉನ್ನತ ಶ್ರೇಣಿಯಲ್ಲಿ 46. ವಿದ್ಯಾರ್ಥಿಗಳು, ದ್ವಿತೀಯ ಶ್ರೇಣಿಯಲ್ಲಿ 5. ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ 5 ವಿದ್ಯಾರ್ಥಿಗಳು



ಉತ್ತೀರ್ಣರಾಗಿರುತ್ತಾರೆ.

ಅನುಪಮಾ ಕು. ಕೋಟಿ.582 (93.12%) ಅಂಕಗಳನ್ನ ಪಡೆದಿದ್ದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಅಭಿಷೇಕ್ ಎಂ ಅಂಗಡಿ 571 (91.36%) ಪಡೆದು, ದ್ವಿತೀಯ ಸ್ಥಾನ ಪಡೆದಿದ್ದಾರೆ. ಅಭಿಷೇಕ್ ಆಚನೂರ್ 567 (90.72%) ಪಡೆದು ತೃತೀಯ ಸ್ಥಾನದಲ್ಲಿ ತೇರ್ಗಡೆಯಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ. ಸಾಧನೆ ಮಾಡಿದ ಎಲ್ಲ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷ ನಾಡೋಜಿ ಡಾ.ಅನ್ನದಾನೇಶ್ವರ ಸ್ವಾಮಿಗಳು ಸಂಸ್ಥಾನ ಮಠ ಮುಂಡರಗಿ ಅಭಿನಂದಿಸಿದ್ದಾರೆ. ಹಾಗೂ ಶರಣಬಸವ ದೇವರು ಶಿವಯೋಗಮಂದಿರ ಮತ್ತು ಸಂಸ್ಥೆಯ ಕಾರ್ಯದರ್ಶಿಗಳಾದ ಎಂ.ಬಿ.ಹಂಗರಗಿ ಹಾಗೂ ಆಡಳಿತ ಮಂಡಳಿಯ ಸರ್ವ ಸದಸ್ಯರು ಮುಖ್ಯೋಪಾಧ್ಯರು. ಸಿಬ್ಬಂದಿ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅಭಿನಂದಿಸಿದ್ದಾರೆ.

ಬಸಲಿಂಗಪ್ಪ ಗುಂಡಾಳಿ ಪ್ರಥಮ



ಬೀಳಗಿ: ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ ಬಾಲಕರ ವಸತಿ ನಿಲಯದ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಚಿಕ್ಕಾಲಗುಂಡಿಯ ವಿದ್ಯಾರ್ಥಿಗಳಾದ ಬಸಲಿಂಗಪ್ಪ ಸಂಗಪ್ಪ ಗುಂಡಾಳಿ 608(97.28%) ಪ್ರಥಮ ಹಾಗೂ ಅಜಯ ಈರಪ್ಪ ಪತ್ತಾರ 597(95.52%) ದ್ವಿತೀಯ ಮತ್ತು ಡಾ.ಬಿ.ಆರ್. ಅಂಬೇಡ್ಕರ ಬಾಲಕಿಯರ ವಸತಿ ನಿಲಯ ಬೀಳಗಿಯ ವಿದ್ಯಾರ್ಥಿನಿಯರಾದ ಶ್ರೇಯಾ ರವಿ ಪೆಂಟೆದ 564(90.24) ಹಾಗೂ ಕೀರ್ತಿ ಶಿವಪ್ಪ ಗುಡದಿನ್ನಿ 564 (90.24) ಇವರುಗಳು ತೃತೀಯ ಸ್ಥಾನ ಪಡೆದಿರುವರು. ಬೀಳಗಿ ತಾಲೂಕಿನಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳ ವಿದ್ಯಾರ್ಥಿಗಳ ಪೈಕಿ ಅಗ್ರ ಶ್ರೇಣಿ ಪಡೆದಿರುತ್ತಾರೆಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಸಿ.ಎಸ್.ಗಡ್ಡದೇವರಮಠ ತಿಳಿಸಿದ್ದಾರೆ.

ಗ್ರಾಪಂ ಪಿಡಿಒ ಸ್ಪಂದನೆಗೆ ಪ್ರಶಂಸೆ

ಕಲಾದಗಿ: ಗ್ರಾಮದ ಖೊಬ್ರಿ ಕ್ರಾಸ ಹತ್ತಿರದ ಮುಖ್ಯ ರಸ್ತೆಯ ಮಾರ್ಗದಲ್ಲಿ ಕೃತಕವಾಗಿ ನಿರ್ಮಿತವಾಗಿರುವ ರಸ್ತೆ ಉಬ್ಬು (ರೋಡ ಬ್ರೆಕ್)ನ್ನು ದಾಟಬೇಕಾದರೆ ದಿನಂಪ್ರತಿ ಸಂಚರಿಸುವ ಬೈಕ್ ಸವಾರರು ಪರದಾಡುವ ಬಗ್ಗೆ ದಿ.9ರಂದು ?ಸವಾರರಿಗೆ ತಲೆನೋವಾಗಿ ಪರಿಣಮಿಸಿದ ರಸ್ತೆ ಉಬ್ಬುಗಳು ಎಂಬ ಶೀರ್ಷಿಕೆಯಡಿ ಹೊಸದಿಗಂತ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಸುದ್ದಿಗೆ ಸ್ಪಂದಿಸಿರುವ ಸ್ಥಳೀಯ ಗ್ರಾಪಂನ ಪಿಡಿಒ ಅವರಿಗೆ ದ್ವಿಚಕ್ರ ವಾಹನ ಸವಾರರು ಪ್ರಶಂಸೆ ವ್ಯಕ್ತಪಡಿಸಿದ್ದು ಈ ರಸ್ತೆ ಉಬ್ಬುಗಳನ್ನು ದುರಸ್ತಿ ಮಾಡಲು ತಾತ್ಕಾಲಿಕವಾಗಿ ಕೆಂಪು ಗರಸು ಹಾಕಿ ರಸ್ತೆಯನ್ನು ಸರಿಪಡಿಸಲಾಗಿದ್ದು ಮುಂದಿನ ದಿನಗಳಲ್ಲಿ ಅದಕ್ಕಾಗಿ ಅನುದಾನ ಮೀಸಲಿಟ್ಟು ಕಾಂಕ್ರೀಟ್ ಹಾಕಿ ಯಾವುದೇ ರೀತಿ ತೊಂದರೆಯಾಗದಂತೆ ಶಾಶ್ವತವಾಗಿ ರಸ್ತೆಯ ಉಬ್ಬುಗಳನ್ನು ಸರಿಪಡಿಸಲಾಗುವುದು ಎಂದು ಗ್ರಾಪಂ ಪಿಡಿಒ ಪತ್ರಿಕೆಗೆ ತಿಳಿಸಿದ್ದಾರೆ.



ಜೀವನದಲ್ಲಿ ಯಾವುದು ಶಾಶ್ವತವಲ್ಲ: ಶ್ರೀ

ಜಮಖಂಡಿ: ರೂಪ ವೈಭವ, ಧನ ವೈಭವ, ಜನ ವೈಭವ, ಶಕ್ತಿಯೂ ವೈಭವದ ಒಂದು ಭಾಗ. ಮನುಷ್ಯ ಜನ್ಮ ಪಡೆದದ್ದೊಂದು ಪರಮ ವೈಭವ. ವೈಭವ ಅಂದರೆ ಸಂಪತ್ತು. ಅಧಿಕಾರ ಒಂದು ಸಂಪತ್ತು. ಶರೀರವು ಒಂದು ಸಂಪತ್ತು. ಜಗತ್ತನ್ನು ಗೆಲ್ಲುವುದು ಬುದ್ಧಿ ಸಂಪತ್ತು. ಧನ ಸಂಪತ್ತಲ್ಲ. ಯಾವ ವೈಭವು ಶಾಶ್ವತವಲ್ಲ ಎಂದು ಕೊಲ್ಹಾಪೂರ ಕನೇರಿ ಮಠದ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ ಹೇಳಿದರು.

ತಾಲೂಕಿನ ಬುದ್ನಿ ಗ್ರಾಮದ ಸಿದ್ಧಾರೂಢಮಠದಲ್ಲಿಜರುಗಿದ40ನೇ ವರ್ಷದ ಆಧ್ಯಾತ್ಮ ಸಮ್ಮೇಳನದಲ್ಲಿ ಕರ್ತವ್ಯೋ ಧರ್ಮ ಸಂಗ್ರಹ ಎಂಬ ವಿಷಯದ ಕುರಿತು ನಡೆದ ಚರ್ಚೆಯ ಸಾನ್ನಿಧ್ಯ ವಹಿಸಿ ಮಾತನಾಡಿ, ಅಧಿಕಾರದ ರುಚಿ ಬಹಳ ಮಜ ಇರುತ್ತದೆ. ಅದು ಸಾಯುವವರನ್ನು ಬದುಕಿಸುತ್ತದೆ. ಯಾವ ಸಾಮ್ರಾಜ್ಯವು ಉಳಿಯುವುದಿಲ್ಲ, ಮನೆಯಲ್ಲಿರುವ



ಕುರ್ಚಿಯ ಸಾಮ್ರಾಜ್ಯ ಶಾಶ್ವತ ಎಂದು ತಿಳಿದಿದ್ದೇವೆ ಎಂದರು.

ವಿದ್ಯೆ ಬಕ್ಷಿಸಲು ಅಲ್ಲ, ರಕ್ಷಿಸಲು ಇರೋದು. ಮೃತ್ಯು ಮನುಷ್ಯನ ಹಿಂದೆ ಅಥವಾ ಮುಂದೆ ಇರುತ್ತದೆ. ಪ್ರಯತ್ನಪೂರ್ವಕವಾಗಿ ಒಳ್ಳೆಯದನ್ನು ಮಾಡಬೇಕು. ಹಣ ಪರಿವರ್ತನೆ ಸ್ವಭಾವ ಹೊಂದಿರುವಂತದ್ದು. ಆದ್ದರಿಂದ ಶಾಶ್ವತವಾದ ಧರ್ಮವನ್ನು ಗಳಿಸಬೇಕು ಎಂದು ಹೇಳಿದರು.

ಅನಗವಾಡಿಯ ಪೂರ್ಣಾನಂದ ಆಶ್ರಮದ ಮಾತೋಶ್ರೀ ಅನಸೂಯಾ ತಾಯಿ ಮಾತನಾಡಿದರು. ಕನಕನಾಳ ಅವಜೀಗರ ಮಠದ ಗಿರೀಶಾನಂದ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಮಂಟೂರ ಸಿದ್ಧಾರೂಢ ಮಠದ ಸದಾನಂದ ಸ್ವಾಮೀಜಿ, ಸಿದ್ಧಾರೂಢ ಮಠದ ಪೀಠಾಧಿಕಾರಿ ಸಿದ್ಧಾನಂದ ಸ್ವಾಮೀಜಿ ನೇತೃತ್ವ ವಹಿಸಿದ್ದರು. ತೊಂಡಿಕಟ್ಟಿಅವಧೂತಗಾಳೇಶ್ವರಮಠದ ಅಭಿನವ ವೆಂಕಟೇಶ್ವರ ಸ್ವಾಮೀಜಿ, ಚಿಕ್ಕಾಲಗುಂಡಿಯ ಶಿವಶರಣಾನಂದ ಸ್ವಾಮೀಜಿ, ಹೊಸಯರಗುದ್ರಿಯ ಸಿದ್ಧಪ್ರಭು ಶಿವಾಚಾರ್ಯ ಸ್ವಾಮೀಜಿ, ಲಿಂಗನೂರದ ಶಿವಪುತ್ರ ಅವಧೂತರು, ಮೆಟಗುಡ್ಡದ ಚನ್ನಯ್ಯ ಸ್ವಾಮೀಜಿ, ಹಿಪ್ಪರಗಿಯ ಸಿದ್ಧಾರೂಢ ಶರಣರು, ಹೊಸಕೋಟಿಯ ಪಾರ್ವತಿದೇವಿ ಗಂಗಾಧರ ನ್ಯಾಮಗೌಡ. ಮಲ್ಲಪ್ಪ ಮರೇಗುದ್ದಿ, ಹನಮಂತ ನ್ಯಾಮಗೌಡ, ಹನಮಂತ ಬಳಮಟ್ಟಿ ಉಪಸ್ಥಿತರಿದ್ದರು.

ಇಂದು ವಾಸವಿ ಜಯಂತಿ

ಬಾಗಲಕೋಟೆ: ನಗರದ ಆರ್ಯವೈಶ್ಯ ಸಮುದಾಯದ ವತಿಯಿಂದ ಏ.26ರಂದು ಆರ್ಯವೈಶ್ಯರ ಕುಲಮಾತೆ ವಾಸವಿ ಕನ್ಯಕಾ ಪರಮೇಶ್ವರಿ ಅಮ್ಮನವರ ಜಯಂತಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಸಮಾಜದ ಮುಖಂಡ ಸತ್ಯನಾರಾಯಣ ಹೇಮಾದ್ರಿ ತಿಳಿಸಿದರು.

ನವನಗರದ ಪತ್ರಿಕಾಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಯಂತಿ ನಿಮಿತ್ತ ಬೆಳಿಗ್ಗೆ 6 ಗಂಟೆಗೆ ದೇವಿಗೆ ಕ್ಷೀರಾಭಿಷೇಕ ಮತ್ತು ಪಂಚಾಮೃತ ಅಭಿಷೇಕ ನಡೆಯಲಿದೆ. ನಂತರ 6.30ಕ್ಕೆ ಸಕಲ ವಾದ್ಯ ವೈಭವಗಳೊಂದಿಗೆ ಕುಂಭ, ಕಲಶಗಳ ಸಮೇತ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಲಿದೆ ಎಂದು ತಿಳಿಸಿದರು. 11.15 ಗಂಟೆಗೆ ಆರ್ಯವೈಶ್ಯ ಸಮುದಾಯದ ಜಯಂತಿ ಕಾರ್ಯಕ್ರಮಕ್ಕೆ ಆಗಮಿಸಲಿರುವ ಆರ್ಯವೈಶ್ಯ ಪೀಠಾಧಿಪತಿ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರ ಪಾದಪೂಜೆ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ವಾಸವಿ ಕನ್ಯಕಾ ಪರಮೇಶ್ವರಿ ಅಮ್ಮನವರ ತುಲಾಭಾರ ನಡೆಯಲಿದೆ. 2 ಗಂಟೆಗೆ ಮಹಾಪ್ರಸಾದ ಬಳಿಕ 5 ಗಂಟೆಗೆ ರಥೋತ್ಸವ ಜರುಗಲಿದೆ. ಶ್ರೀಗಳ ಆಶೀರ್ವಚನ ಕಾರ್ಯಕ್ರಮ ಸಂಜೆ 5 ಗಂಟೆಗೆ ನಗರದ ಚರಂತಿಮಠದ ಶಿವಾನುಭವ ಮಂಟಪದಲ್ಲಿ ಜರುಗಲಿದೆ ಎಂದು ಹೇಳಿದರು. ಸಮಾಜದ ಅಧ್ಯಕ್ಷ ರಾಘವೇಂದ್ರ ಹಂದ್ರಾಳ, ಉಪಾಧ್ಯಕ್ಷ ಶ್ರೀಕಾಂತ ಹಂದ್ರಾಳ, ಖಜಾಂಚಿ ಮಂಜುನಾಥ ಹಂದ್ರಾಳ, ಸುರೇಶ ಲಕ್ಷ್ಮೇಶ್ವರ, ಬಲಭೀಮ ಹಂದ್ರಾಳ, ವೆಂಕಟೇಶ ಹಂದ್ರಾಳ ಇದ್ದರು.



ಸಡಗರ-ಸಂಭ್ರಮದ ಮಾರುತೇಶ್ವರ ಓಕುಳಿ

ಬೀಳಗಿ: ತಾಲೂಕಿನ ಅರಕೇರಿ ಗ್ರಾಮದ ಮಾರುತೇಶ್ವರ ಓಕುಳಿ ಶನಿವಾರ ಸಡಗರ ಸಂಭ್ರಮದಿಂದ ಜರುಗಿತು. ಬೆಳಗ್ಗೆ ಮಾರುತೇಶನಿಗೆ ಅಲಂಕಾರ, ವಿಶೇಷ ಪೂಜೆಯ ನಂತರ ಮಕ್ಕಳು, ಮಹಿಳೆಯರು ವಿವಿಧ ಚಿತ್ತಾರದ ಬಟ್ಟೆ ಉಟ್ಟು ಕೈಯಲ್ಲಿ ನೈವೇದ್ಯ, ಕಾಯಿ-ಕರ್ಪೂರ ಹಿಡಿದುಕೊಂಡು ಮಾರುತೇಶನ ಸನ್ನಿಧಿಗೆ ಆಗಮಿಸಿ ಭಕ್ತಿಯಿಂದ ನಮಿಸಿ ನೈವೇದ್ಯ ಅರ್ಪಿಸಿದರು.

ದೇವಾಲಯದ ಮುಂದಿನ ಬೃಹದಾಕಾರದ ನಾಲ್ಕು ಮೂಲೆಗಳನ್ನು ಹೊಂದಿದ ಓಕುಳಿ ಹೊಂಡ ಪ್ರತಿ ಮೂಲೆಗೆ ಒಬ್ಬೊಬ್ಬ ಬಾಬುದಾರರನ್ನು ಹೊಂದಿದೆ. ಮೂಲೆಗೊಂದರಂತೆ ಕಂಬಗಳನ್ನು ನೆಟ್ಟು ಬಾಳೆ, ಕಬ್ಬು ಕಟ್ಟಿ, ಮೇಲೆ ಗ್ವಾಯಿನ(ಗೋವಿನ) ತೊಪ್ಪಲು ಹಂದರ ಹಾಕಿದ್ದರು. ಆ ಹಂದರಕ್ಕೆ ಬಾಬುದಾರರು ವಾದ್ಯ ಮೇಳದೊಂದಿಗೆ ಆಗಮಿಸಿ ತಾವು ತಂದ ಖಾದ್ಯ ವಸ್ತು(ಹಪ್ಪಳ, ಸಂಡಿಗೆ, ಪುರಿ, ಕರ್ಚಿಕಾಯಿ)ಗಳನ್ನು ನೇತು ಹಾಕಲಾಗಿತ್ತು. ಹೊಂಡಕ್ಕೆ ವಿಶೇಷ ಪೂಜೆ ಸಲ್ಲಿಸಿ, ನೈವೇದ್ಯ ಅರ್ಪಿಸಿದ ನಂತರ ಬಾಬುದಾರರು ತಮ್ಮ ತಮ್ಮ ಮನೆಗೆ ತೆರಳಿದರು.

ಹೊಂಡವನ್ನು ಪೂಜೆ ಮಾಡಿ ಓಕುಳಿಗೆ ಹಸಿರು ನಿಶಾನೆ ತೋರಿಸುತ್ತಿದ್ದಂತೆ ಯುವಕರು ಹೊಂಡದಲ್ಲಿ ಜಿಗಿದು ತಾವು ತಂದ ಸಾಮಗ್ರಿಯಲ್ಲಿ ನೀರು ತಂದು ಪ್ರಥಮದಲ್ಲಿ ಹನುಮನಿಗೆ ಅರ್ಪಿಸಿ, ಮಹಿಳಾ ವೇಷದಾರಿಗಳಿಗೆ



ಉಗ್ಗ(ಎರಚ)ಲಾರಂಭಿಸಿದರು. ಮಹಿಳಾ ವೇಷದಾರಿಗಳು ಪ್ರತಿಯಾಗಿ ಕರಿ ಹೂಲಿ ಜಬರಿಯಿಂದ ಹೊಡೆಯುವ ದೃಶ್ಯ ವಿಶೇಷತೆಯಿಂದ ಕೂಡಿತ್ತು. ಈ ಸಂದರ್ಭದಲ್ಲಿ ಸೇರಿದ ಕಿಕ್ಕಿರಿದ ಜನತೆ ಯುವಕರಲ್ಲಿ ಹುರುಪು ತುಂಬಲು ಕೇಕೇ, ಶಿಳ್ಳೆ ಹಾಕಿ ಹುರುದುಂಬಿಸುವ ದೃಶ್ಯ ಸರ್ವೆ ಸಾಮಾನ್ಯವಾಗಿತ್ತು.

ಓಕುಳಿ ಹೊಂಡವನ್ನು ಮಹಿಳಾ ವೇಷದಾರಿಗಳು ಐದು ಸುತ್ತು ಪ್ರದಕ್ಷಿಣೆ ಹಾಕಿದರು. ಯುವಕರು ನೀರು ಉಗ್ಗುತ್ತ, ಎರೆಚುತ್ತಸುತ್ತುವುದರೊಂದಿಗೆ ಓಕುಳಿಯಾಟಕ್ಕೆ ಸಂಭ್ರಮದ ತೆರೆ ಬಿದ್ದಿತು. ಈ ಸಂದರ್ಭದಲ್ಲಿ ಜರುಗುವ ಪ್ರತಿ ಕ್ಷಣವನ್ನು ಮಹಿಳೆಯರು, ಪುರುಷರು, ಮಕ್ಕಳಾದಿಯಾಗಿ ಸೇರಿದ ಕಿಕ್ಕಿರಿದ ಜನತೆ ಬಿಟ್ಟು ಕಣ್ಣು ಬಿಟ್ಟಂತೆ ನಯನ ಬಿಂಬದಲ್ಲಿ ಸೆರೆ ಹಿಡಿದು ನೋಡಿ ಆನಂದಿಸಿದರು.



ನಾಲತವಾಡ: ಸಮೀಪದ ನಾಗರಬೆಟ್ಟ ಎಕ್ಸ್‌ಪರ್ಟ್ ಮಠ ಪ್ರೌಢಶಾಲೆಯ ಕನ್ನಡ ಮಾಧ್ಯಮ ವಿದ್ಯಾರ್ಥಿನಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 624 ಅಂಕ ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದ ಪೂಜಾ ಹಿರೂನಾಯ್ಕ ಲಮಾಣಿ ವಿದ್ಯಾರ್ಥಿನಿಗೆ ವಿಜಯಪುರಲ್ಲಿ ಜಿಲ್ಲಾಧಿಕಾರಿ ಡಾ.ಆನಂದ ಕೆ ಸನ್ಮಾನಿಸಿದರು. ಡಿಡಿಪಿಐ ಅಧಿಕಾರಿಗಳು ಬಿಇಒ ಬಸಪ್ಪ ಸಾವಳಗಿ ಹಾಗೂ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮುತ್ತು ಮಠ ಹಿರೂನಾಯಕ ಇತರರು ಇದ್ದರು.

ಶಿಸ್ತು, ಸಂಯಮ ಕಲಿಸುವ ಎನ್‌ಎಸ್‌ಎಸ್

ವಿಜಯಪುರ: ಎನ್‌ಎಸ್‌ಎಸ್ ಶಿಸ್ತು, ಸಂಯಮ ಮತ್ತು ವ್ಯಕ್ತಿತ್ವ ವಿಕಸನದಂತಹ ವಿವಿಧ ಕೌಶಲ್ಯವನ್ನು ವೃದ್ಧಿಸುವಲ್ಲಿ ಸಹಾಯಕ ಎಂದು ಜಿಲ್ಲಾ ಎನ್‌ಎಸ್‌ಎಸ್ ಸಂಯೋಜಕ ಗಂಗಾಧರ ಅಗಸರ್ ಹೇಳಿದರು. ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2 ರ ಆಶ್ರಯದಲ್ಲಿ ಹಮ್ಮಿಕೊಂಡ ವಾರ್ಷಿಕ ಎನ್‌ಎಸ್‌ಎಸ್ ವಿಶೇಷ ಶಿಬಿರವನ್ನು ದತ್ತು ಗ್ರಾಮ ಅರಕೇರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು. ಎನ್‌ಎಸ್‌ಎಸ್ ಎಂದರೆ ದೇಶ ಸೇವೆ ಅದರಂತೆ ಸೇವೆಯೊಂದಿಗೆ ಶಿಸ್ತು, ಸಂಯಮ ಸ್ವಚ್ಛತೆ ಅಲ್ಲದೆ ವ್ಯಕ್ತಿತ್ವ ವಿಕಸನ, ಜೀವನದ ಮೌಲ್ಯಗಳನ್ನು ಅರ್ಥೈಸಿಕೊಳ್ಳಲು ಇಂತಹ ಶಿಬಿರವು ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಿದೆ ಎಂದರು. ಅರಕೇರಿ ಪೌಢ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷ ಎಂ.ಎಂ.ಶಿರಾಳಶೆಟ್ಟಿ ಮಾತನಾಡಿ, ತಮ್ಮ ಜೀವನದ ಅನುಭವಗಳು ಮತ್ತು ವಿದ್ಯಾರ್ಥಿಗಳು ಸತತ ಕಠಿಣ ಪರಿಶ್ರಮ ಹಾಗೂ ಸಮರ್ಪಣೆಯ ಮಹತ್ವವನ್ನು ಮತ್ತು ಮನೋಭಾವ ವೃದ್ಧಿಸಿಕೊಳ್ಳಬೇಕು ಎಂದರು. ಪ್ರಾಚಾರ್ಯ ಡಾ.ಅನೀಲ ನಾಯಕ ಅಧ್ಯಕ್ಷತೆ ವಹಿಸಿದ್ದರು. ಐಕ್ಯೂಎಸಿ ಸಂಯೋಜಕ ಡಾ.ಪಿ.ಎಸ್. ಪಾಟೀಲ, ಮಹೇಶಕುಮಾರ ಬೆಲ್ಲದ್, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಡಾ.ಮಿಲನ್ ರಾಥೋಡ್, ಡಾ.ತರನ್ನುಮ್ ಜಬೀನ್ ಖಾನ್ ಇದ್ದರು.



ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2 ರ ಆಶ್ರಯದಲ್ಲಿ ಹಮ್ಮಿಕೊಂಡ ವಾರ್ಷಿಕ ಎನ್‌ಎಸ್‌ಎಸ್ ವಿಶೇಷ ಶಿಬಿರವನ್ನು ದತ್ತು ಗ್ರಾಮ ಅರಕೇರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಜಿಲ್ಲಾ ಎನ್‌ಎಸ್‌ಎಸ್ ಸಂಯೋಜಕ ಗಂಗಾಧರ ಅಗಸರ್ ಉದ್ಘಾಟಿಸಿದರು. ಅರಕೇರಿ ಪೌಢ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷ ಎಂ.ಎಂ.ಶಿರಾಳಶೆಟ್ಟಿ ಸೇರಿದಂತೆ ಇಯತರರು ಇದ್ದರು.

ಕಿರುಸುದ್ದಿ

ಜನಿವಾರ ತೆಗೆಸಿ ಅವಮಾನಿಸಿದ್ದು ಸರ್ಕಾರದ ಬೇಜವಾಬ್ದಾರಿ: ಜೋಶಿ

ವಿಜಯಪುರ: ಸಿಇಟಿ ಮತ್ತಿತರ ಪರೀಕ್ಷೆ ವೇಳೆ ಪವಿತ್ರ ಜನಿವಾರ ಧಾರಣೆಯ ವಿಷಯವಾಗಿ ಕಳೆದ ಬಾರಿಯೂ ಅವಮಾನ ನಡೆದಿತ್ತು, ಈ ಬಾರಿಯೂ ಅವಮಾನ ಪುನರಾವರ್ತನೆಯಾಗಿದೆ, ಇದು ಸರ್ಕಾರದ ಬೇಜವಾಬ್ದಾರಿತನದ ಪರಮಾವಧಿಯಾಗಿದೆ. ಕೂಡಲೇ ಈ ವಿಷಯವಾಗಿ ಸರ್ಕಾರ ಗಂಭೀರವಾದ ಕ್ರಮ ಕೈಗೊಂಡು ಪವಿತ್ರ ಜನಿವಾರ ಹಾಗೂ ಹಿಂದೂ ಸಂಸ್ಕೃತಿಯು ಅವಮಾನವಾಗುವುದನ್ನು ತಡೆಯಬೇಕು ಎಂದು ಬಿಜೆಪಿ ಮಾಧ್ಯಮ ಪ್ರಮುಖ ವಿಜಯ ಜೋಶಿ ಆಗ್ರಹಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಈ ಹಿಂದೆಯೂ ಪವಿತ್ರ ಯಜ್ಞೋಪವೀತ (ಜನಿವಾರ) ಬಗ್ಗೆ ಅಗೌರವ ತೋರಿದ್ದು ಸಮಸ್ತ ಬ್ರಾಹ್ಮಣ ಸಮಾಜ ಹಾಗೂ ಜನಿವಾರ ಧರಿಸುವ ಎಲ್ಲ ಸಮುದಾಯಗಳ ಜನರಿಗೆ ನೋವು ತಂದಿತ್ತು, ಸದ್ಯ ಪುನಃ ಈ ರೀತಿಯ ಘಟನೆಗಳು ಮರುಕಳಿಸುತ್ತಿರುವುದಕ್ಕೆ ರಾಜ್ಯ ಸರ್ಕಾರವೇ ನೇರ ಹೊಣೆ, ಪವಿತ್ರ ಜನಿವಾರಕ್ಕೆ ಧಾರ್ಮಿಕ ಸಂಸ್ಕೃತಿ ಅಷ್ಟೇ ಅಲ್ಲದೇ ಅದೊಂದು ಪವಿತ್ರ ಸಂಸ್ಕಾರವೂ ಹೌದು, ಅದರಲ್ಲಿ ನಕಲು ಮಾಡಲು ಹೇಗೆ ಸಾಧ್ಯ? ಇದು ಕೇವಲ ಬೌದ್ಧಿಕ ದಾರಿದ್ರ್ಯನ ಹಾಗೂ ಹಿಂದೂ ವಿರೋಧಿ ನೀತಿ ಅನುಸರಿಸುವವರು ಈ ರೀತಿ ಜನಿವಾರ ತೆಗೆಸುವ ಕೆಟ್ಟ ಕೃತ್ಯಗಳನ್ನು ಕೈಗೊಳ್ಳುತ್ತಿದ್ದಾರೆ, ಈ ತೆರನಾದ ಘಟನೆಗಳು ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸರ್ಕಾರ ಈ ಹಿಂದೆ ಕೋರ್ಟಿಗೂ ಸಹ ಭರವಸೆ ಮಾಡಿತ್ತು, ಇನ್ನಾದರೂ ರಾಜ್ಯ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಪವಿತ್ರ ಜನಿವಾರ ಮತ್ತಿತರ ಧಾರ್ಮಿಕ ಸಂಸ್ಕಾರಗಳಿಗೆ ಅಗೌರವವಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಗಂಭೀರ ಹೆಜ್ಜೆ ಇರಿಸಬೇಕು. ಇಲ್ಲವಾದರೆ ಹೋರಾಟ ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದ್ದಾರೆ.



ಶ್ರವಣಕುಮಾರ ಸಾಧನೆ

ಬಸವನಬಾಗೇವಾಡಿ: ಆಲಮಟ್ಟಿಯ ಪ್ರಭು ದೊಡ್ಡನ್ನವರ ಅವರ ಪುತ್ರ, ಮುದ್ದೇಬಿಹಾಳ ತಾಲೂಕಿನ ನಾಗರಬೆಟ್ಟದ ಆಕ್ಸಫರ್ಡ್ ಶಾಲೆಯ ವಿದ್ಯಾರ್ಥಿ ಶ್ರವಣಕುಮಾರ ಪ್ರಭು ದೊಡ್ಡನ್ನವರ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 577 ಅಂಕಗಳನ್ನು ಗಳಿಸಿ ಶೇ.92.32ರಷ್ಟು ಸಾಧನೆ ಮಾಡಿದ್ದಾನೆ. ಈತನ ಸಾಧನೆಗೆ ಕುಟುಂಬಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.



ಶೇ.100ರಷ್ಟು ಫಲಿತಾಂಶ



ನಾಲತವಾಡ: ಸ್ಥಳೀಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಸಾಧಿಸಿದೆ. ಪರೀಕ್ಷೆಗೆ ಹಾಜರಾದ 44 ವಿದ್ಯಾರ್ಥಿಗಳೂ ಉತ್ತೀರ್ಣರಾಗಿದ್ದಾ-ರೆ. 26 ಅಗ್ರಶ್ರೇಣಿ, 17 ಪ್ರಥಮ ದರ್ಜೆ ಹಾಗೂ ಒಬ್ಬ ವಿದ್ಯಾರ್ಥಿ ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದಾರೆ. ಗುರುಪಾದಪ್ಪ ಮಡ್ಡಿ ಶೇ 98.8 ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಮನೀಶ್ ಚೌಹಾಣ ಶೇ 97.76 ದ್ವಿತೀಯ ಸ್ಥಾನ, ಅರ್ಚನಾ ನಡುವಿನಮನಿ ಶೇ 97.12ರಷ್ಟು ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ಅಗ್ರಶ್ರೇಣಿ ಹಾಗೂ ಪ್ರಥಮ ದರ್ಜೆಯಲ್ಲಿ ಪಾಸಾಗಿ ಸಾಧನೆ ಮಾಡಿದ್ದಾರೆ ಎಂದು ಶಾಲೆಯ ಪ್ರಾಚಾರ್ಯ ಗಿರಿಯಪ್ಪ ಗುಳಗಿ ತಿಳಿಸಿದ್ದಾರೆ.



ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣದಲ್ಲಿ ಭಗವಾನ ಸತ್ಯಸಾಯಿ ಬಾಬಾರವರ ಆರಾಧನಾ ಮಹೋತ್ಸವ ನಿಮಿತ್ತ ಸಮಿತಿಯ ಸಂಚಾಲಕ ಸಂಗಮೇಶ ತಪಶೆಟ್ಟಿ ಭಗವಾನರ ಅಮೃತ ಕಳಶ(ದಿನಸಿ ಕಿಟ್)ಸ್ಲಂ ಏರಿಯಾದಲ್ಲಿ ವಿತರಿಸಿದರು. ಸತ್ಯ ಸಾಯಿ ಸೇವಾ ಸಮಿತಿ ವಿಜಯಪುರ ಜಿಲ್ಲಾ ಉಪಾಧ್ಯಕ್ಷ ಶಶಿಧರ ಹಾರಿವಾಳ, ಸಂಚಾಲಕ ಸಂಗಮೇಶ ತಪಶೆಟ್ಟಿ, ಮಹಾದೇವ ಗುಜುಗೊಂಡ, ಶಂಕರಗೌಡ ಬಿರಾದಾರ, ಮಲ್ಲು ಬಿರಲದಿನ್ನಿ, ಪ್ರಶಾಂತ ಭೋಸ್ಲೆ, ಪ್ರೀತಿ ಹಾರಿವಾಳ, ಸವಿತಾ ಅಗಸರ, ಜ್ಯೋತಿ ತಪಶೆಟ್ಟಿ ಇದ್ದರು.

ನಾರೀಶಕ್ತಿ ಮಸೂದೆಗೆ ಕಾಂಗ್ರೆಸ್ ವಿರೋಧ | ಪ್ರತಿಭಟನಾಕಾರರ ಆಕ್ರೋಶ

ಕಾಂಗ್ರೆಸ್‌ನಿಂದ ಮಹಿಳೆಯರಿಗೆ ಅವಮಾನ

ವಿಜಯಪುರ: ನಾರೀಶಕ್ತಿ ಅಭಿವಂದನ್ ಮಸೂದೆ ಅಂಗೀಕಾರವಾಗದಂತೆ ಕುತಂತ್ರ ಮಾಡಿದ ಕಾಂಗ್ರೆಸ್ ಹಾಗೂ ಇನ್ನಿತರ ಪ್ರತಿಪಕ್ಷಗಳ ವಿರುದ್ಧ ನಗರದಲ್ಲಿ ನಾರೀಶಕ್ತಿ ಅಭಿವಂದನ್ ಫೋರ್‌ಂ ಪದಾಧಿಕಾರಿಗಳು ಶನಿವಾರ ಪ್ರತಿಭಟನೆ ನಡೆಸಿದರು.



ನಗರದ ಸಿದ್ದೇಶ್ವರ ದೇವಾಲಯದಿಂದ ಆರಂಭಗೊಂಡ ರ‍್ಯಾಲಿ ವಿವಿಧ ಪ್ರಮುಖ ಮಾರ್ಗಗಳಲ್ಲಿ ಸಂಚರಿಸಿತು. ನಾರೀಶಕ್ತಿ - ದೇಶದ ಶಕ್ತಿ, ಮಹಿಳಾ ಸಬಲೀಕರಣ ವಿಷಯದಲ್ಲಿ ಬೇಡ ರಾಜಕಾರಣ ಎಂಬಿತ್ಯಾದಿ ಘೋಷಣೆಗಳನ್ನು ಕೂಗುತ್ತ ನಾರೀಶಕ್ತಿ ಮಸೂದೆ ಅಂಗೀಕಾರವಾಗದಂತೆ ಕುತಂತ್ರ ಮಾಡಿದ ಪ್ರತಿಪಕ್ಷಗಳ ವಿರುದ್ಧ ಘೋಷಣೆ ಕೂಗಿ ಪ್ರತಿಭಟನಾಕಾರರು ಅಸಮಾಧಾನ ಹೊರಹಾಕಿದರು.

ಫೋರ್‌ಂನ ಪ್ರಮುಖರಾದ ಡಾ.ವಿಜಯಲಕ್ಷ್ಮೀ ತುಂಗಳ ಮಾತನಾಡಿ, ಪ್ರತಿಪಕ್ಷಗಳು ನಾರೀಶಕ್ತಿ ಅಭಿವಂದನ್ ಮಸೂದೆ ಜಾರಿಯಾಗದಂತೆ ನೋಡಿಕೊಂಡು ಸಮಸ್ತ ಸ್ತ್ರೀ ಕುಲಕ್ಕೆ ಅವಮಾನ ಮಾಡಿವೆ. ಮಹಿಳಾ ರಾಜಕೀಯ ಪ್ರಾತಿನಿಧ್ಯಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಆಶಯಪೂರ್ಣವಾಗಿ ಜಾರಿಗೆ ತರಲು ಉದ್ದೇಶಿಸಿದ ಈ ಕಾಯ್ದೆಗೆ ಬೆಂಬಲ ನೀಡದೇ ಪ್ರತಿಪಕ್ಷಗಳು ಮಹಿಳಾ ವಿರೋಧಿ ನೀತಿ ಅನುಸರಿಸಿವೆ, ಶಾಸನ ಸಭೆಗಳಲ್ಲಿ ಶೇ.33 ರಷ್ಟು ಮೀಸಲಾತಿ ನೀಡುವ ಈ ಮಸೂದೆ ಮಹಿಳಾ ಆಡಳಿತ ಸಹಭಾಗಿತ್ವಕ್ಕೆ ಹೊಸ ಭಾಷ್ಯ ಬರೆಯುತ್ತಿತ್ತು, ಇದನ್ನು ಸಹಿಸದ ಪ್ರತಿಪಕ್ಷಗಳು ಈ ಕಾಯ್ದೆ ವಿರೋಧಿಸಿವೆ ಎಂದು ಆಕ್ರೋಶ ಹೊರಹಾಕಿದರು.

ನಾರೀಶಕ್ತಿ ವಂದನಾ ಕಾಯ್ದೆಗೆ ಸೋಲುಂಟಾಗಿರುವುದು ಭಾರತದ ಫೋರ್‌ಂ ಚಾಪ್ರಭುತ್ವದ ವ್ಯವಸ್ಥೆಯ ಉದ್ದೇಶವನ್ನು ಕರಾಳ ದಿನವಾಗಿದೆ. ಅಣ್ಣ ಬಸವಣ್ಣ, ಡಾ.ಬಿ.ಆರ್. ಅಂಬೇಡ್ಕರ್ ಅವರ ಮಹದಾಶಯಗಳಿಗೆ ಕಾಂಗ್ರೆಸ್ ದ್ರೋಹ ಮಾಡಿದಂತಾಗಿದೆ, ಬಿಜೆಪಿ ಅನೇಕ ಮಹಿಳಾ ಮುಖ್ಯಮಂತ್ರಿಗಳನ್ನು ಮಾಡಿದೆ, ಕಾಂಗ್ರೆಸ್ ಪಕ್ಷ ತನ್ನ ಮಹಿಳಾ ವಿರೋಧಿ ನೀತಿ ಮುಂದುವರೆಸುತ್ತಲೇ ಇದೆ, ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಿಸಿದಾಗಲೂ ವಿರೋಧ, ಸಿಎಎ ಅನುಷ್ಠಾನಕ್ಕೂ ವಿರೋಧವಿತ್ತು. ತ್ರಿವಳಿ ತಲಾಖ್ ರದ್ದನ್ನೂ ವಿರೋಧಿಸಿದ್ದರು. ಜಿಎಸ್‌ಟಿ ಜಾರಿಗೂ ವಿರೋಧ ಮಾಡಿದರು. ಆಯುಷ್ಮಾನ್ ಭಾರತ್ ಅನುಷ್ಠಾನಕ್ಕೆ ವಿರೋಧ, ಹೊಸ ಸಂಸತ್ತಿನ ಭವನ ನಿರ್ಮಾಣಕ್ಕೂ ವಿರೋಧ, ನಕ್ಸಲ್‌ವಾದ ಅಂತ್ಯ ಹಾಕಿದ್ದಕ್ಕೂ ವಿರೋಧ ಇವರದಾಗಿತ್ತು. ದೇಶ ರಕ್ಷಣೆಗಾಗಿ ಸರ್ಜಿಕಲ್ ಸ್ಟ್ರೈಕ್, ಏರ್ ಸ್ಟ್ರೈಕ್, ಆಪರೇಷನ್ ಸಿಂಧೂರ ಮಾಡಿದರೆ ಅದಕ್ಕೂ ವಿರೋಧ ಎಂದರೆ ಹೇಗೆ? ಎಂದು ಪ್ರಶ್ನಿಸಿದರು. ಕಾಂಗ್ರೆಸ್‌ನ ಸ್ತ್ರೀ ಕುಲದ ಬಗೆಗಿನ ಕಳಕಳಿ ಕೇವಲ ಮೊಸಳೆ ಕಣ್ಣೀರು ಎಂಬುದು ಸಾಬೀತಾಗಿದೆ, ಜನಸಂಖ್ಯೆ ಆಧಾರದಲ್ಲಿ ಜನಪ್ರತಿನಿಧಿಗಳ ಹೆಚ್ಚಳದಿಂದ ದಕ್ಷಿಣದ ರಾಜ್ಯಗಳಿಗೆ ಅನ್ಯಾಯ ಆಗುವುದಿಲ್ಲ, ಇದು ಕೇವಲ ಸುಳ್ಳು ಸುದ್ದಿ ಅಷ್ಟೇ, ಕಾಂಗ್ರೆಸ್ ಪಕ್ಷ ಇನ್ನಾದರೂ ಕುಟೀಲ ನೀತಿ ಬಿಟ್ಟು ಸಮಸ್ತ ಮಹಿಳಾ ಕುಲದ ಕ್ಷಮೆಯಾಚಿಸಿ ಕಾಯ್ದೆಗೆ ಬೆಂಬಲಿಸಬೇಕು ಎಂದು ಒತ್ತಾಯಿಸಿದರು.

ಮಲ್ಲಮ್ಮ ಜೋಗುರ್, ಭಾರತಿ ಬುಯಾರ್, ಪ್ರಭಾವತಿ ಪಾಟೀಲ, ಗೀತಾ, ಸುನೀತಾ ಒಡೆಯರ, ಡಾ.ಮಹಾನಂದಾ, ಅನ್ನಪೂರ್ಣ ರಾಠೋಡ, ವಿಜಯಲಕ್ಷ್ಮೀ, ಸುಮಿತ್ರಾ, ಶೀಲಾ ಕಾಕಡೆ, ಲಾಲುಬಾಯಿ, ಶಾಂತಾ, ಭಾರತಿ ಶಿವಣಗಿ, ನಂದಾ, ಪ್ರಿಯಾಂಕಾ ಇದ್ದರು.

ಮುಸ್ಲಿಮರು ಕಾಂಗ್ರೆಸ್‌ಗೆ ಮತ ಹಾಕಿಲ್ಲ: ಗಣಿಹಾರ

ವಿಜಯಪುರ: ಮುಸ್ಲಿಮ ಸಮಾಜ ಜಮೀರ್ ಅಹ್ಮದ್, ನಸೀರ್ ಅಹ್ಮದ್ ಅವರನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕೇಂದ್ರೀಕರಿಸಿ ಮುಸ್ಲಿಂರು ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಿದ್ದಾರೆ ಎಂಬ ಉಲೇಮಾಗಳ ನಿಲುವು ಸರಿಯಲ್ಲ, ಯಾರನ್ನೋ ಮಂತ್ರಿ ಮಾಡಲು ಮುಸ್ಲಿಂರು ವೋಟು ಹಾಕಿಲ್ಲ ಎಂದು ಕಾಂಗ್ರೆಸ್ ಮುಖಂಡ ಎಸ್.ಎಂ.ಪಾಟೀಲ ಗಣಿಹಾರ ಹೇಳಿದರು.



ನಗರದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನದ ರಕ್ಷಣೆ ಜಾತ್ಯತೀತ ಸರ್ಕಾರದ ಮನೋಭಾವನೆ ಉದ್ದೇಶಕ್ಕಾಗಿ ಮತ ಹಾಕಿದ್ದಾರೆ, ಹೀಗಾಗಿ ಕಾಂಗ್ರೆಸ್ ಹಾಗೂ ಮುಸ್ಲಿಂರ ನಡುವೆ ಬಾಂಧವ್ಯಕ್ಕೆ ಧಕ್ಕೆ ತರುವುದು ಬೇಡ ಎಂದರು.

ಮುಸ್ಲಿಮರ ಬೇಡಿಕೆಗಳ ಬಗ್ಗೆ ಉಲೇಮಾಗಳು ಧ್ವನಿ ಎತ್ತಲಿಲ್ಲ, ಮತಪಟ್ಟಿ ಪರಿಷ್ಕರಣೆ ಅವೈಜ್ಞಾನಿಕತೆ, ಎಸ್‌ಐಆರ್ ಬಗ್ಗೆ ಉಲೇಮಾಗಳು ಮೌನ ವಹಿಸಿದ್ದೇಕೆ. ಮುಸ್ಲಿಂರ ಮೀಸಲಾತಿ ರದ್ದುಗೊಳಿಸಿದ ಬಗ್ಗೆಯೂ ಧ್ವನಿ ಎತ್ತಲಿಲ್ಲವೇಕೆ? ಎಂದರು.

ಕೆಲವು ನಾಯಕರ ತಲೆದಂಡವಾದರೆ ಕಾಂಗ್ರೆಸ್ ವಿರುದ್ಧ ಅಸಮಾಧಾನ ಹೊರಹಾಕಿದರೆ, ಉಲೇಮಾಗಳ ಬಗ್ಗೆ ನನಗೆ ಅಪಾರ ಗೌರವವಿದೆ. ಉಲೇಮಾಗಳು ದೇಶದ ಸ್ವಾತಂತ್ರ್ಯಕ್ಕೆ ನೀಡಿದ ಕೊಡುಗೆ ಅನನ್ಯ, ಕಾಲಾಪಾನಿ ಶಿಕ್ಷೆಯನ್ನು ಸಾಕಷ್ಟು ಜನ ಉಲೇಮಾಗಳು ಅನುಭವಿಸಿದರು. ಅನೇಕ ಉಲೇಮಾಗಳನ್ನು ಬ್ರಿಟಿಷರು ನೇಣಿಗೆ ಹಾಕಿದ ಉದಾಹರಣೆಯೂ ಇದೆ ಎಂದರು.

ಮುಸ್ಲಿಂ ಸಮುದಾಯ ಟಿಕೆಟ್ ಪ್ರತಿಪಾದಿಸಿದ್ದು ಸಮಂಜಸ, ಇದನ್ನು ಹೈಕಮಾಂಡ್ ಸಹ ಒಪ್ಪಿದೆ, ಪಕ್ಷದ ಸಭೆಯಲ್ಲಿ ಮುಸ್ಲಿಂ ಸಮುದಾಯದ ನಾಯಕರಿಗೆ ಮಲ್ಲಿಕಾರ್ಜುನ ಅವರು ಕೆಲವು ವಿಚಾರಗಳು ಮನಸ್ಸಿಗೆ ನಾಟುವಂತೆ ಇದ್ದವು ಎಂಬುದು ಅಲ್ಪಸಂಖ್ಯಾತ ಮುಖಂಡರನ್ನು ಕೆರಳಿಸಿದ್ದೂ ನಿಜವೇ, ಆದರೆ ಒಂದು ಟಿಕೆಟ್ ಕೊಟ್ಟಿಲ್ಲ ಎಂದು, ಕೆಲವು ನಾಯಕರಿಗೆ ಕ್ರಮ ಆಗಿದೆ ಎಂದು ಕಾಂಗ್ರೆಸ್ ದೂರುವುದು ಸರಿಯಲ್ಲ ಎಂದರು. ಅಲ್ಪಸಂಖ್ಯಾತ ಮುಖಂಡ ಎಂ.ಸಿ. ಮುಲ್ಲಾ ಮಾತನಾಡಿ, ಪಕ್ಷದ ಕೆಲವು ನಿರ್ಧಾರಗಳು ತರಾತುರಿಯಲ್ಲಿ ನಡೆದಿವೆ, ಅಬ್ದುಲ್ ಜಬ್ಬಾರ್ ವಿಧಾನ ಪರಿಷತ್ ಸದಸ್ಯರು, ಅನೇಕ ಬಾರಿ ಅವರಿಗೆ ಕಾಂಗ್ರೆಸ್ ಪಕ್ಷ ಅಧಿಕಾರ ನೀಡಿದೆ, ಉಪಚುನಾವಣೆಯಲ್ಲಿ ಜಬ್ಬಾರ್ ಅವರು ಸ್ವಯಂ ಪ್ರೇರಿತವಾಗಿ ಕೆಲಸ ಮಾಡಬೇಕಿತ್ತಲ್ಲವೇ?, ಕಾಂಗ್ರೆಸ್ ಅಲ್ಪಸಂಖ್ಯಾತ ಸಂಘಟನೆಯ ಬಗ್ಗೆ ಅವರು ಕಾಳಜಿಯೇ ತೋರಿಲ್ಲ, ಎಲ್ಲಿಯೂ ಜಿಲ್ಲಾ ಪ್ರವಾಸ ಮಾಡಲೇ ಇಲ್ಲ, ತಮ್ಮ ಜವಾಬ್ದಾರಿಯನ್ನು ಜಬ್ಬಾರ್ ನಿಭಾಯಿಸಿಲ್ಲ ಎಂದರು. ಸಚಿವ ಜಮೀರ್ ಅಹ್ಮದ್ ಅವರು ಎಲ್ಲಿಯೂ ಅಲ್ಪಸಂಖ್ಯಾತ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯೇ ನಡೆಸಿಲ್ಲ, ಒಬ್ಬ ಮುಸ್ಲಿಂರಿಗೂ ಗಂಗಾ ಕಲ್ಯಾಣ ಯೋಜನೆ ಫಲಾನುಭವ ದೊರಕಿಲ್ಲ, ಹಾಗಾದರೆ ಸಚಿವರು ಮಲಗಿದ್ದಾರೆಯೇ ಎಂದು ಪ್ರಶ್ನಿಸಿದರು.

ನಾಗರಾಜ್ ಲಂಬು, ಫಯಾಜ್ ಕಲಾದಗಿ, ವಸಂತ ಹೊನಮೋಡೆ ಇದ್ದರು.

ಕಠಿಣ ಶ್ರಮ, ಛಲವೊಂದಿದ್ದರೆ ಸಾಧನೆ ಸಾಧ್ಯ

ವಿಜಯಪುರ: ಕಠಿಣ ಪರಿಶ್ರಮ ಹಾಗೂ ಛಲ ಹೊಂದಿ ಸಾಧನೆಯಡೆಗೆ ಸಾಗಿ ಸಾಧಕರಾಗಬೇಕು. ಭಗೀರಥ ಪ್ರಯತ್ನ ಮೈಗೂಡಿಸಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಗುರುವಾರ ಹಮ್ಮಿಕೊಂಡ ಭಗೀರಥ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಭಗೀರಥ ಎಂದರೆ ವಿಶೇಷ ಪ್ರಯತ್ನ, ಅಸಾಧ್ಯವಾದನ್ನು ಸಾಧಿಸಿ ಬಿಟ್ಟರೆ ಅವರು ಮಾಡಿರುವುದು ಭಗೀರಥ ಪ್ರಯತ್ನ ಎಂದರು.

ಭಗೀರಥರು ಕಠಿಣ ಪರಿಶ್ರಮದಿಂದ ಪವಿತ್ರ ಗಂಗೆಯನ್ನು ಭೂಮಿಗೆ ತರಬೇಕೆಂಬ ತಮ್ಮ ಗುರಿಯನ್ನು ಸಾಧಿಸಿದರು. ಭಗೀರಥರ ಸಾಧನೆ ಸರ್ವಕಾಲಕ್ಕೂ ಮಾದರಿಯಾಗಿದೆ ಎಂದು ಅವರು ಎಂದು ಹೇಳಿದರು.

ಸಂಗಮೇಶ ಮಿರಗಿ ಮಾತನಾಡಿ, ದೇವ ಗಂಗೆಯನ್ನು ಧರೆಗೆ ತಂದ ಭಗೀರಥರು ಮಹಾತಪಸ್ಸನ್ನು ಕಠೋರವಾದ ಗಂಗೆ ಕುರಿತು ಘೋರ ತಪಸ್ಸು ಮಾಡಿ ಗಂಗೆಯನ್ನು ಧರೆಗಿಳಿಸಿದರು. ತಮ್ಮ ಪೂರ್ವಜರ ಮುಕ್ತಿಗಾಗಿ ಗಂಗೆಯನ್ನು ಭೂಮಿಗೆ ತರಲು ಕಠಿಣ ತಪಸ್ಸು ಮಾಡಿದರು. ಆದರೆ ಗಂಗೆಯ ರಭಸವನ್ನು ಭೂಮಿ ತಡೆದುಕೊಳ್ಳಲು ಸಾಧ್ಯವಿಲ್ಲ ಎಂದು ಅರಿತಾಗ ಮತ್ತೆ ಹತಾಶಕ್ಕೊಳಗಾಗದೇ ಪರಶಿವನನ್ನು ತಪಸ್ಸು ಮಾಡಿ ಶಿವನ ಒಲಿಸಿಕೊಂಡು, ಶಿವನ ಕುರಿತು ಪ್ರಾರ್ಥನೆ ಮಾಡಿ, ಗಂಗೆಯನ್ನು ಭೂಮಿಗೆ ತಂದರು ಎಂದ ಅವರು, ಛಲದಿಂದ ಹಿಡಿದ ಕಾರ್ಯವನ್ನು ಮನಸ್ಸಿಟ್ಟು ಮಾಡಿದರೆ ಯಶಸ್ಸು ಸಾಧ್ಯ ಎಂದರು.

ಸಮಾಜ ಮುಖಂಡ ಜಕ್ಕಪ್ಪ ಯಡವೆ ಮಾತನಾಡಿ, ಮಹರ್ಷಿ ಭಗೀರಥರ ಜಯಂತಿಯನ್ನು ಸರ್ಕಾರ ಆಚರಿಸುವ ಮೂಲಕ ಮಹರ್ಷಿ ಅವರ ವಿಚಾರಧಾರೆ ತಿಳಿದುಕೊಳ್ಳಲು ಸಹಕಾರಿಯಾಗಿದೆ. ಯುವಕರು ಭಗೀರಥರ ಆದರ್ಶ ವಿಚಾರಗಳನ್ನು ಅರಿಯಬೇಕು ಎಂದರು.

ಜಿಪಂ ಉಪ ನಿರ್ದೇಶಕ ನಾಗಭೂಷಣ ಮಾಡಕಿ, ಪಾಲಿಕೆ ಉಪ ಆಯುಕ್ತ ಮಹಾವೀರ ಬೋರಣ್ಣವರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಂತೋಷ ಭೋವಿ, ವಾರ್ತಾಧಿಕಾರಿ ಅಮರೇಶ ದೊಡಮನಿ, ಅಡಿವೆಪ್ಪ ಸಾಲಗಲ್, ಸೋಮಗೌಡ ಕಲ್ಲೂರು, ವಿದ್ಯಾವತಿ ಅಂಕಲಗಿ, ಭೀಮರಾಯ ಜಿಗಜಿಣಗಿ ಇದ್ದರು.



ಗ್ರಾಮೀಣ ಪ್ರದೇಶದಲ್ಲಿ ಆಶಾ ಕಾರ್ಯಕರ್ತೆಯರ ಸೇವೆ ಶ್ಲಾಘನೀಯ

ವಿಜಯಪುರ: ರಾಜ್ಯದ ಆರೋಗ್ಯ ಕ್ಷೇತ್ರದಲ್ಲಿ ಮಹಿಳೆಯರು ಮತ್ತು ಮಕ್ಕಳ ಆರೋಗ್ಯ ಸುರಕ್ಷತೆಗಾಗಿ ಆಶಾ ಕಾರ್ಯಕರ್ತೆಯರು ಮಾಡುವ ಕಾರ್ಯವು ಅತ್ಯಂತ ಕಷ್ಟದಾಯಕವಾಗಿರುವಂತಹದು. ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಆಶಾ ಕಾರ್ಯಕರ್ತೆಯರು ಸಾರ್ವಜನಿಕರು ಹಾಗೂ ಆರೋಗ್ಯ ಇಲಾಖೆಯ ನಡುವೆ ಪ್ರಮುಖ ಕೊಂಡಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಕನ್ನಡದ ಕಟ್ಟಾಳು ಗಂಗಾಧರ ಕೋರಳ್ಳಿ ಪ್ರತಿಷ್ಠಾನದ ಕಾರ್ಯದರ್ಶಿ ಲಾಯಪ್ಪ ಇಂಗಳೆ ಹೇಳಿದರು.

ನಗರದಲ್ಲಿ ಶಿವಶರಣ ಶೈಕ್ಷಣಿಕ ಗ್ರಾಮೀಣಾಭಿವೃದ್ಧಿ ಹಾಗೂ ವಿವಿಧೋದ್ದೇಶಗಳ ಸಂಸ್ಥೆ ಹಾಗೂ ಕನ್ನಡದ ಕಟ್ಟಾಳು ಗಂಗಾಧರ ಕೋರಳ್ಳಿ ಪ್ರತಿಷ್ಠಾನವತಿಯಿಂದ ಗೀತಾ ಎಚ್.ಅವರು ವಿಜಯಪುರ ಜಿಲ್ಲೆಯ ಆಶಾ ಕಾರ್ಯಕರ್ತೆಯರ ಕುರಿತು ಒಂದು ಅಧ್ಯಯನ ಎಂಬ ವಿಷಯ ಮಂಡಿಸಿದ ಸಂಶೋಧನಾ ಪ್ರಬಂಧಕ್ಕೆ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವ ವಿದ್ಯಾನಿಲಯವು ಪಿಎಚ್‌ಡಿ ಪದವಿ ನೀಡಿದ ಹಿನ್ನೆಲೆಯಲ್ಲಿ ಸನ್ಮಾನಿಸಿ ಅವರು ಮಾತನಾಡಿದರು.



ಶಿವಶರಣ ಶೈಕ್ಷಣಿಕ ಗ್ರಾಮೀಣಾಭಿವೃದ್ಧಿ ಹಾಗೂ ವಿವಿಧೋದ್ದೇಶಗಳ ಸಂಸ್ಥೆ ಅಧ್ಯಕ್ಷ ಕಲ್ಲಪ್ಪ ಶಿವಶರಣ ಮಾತನಾಡಿ, ಸಾರ್ವಜನಿಕ ಕ್ಷೇತ್ರದಲ್ಲಿ ಕೆಳಹಂತದಲ್ಲಿ ಕೆಲಸ ನಿರ್ವಹಿಸುವ ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರು ದಿನಗೂಲಿ ಕಾರ್ಮಿಕರು ಸೇರಿದಂತೆ ತುಳಿತಕ್ಕೊಳಗಾದ ಸಮಾಜದ ಜನರ ಕುರಿತು ಹೆಚ್ಚು ಹೆಚ್ಚು ಅಧ್ಯಯನಗಳು ನಡೆದು ಅವರು ಸಲ್ಲಿಸುವ ಸೇವೆ, ಕಷ್ಟಕಾರ್ಪಣ್ಯಗಳ ಕುರಿತು ಬೆಳಕು ಚೆಲ್ಲವ ಕಾರ್ಯ ಆಗಬೇಕು. ಆ ನಿಟ್ಟಿನಲ್ಲಿ ಗೀತಾ ಎಚ್ ಅವರು ಮಂಡಿಸಿದ ಪ್ರಬಂಧ ಮಾದರಿಯಾಗಿದೆ ಎಂದರು. ಉಪನ್ಯಾಸಕಿ ಡಾ.ಗೀತಾ ಸಿ.ಇದ್ದರು

ಶ್ರೀಗುರು ಸೇವಾ ರತ್ನ ಪ್ರಶಸ್ತಿ ಪ್ರದಾನ



ಬಸವನಬಾಗೇವಾಡಿ: ತಾಲೂಕಿನ ಉತ್ನಾಳ ಗ್ರಾಮದ ಹಿರೇಮಠ ಮಹಾಲಕ್ಷ್ಮೀದೇವಿ ಶಕ್ತಿ ಪೀಠ ಜಾತ್ರಾ ಮಹೋತ್ಸವದ ನಿಮಿತ್ತ ಸನಾತನ ಧರ್ಮದ ಮೌಲ್ಯಗಳನ್ನು ಉಳಿಸಿ ಬೆಳೆಸುವಲ್ಲಿ ಹಾಗೂ ಗುರು ಭಕ್ತಿ, ಸಮಾಜ ಸೇವೆ, ಧಾರ್ಮಿಕ ಸೇವೆಯಲ್ಲಿ ತೋರಿದ ಅನುಪಮಾ ಸೇವೆಯನ್ನು ಗುರುತಿಸಿ ನಿಮ್ಮ ಸೇವಾ ಸಾಧನೆಗಳು ಸಮಾಜದಲ್ಲಿ ಧರ್ಮ ನಿಷ್ಠೆ, ನೈತಿಕತೆ ಮತ್ತು ಸೇವಾಭಾವನೆ ಉತ್ತೇಜಿಸುವ ನಿಟ್ಟಿನಲ್ಲಿ ಶ್ರೀಮಹಾಲಕ್ಷ್ಮೀದೇವಿ ಆರಾಧಕ ಕಲಿಯುಗದ ಕಲ್ಪವೃಕ್ಷ ಎಂದೇ ಪ್ರಖ್ಯಾತ್ಯರಾದ ಶಿವಮುತ್ರಯ್ಯ ಸ್ವಾಮೀಜಿ ಅವರು ಭಾರತೀಯ ಸ್ಟೇಟ್ ಆಫ್ ಇಂಡಿಯಾ ಬ್ಯಾಂಕಿನ ಬಸವನಬಾಗೇವಾಡಿ ಶಾಖಾ ವ್ಯವಸ್ಥಾಪಕ ರಾಘವೇಂದ್ರ ಮರಿಯಪ್ಪ ಕಟ್ಟಿ ದಂಪತಿಗಳಿಗೆ 2026ನೇ ಸಾಲಿನ ಶ್ರೀಗುರು ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಿದರು.

ಐಶ್ವರ್ಯ ರಂಜಣಗಿ ತಾಲೂಕಿಗೆ ಪ್ರಥಮ

ಬಸವನಬಾಗೇವಾಡಿ: 2025-26ನೇ ಸಾಲಿಗೆ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 5226 ವಿದ್ಯಾರ್ಥಿಗಳು ಹಾಜರಾಗಿ 4955 ವಿದ್ಯಾರ್ಥಿಗಳು ಉತ್ತೀರ್ಣಗೊಂಡು ಶೇ.94.81ರಷ್ಟು ಫಲಿತಾಂಶ ಬಂದಿದ್ದು ಬಸವನಬಾಗೇವಾಡಿ ತಾಲೂಕು ಜಿಲ್ಲೆಗೆ 3ನೇ ಸ್ಥಾನ ಪಡೆದುಕೊಂಡಿದೆ. 8 ಸರಕಾರಿ ಶಾಲೆಗಳು, 6 ಅನುದಾನಿತ ಶಾಲೆಗಳು 17 ಅನುದಾನ ರಹಿತ ಶಾಲೆಗಳಿಗೆ 100ಕ್ಕೆ 100ರಷ್ಟು ಫಲಿತಾಂಶ ಬಂದಿವೆ. ತಾಲೂಕಿನ ಮಸಬಿನಾಳ ಅನುದಾನಿತ ಎನ್‌ಇಎಚ್‌ಎಸ್ ಶಾಲೆಯ ವಿದ್ಯಾರ್ಥಿನಿ ಐಶ್ವರ್ಯ ರಂಜಣಗಿ 625ಕ್ಕೆ 619 ಅಂಕ ಪಡೆದು ಶೇ.99.04 ಸಾಧನೆ ಮಾಡಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ, ನಿಡಗುಂದಿ ಅನುದಾನ ರಹಿತ ಸುಜ್ಞಾನ ಎನ್‌ಪಿಎಸ್ ಶಾಲೆಯ ವಿದ್ಯಾರ್ಥಿನಿ ಕು.ಹರಿಪ್ರಿಯಾ ಪರ್ವತೀಕರ 625ಕ್ಕೆ 618 ಅಂಕ ಪಡೆದು ಶೇ.98.88 ಸಾಧನೆ ಮಾಡಿ ತಾಲೂಕಿಗೆ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾಳೆ. ತಾಲೂಕಿನ ಹುಣಶ್ಯಾಳ ಪಿ.ಬಿ ಗ್ರಾಮದ ಸಮೀಪದ ಸರಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿನಿ ಕು.ವಿದ್ಯಾ ನೀಲಕಂಠ ಹೂಗಾರ 625ಕ್ಕೆ 617 ಅಂಕ ಪಡೆದು ಶೇ.98.72 ಸಾಧನೆ ಮಾಡಿ ತಾಲೂಕಿಗೆ ತೃತೀಯ ಸ್ಥಾನ ಪಡೆದುಕೊಂಡಿದ್ದಾಳೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವಸಂತ ರಾಠೋಡ ಸೇರಿದಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಧಾರ್ಮಿಕ ಕಾರ್ಯಕ್ಕೆ ಶಕ್ತಿಪೀಠ ಸಂಘ ಸಹಾಯವಾಗಲಿ

ದೇವರಹಿಪ್ಪರಗಿ: ತಿಳಗೂಳ ಗ್ರಾಮದ ಆಶ್ರಮದ ಚಕ್ರ ಬಗಳಾಂಬ ಶಕ್ತಿಪೀಠ ಪ್ರತಿಷ್ಠಾನ ಸಂಘ ಉದ್ಘಾಟನೆ ಕಾರ್ಯಕ್ರಮ ಶುಕ್ರವಾರ ನೆರವೇರಿತು.

ಸಂಘದ ಅಧ್ಯಕ್ಷ ಮಹೇಶ್ವರಾನಂದ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಎಂ.ಸಿ.ಕಾಸರ ಅಧ್ಯಕ್ಷತೆ ವಹಿಸಿ ಮಾತಾನಾಡಿದರು. ಶ್ರೀಕಾಂತ ಪತ್ತಾರ ಮಾತನಾಡಿದರು. ಸಂಘದ ಉಪಾಧ್ಯಕ್ಷ ಗಂಗಾಧರ ಬಾಗೇವಾಡಿ ಮಾತನಾಡಿ, ಸಂಘದಿಂದ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಿಗೆ ಸಹಾಯ ಆಗಬೇಕು ಜೊತೆಗೆ ಆಶ್ರಮದ ಅಭಿವೃದ್ಧಿಗೆ ಎಲ್ಲಾ ಸದಸ್ಯರು ಶ್ರಮಿಸಬೇಕು ಎಂದು ಹೇಳಿದರು.



ಖಜಾಂಚಿ ಶಿವಪುತ್ರ ಸಾತಿಹಾಳ ಮಾತನಾಡಿ, ಸಂಘ ಮಾಡೋವದು ದೊಡ್ಡ ಕಾರ್ಯವಲ್ಲ ಅದನ್ನು ಮುಂದುವರೆಸಿ ಕೊಂಡು ಹೋಗಬೇಕು ಜೊತೆಗೆ ಸಂಘದಿಂದ ಹಲವಾರು ಸಮಾಜಮುಖಿ ಕಾರ್ಯಕ್ರಮ ಆಗಬೇಕು ಎಂದರು.

ಮಹಿಳಾ ಸದಸ್ಯರ ಪ್ರತಿನಿಧಿಯಾಗಿ ಶರಣಮ್ಮ ಬಂಡೋಳಿ ಮಾತನಾಡಿ, ಆಶ್ರಮದ ಸ್ವಾಮೀಜಿಗಳು ಸಮಾಜಗೋಸ್ಕರ ತಮ್ಮನ್ನು ತಾವು ಅರ್ಪಣೆ ಮಾಡಿಕೊಂಡಿರುತ್ತಾರೆ. ಜೊತೆಗೆ ಅನೇಕ ಸಮಾಜಮುಖಿ ಕಾರ್ಯಕ್ರಮಗಳಿಗೆ ಯಾವದೇ ಪ್ರತಿಫಲ ಬಯಸದೆ ಸಾರ್ವಜನಿಕರಿಗೆ ಅನುಕೂಲ ಮಾಡಿ ಕೊಟ್ಟಿದ್ದಾರೆ ಅವರ ಸೇವೆ ಪವಿತ್ರವಾದದ್ದು ಅವರ ಮಾರ್ಗದರ್ಶನದಲ್ಲಿ ಸಂಘ ಮುಂದುವರೆದು ಈ ಆಶ್ರಮದ ನಮ್ಮೂರಿನ ಅಭಿವೃದ್ಧಿಗೆ ಎಲ್ಲರು ಕೆಲಸ ಮಾಡೋಣ ಎಂದರು.

ನಾಗರಾಜ ಪತ್ತಾರ, ಕಳಪ್ಪ ಪತ್ತಾರ, ಬಸವರಾಜ ಮಾಡಗಿ, ಮಾನು ಬಡಿಗೇರ. ಗಾಯಿತ್ರಿ ಶಿಲ್ಪಿ, ಅನುಸುಬಾಯಿ ಮದ್ದರಕಿ, ಸೋಮಲಿಂಗ ಸಂಗೋಗಿ, ಶ್ರೀಮಂತ ರಾಠೋಡ, ನಿಂಗರಾಜ ಚವ್ಹಾಣ, ಮಲ್ಲಿನಾಥ ವಾಲಿಕಾರ, ದೇವೇಂದ್ರ ಬಡಿಗೇರ, ಮನೋಹರ ವಿಶ್ವಕರ್ಮ ಮಾರುತಿ ಕಮ್ಮಾರ, ರವೀಂದ್ರ ಬಡಿಗೇರ, ಸತೀಶ ಬಡಿಗೇರ ಜಗದೀಶ ಸಾತಿಹಾಳ, ಬಸವಶ್ರೀ ಬಂಡೋಳಿ, ಶಿಕ್ಷಕ ಸಾಹೇಬಗೌಡ ಬಿರಾದಾರ ಇದ್ದರು.

ಆಸ್ಪತ್ರೆ, ಸಂಶೋಧನ ತಂಡಕ್ಕೆ ಗೆಲುವು

ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಎಎಸ್ ಪಾಟೀಲ ಕಾಮರ್ಸ್ ಕಾಲೇಜಿನಲ್ಲಿ ಹಮ್ಮಿಕೊಂಡ ಬಿಎಲ್‌ಡಿಇಎ ಕ್ರಿಕೆಟ್ ಕಪ್- 2026 ಅಂತರ ಪದವಿ ಮಹಾವಿದ್ಯಾಲಯ ಪಂದ್ಯಾವಳಿಯನ್ನು ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರ ತಂಡ ಗೆದ್ದುಕೊಂಡಿದೆ.

ಏ.17ರಿಂದ ಏ. 26ರ ವರೆಗೆ ಏಳು ದಿನಗಳ ಕಾಲ ನಡೆದ ಈ ಕ್ರೀಡಾಕೂಟದಲ್ಲಿ ಒಟ್ಟು 14 ನಾನಾ ಕಾಲೇಜುಗಳ ತಂಡಗಳು ಭಾಗವಹಿಸಿದ್ದವು. ಫೈನಲ್ ಪಂದ್ಯದಲ್ಲಿ ಆಯುರ್ವೇದ ಕಾಲೇಜು ತಂಡ ಎಸ್‌ಬಿ ಆರ್ಟ್ಸ್ ಮತ್ತು ಮತ್ತು ಕೆಸಿಪಿ ಸೈನ್ಸ್ ಕಾಲೇಜು ತಂಡವನ್ನು 36 ರನ್‌ಗಳಿಂದ ಸೋಲಿಸಿತು. ಅಲ್ಲದೇ, ಟ್ರೋಫಿಯ ಜೊತೆಗೆ 51,000 ನಗದು ರೂ. ಬಹುಮಾನ ಪಡೆದುಕೊಂಡಿತು.

ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಮತ್ತು ಕೋಚ್ ಈರಪ್ಪ ಇಕ್ಕಳಕಿ ಮಾರ್ಗದರ್ಶನದಲ್ಲಿ ತಂಡವು ಸಾಧಿಸಿರುವುದಕ್ಕೆ ಕಾಲೇಜಿನ ಪ್ರಾಚಾರ್ಯ ಡಾ. ಅಶೋಕ ಪಾಟೀಲ, ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಸಂಜಯ ಕಡ್ಲಿಮಟ್ಟಿ, ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.



ಜೀವನ ಮೌಲ್ಯ ಬೋಧಿಸಿದ ಡಾ.ರಾಜಕುಮಾರ್

ವಿಜಯಪುರ: ನಟನೆಯ ಮೂಲಕ ಜೀವನ ಮೌಲ್ಯಗಳನ್ನು ಬೋಧಿಸಿದ ವರನಟ ಡಾ.ರಾಜಕುಮಾರ್ ಕನ್ನಡದ ಶ್ರೇಷ್ಠ ರತ್ನ ಎಂದು ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಹೇಳಿದರು.

ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡ ಡಾ.ರಾಜ್ ಕುಮಾರ ಜನ್ಮದಿನೋತ್ಸವ ಹಾಗೂ ಅವರ ಗೀತೆಗಳ ಗಾಯನ ಸಮಾರಂಭದಲ್ಲಿ ಅವರು ಮಾತನಾಡಿದರು.

ಕಾನಿಪ ಸಂಘದ ಜಿಲ್ಲಾಧ್ಯಕ್ಷ ಅಶೋಕ ಯಡಳ್ಳಿ ಮಾತನಾಡಿ, ಬಹುಭಾಷಾ ನಟರಾಗಿ ಮಿಂಚುವ ಅವಕಾಶ ಇದ್ದರೂ ಸಹ ಅದನ್ನು ನಿರಾಕರಿಸಿ ಕನ್ನಡ ಚಿತ್ರಗಳಲ್ಲಿರುವೆ ನಟಿಸುವೆ ಎಂಬ ಡಾ. ರಾಜಕುಮಾರ್ ಅವರ ನಿಲುವೇ ಕನ್ನಡಾಭಿಮಾನಕ್ಕೆ ದಿವ್ಯ ನಿದರ್ಶನ ಎಂದರು.

ಪತ್ರಕರ್ತ ಪರಶುರಾಮ ಭಾಸಗಿ ಉಪನ್ಯಾಸ ನೀಡಿ ಮಾತನಾಡಿ, ಡಾ.ರಾಜಕುಮಾರ್ ಅವರದ್ದು ಹೋಲಿಕೆಗೆ ನಿಲುಕದ ವ್ಯಕ್ತಿತ್ವ, ಅವರಿಗೆ ಅವರೇ ಸಾಟಿ, ನಾವು ಒಳ್ಳೆಯವರನ್ನು ರಾಜಕುಮಾರ್ ಅವರಿಗೆ ಹೋಲಿಸುತ್ತೇವೆ ಎಂದರು.

ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಎಲ್.ಬಿ. ಶೇಖ್ ಮಾಸ್ತರ್ ಮಾತನಾಡಿ, ಡಾ.ರಾಜಕುಮಾರ್ ನಾಟಕ ಕಂಪನಿ ಮೂಲಕವೇ ಚಿತ್ರ ರಂಗದಲ್ಲಿ ಬೆಳಗಿದ ಮಹಾನ್ ಚೇತನ, ರಂಗಭೂಮಿಯೇ ಅವರ ತಾಯಿಬೇರು ಎಂದರು.



ಪಾಲಿಕೆ ಉಪ ಆಯುಕ್ತ ಮಹಾವೀರ ಬೋರಣ್ಣವರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಭೀಮರಾವ ಜಿಗಜಿಣಗಿ, ಸೋಮು ಕಲ್ಲೂರ, ಫಯಾಜ್ ಕಲಾದಗಿ, ಸುರೇಶ ಬಿಜಾಪೂರ, ಶರಣು ಸಬರದ ಇದ್ದರು.

ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ಅಮರೇಶ ದೊಡಮನಿ ಸ್ವಾಗತಿಸಿದರು. ವಿರೇಶ ವಾಲಿ ಪ್ರಾರ್ಥಿಸಿದರು. ಸಂಗೀತಾ ಮಠಪತಿ ನಿರೂಪಿಸಿದರು.

ಕಿರುಸುದ್ದಿ

ಲಿಂಗನಬಂಡಿ ಮೊರಾರ್ಜಿ ವಸತಿ ಶಾಲೆ ಶೇ.100ರಷ್ಟು ಸಾಧನೆ

ಯಲಬುರ್ಗಾ: ತಾಲೂಕಿನ ಲಿಂಗನಬಂಡಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.100ರಷ್ಟು ಸಾಧನೆ ಮಾಡಿದೆ. ಒಟ್ಟು 49 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಎಲ್ಲ 49 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಶ್ರೀನಿವಾಸ ಕಟ್ಟಿಮನಿ 614 ಅಂಕಗಳನ್ನು ಪಡೆದು ಶೇ 98.24 ಪಡೆದು ಪ್ರಥಮ ಸ್ಥಾನ ಪಡೆದಿದ್ದಾರೆ. ರಂಜಿತಾ ಪಾಟೀಲ 608 ಅಂಕಗಳನ್ನು ಪಡೆದು ಶೇ 97.28 ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ. ಚಂದ್ರಿಕಾ 601 ಪಡೆದು ಶೇ.96.16 ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಪ್ರಾಚಾರ್ಯ ಶ್ರೀಧರ ಮ್ಯಾಗೇರಿ, ಶಿಕ್ಷಣ ಪ್ರೇಮಿ,ಜಿಪಂ ಮಾಜಿ ಸದಸ್ಯ ರಾಮಣ್ಣ ಸಾಲಭಾವಿ ಹರ್ಷ ವ್ಯಕ್ತಪಡಿಸಿದ್ದಾರೆ.





ರೋಹಿತ್‌ಗೆ 611 ಅಂಕ

ಹಟ್ಟಿಚಿನ್ನದಗಣಿ: ರೋಹಿತ ಕಡೆಮನಿ ಹುಸೇನಪ್ಪ ಕಡೆಮನಿ ವಿದ್ಯಾರ್ಥಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 611 ಅಂಕಗಳನ್ನು ಪಡೆಯುವದರ ಮುಖಾಂತರ ಕೀರ್ತಿಯನ್ನು ಹೆಚ್ಚಿಸಿದ್ದಾನೆ. ಹಟ್ಟಿಚಿನ್ನದಗಣಿಗೆ ಸಮೀಪದ ನಿಲೋಗಲ್ ಗ್ರಾಮದ ರೈತ ಮತ್ತು ನಿಲೋಗಲ್ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಅತಿಥಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಹುಸೇನಪ್ಪ ಕಡೆಮನಿ ಇವರ ಪುತ್ರ ಆಡವಿಬಾವಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ. ಕಡುಬಡತನದಲ್ಲಿ ಜನಿಸಿ, ರೈತಾಪಿ ವರ್ಗದ ಹುಸೇನಪ್ಪ ಅವರ ಮಗನ ಅದ್ವಿತೀಯ ಸಾಧನೆ ಶಿಕ್ಷಣ ಪ್ರೇಮಿಗಳಲ್ಲಿ, ಗ್ರಾಮಸ್ಥರಿಗೆ ಮಾದರಿಯಾಗಿದೆ. ಎಂಬಿಬಿಎಸ್ ಮಾಡುವ ಇಂಗಿತ ವ್ಯಕ್ತಪಡಿಸಿದ ಪ್ರತಿಭಾವಂತ ರೋಹಿತ್ ಕಡೆಮನಿ ಇವರಿಗೆ ಶಿಕ್ಷಣ ನೀಡುವಲ್ಲಿ ಸಂಸ್ಥೆಗಳು ವ್ಯವಸ್ಥೆ ಕಲ್ಪಿಸಿಕೊಡಬೇಕಾಗಿದೆ ಎಂಬುದು ಶಿಕ್ಷಣ ಪ್ರೇಮಿಗಳ ಅಭಿಪ್ರಾಯವಾಗಿದೆ.



ಅಭಿ ಕುಷ್ಟಗಿ ತಾಲೂಕಿಗೆ ಪ್ರಥಮ ಸ್ಥಾನ



ಹನುಮಸಾಗರ: ಸಮೀಪದ ಕಾಟಾಪುರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿ ಅಭಿ ಹುನುಕುಂಟಿ ಸಾಬೀತುಪಡಿಸಿದ್ದಾನೆ. ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ 625ಕ್ಕೆ 620 ಅಂಕ ಪಡೆಯುವ ಮೂಲಕ ಇಡೀ ಕುಷ್ಟಗಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದು ಶಾಲೆಯ ಕೀರ್ತಿ ಹೆಚ್ಚಿಸಿದ್ದಾನೆ. ಕನ್ನಡ 125, ಹಿಂದಿ 100, ಗಣಿತ 97, ವಿಜ್ಞಾನ 99, ಸಮಾಜ ವಿಜ್ಞಾನ 100, ಇಂಗ್ಲಿಷ್ 99 (ಒಟ್ಟು ಅಂಕಗಳು 620/625) ಹನುಮಸಾಗರ ಪಟ್ಟಣದ ಪ್ರಮುಖ ಮುಖಂಡರು ಹಾಗೂ ಪಾಲಕರು ಶಿಕ್ಷಣ ಪ್ರೇಮಿಗಳು ವಿದ್ಯಾರ್ಥಿಗಳಿಗೆ ಶುಭಹಾರೈಸಿದ್ದಾರೆ.

ಪ್ರಶಸ್ತಿ ಪ್ರದಾನ ಸಮಾರಂಭ ಇಂದು

ಕುಷ್ಟಗಿ: ತಾಲೂಕಿನ ದೋಟಿಹಾಳ ಗ್ರಾಮದ ಶ್ರೀಶುಖಮುನಿ ಸ್ವಾಮಿ ಹಳೆಯ ಮಠದ ಆವರಣದಲ್ಲಿ ಶ್ರೀದಯಾನಂದಪುರಿ ಕ್ರೀಡಾ, ಸಾಂಸ್ಕೃತಿಕ ಹಾಗೂ ಜಾನಪದ ಕಲಾ ಸಂಘ, ಗಾಯತ್ರಿ ಮಹಿಳಾ ಸಂಘ, ವಿಪಿಕೆ ಫೌಂಡೇಶನ್, ದೋಟಿಹಾಳ ಗ್ರಾಪಂ ಹಾಗೂ ದೋಟಿಹಾಳ ಪ್ರಾಥಮಿಕ ಆರೋಗ್ಯ ಕೇಂದ್ರದ ನೇತೃತ್ವದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಸೀಮಂತ ಕಾರ್ಯಕ್ರಮ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಕಿತ್ತೂರು ರಾಣಿ ಚೆನ್ನಮ್ಮ, ಅಭಿನವ ಗವಿಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮವನ್ನು ಏ.26ರಂದು ಬೆಳಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಶಾಸಕ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಚಂದ್ರಶೇಖರ ದೇವರು, ಈಶ್ವರಸ್ವಾಮಿ ದೇವಾಂಗಮಠ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಕಾಡಾ ನಿಗಮದ ಅಧ್ಯಕ್ಷ ಹಸನಸಾಬ್ ದೋಟಿಹಾಳ ಅಧ್ಯಕ್ಷತೆ ವಹಿಸಲಿದ್ದಾರೆ. ಮಾಜಿ ಸಚಿವ ಅಮರೇಗೌಡ ಬಯ್ಯಾಪೂರ, ಮಾಜಿ ಶಾಸಕ ಕೆ.ಶರಣಪ್ಪ ವಕೀಲರು ಸೇರಿದಂತೆ ಅನೇಕರು ಭಾಗವಹಿಸಲಿದ್ದಾರೆ ಎಂದು ಸಂಸ್ಥೆಯ ಮುಖ್ಯಸ್ಥ ಶ್ರೀನಿವಾಸ ಕಂಟ್ಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮಾನ್ವಿ: ಪಟ್ಟಣದಲ್ಲಿ ಬಿವಿಆರ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ಸುಖದೇವ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಮಟ್ಟದಲ್ಲಿ ಸ್ಥಾನ ಪಡೆದ ಹಿನ್ನೆಲೆ ವಿದ್ಯಾರ್ಥಿಯನ್ನು ಶಾಸಕ ಹಂಪಯ್ಯನಾಯಕ ಅವರು ಸನ್ಮಾನಿಸಿದರು. ವಿದ್ಯಾರ್ಥಿ ತಂದೆ ಡಾ.ಪರಶುರಾಮ್, ತಾಯಿ ಚಂದ್ರಕಾಲ, ಬಿವಿಆರ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಿ.ವಿ.ರೆಡ್ಡಿ, ಮುಖ್ಯಗುರು ಸರ್‌ಮಾತ್‌ಖಾನ್ ಇತರರಿದ್ದರು.

ಉನ್ನತ ಸಾಧನೆಗೆ ಸತತ ಅಧ್ಯಯನ ಮುಖ್ಯ

ಹೂವಿನಹಡಗಲಿ: ಉನ್ನತ ಸಾಧನೆಗೆ ಸತತ ಅಧ್ಯಯನ ಮುಖ್ಯ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಪೂಜಾರ ಅಭಿಮತ ವ್ಯಕ್ತಪಡಿಸಿದರು.

2025-26 ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಸಾಧನೆ ಮೆರೆದ ತಾಲೂಕಿನ ಕನ್ನಡ, ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳಿಗೆ ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ಗೌರವ ಸನ್ಮಾನ ನೆರವೇರಿಸಿ ಮಾತನಾಡಿದರು.

ಪಿಯುಸಿ ಹಾಗೂ ಮುಂದಿನ ಶೈಕ್ಷಣಿಕ ಹಂತಗಳಲ್ಲಿ ಪರಿಣಾಮಕಾರಿ ಶಿಸ್ತುಬದ್ಧ ಓದು ಅವಶ್ಯಕತೆ ಇದೆ. ಕಠಿಣ ಶ್ರಮದಿಂದ ಯಶಸ್ಸು ಸಿಗಲಿದೆ ಎಂದು ತಿಳಿಸಿದರು.

ಕ್ಷೇತ್ರ ಸಮನ್ವಯಾಧಿಕಾರಿ ಎ ಕೋಟೆಪ್ಪ ಯಾವುದೇ ವಿಭಾಗ ಸೇರಿದರೂ ಆಸಕ್ತಿಯಿಂದ ಓದಿನಲ್ಲಿ ತೊಡಗಿಸಿಕೊಳ್ಳಿರಿ ಎಂದು ಕಿವಿಮಾತು ಹೇಳಿದರು.

ಕನ್ನಡ ಮಾಧ್ಯಮದಲ್ಲಿ ಹೆಚ್ಚು ಅಂಕ ಪಡೆದ ಎ.ಪೂಜಶ್ರೀ 620(99.2), ಇಟಗಿ ನಂದಿಹಳ್ಳಿಯ ಆಶಾಬಾನು 618(99.2), ಎಂ.ಎಂ.ಪಾಟೀಲ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮಾಗಳದ ನಾಗರಾಜ 619(98.88), ಸೋಗಿಯ ಕೆ.ಬಿ.ಪೂಜಾ 618(98.88), ದಯಾನಂದ ಅಕ್ಕಿ 619(98.88) ವಿದ್ಯಾರ್ಥಿಗಳಿಗೆ ಗೌರವ ಸನ್ಮಾನ ನೆರವೇರಿಸಿದರು.ತಾಲೂಕು ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿ ಹಣ್ಣಿ ನರೇಶ್ ತಾಲೂಕು ಪ್ರೌಢಶಾಲಾ ಮುಖ್ಯ ಗುರುಗಳ ಸಂಘದ ಕಾರ್ಯದರ್ಶಿ ಸುರೇಶ ಅಂಗಡಿ ಸೇರಿದಂತೆ ಹೆಚ್ಚು ಅಂಕ ಗಳಿಸಿದ ಪ್ರೌಢಶಾಲೆಗಳ ಮುಖ್ಯ ಗುರುಗಳು ಸಿಬ್ಬಂದಿ ಇದ್ದರು.



ಗಂಗಾವತಿ: ತಾಲೂಕಿನ ಹಿರೇಬೆಣಕಲ್ ಗ್ರಾಮದಲ್ಲಿ ಮಾರುತೇಶ್ವರ ದೇವಸ್ಥಾನದ ಗರುಡಗಂಭ, ಕಳಸಾರೋಹಣ, ನವಗ್ರಹ ಸ್ಥಾಪನೆ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ಭಾಗವಹಿಸಿದ್ದರು. ಮುಖಂಡ ಎಚ್.ಎಂ.ಸಿದ್ದರಾಮಯ್ಯ ಸ್ವಾಮಿ, ಬುಡ್ಡಪ್ಪ ಅಂಗಡಿ, ವಿರುಪಾಕ್ಷಪ್ಪ ಡಣಾಪುರ್, ಲಿಂಗಪ್ಪ ಇಂದರಗಿ, ಫಕೀರಪ್ಪ ಬೆಂಗೇರಿ, ವೀರೇಶ್ ಅಂಗಡಿ, ವೆಂಕಟೇಶ ಗಿಜಗಿ, ಪಂಪಾಪತಿ ಡೊಂಬರ, ಮಲ್ಲೇಶ ಡಣಾಪುರ, ಮಲ್ಲೇಶ ಬಿಲಕಂಠಿ, ವೆಂಕಟೇಶ ನಾಯಕ, ಮಾಂತೇಶ ಬಸಟ್ಟಿ ಇತರರಿದ್ದರು.

ಪಂಚಾಯತ್ ರಾಜ್ ದಿನ ಆಚರಣೆ | ಜಿಪಂ ಸಿಇಒ ಹೇಳಿಕೆ

ಗ್ರಾಮೀಣ ಸಬಲೀಕರಣಕ್ಕೆ ಉತ್ತೇಜನ

ಕೊಪ್ಪಳ: ಗ್ರಾಮೀಣ ಜನರಿಗೆ ಆಡಳಿತದಲ್ಲಿ ನೇರ ಪಾಲ್ಗೊಳ್ಳುವ ಅವಕಾಶ ಮತ್ತು ಸ್ಥಳೀಯ ಸಮಸ್ಯೆಗಳಿಗೆ ಸ್ಥಳೀಯ ಮಟ್ಟದಲ್ಲೇ ಪರಿಹಾರ ಒದಗಿಸಿ ಗ್ರಾಮಾಭಿವೃದ್ಧಿ ಮತ್ತು ಸ್ವಾಯತ್ತತೆ ರೂಪಿಸುವ ಮೂಲಕ ಗ್ರಾಮೀಣ ಸಬಲೀಕರಣಕ್ಕೆ ಉತ್ತೇಜನ ನೀಡಲಾಗುತ್ತಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ ಹೇಳಿದರು.

ಜಿಲ್ಲಾ ಪಂಚಾಯತ್ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಪಂಚಾಯತ್ ರಾಜ್ ದಿನ ಆಚರಣೆ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಜಿ.ಪಂ ಉಪಕಾರ್ಯದರ್ಶಿ ಟಿ.ಕೃಷ್ಣಮೂರ್ತಿ ಅವರು ಕಾರ್ಯಕ್ರಮ ಉದ್ದೇಶಿಸಿ ಪ್ರಸ್ತಾವಿಕವಾಗಿ ಮಾತನಾಡಿ, 73ನೇ ಸಂವಿಧಾನ ತಿದ್ದುಪಡಿ ಕಾಯ್ದೆ ಜಾರಿಗೆ ಬಂದ ದಿನವನ್ನು ಸ್ಮರಿಸುವುದಕ್ಕಾಗಿ ಪ್ರತಿ ವರ್ಷ ಏ.24ರಂದು ರಾಷ್ಟ್ರೀಯ ಪಂಚಾಯತ್ ರಾಜ್ ದಿನವನ್ನು ಆಚರಿಸಲಾಗುತ್ತದೆ. ಈ ತಿದ್ದುಪಡಿಯು ಪಂಚಾಯತಿಗಳಿಗೆ ಸಂವಿಧಾನಾತ್ಮಕ ಸ್ಥಾನಮಾನವನ್ನು ನೀಡಿದ್ದು, ಭಾರತದಲ್ಲಿ ವಿಕೇಂದ್ರೀಕೃತ ಆಡಳಿತ ಪಯಣದಲ್ಲಿ ಮಹತ್ವದ ಮೈಲುಗಲ್ಲಾಗಿದೆ ಎಂದರು.

ಕೊಪ್ಪಳ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳಾದ ದುಂಡಪ್ಪ ತುರಾದಿ ಅವರು ಮಾತನಾಡಿ, ಪಂಚಾಯತ್ ರಾಜ್ ವ್ಯವಸ್ಥೆ ವೇದಗಳು ಕಾಲದಿಂದಲು ಇದ್ದು, ಇದು ನಿರಂತರ ಬದಲಾಗುತ್ತ ಬಂದಿದೆ. ಅದರಂತೆ ಭಾರತವು ಹಳ್ಳಿಗಳ ದೇಶವಾಗಿದ್ದು, ಗ್ರಾಮಗಳು ಅಭಿವೃದ್ಧಿ ಹೊಂದಿದರೆ ಮಾತ್ರ ದೇಶ ಸಮಗ್ರ ಅಭಿವೃದ್ಧಿ ಸಾಧಿಸಬಲ್ಲದು. ಈ ನಿಟ್ಟಿನಲ್ಲಿ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಗಳು ವಿಶೇಷ ಪಾತ್ರ ವಹಿಸುತ್ತವೆ. ಅಂತಹದೇ ಒಂದು ಪ್ರಮುಖ ವ್ಯವಸ್ಥೆಯಾದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಗೌರವಿಸುವ ಉದ್ದೇಶದಿಂದ ಪ್ರತಿ ವರ್ಷ ಏಪ್ರಿಲ್ 24ರಂದು ರಾಷ್ಟ್ರೀಯ ಪಂಚಾಯತ್ ರಾಜ್ ದಿನವನ್ನು ಆಚರಿಸಲಾಗುತ್ತದೆಂದು ಹೇಳಿದರು.

ವಿಶೇಷ ಉಪನ್ಯಾಸ: ಫೌಂಡೇಶನ್ ಫಾರ್ ಎಕಾಲಾಜಿಕಲ್ ಸೆಕ್ಯೂರಿಟಿ (ಎಫ್.ಇ.ಎಸ್) ಸಂಸ್ಥೆಯ ಜಿಲ್ಲಾ ಸಂಯೋಜಕರಾದ ವಾಸುದೇವ ಮೂರ್ತಿ ಅವರು ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಜಿಲ್ಲಾ ಪಂಚಾಯತ್ ಅಧಿಕಾರಿಗಳು ಸಿಬ್ಬಂದಿಗಳು ಎಲ್ಲ ಯೋಜನೆಗಳ ಸಂಯೋಜಕರು, ಪಿಡಿಒಗಳು, ಗ್ರಂಥಪಾಲಕರು, ಕರವಸೂಲಿಗಾರರು, ವಾಹನ ಚಾಲಕಿಯರು, ಇನ್ನಿತರ ಸಿಬ್ಬಂದಿ ಉಪಸ್ಥಿತಿದ್ದರು.



ಸಾಧಕರಿಗೆ ಸನ್ಮಾನ

ಕರವಸೂಲಿಯಲ್ಲಿ ಜಿಲ್ಲೆಯಲ್ಲಿಯೇ ಶೇ100% ಸಾಧನೆ ಮಾಡಿದ ಪಿಡಿಒ, ಕರವಸೂಲಿಗಾರರಿಗೆ ಅತ್ಯುತ್ತಮ ಅರಿವು ಕೇಂದ್ರ ನಿರ್ವಹಣೆ ಮಾಡಿದ ಪಿಡಿಒ ಗ್ರಂಥಪಾಲಕರಿಗೆ ಮತ್ತು ಅತ್ಯುತ್ತಮ ವಾಹನ ಚಾಲಕಿ, ಕಸ ವಿಂಗಡಣೆಗಾರರಿಗೆ ಮತ್ತು ವಿಭಾಗ, ಜಿಲ್ಲಾ ಮಟ್ಟದ ಗಾಂಧಿ ಗ್ರಾಮ ಪುರಸ್ಕಾರ ಪಡೆದ ಪಿಡಿಒ.ಗಳಿಗೆ ಮತ್ತು ಮಹಾತ್ಮ ಗಾಂಧಿ ನರೇಗಾದಡಿ ಉತ್ತಮ ಪ್ರಗತಿ ಸಾಧಿಸಿದ ಪಿಡಿಒ.ಗಳಿಗೆ ಮತ್ತು ಮಹಿಳಾ ಸ್ನೇಹ ಗ್ರಾಮ ಪಂಚಾಯತಿ ಪಿಡಿಒ.ಗಳಿಗೆ ಅಭಿನಂದನಾ ಪತ್ರವನ್ನು ನೀಡಿ ಗೌರವಿಸಲಾಯಿತು.

ಮಂಜೂರಾದ ಭೂಮಿ ವಾಪಸ್ ನೀಡಲು ಒತ್ತಾಯ

ಸಿಂಧನೂರು: ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ತಾಲೂಕಿನ ವಿರುಪಾಪುರ ಗ್ರಾಮದ ದೇವದಾಸಿ ಹಾಗೂ ದಲಿತ ಮಹಿಳೆಯರಿಗೆ ನೀಡಿದ ಭೂಮಿ ಖಾಸಗಿ ವ್ಯಕ್ತಿಗಳ ಕಬ್ಜಾದಲ್ಲಿದ್ದು,ಕೂಡಲೇ ಅವರಿಂದ ತೆರವುಗಳಿಸಿ ವಾಪಸ್ಸು ನೀಡಬೇಕು ಎಂದು ಕರ್ನಾಟಕ ರಾಜ್ಯ ದೇವದಾಸಿ ಮಹಿಳಾ ವಿಮೋಚನಾ ಸಂಘದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಬಿ.ಮಾಳಮ್ಮ ಒತ್ತಾಯಿಸಿದರು.

ಸುದ್ದಿಗೋಷ್ಠಿನಡೆಸಿ ಅವರುಮಾತನಾಡಿ, ಸಿಂಧನೂರು ತಾಲೂಕಿನ ವಿರುಪಾಪುರ ಗ್ರಾಮದ ಸರ್ವೆ ನಂ.184/5ರಲ್ಲಿ 9 ಎಕರೆ ಭೂಮಿಯನ್ನು ವೀರಬಸಪ್ಪ ಅವರಿಂದ ಒಂದು ಎಕರೆಗೆ ರೂ.16 ಸಾವಿರದಂತೆ ಖರೀದಿಸಿ, 2005-26ರಲ್ಲಿ ಅಂಬೇಡ್ಕರ್ ಅಭಿವೃದ್ಧಿ ನಿಗಮವು ದೇವದಾಸಿ ಮಹಿಳೆ ಕರಿಯಮ್ಮ, ದಲಿತ ಮಹಿಳೆಯರಾದ ತಾಯಮ್ಮ, ದೇವಕ್ಕೆಮ್ಮ, ಗಂಗಮ್ಮ ಅವರಿಗೆ ತಲಾ 2 ಎಕರೆಯಂತೆ ಭೂಮಿಯನ್ನು ಮಂಜೂರು ಮಾಡಿದೆ. ಜೊತೆಗೆ ತಲಾ ರೂ.23 ಸಾವಿರದಂತೆ ಸಾಲವೂ ಸಹ ಮಂಜೂರಾಗಿದೆಂದು ನಿಗಮ ತಿಳಿಸಿದೆ ಎಂದು ವಿವರಿಸಿದರು.

ನಿಗಮದಿಂದ ಮಂಜೂರಾದ 9 ಎಕರೆ ಭೂಮಿ ಕಳೆದ 20 ವರ್ಷಗಳಿಂದ ಭೂಮಾಲೀಕರ ಕಬ್ಜಾದಲ್ಲಿಯೇ ಇದೆ.ಈ ಭೂಮಿ ಹೆಸರಿನಲ್ಲಿರುವವರು ಸೊಸೈಟಿಯಲ್ಲಿ ಸಾಲ ಎತ್ತುವಳಿ ಮಾಡಿದ್ದಾರೆ. ಫಲಾನುಭವಿಗಳಿಗೆ ಭೂಮಿ ಬಿಟ್ಟು ಕೊಡುವಂತೆ ಮಾಲೀಕ ವೀರಬಸಪ್ಪ ಅವರಿಗೆ ಕೇಳಿದರೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಧಮ್ಕಿ ಹಾಕುತ್ತಿದ್ದಾರೆ. ಅಲ್ಲದೆ ಫಲಾನುಭವಿಗಳಿಗೆ ಜೀವ ಭಯ ಇದೆ. ಆದ್ದರಿಂದ ಜಿಲ್ಲಾಧಿಕಾರಿಗಳು,ತಹಶೀಲ್ದಾರ್‌ರು ಮತ್ತು ನಿಗಮದ ಅಧಿಕಾರಿಗಳು ತಕ್ಷಣವೇ ಸೂಕ್ತ ಕ್ರಮಕೈಗೊಂಡು ಫಲಾನುಭವಿಗಳಿಗೆ ಭೂಮಿ ಕೊಡಿಸಬೇಕು ಎಂದರು.

ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕೂಲಿಕಾರರ ಸಂಘದ ತಾಲ್ಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಅಪ್ಪಣ್ಣ ಕಾಂಬೆ ಮಾತನಾಡಿ, ದೇವದಾಸಿ ಮತ್ತು ದಲಿತ ಮಹಿಳೆಯರಿಗೆ ನೀಡಿರುವ ಭೂಮಿಯನ್ನು ಕಬ್ಜಾ ಮಾಡಿರುವ ಭೂಮಾಲೀಕನ ವಿರುದ್ಧ ಕಾನೂನು ಕ್ರಮ ಜರುಗಿಸಿ, ವಾಪಸ್ಸು ಭೂಮಿ ಕೊಡಿಸಬೇಕು. ಈ ಕುರಿತು ಸಬ್ ರಿಜಿಸ್ಟರ್ ಮತ್ತು ನಿಗಮದ ಅಧಿಕಾರಿಗಳು ದಾಖಲಾತಿ ಪತ್ರಗಳನ್ನು ಕೊಡುತ್ತಿಲ್ಲ ಎಂದು ಆರೋಪಿಸಿದರು.

ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕೂಲಿಕಾರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಶಂಕ್ರಪ್ಪ ಕೆಂಗಲ್,ಉಪಾಧ್ಯಕ್ಷ ಶರಣಪ್ಪ,ದೇವದಾಸಿ ಮಹಿಳಾ ವಿಮೋಚನಾ ಸಂಘದ ಗೌರವಾಧ್ಯಕ್ಷ ಕೆ.ಜಿ.ವೀರೇಶ, ಫಲಾನುಭವಿಗಳಾದ ಕರಿಯಮ್ಮ, ತಾಯಮ್ಮ, ದೇವಕ್ಕೆಮ್ಮ, ಗಂಗಮ್ಮ ಉಪಸ್ಥಿತರಿದ್ದರು.



ಬಿಜೆಪಿ ವಿರುದ್ಧ ಮಹಿಳಾ ಕಾಂಗ್ರೆಸ್ ಪ್ರತಿಭಟನೆ


ಕುಷ್ಟಗಿ: ಮಹಿಳಾ ಮೀಸಲಾತಿ ಕಾನೂನು ಮತ್ತು ಕ್ಷೇತ್ರ ಪುನರ್ ವಿಂಗಡಣೆ ವಿಚಾರಕ್ಕೆ ಸಂಬಂಧಿಸಿದಂತೆ ಕೇಂದ್ರದ ಎನ್‌ಡಿಎ ಸರ್ಕಾರವು ಕೇವಲ ರಾಜಕೀಯ ಲಾಭಕ್ಕಾಗಿ ಈ ವಿಷಯವನ್ನು ಬಳಸಿಕೊಳ್ಳುತ್ತಿದೆ ಹೊರತು ಮಹಿಳಾ ಮೀಸಲು ಬೇಕೇ ಇಲ್ಲ ಎಂದು ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಜ್ಯೋತಿ ಎಂ.ಗೊಂಡಬಾಳ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ನಡೆದ 2023ರ ಮಹಿಳಾ ಮೀಸಲಾತಿ ಬಿಲ್ ಜಾರಿಗೆ ತರದೇ ದೇಶದ ಮಹಿಳೆಯರಿಗೆ ಸುಳ್ಳು ಹೇಳಿ ದ್ರೋಹ ಮಾಡಿದ ಬಿಜೆಪಿ ವಿರುದ್ಧ ಪ್ರತಿಭಟನೆ ಶನಿವಾರ ನೇತೃತ್ವವಹಿಸಿ ಮಾತನಾಡಿದ ಅವರು, ಮಹಿಳಾ ಮೀಸಲಾತಿ ಕಾನೂನನ್ನು ಜಾರಿಗೆ ತರುವ ಪ್ರಾಮಾಣಿಕ ಉದ್ದೇಶ ಸರ್ಕಾರಕ್ಕಿದ್ದರೆ, ಅದಕ್ಕೆ ಕ್ಷೇತ್ರ ಪುನರ್ ವಿಂಗಡಣೆಯ ವಿಷಯವನ್ನು ಜೋಡಿಸುವ ಅಗತ್ಯವಿರಲಿಲ್ಲ. ಶೇ. 33ರಷ್ಟು ಮೀಸಲಾತಿ ನೀಡುವ ಮಾತು ಕೇವಲ ರಾಜಕೀಯ ಗಿಮಿಕ್ ಆಗಿದ್ದು, 2023ರಲ್ಲಿ ಇಂಡಿಯಾ ಮೈತ್ರಿಕೂಟದ ಎಲ್ಲ ಪಕ್ಷಗಳು ಮಹಿಳಾ ಮೀಸಲಾತಿಗೆ ಸಂಪೂರ್ಣ ಒಪ್ಪಿಗೆ ಸೂಚಿಸಿದ್ದರು. ಅದನ್ನು ಜಾರಿಗೆ ತರದೇ ಕ್ಷೇತ್ರ ಪುನರ್ ವಿಂಗಡಣೆಯನ್ನು ಮುಂದಿಟ್ಟಿರುವುದು ಬಿಜೆಪಿಯ ರಾಜಕೀಯ ಷಡ್ಯಂತ್ರವಾಗಿದೆ ಎಂದು ದೂರಿದರು.

2011ರ ಜನಗಣತಿ ಅಂಕಿ-ಅಂಶಗಳ ಆಧಾರದ ಮೇಲೆ ಕ್ಷೇತ್ರ ಪುನರ್ ವಿಂಗಡಣೆ ಮಾಡುವುದು ಅವೈಜ್ಞಾನಿಕವಾಗಿದ್ದು, ಹೊಸ ಜನಗಣತಿ ಮಾಹಿತಿಯ ಆಧಾರದ ಮೇಲೆ ಕ್ರಮ ಕೈಗೊಳ್ಳಬೇಕು ಎಂದರು.

ಮಾಜಿ ಸಚಿವ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಮರೇಗೌಡ ಪಾಟೀಲ ಬಯ್ಯಾಪುರ ಮಾತನಾಡಿ, ಅಂದಿನ ಪ್ರಧಾನ ಮಂತ್ರಿಗಳಾದ ದಿ.ರಾಜೀವ್ ಗಾಂಧಿ ಅವರು 73-74 ನೇ ತಿದ್ದುಪಡಿಗೆ ಮುನ್ನುಡಿ ಬರೆಯುವ ಮೂಲಕ ಎಲ್ಲಾ ಸ್ಥಳಿಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿ ನೀಡಿದ್ದರಿಂದ ಇಂದು ಸ್ಥಳಿಯ ಸಂಸ್ಥೆಗಳಲ್ಲಿ ಶೇ.50% ಮಹಿಳಾ ಮೀಸಲು ಇದೆ ಎಂದರು.

ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ್ ನಾಲತ್ವಾಡ್, ಮಹಿಳಾ ಘಟಕದ ಪದಾಧಿಕಾರಿಗಳಾದ ಮಾಲತಿ ನಾಯಕ್, ಶಕುಂತಲಾ ಹಿರೇಮಠ, ಉಮಾದೇವಿ ಪಾಟೀಲ, ಮುಖಂಡರಾದ ದೊಡ್ಡಬಸವ ಬಯ್ಯಾಪುರು, ಮೈನುದ್ದೀನ್ ಮುಲ್ಲಾ, ಉಮೇಶ ಮಂಗಳೂರು, ಫಾರೂಕ್ ಡಲಾಯತ್, ಅಮರೇಶ ಗಾಂಜಿ, ಬಸವರಾಜ ಹೊರಪೇಟೆ, ಶರಣೇಗೌಡ ಕಿಲ್ಲಾರಹಟ್ಟಿ ಕಾಂಗ್ರೆಸ್ ಮುಖಂಡರಿದ್ದರು.



ತಾಲೂಕಿಗೆ ನಿಸರ್ಗ ದೇಸಾಯಿ ಪ್ರಥಮ: ಅಜಯ್ ಸಿಂಗ್‌ರಿಂದ ಸನ್ಮಾನ

ಕಲಬುರಗಿ: ಜಿಲ್ಲೆಯ ಯಡ್ರಾಮಿ ತಾಲೂಕಿನ ಇಜೇರಿ ಗ್ರಾಮದ ವಿದ್ಯಾರ್ಥಿನಿ ನಿಸರ್ಗ ಶಂಕರ ದೇಸಾಯಿ, 10ನೇ ತರಗತಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡುವ ಮೂಲಕ ತಾಲೂಕಿಗೆ ಕೀರ್ತಿ ತಂದಿದ್ದು ಇವರ ಮನೆಗೆ ಇಂದು ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ್ ಸಿಂಗ್ ಭೇಟಿ ನೀಡಿ ಈ ಸಾಧನೆಗಾಗಿ ನಿಸರ್ಗ ದೇಸಾಯಿ ಅವಳನ್ನು ಅಭಿನಂದಿಸಿದರು.

ಜೇವರ್ಗಿ ತಾಲೂಕಿನ ಆದರ್ಶ ವಿದ್ಯಾಲಯಚನ್ನೂರ್‌ನಲ್ಲಿವ್ಯಾಸಂಗ ಮಾಡಿದ್ದ ನಿಸರ್ಗ ಅವರು, 10ನೇ ತರಗತಿ ಪರೀಕ್ಷೆಯಲ್ಲಿ ಒಟ್ಟು 625 ಅಂಕಗಳ ಪೈಕಿ 620 ಅಂಕಗಳನ್ನು ಪಡೆದು ಜೇವರ್ಗಿ ತಾಲೂಕಿಗೆ ಪ್ರಥಮ ಸ್ಥಾನ ಮತ್ತು ಕಲಬುರಗಿ ಜಿಲ್ಲೆಗೆ ತೃತೀಯ ಸ್ಥಾನ ಗಳಿಸಿ ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿನಿಯ ಈ ಅದ್ಭುತ ಸಾಧನೆಯನ್ನು ಗುರುತಿಸಿದ ಜೇವರ್ಗಿ ಕ್ಷೇತ್ರದ ಶಾಸಕರು ಮತ್ತು ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಧರ್ಮಸಿಂಗ್ ಅವರು, ಕಾಂಗ್ರೆಸ್ ಪಕ್ಷದ ಸ್ಥಳೀಯ ಮುಖಂಡರೊಂದಿಗೆ ವಿದ್ಯಾರ್ಥಿನಿಯ ನಿವಾಸಕ್ಕೆ ತೆರಳಿ ಅಭಿನಂದನೆ ಸಲ್ಲಿಸಿದರು.



ನಿಸರ್ಗ ಅವರನ್ನು ಸನ್ಮಾನಿಸಿದ ಶಾಸಕರು, ಪೋಷಕರಿಗೂ ಶುಭಾಶಯ ತಿಳಿಸಿದರು. ವಿದ್ಯಾರ್ಥಿನಿಯ ಮುಂದಿನ ಉನ್ನತ ಶಿಕ್ಷಣಕ್ಕೆ ಶುಭ ಹಾರೈಸಿದ ಅವರು, ಇದೇ ರೀತಿಯ ಸಾಧನೆಯನ್ನು ಮುಂದುವರಿಸಿ ಭವಿಷ್ಯದಲ್ಲಿ ಉತ್ತಮ ವ್ಯಕ್ತಿಯಾಗಿ ಹೊರಹೊಮ್ಮಲಿ ಎಂದು ಆಶಿಸಿದರು.

ಗ್ರಾಮೀಣ ಭಾಗದ ವಿದ್ಯಾರ್ಥಿನಿಯೊಬ್ಬಳು ಇಂತಹ ಸಾಧನೆಮಾಡಿರುವುದುಸುತ್ತಮುತ್ತಲ ಗ್ರಾಮಸ್ಥರಲ್ಲಿ ಹರ್ಷ ತಂದಿದೆ. ಈ ವೇಳೆ ಸ್ಥಳೀಯ ಕಾಂಗ್ರೆಸ್ ಮುಖಂಡರು ಹಾಗೂ ಗ್ರಾಮದ ಹಿರಿಯರು ಉಪಸ್ಥಿತರಿದ್ದರು.

ಹಲ್ಲೆ ನಡೆಸಿದವರ ವಿರುದ್ಧ ಕ್ರಮಕ್ಕೆ ಆಗ್ರಹ

ಸಿಂಧನೂರು: ತಾಲೂಕಿನ ಗೊಣ್ಣಿಗನೂರು ಗ್ರಾಮ ಆಡಳಿತಾಧಿಕಾರಿ ಹನುಮನಗೌಡ ಇವರ ಮೇಲೆ ದೈಹಿಕ ಹಲ್ಲೆ ನಡೆಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ರಾಜ್ಯ ಸರ್ಕಾರಿ ನೌಕರರ ಸಂಘ ತಾಲೂಕು ಘಟಕದಿಂದ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ತಾಲೂಕಿನ ಮಲದಿನ್ನಿ (ಡಿ) ಗ್ರಾಮಕ್ಕೆ ಜೋಳದ ಬೆಳೆಯ ಮರು ಸಮೀಕ್ಷೆಗೆಂದು ಏ.23ರಂದು ಸ್ಥಳ ಪರಿಶೀಲನೆ ಕಾರ್ಯಕ್ಕೆ ತೆರಳಿದಾಗ, ಯಮನಪ್ಪ ಬೆಳಗುರ್ಕಿ ಎಂಬವರು ಅವಾಚ್ಯ ಶಬ್ದಗಳಿಂದ ನಿಂದಿಸಿ, ಮಾರಕಾಸ್ತ್ರಗಳಿಂದ ಹಲ್ಲೆನಡೆಸಿದ್ದಾರೆ.

ಹಲ್ಲೆಯಿಂದಾಗಿ ಸರ್ಕಾರಿ ಕೆಲಸಕ್ಕೆ ಅಡ್ಡಿಯಾಗಿದ್ದು, ಜೀವ ಬೆದರಿಕೆ ಹಾಕಲಾಗಿದೆ. ಸರ್ಕಾರಿ ನೌಕರರಿಗೆ ರಕ್ಷಣೆ ನೀಡುವ ಜತೆಗೆ ಘಟನೆಗೆ ಕಾರಣರಾದವರ ಮೇಲೆ ಕಠಿಣ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಲಾಯಿತು.

ಈ ವೇಳೆ ನೌಕರರ ಸಂಘದ ತಾಲೂಕು ಅಧ್ಯಕ್ಷ ಚಂದ್ರಶೇಖರ ಹಿರೇಮಠ, ಕಾರ್ಯದರ್ಶಿ ಆನಂದ ಮೋಹನ್, ಖಜಾಂಚಿ ವೀರನಗೌಡ, ಉಪಾಧ್ಯಕ್ಷ ಸೈಯದ್ ಫಸಿವುಲ್ಲಾ ಖಾದ್ರಿ, ಮಂಜುನಾಥ ಸೇರಿದಂತೆ ವಿವಿಧ ಇಲಾಖೆಗಳ ಸರ್ಕಾರಿ ನೌಕರರು ಭಾಗವಹಿಸಿದ್ದರು.



ಮೇ 3ರಂದು ಗವಿಸಿದ್ದೇಶ್ವರ ಗುರುಕುಲ ಲೋಕಾರ್ಪಣೆ

ಕೊಪ್ಪಳ: ಗ್ರಾಮೀಣ ಭಾಗದ ಬಡ ಮಕ್ಕಳಿಗೆ ಉಚಿತವಾಗಿ ಗುಣಮಟ್ಟದ ಶಿಕ್ಷಣ ಮತ್ತು ವಸತಿ ವ್ಯವಸ್ಥೆ ಒದಗಿಸಬೇಕು ಎಂಬ ಕೊಪ್ಪಳ ಗವಿಮಠದ ಗವಿಸಿದ್ದೇಶ್ವರ ಸ್ವಾಮೀಜಿಗಳ ಒತ್ತಾಸೆಯಂತೆ ನಗರದ ಸಮೀಪದಲ್ಲಿರುವ ಕೋಳೂರು-ಕಾಟ್ರಳ್ಳಿ ಗ್ರಾಮದ ಬಳಿ ವಿದ್ಯಾರ್ಥಿನಿಯರ ವಸತಿ ಸಹಿತ ಪಿಯು ಕಾಲೇಜು ಆರಂಭವಾಗಲಿದೆ.

ಶ್ರೀಶಿವಶಾಂತವೀರ ಮಹಾ ಸ್ವಾಮೀಜಿ ಚಾರಿಟೇಬಲ್ ಟ್ರಸ್ಟ್ ನಡಿ ಆರಂಭಗೊಳ್ಳುತ್ತಿರುವ ಹೊಸ ಪಿಯು ಕಾಲೇಜು ರಾಜ್ಯಾದ್ಯಂತ ವಿದ್ಯಾರ್ಥಿಗಳ ವಲಯದಲ್ಲಿ ಭಾರಿ ನಿರೀಕ್ಷೆ ಹುಟ್ಟು ಹಾಕಿದೆ. ಮೇ 3ರಂದು ಕಾಲೇಜು ಕಟ್ಟಡ ಲೋಕಾರ್ಪಣೆಗೊಳ್ಳಲಿದೆ.

ಕೊಪ್ಪಳದಿಂದ ಸುಮಾರು 11 ಕಿಮೀ. ದೂರದಲ್ಲಿನ ಸುಮಾರು 48 ಎಕರೆ ಪ್ರದೇಶದಲ್ಲಿ ಕಾಲೇಜು ಕಟ್ಟಡ ತಲೆ ಎತ್ತಿದೆ. ಸುಮಾರು 60 ಕೋಟಿ ರೂ. ವೆಚ್ಚದಲ್ಲಿ 1.54 ಲಕ್ಷ ಚದುರು ಅಡಿ ಜಾಗದಲ್ಲಿ ಗುರುಕುಲದ ಬೃಹತ್ ಕಟ್ಟಡ ನಿರ್ಮಾಣ ಮಾಡಲಾಗಿದೆ. ಕಲಾ ಮತ್ತು ವಿಜ್ಞಾನ ವಿಭಾಗದಲ್ಲಿ ಪದವಿ ಪೂರ್ವ ಕಾಲೇಜು ಇದೇ 2026-27ನೇ ಶೈಕ್ಷಣಿಕ ವರ್ಷದಿಂದ ಆರಂಭವಾಗಲಿದೆ. ಎರಡೂ ವಿಭಾಗ ಒಳಗೊಂಡು ಒಟ್ಟು 1500 ವಿದ್ಯಾರ್ಥಿನಿಯರಿಗೆ ಈ ವರ್ಷ ಪ್ರವೇಶ ನೀಡಲು ಶ್ರೀಮಠದ ಆಡಳಿತ ಮಂಡಳಿ ನಿರ್ಣಯಿಸಿದೆ.



ಅರ್ಜಿ ಸಲ್ಲಿಸಲು ಮೇ 9ಕೊನೆ ದಿನ:

ಶ್ರೀಗವಿಸಿದ್ದೇಶ್ವರ ಗುರುಕುಲ ವಿದ್ಯಾರ್ಥಿನಿಯರ ಪದವಿ ಪೂರ್ವ ವಸತಿ ಕಾಲೇಜು ಪ್ರವೇಶಕ್ಕೆ ಈಗಾಗಲೇ ಅರ್ಹ ವಿದ್ಯಾರ್ಥಿನಿಯರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಮೇ 9ಕೊನೆ ದಿನ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

ವಿಜ್ಞಾನ ವಿಭಾಗಕ್ಕೆ ಪ್ರವೇಶ ಪಡೆಯುವ ಆಸಕ್ತರು ವಿಜ್ಞಾನ, ಗಣಿತ ಮತ್ತು ಇಂಗ್ಲೀಷ ವಿಷಯದಲ್ಲಿ ಕನಿಷ್ಠ ಶೇ.60ರಷ್ಟು ಅಂಕ ಪಡೆದಿರಬೇಕು. ಇನ್ನು ಕಲಾ ವಿಭಾಗಕ್ಕೆ ಸೇರಲು ಬಯಸುವವರು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸಮಾಜ ವಿಜ್ಞಾನ, ಗಣಿತ ಮತ್ತು ಇಂಗ್ಲೀಷ್ ವಿಷಯದಲ್ಲಿ ಕನಿಷ್ಠ ಶೇ.60ರಷ್ಟು ಅಂಕ ಪಡೆದಿರಬೇಕು. ಪ್ರವೇಶ ಪರೀಕ್ಷೆ, ಬೋರ್ಡ್ ಪರೀಕ್ಷೆ ಫಲಿತಾಂಶ ಮತ್ತು ವೈಯಕ್ತಿಕ ಸಂದರ್ಶನದ ಆಧಾರಿತವಾಗಿ ಪ್ರವೇಶ ನೀಡಲಾಗುತ್ತದೆ.

ನಾಡಿನಾದ್ಯಂತ ದಾನಿಗಳಿಂದ ದೇಣಿಗೆ ಸುಮಾರು 48 ಎಕರೆ ಪ್ರದೇಶದಲ್ಲಿ ಬರೋಬ್ಬರಿ 60 ಕೋಟಿ ವೆಚ್ಚದಲ್ಲಿ ಕಾಲೇಜು ಕಟ್ಟಡ, ವಸತಿ ನಿಲಯ, ಪ್ರಸಾದ ನಿಲಯ ಸೇರಿ ವಿವಿಧ ಕಟ್ಟಡ ನಿರ್ಮಾಣ ಮಾಡಲಾಗಿದೆ. ಏಕ ಕಾಲಕ್ಕೆ ಸುಮಾರು 2 ಸಾವಿರ ವಿದ್ಯಾರ್ಥಿಗಳು ಕುಳಿತು ಊಟ ಮಾಡುವ ನೈಸರ್ಗಿಕ ಗಾಳಿ-ಬೆಳಕು ಇರುವಂತೆ ಪ್ರಸಾದ ನಿಲಯ ನಿರ್ಮಾಣ ಮಾಡಲಾಗಿದೆ. ಪ್ರಸಾದ್ ನಿಲಯ-ಆಡಿಟೋರಿಯಂ ಹಾಲ್ ಆಗಿಯೂ ಬಳಕೆ ಮಾಡಿಕೊಳ್ಳುವಂತೆ ಸುಸಜ್ಜಿತವಾಗಿ ನಿರ್ಮಾಣ ಮಾಡಲಾಗಿದೆ.

ಸಾರ್ವಜನಿಕರ ಸೇವೆ ಸಲ್ಲಿಸಲು ಪಿಡಿಒಗೆ ಉತ್ತಮ ಅವಕಾಶ

ಯಲಬುರ್ಗಾ: ಮೂರು ಹಂತದಲ್ಲಿ ಕೆಲಸ ನಿರ್ವಹಿಸುವಂತೆ ಜಾರಿಗೆ ತಂದಿರುವ ಪಂಚಾಯತ್ ರಾಜ್ ಇಲಾಖೆ ಕೆಲಸವು ಸಾರ್ವಜನಿಕ ಸೇವೆ ಸಲ್ಲಿಸಲು ಉತ್ತಮ ವೇದಿಕೆಯಾಗಿದ್ದು, ಎಲ್ಲರೂ ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಾಪಂ ಸಹಾಯಕ ನಿರ್ದೇಶಕ ಹನಮಂತಗೌಡ ಪೊಲೀಸ್‌ಪಾಟೀಲ ಹೇಳಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಪಂಚಾಯತ್ ರಾಜ್ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಜಿಪಂ, ತಾಪಂ ಸಹಯೋಗದಲ್ಲಿ ನಡೆದ ರಾಷ್ಟ್ರೀಯ ಪಂಚಾಯತ್ ರಾಜ್ ದಿನ ಕಾರ್ಯಕ್ರಮ ಚಾಲನೆ ನೀಡಿ ಮಾತನಾಡಿದರು.

ಗ್ರಾಪಂ ಮಟ್ಟದಲ್ಲಿ ಕೆಲಸ ಮಾಡುವ ಸಿಬ್ಬಂದಿ ತಮ್ಮ ಜನರ ಜತೆಗೆ ಉತ್ತಮ ಬಾಂಧವ್ಯ ಹೊಂದಿರಬೇಕು. ತಮ್ಮ ಗ್ರಾಮದ ಬದಲಾವಣೆ ಮಾಡುವಲ್ಲಿ ಆಸಕ್ತಿ ವಹಿಸಬೇಕು. ತಮ್ಮ ಗ್ರಾಮದ ಅಭಿವೃದ್ಧಿಗೆ ಶ್ರಮಿಸಬೇಕು. ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಅಭಿವೃದ್ಧಿ ಆದಾಗ ಮಾತ್ರ ಈ ಮೂರು ಹಂತದ ಪಂಚಾಯತ್ ರಾಜ್ ಇಲಾಖೆಯ ಉದ್ದೇಶ ಈಡೇರಲು ಸಾಧ್ಯ ಎಂದರು.



ಸಹಾಯಕ ನಿರ್ದೇಶಕ ಫಕೀರಪ್ಪ ಕಟ್ಟಿಮನಿ ಪ್ರಾಸ್ತಾವಿಕವಾಗಿ ಮಾತನಾಡಿ, 73ನೇ ಸಂವಿಧಾನ ತಿದ್ದುಪಡಿಯಿಂದಾಗಿ ಮಂಡಲ ಪಂಚಾಯತಿ ಇರುವುದನ್ನು ಗ್ರಾಪಂ, ತಾಪಂ, ಜಿಪಂ ಹೀಗೆ ಪಂಚಾಯತ್ ರಾಜ್ ಇಲಾಖೆ ಜಾರಿಗೆ ಬಂತು. ಗ್ರಾಮಿಣ ಪ್ರದೇಶದಲ್ಲಿ ಜನರ ಜತೆ ಕೆಲಸ ಮಾಡುತ್ತ ಉತ್ತಮ ಸೇವೆ ಸಲ್ಲಿಸುತ್ತಿದ್ದೇವೆ. ಗ್ರಾಮೀಣ ಮಕ್ಕಳಿಗೆ ಜ್ಞಾನ ವೃದ್ಧಿಗಾಗಿ ಗ್ರಂಥಾಲಯಗಳು, ಮಹಿಳಾ ಸಬಲೀಕರಣ ಹೀಗೆ ಹಲವಾರು ಮಾದರಿ ಕಾರ್ಯಗಳನ್ನು ಮಾಡಲು ಅನುಕೂಲವಾಗಿದೆ. ಹೀಗೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಗೈದ ಎಲ್ಲರನ್ನು ಸನ್ಮಾನಿಸಲಾಗುವುದು ಎಂದು ಹೇಳಿದರು.

ಹಿರೇಮ್ಯಾಗೇರಿ ಗ್ರಾಪಂ ಪಿಡಿಒರಾದ ಮಂಗಳೇಶ ನಾಯಕ, ಕಲ್ಲೂರ ಪಿಡಿಒರಾದ ರೇಣುಕಾ ಟಂಕದ, ವಿಷಯ ನಿರ್ವಾಹಕರಾದ ಬಸವರಾಜ ಹಳ್ಳಿ, ಕರವಸೂಲಿಗಾರರಾದ ಪ್ರಕಾಶ, ದುರಗಪ್ಪ, ಗ್ರಂಥಪಾಲಕರಾದ ಶರಣಪ್ಪ ಬಂಡಾರಿ, ವಿಆರ್ ಡಬ್ಲ್ಯೂ ಭರತ್ ರೆಡ್ಡಿ ಮಾತನಾಡಿದರು.

ಕರವಸೂಲಿ, ಉತ್ತಮ ಗಂಥಾಲಯ ವ್ಯವಸ್ಥೆ, ವಿಆರ್‌ಡಬ್ಲ್ಯೂ, ಸ್ವ ಸಹಾಯ ಸಂಘದ ಮಹಿಳೆಯರಿಗೆ ಸನ್ಮಾನಿಸಿ ಗೌರವಿಸಲಾಯಿತು. ತಾಪಂ ಅಧಿಕಾರಿಗಳು, ಸಿಬ್ಬಂದಿ, ಗ್ರಾಮ ಪಂಚಾಯತಿ ಪಿಡಿಒರವರು, ಡಿಇಒ, ಕರವಸೂಲಿಗಾರರು, ನೀರು ಗಂಟಿಗಳು, ಸ್ವ ಸಹಾಯ ಸಂಘದ ಮಹಿಳೆಯರು, ವಿಆರ್ ಡಬ್ಲ್ಯೂ, ಸಿಬ್ಬಂದಿ ಇದ್ದರು.

ಕಿರುಸುದ್ದಿ

ಅಲೆಮಾರಿ ಸಮುದಾಯಕೆ ಅನ್ಯಾಯ: ಹನುಮಂತಪ್ಪ



ಬಳ್ಳಾರಿ: ಪರಿಶಿಷ್ಟ ಜಾತಿ ಸಮುದಾಯದಲ್ಲಿ ಬಹುಸಂಖ್ಯಾತ, ಅತ್ಯಂತ ಹಿಂದುಳಿದ ಹಾಜಖಿ ಸಂವಿಧಾನ ಬದ್ಧ ಮೀಸಲಾತಿ ಸೌಲಭ್ಯಗಳಿಂದಲೂ ವಂಚಿತಗೊಂಡಿರುವ ಮಾದಿಗ ಸಮುದಾಯಕ್ಕೆ ಪ್ರತ್ಯೇಕ ಒಳಮೀಸಲಾತಿ ನೀಡಬೇಕೆಂದು ಕಳೆದ 30 ವರ್ಷಗಳಿಂದಲೂ ಹೋರಾಟ ಮಾಡಿರುವ ಮಾದಿಗ ಸಮಾಜಕ್ಕೆ ಶೇ.6 ರಷ್ಟು ಒಳಮೀಸಲಾತಿ ನೀಡಬೇಕೆಂದು ನ್ಯಾ.ಸದಾಶಿವ ಆಯೋಗ, ನ್ಯಾ.ನಾಗಮೋಹನ ದಾಸ್ ಆಯೋಗ ಹಾಗೂ ಮಾದುಸ್ವಾಮಿ ಸಂಪುಟ ಉಪ ಸಮಿತಿ ಸಿಫಾರಸ್ಸು ಮಾಡಿದ್ದರೂ ಕಾಜಿ ಪಂಚಾಯತ್ ರೀತಿ ಶೇ.5.25 ರಂತೆ ರಾಜ್ಯ ಸಚಿವ ಸಂಪುಟ ಸಭೆ ಮಾಡಿರುವ ತೀರ್ಮಾನವನ್ನು ಮಾದಿಗ ಸಮುದಾಯ ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ ಎಂದು ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ, ಮಾದಿಗ ಮೀಸಲಾತಿ ಹೋರಾಟ ಸಮಿತಿ ಮಾಜಿ ಅಧ್ಯಕ್ಷ ಎಚ್.ಹನುಮಂತಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಹೇಳಿಕೆ ನೀಡಿದ ಅವರು, ಪ್ರಬಲ ಸಚಿವರ ಒತ್ತಡಕ್ಕೆ ಮಣಿದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮಾದಿಗ ಸಮುದಾಯ ಹಾಗು ಅಲೆಮಾರಿ ಸಮುದಾಯಕ್ಕೆ ಅನ್ಯಾಯ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ನಮಗೆ ನ್ಯಾಯ ಸಿಗೋವರೆಗೂ ಮಾದಿಗ ವಿರೋಧಿ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ಮುಂದುವರೆದಿದೆ ಎಂದು ಎಚ್ಚರಿಸಿದ್ದಾರೆ.

ರಾಷ್ಟ್ರವ್ಯಾಪಿ ಬಂದ್‌ಗೆ ಬೆಂಬಲ: ಐನಾಥ್ ರೆಡ್ಡಿ



ಬಳ್ಳಾರಿ: ಡಿಎಪಿ, ಯೂರಿಯಾ ರಸಗೊಬ್ಬರ ಜೊತೆಗೆ ಒತ್ತಾಯವಾಗಿ ವಿವಿಧ ಉತ್ಪಾದನೆಗಳನ್ನು ಲಿಂಕ್ ಮಾಡುವುದನ್ನು ನಿಲ್ಲಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಕೃಷಿ ಪರಿಕರಗಳ ಮಾರಾಟಗಾರರ ಸಂಘ ಏ.27 ರಂದು ಕರೆ ನೀಡಿರುವ ರಾಷ್ಟ್ರವ್ಯಾಪಿ ಬಂದ್‌ಗೆ ಸಂಪೂರ್ಣ ಬೆಂಬಲವಿದೆ ಎಂದು ರಾಜ್ಯ ಕೃಷಿ ಪರಿಕರಗಳ ಮಾರಾಟಗಾರರ ಸಂಘದ ರಾಜ್ಯ ಸಂಚಾಲಕ ಗಣಪಾಲ್ ಐನಾಥ್ ರೆಡ್ಡಿ ತಿಳಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿದ ಅವರು, ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಏ.27 ರಂದು ಕರೆ ನೀಡಿರುವ ರಾಷ್ಟ್ರವ್ಯಾಪ್ತಿ ಬಂದ್ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಒಂದು ದಿನ ಸಾಂಕೇತಿಕವಾಗಿ ಶಾಂತಿಯುತ ಬಂದ್ ಆಚರಿಸಲಾಗುತ್ತಿದೆ. ಎಲ್ಲ ಜಿಲ್ಲಾ ಕೇಂದ್ರಗಳು, ತಾಲೂಕು ಕೇಂದ್ರಗಳು, ಹೋಬಳಿಗಳು ಹಾಗೂ ಗ್ರಾಮೀಣ ಪ್ರದೇಶಗಳ ವರ್ತಕರು ಶಾಂತಿಯುತ ಈ ಪ್ರತಿಭಟನೆಗೆ ಸಹಕರಿಸಬೇಕು. ಇದರ ಜೊತೆಗೆ ರೈತ ಬಾಂಧವರು ಸಹಕರಿಸಬೇಕು ಎಂದು ಮನವಿ ಮಾಡುತ್ತಿದ್ದೇನೆ ಎಂದು ತಿಳಿಸಿದ್ದಾರೆ.

ಡಿಎಪಿ ಹಾಗೂ ಯೂರಿಯಾ ರಸಗೊಬ್ಬರ ಜೊತೆಗೆ ಒತ್ತಾಯಪೂರ್ವಕವಾಗಿ ಬೇರೆ ಉತ್ಪಾದನೆಗಳನ್ನು ಲಿಂಕ್ ಮಾಡುವುದನ್ನು ಕೂಡಲೇ ನಿಲ್ಲಿಸಬೇಕು. ಎಲ್ಲ ರಸಗೊಬ್ಬರಗಳ ಎಂಆರ್‌ಪಿ ಮೇಲೆ ಶೇ.8 ರಷ್ಟು ಡೀಲರ್ ಲಾಭಾಂಶ ಇರುವ ಹಾಗೆ ನೋಡಿಕೊಳ್ಳಬೇಕು. ಎಲ್ಲ ರಸಗೊಬ್ಬರಗಳನ್ನೂ ಎಫ್‌ಓಎಲ್ ಕೊಡುವ ಹಾಗೆ ಕ್ರಮ ಕೈಗೊಳ್ಳಬೇಕು, ರಸಗೊಬ್ಬರ, ಬಿತ್ತನೆ ಬೀಜ, ಕೀಟನಾಶಕಗಳ ಶಾಂಪಲ್ ಕಳಪೆ ಬಂದಾಗ ಕಂಪನಿಯವರ ವಿರುದ್ಧ ಮಾತ್ರ ಪ್ರಕರಣ ದಾಖಲಿಸಿ ಡೀಲರ್‌ಗಳನ್ನು ಸಾಕ್ಷಿಯಾಗಿ ಪರಿಗಣಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ನಡೆಸುತ್ತಿರುವ ಈ ಹೋರಾಟಕ್ಕೆ ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.

ತಂದೆ, ಅಜ್ಜಿ ಅಗಲಿಕೆ ನೋವಲ್ಲೂ ಸಾಧನೆ ಮಾಡಿದ ಸಹನಾ



ಹಗರಿಬೊಮ್ಮನಹಳ್ಳಿ: ಕಿತ್ತೂರು ಚೆನ್ನಮ್ಮ ವಸತಿ ಶಾಲೆಯ ಎಸ್ ಎಸ್ ಎಲ್ ಸಿ ವಿದ್ಯಾರ್ಥಿನಿ ಸಹನಾ ಗುಂಡ್ರು ಸಣ್ಣ ಯಮನಪ್ಪ ಅವರು 625 ಅಂಕಗಳಿಗೆ 621 ಅಂಕ ಪಡೆಯುವ ಮೂಲಕ ತಾಲೂಕಿನಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ.

ತಾಲೂಕಿನ ವರಲಹಳ್ಳಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಓದುವ ಸಮಯದಲ್ಲಿಯೇ ಸಹನಾ ಅಜ್ಜಿ ಹಾಗೂ ತಂದೆಯನ್ನು ಕಳೆದುಕೊಂಡ ನೋವಿನಲ್ಲೂ ವಿಚಲಿತಳಾಗದೇ ಸವಾಲಿನ ಪರಿಸ್ಥಿತಿಯಲ್ಲೂ, ಸಹನಾ ತನ್ನ ಸಹನೆ ಆತ್ಮಸ್ಥೈರ್ಯ ಕಳೆದುಕೊಳ್ಳದೆ ಮತ್ತು ದೃಢ ಸಂಕಲ್ಪದೊಂದಿಗೆ ಕಡು ಬಡತನದಲ್ಲಿ ತಾಲೂಕಿಗೆ ಟಾಪರ್ ಆಗಿ ಗುರಿ ಸಾಧಿಸಿರುವುದು ನಿಜಕ್ಕೂ ಹೆಮ್ಮೆಯ ವಿಷಯವಾಗಿದೆ. ಕು.ಸಹನಾ ಈ ಸಾಧನೆಯಿಂದ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.



ಹಗರಿಬೊಮ್ಮನಹಳ್ಳಿ: ತಾಲೂಕಿನ ಶಿವಾನಂದ ನಗರದ ಬೆಸ್ಟ್ ಇಂಟರ್‌ನ್ಯಾಷನಲ್ ಸ್ಕೂಲ್ ವಿದ್ಯಾರ್ಥಿ ಯಶರಾಜ್ ಪ್ರಮೋದ ಮೇಘರಾಜ್ ಅವರು ಎಸ್ಸೆಸ್ಸೆಲ್ಸಿಯಲ್ಲಿ 607 ಅಂಕ ಪಡೆದು ಸ್ಕೂಲಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಈ ನಿಮಿತ್ತ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು, ಶಿಕ್ಷಕಿಯರು ವಿದ್ಯಾರ್ಥಿಯ ಮುಂದಿನ ಭವಿಷ್ಯ ಉಜ್ವಲವಾಗಲಿ ಎಂದು ಶುಭ ಹಾರೈಸಿದರು.

ನೀರಿನ ಅರವಟ್ಟಿಗೆ ತೆರೆದ ಪೊಲೀಸ್ ಠಾಣೆ

ಕುರುಗೋಡು: ವಿವಿಧ ಕೆಲಸಗಳ ನಿಮಿತ್ತ ಗ್ರಾಮೀಣ ಪ್ರದೇಶದಿಂದ ನಗರಕ್ಕೆ ಬರುವ ರೈತರು, ಸಾರ್ವಜನಿಕರಿಗೆ ಬೇಸಿಗೆ ಹಿನ್ನೆಲೆಯಲ್ಲಿ ಉಚಿತ ನೀರು ಕಲ್ಪಿಸಲು ಕುರುಗೋಡು ಪೊಲೀಸ್ ಠಾಣೆ ಮುಂದಾಗಿರುವುದು ಶ್ಲಾಘನೀಯ ಎಂದು ತಹಶೀಲ್ದಾರ್ ನರಸಪ್ಪ ಹೇಳಿದರು.

ಪಟ್ಟಣದ ನಾಡಗೌಡರ ವೃತ್ತದ ಪಕ್ಕದಲ್ಲಿ ಪೊಲೀಸ್ ಠಾಣೆ ವತಿಯಿಂದ ಸಾರ್ವಜನಿಕರಿಗೆ ಆಯೋಜಿಸಿರುವ ಉಚಿತ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ಕೇಂದ್ರಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿ, ಶುದ್ಧ ಕುಡಿಯುವ ನೀರು ಕಲ್ಪಿಸಲು ಪುರಸಭೆ ಹಲವು ಯೋಜನೆ ಜಾರಿಗೊಳಿಸುತ್ತಿದೆ. ಜತೆಗೆ ಸಂಘ ಸಂಸ್ಥೆಗಳು ಕೈಜೋಡಿಸಿದಲ್ಲಿ ಇನ್ನಷ್ಟು ಉತ್ತಮ ಕೆಲಸ ಮಾಡಲು ಸಹಕಾರಿಯಾಗುವುದು ಎಂದ ಅವರು, ಕುರುಗೋಡು ಪೊಲೀಸ್ ಠಾಣೆಯ ಪಿಎಸ್‌ಐ ಸುಪ್ರೀತ್ ವಿರೂಪಾಕ್ಷಪ್ಪ ಅವರು ಹಳ್ಳಿಯಿಂದ ಬಂದ ಜನರಿಗೆ ಕುಡಿವ ನೀರಿನ ಸಮಸ್ಯೆ ನೀಗಿಸುವ ಕಾರ್ಯ ಮಾಡುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಸಿಪಿಐ ಬಾಳನಗೌಡ ಮಾನಶೆಟ್ಟಿ ಮಾತನಾಡಿ, ಹಳ್ಳಿಯಿಂದ ವಿವಿಧ ಕೆಲಸಗಳಿಗೆ ಪಟ್ಟಣಕ್ಕೆ ಬರುವ ಬಡ ಜನರಿಗೆ ಕುಡಿಯುವ ನೀರನ್ನು ಹೋಟೆಲ್‌ನಲ್ಲಿ ಉಚಿತವಾಗಿ ನೀಡುವುದು ಕಷ್ಟ, ಆದ್ದರಿಂದ ನೀರಿನ ಮಹತ್ವ ಅರಿತು ಬೇಸಿಗೆಯಲ್ಲಿ ಬಿಸಿಲಿನ ದಾಹ ನೀಗಿಸಲು ಅರವಟ್ಟಿಗೆ ಸ್ಥಾಪನೆ ಮಾಡಲಾಗಿದೆ ಎಂದರು.ಪಿಎಸ್‌ಐ ಸುಪ್ರೀತ್, ಪುರಸಭೆ ಮುಖ್ಯಾಧಿಕಾರಿ ದತ್ತಾತ್ರೇಯ ಹೆಗಡೆ, ಠಾಣೆ ಸಿಬ್ಬಂದಿ, ಸಾರ್ವಜನಿಕರು ಇದ್ದರು.



ಕುರುಗೋಡು: ಪಟ್ಟಣದ ನಾಡಗೌಡರ ವೃತ್ತದ ಪಕ್ಕದಲ್ಲಿ ಪೊಲೀಸ್ ಠಾಣೆ ವತಿಯಿಂದ ಸಾರ್ವಜನಿಕರಿಗೆ ಆಯೋಜಿಸಿರುವ ಉಚಿತ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ಕೇಂದ್ರಕ್ಕೆ ಶುಕ್ರವಾರ ತಹಶೀಲ್ದಾರ್ ನರಸಪ್ಪ ಚಾಲನೆ ನೀಡಿದರು. ಸಿಪಿಐ ಬಾಳನಗೌಡ ಮಾನಶೆಟ್ಟಿ, ಪಿಎಸ್‌ಐ ಸುಪ್ರೀತ್, ಪುರಸಭೆ ಮುಖ್ಯಾಧಿಕಾರಿ ದತ್ತಾತ್ರೇಯ ಹೆಗಡೆ, ಠಾಣೆ ಸಿಬ್ಬಂದಿ, ಸಾರ್ವಜನಿಕರು ಇದ್ದರು.

ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳ ವಿರುದ್ಧವಾಗ್ದಾಳಿ
ಬಿಜೆಪಿ ಮಹಿಳಾ ಮೋರ್ಚಾದಿಂದ ಪ್ರತಿಭಟನೆ

ಯಾದಗಿರಿ: ಮಹಿಳಾ ಮೀಸಲಾತಿ ಮಸೂದೆ (ನಾರೀಶಕ್ತಿ ವಂದನ್ ಅಧಿನಿಯಮ) ಜಾರಿಗೆ ವಿಳಂಬವಾಗುತ್ತಿದೆ ಎಂದು ಆರೋಪಿಸಿ, ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳ ವಿರುದ್ಧ ಬಿಜೆಪಿ ಮಹಿಳಾ ಮೋರ್ಚಾ ಮತ್ತು ನಾರೀಶಕ್ತಿ ಫೋರಂ ವತಿಯಿಂದ ಶನಿವಾರ ನಗರದಲ್ಲಿರುವ ಲಾಲ್ ಬಹದೂರ ಶಾಸ್ತ್ರಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.



ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಮಹಿಳಾ ನಾಯಕಿಯರು ಹಾಗೂ ಕಾರ್ಯಕರ್ತೆಯರು ಕೇಂದ್ರ ಸರ್ಕಾರ ಅಂಗೀಕರಿಸಿರುವ ಮಹಿಳಾ ಮೀಸಲಾತಿ ಮಸೂದೆಯನ್ನು ತಕ್ಷಣ ಜಾರಿಗೆ ತರಬೇಕು ಎಂದು ಆಗ್ರಹಿಸಿ ಘೋಷಣೆಗಳನ್ನು ಕೂಗಿದರು. ಮಹಿಳೆಯರ ರಾಜಕೀಯ ಸಬಲೀಕರಣಕ್ಕೆ ಈ ಮಸೂದೆ ಅತ್ಯಂತ ಮಹತ್ವದ್ದಾಗಿದ್ದು, ಅದರ ಜಾರಿಯಲ್ಲಿ ಉಂಟಾಗುತ್ತಿರುವ ವಿಳಂಬವು ಮಹಿಳೆಯರ ಹಕ್ಕುಗಳಿಗೆ ಧಕ್ಕೆ ತರುತ್ತಿದೆ ಎಂದು ತಿಳಿಸಿದರು.

ಸಂಸತ್ತು ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಸಮಾನ ಪ್ರತಿನಿಧಿತ್ವ ಸಿಗಬೇಕಾದರೆ ಮೀಸಲಾತಿ ಅನಿವಾರ್ಯ. ಮಹಿಳಾ ಹಕ್ಕುಗಳ ವಿಚಾರದಲ್ಲಿ ರಾಜಕೀಯ ಪಕ್ಷಗಳು ದ್ವಂದ್ವ ನಿಲುವು ತಾಳದೆ ಸ್ಪಷ್ಟ ನಿಲುವು ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸುವುದು ದೇಶದ ಪ್ರಗತಿಗೆ ಸಹಾಯಕವಾಗುತ್ತದೆ. ಆದ್ದರಿಂದ ಮಸೂದೆ ಜಾರಿಗೆ ಯಾವುದೇ ರೀತಿಯ ವಿಳಂಬ ಅನುಮತಿಸಬಾರದು ಎಂದು ಹೇಳಿದರು.

ರಾಜ್ಯ ಕಾರ್ಯದರ್ಶಿ ಕು.ಲಲಿತಾ ಅನಪುರ, ಹಿರಿಯರಾದ ನಾಗರತ್ನ ಕುಪ್ಪಿ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಸುನಿತಾ ಚೌಹಾಣ್, ಜಿಲ್ಲಾ ಉಪಾಧ್ಯಕ್ಷೆ ಪ್ರಭಾವತಿ ಕಲಾಲ್, ಜಿಲ್ಲಾ ಕಾರ್ಯದರ್ಶಿ ವಿಜಯಲಕ್ಷ್ಮಿ ನಾಯಕ, ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಮಾದೇವಿ ಕಾವಲಿ ಮತ್ತು ಮಲ್ಲಮ್ಮ ಹೊಸಪೇಟೆ,ಸ್ನೇಹ ರಸಳಕರ, ಶಕುಂತಲಾ ಜಿ., ನಗರ ಮಂಡಲ ಅಧ್ಯಕ್ಷೆ ಭೀಮಬಾಯಿ ಶೆಂಡಿಗಿ, ಗ್ರಾಮೀಣ ಮಂಡಲ ಅಧ್ಯಕ್ಷೆ ಕರೆಮ್ಮ ವರ್ಕನಳ್ಳಿ, ಬಾಲಮ್ಮ, ಮಮತಾ ಜಾಧವ, ಮಹಾದೇವಮ್ಮ ಕೋಳ್ಳೂರ, ಅಂಜಲಿ ರಾಠೋಡ, ಜ್ಯೋತಿ, ಮರೆಮ್ಮ, ಶಿವಗಂಗಮ್ಮ, ಶರಣಮ್ಮ, ರೇಣುಕಾ, ಶರಣಮ್ಮ ಮೆಳಕೇರಿ, ಶಾಂತಮ್ಮ, ಸಿದ್ದಮ್ಮ ಸೇರಿದಂತೆ ಅನೇಕ ಮಹಿಳಾ ಮೋರ್ಚಾ ಪದಾಧಿಕಾರಿಗಳ ಉಪಸ್ಥಿತರಿದ್ದರು.

ಮಹಿಳೆಯರಿಗೆ ಮೀಸಲಾತಿ ಕಲ್ಪಿಸಿ

ಬಳ್ಳಾರಿ: ನಾರೀಶಕ್ತಿ ವಂದನ್ ಅಧಿನಿಯಮ (ಮಹಿಳಾ ಮೀಸಲಾತಿ ಮಸೂದೆ) ಜಾರಿಗೆ ಅಡ್ಡಿಪಡಿಸಿದ ಮಹಿಳಾ ವಿರೋಧಿ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳ ವಿರುದ್ಧ ಇಲ್ಲಿನ ನಾರೀಶಕ್ತಿ ಫೋರಂ ಬಳ್ಳಾರಿ ವತಿಯಿಂದ ಶನಿವಾರ ಸಂಜೆ ನಗರದಲ್ಲಿ ಬೃಹತ್ ಜನಾಕ್ರೋಶ ಯಾತ್ರೆಯನ್ನು ಹಮ್ಮಿಕೊಳ್ಳಲಾಗಿತ್ತು. ನಗರದ ದುರ್ಗಮ್ಮ ದೇವಸ್ಥಾನದಿಂದ ರಾಯಲ್ ವೃತ್ತದವರೆಗೆ ನಡೆದ ಜನಾಕ್ರೋಶ ಜಾಥಾದಲ್ಲಿ ನೂರಾರು ಮಹಿಳೆಯರು ಭಾಗವಹಿಸಿ ಕಾಂಗ್ರೆಸ್ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪಕ್ಷದ ಡಾ.ಅರುಣಾ ಕಾಮಿನೇನಿ ಅವರು ಮಾತನಾಡಿ, ಮಹಿಳೆಯರಿಗೆ ಮೀಸಲಾತಿ ಕಲ್ಪಿಸಬೇಕು. ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಮುಂದೆಬರಬೇಕು. ರಾಜಕೀಯದಲ್ಲೂ ಮೀಸಲಾತಿ ಕಲ್ಪಿಸುವ ಮೂಲಕ ಮಹಿಳೆಯರನ್ನು ಉತ್ತೇಜಿಸಲು ಕೇಂದ್ರ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ನಾರೀಶಕ್ತಿ ವಂದನ್ ಅಧಿನಿಯಮ (ಮಹಿಳಾ ಮೀಸಲಾತಿ ಮಸೂದೆ) ವನ್ನು ಜಾರಿಗೊಳಿಸಲು ಮುಂದಾದರೆ, ಮಹಿಳಾ ವಿರೋಧಿ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳು ಅಡ್ಡಿಪಡಿಸುವ ಮೂಲಕ ಮಹಿಳೆಯರಿಗೆ ಅಪಮಾನ ಮಾಡಿವೆ. ಇದು ಅತ್ಯಂತ ಖಂಡನೀಯ. ಕಾಂಗ್ರೆಸ್ ಮಹಿಳಾ ವಿರೋಧಿ ಎನ್ನುವುದು ಮತ್ತೊಮ್ಮೆ ಸಾಬೀತುಪಡಿಸುವ ಮೂಲಕ ತನ್ನ ಕರಾಳ ಮುಖವನ್ನು ಪ್ರದರ್ಶಿಸಿದೆ. ಬರುವ ದಿನಗಳಲ್ಲಿ ಮಹಿಳಾ ವಿರೋಧಿ ಕಾಂಗ್ರೆಸ್ ದೇಶದ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಹಂಪಿ ರಮಣ, ಮಹಾನಗರ ಪಾಲಿಕೆ ಸದಸ್ಯರಾದ ಸುರೇಖಾ ಮಲ್ಲನಗೌಡ, ಚೇತನಾ ವೇಮಣ್ಣ ಸೇರಿದಂತೆ ನ್ಯಾಯವಾದಿ, ರಾಜ್ಯ ಉಪಾಧ್ಯಕ್ಷೆ ವಿಜಯಲಕ್ಷ್ಮೀ, ಸಹನಾ ಹಿರೇಮಠ, ಡಾ.ರೇಣುಕಾ, ಗಾಯತ್ರಿ ರೆಡ್ಡಿ, ಪುಷ್ಪಲತಾ, ಚಾಂದನಿ, ನೂರಾರು ಮಹಿಳೆಯರು, ಪಕ್ಷದ ಅನೇಕ ಮುಖಂಡರು, ಪದಾಧಿಕಾರಿಗಳು ಇತರರು ಇದ್ದರು.



ಬೆಳೆವಿಮೆ ತಿರಸ್ಕೃತ ಪಟ್ಟಿ ಪ್ರಕಟ

ವಿಜಯನಗರ: 2024-25ನೇ ಸಾಲಿನಲ್ಲಿ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ಮುಂಗಾರು ಹಂಗಾಮಿನ ಬೆಳೆ ವಿಮೆಗೆ ನೊಂದಣೆಯಾದ ಪ್ರಸ್ತಾವನೆಗಳಲ್ಲಿ 17 ಕೃಷಿ ಬೆಳೆ ಪ್ರಸ್ತಾವನೆಗಳು ಸಮೀಕ್ಷೆಯೊಂದಿಗೆ ಹೊಂದಾಣಿಕೆಯಾಗದ ಕಾರಣ ವಿಮಾ ಕಂಪನಿಯವರು ತಿರಸ್ಕೃತಗೊಳಿಸಲಾಗಿದೆ.

ತಿರಸ್ಕೃತಗೊಂಡ ಪ್ರಸ್ತಾವನೆಗಳ ರೈತರ ಪಟ್ಟಿಯನ್ನು ಹೊಸಪೇಟೆ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರ ಕಚೇರಿ, ರೈತ ಸಂಪರ್ಕ ಕೇಂದ್ರ, ಕಮಲಾಪುರ ಹಾಗೂ ಮರಿಯಮ್ಮನಹಳ್ಳಿ ಮತ್ತು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಪ್ರಕಟಿಸಲಾಗಿದೆ.

ಮೇ 10ರೊಳಗಾಗಿ ಮರು ಪರಿಶೀಲಿಸಲು ಅರ್ಜಿಯೊಂದಿಗೆ ಹಾಗೂ 2024-25 ರ ಪಹಣಿಯಲ್ಲಿ ವಿಮೆಗೆ ನೋಂದಾಯಿಸಿದ ಬೆಳೆ ನಮೂದಾಗಿರುವ ದಾಖಲೆ ಸೇರಿದಂತೆ ಇತರೆ ಮಾಹಿತಿಯನ್ನು ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರ ಕಚೇರಿಗೆ ಸಲ್ಲಿಸಬಹುದು ಎಂದು ಹೊಸಪೇಟೆ ಕೃಷಿ ನಿರ್ದೇಶಕ ಎಸ್.ಮನೋಹರಗೌಡ ತಿಳಿಸಿದ್ದಾರೆ.

ಬಡ ರೈತನ ಮಗಳು ಶಾಲೆಗೆ ಪ್ರಥಮ

ಹೂವಿನಹಡಗಲಿ: ತಾಲೂಕಿನ ನಡುವಿನಹಳ್ಳಿ ಗ್ರಾಮದ ಬಡ ರೈತನ ಮಗಳು ಎಸ್ಸೆಸ್ಸೆಲ್ಸಿಯಲ್ಲಿ ಶೇ.97.12 ರಷ್ಟು ಅಂಕ ಗಳಿಸುವ ಮೂಲಕ ತನ್ನ ಭವಿಷ್ಯವನ್ನು ಹಸಿರಾಗಿಸಿಕೊಂಡಿದ್ದಾಳೆ.



ನಡುವಿನಹಳ್ಳಿ ಗ್ರಾಮದ ಬಡರೈತ ಮಹೇಶಪ್ಪ ಪರಸಪ್ಪನವರ ಎಂಬವರ ಮಗಳು ಕು. ವಿಜಯಲಕ್ಷ್ಮಿ ಪರಸಪ್ಪನವರ ಒಟ್ಟು 607 ಅಂಕ ಪಡೆಯುವ ಮೂಲಕ ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡು ಸಾಧನೆ ಮೆರೆದಿದ್ದಾಳೆ.

ಕಡು ಬಡತನದ ಮಧ್ಯೆಯೇ ಸ್ವಗ್ರಾಮದಲ್ಲಿ 1ರಿಂದ 7ನೇ ತರಗತಿಯವರೆಗೆ ಸರ್ಕಾರಿ ಶಾಲೆಯಲ್ಲಿ ಶಿಕ್ಷಣ ಪಡೆದ ವಿಜಯಲಕ್ಷ್ಮಿ ಪ್ರೌಢ ಶಿಕ್ಷಣಕ್ಕಾಗಿ ಸಮೀಪದ ಬೂದನೂರು ಸರ್ಕಾರಿ ಪ್ರೌಢಶಾಲೆಗೆ ನಿತ್ಯ ಸ್ವಗ್ರಾಮದಿಂದ 3 ಕಿಮೀ. ಸೈಕಲ್ ಸವಾರಿ ಮಾಡಿಕೊಂಡು ಬರುತ್ತಿದ್ದಳು.

ನಾಲ್ಕು ಜನ ಹೆಣ್ಣು ಮಕ್ಕಳಲ್ಲಿ ಮೂವರು ಟಾಪರ್: ನಾಲ್ಕು ಜನ ಹೆಣ್ಣುಮಕ್ಕಳನ್ನು ಹೆತ್ತ ದಂಪತಿಗಳು ಕೃಷಿ ಕೆಲಸದಿಂದಲೇ ಮಕ್ಕಳ ಶಿಕ್ಷಣಕ್ಕೆ ಸಹಕಾರಿಯಾಗಿದ್ದಾರೆ. ಮೂವರು ಪುತ್ರಿಯರು ಕೂಡಾ ಸಮೀಪದ ಬೂದನೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿಯೇ ಅಭ್ಯಾಸ ಮಾಡಿದ್ದರು. ಅದರಲ್ಲಿ ಇಬ್ಬರು ಪುತ್ರಿಯರು ಕೂಡಾ ಶೇ.95 ಪ್ಲಸ್ ಅಂಕಗಳಿಸುವ ಮೂಲಕ ಸಾಧನೆ ಮಾಡಿದ್ದರು.

ದ್ವಿತೀಯ ಸ್ಥಾನ ವರ್ಷಿಣಿ ಮೂಡ್ಲಣ್ಣನವರ 579. ತೃತೀಯ ಸ್ಥಾನ ಶಾರದಾ ವಡಿಗೇರಿ 572 ತೆಗೆದುಕೊಂಡಿದ್ದಾರೆ.

ವಿಶೇಷ ಮಾಹಿತಿ: ಪರೀಕ್ಷೆಗೆ ಕುಳಿತ 77 ವಿದ್ಯಾರ್ಥಿಗಳಲ್ಲಿ 76 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಶಾಲೆಯ ಫಲಿತಾಂಶ ಶೇಕಡಾ 98.70. 07 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, ಪ್ರಥಮ ದರ್ಜೆ 44, ದ್ವಿತೀಯ ದರ್ಜೆ 25 ವಿದ್ಯಾರ್ಥಿಗಳು ಎಂದು ಮುಖ್ಯ ಶಿಕ್ಷಕಿ ಎಸ್‌ಎಂ ಸರ್ವಮಂಗಳ ತಿಳಿಸಿದ್ದಾರೆ.

ನಿವೃತ್ತ ಉಪರಾಚಾರ್ಯ ಪಿ.ಪ್ರಕಾಶ್, ಶಾಲಾ ಶಿಕ್ಷಕರು, ಸಿಬ್ಬಂದಿ, ಹಾಗೂ ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.

ವಿದ್ಯಾರ್ಥಿನಿ ಉನ್ನತ ಹುದ್ದೆಯ ಕನಸು

ಸಾಧನೆಗೆ ಅಸಾಧ್ಯವಾದುದು ಯಾವುದು ಇಲ್ಲಾ, ಆದರೆ ಸಾಧನೆ ಮಾಡಿಯೇ ತಿರುತ್ತೇನೆ ಎಂಬ ಆತ್ಮವಿಶ್ವಾಸ ನಮ್ಮಲ್ಲಿ ಬಲವಾಗಿರಬೇಕು. ಶಾಲಾ ಪ್ರಾರಂಭದಿಂದ ಪ್ರತಿದಿನ ರಾತ್ರಿ 9ರಿಂದ 11 ಗಂಟೆಯವರೆಗೆ ಅಭ್ಯಾಸ ಮಾಡುತ್ತಿದ್ದ ನಾನು, ನಂತರ ಎರಡನೇ ಹಂತದ ಶಾಲಾ ಪ್ರಾರಂಭದಿಂದ ದಿನಕ್ಕೆ ಮೂರು ಗಂಟೆಗಳು ಅಭ್ಯಾಸ ಮಾಡವ ಮನೋಭಾವ ಬೆಳೆಸಿಕೊಂಡೆ. ಮನೆಯಲ್ಲಿ ಪೋಷಕರ ಸಹಕಾರ ಸಾಧನೆ ಮಾಡಲು ಸಾಧ್ಯವಾಯಿತು. ಮುಂದೆ ವೈದ್ಯಳಾಗಿ ಸಮಾಜದಲ್ಲಿ ನೊಂದ ಬಡ ರೋಗಿಗಳ ಸೇವೆ ಮಾಡಬೇಕೆಂಬ ಮಹಾದಾಸೆಯನ್ನು ಹೊಂದಿದ್ದೇನೆ ಎಂದು ವಿಜಯಲಕ್ಷ್ಮಿ ತಿಳಿಸಿದ್ದಾರೆ.

ಚೌಡೇಶ್ವರಿ ದೇವಸ್ಥಾನ ಜೀರ್ಣೋದ್ಧಾರಕ್ಕೆ 2 ಲಕ್ಷ ರೂ. ನೆರವು

ಬಳ್ಳಾರಿ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಬಿಸಿ ಟ್ರಸ್ಟ್) ವತಿಯಿಂದ ಸಮೀಪದ ಪರಮದೇವನಹಳ್ಳಿ ವಲಯದ ಚಾಗನೂರು ಕಾರ್ಯಕ್ಷೇತ್ರದಲ್ಲಿರುವ ಶ್ರೀಚೌಡೇಶ್ವರಿ ದೇವಸ್ಥಾನದ ನಿರ್ಮಾಣ ಹಾಗೂ ಜೀರ್ಣೋದ್ಧಾರಕ್ಕಾಗಿ 2 ಲಕ್ಷ ರೂ. ಅನುದಾನವನ್ನು ದೇವಸ್ಥಾನ ಸಮಿತಿಗೆ ವಿತರಿಸಲಾಯಿತು.

ಈ ಅನುದಾನದ ಡಿಮ್ಯಾಂಡ್ ಡ್ರಾಫ್ಟ್‌ನ್ನು ಬಳ್ಳಾರಿ ಜಿಲ್ಲಾ ಯೋಜನೆಯ ಜಿಲ್ಲಾ ನಿರ್ದೇಶಕ ರೋಹಿತಾಕ್ಷ ಅವರು ದೇವಸ್ಥಾನ ಸಮಿತಿಗೆ ಹಸ್ತಾಂತರಿಸಿದರು.

ಈ ವೇಳೆ ಮಾತನಾಡಿದ ಅವರು, ಯೋಜನೆಯ ವಿವಿಧ ಕಾರ್ಯಕ್ರಮಗಳು ಹಾಗೂ ದೇವಸ್ಥಾನದ ಧಾರ್ಮಿಕ ಆಚರಣೆಗಳ ಮಹತ್ವದ ಕುರಿತು ಗ್ರಾಮಸ್ಥರಿಗೆ ವಿವರಿಸಿ, ಮಕ್ಕಳಲ್ಲಿ ಧಾರ್ಮಿಕ ಮೌಲ್ಯಗಳನ್ನು ಬೆಳೆಸುವ ಆಗತ್ಯವಿದೆ ಎಂದರು. ಬಳ್ಳಾರಿ ತಾಲೂಕಿನ ಯೋಜನಾಧಿಕಾರಿ ಬಸವರಾಜ ಅವರು ಯೋಜನೆಯ ವಿವಿಧ ಯೋಜನೆಗಳ ಕುರಿತು ಮಾಹಿತಿ ನೀಡಿದರು. ಜನಮಂಗಳ ಕಾರ್ಯಕ್ರಮ ಹಾಗೂ ಪ್ರಗತಿ ನಿಧಿ ಯೋಜನೆಯಡಿ ಸದಸ್ಯರಿಗೆ ಕಡಿಮ ಬಡ್ಡಿದರದಲ್ಲಿ ಸಾಲ ಸೌಲಭ್ಯ ದೊರೆಯುವ ಕುರಿತು ಗ್ರಾಮಸ್ಥರಿಗೆ ಮಾರ್ಗದರ್ಶನ ನೀಡಿದರು.



ಒಕ್ಕೂಟ ಅಧ್ಯಕ್ಷರು, ಸೇವಾ ಪ್ರತಿನಿಧಿಗಳು, ಗ್ರಾಮಸ್ಥರು, ವಲಯ ಮೇಲ್ವಿಚಾರಕರು ಹಾಗೂ ದೇವಸ್ಥಾನ ಸಮಿತಿಯ ಅಧ್ಯಕ್ಷ ರಾಮುಡು, ಕಾರ್ಯದರ್ಶಿ ದಿವಾಕರ್, ಖಜಾಂಚಿ ಬಿ ಎರ್ರಿಸ್ವಾಮಿ, ಸದಸ್ಯರಾದ ಪಳ್ಳ ಪಲ್ಲ ಶ್ರೀನಿವಾಸಲು, ವಿರುಪಾಕ್ಷಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಅಲ್ಮಾಸ್ ಭಾನು ರಾಜ್ಯಕ್ಕೆ 7ನೇ ರ‍್ಯಾಂಕ್

ಕೊಟ್ಟೂರು: ಪಟ್ಟಣದ ಶ್ರೀಮಹಾದೇವ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದೆ.





ಶಾಲೆಯ ವಿದ್ಯಾರ್ಥಿನಿ ಅಲ್ಮಾಸ್ ಭಾನು 619 ಅಂಕ ಪಡೆದು ರಾಜ್ಯಕ್ಕೆ 7ನೇ ರ‍್ಯಾಂಕ್ ಹೊಂದಿದ್ದಾಳೆ. ಹಾಗೆ ಕುಮಾರಿ ಛಾಯಾದೇವಿ ಎಂಬ ವಿದ್ಯಾರ್ಥಿನಿ 608 ಅಂಕಗಳನ್ನು ಪಡೆದು ಶಾಲೆಗೆ ದ್ವಿತೀಯ ಸ್ಥಾನವನ್ನು ಪಡೆದಿದ್ದಾಳೆ.

ಶಾಲೆಯ 67 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇದರಲ್ಲಿ 22 ವಿದ್ಯಾರ್ಥಿಗಳು ಎ ಪ್ಲಸ್ ಶ್ರೇಣಿಯಲ್ಲಿ, 21 ವಿದ್ಯಾರ್ಥಿಗಳು ಎ ಶ್ರೇಣಿಯಲ್ಲಿ,19 ವಿದ್ಯಾರ್ಥಿಗಳು ಬಿ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಆಡಳಿತ ಮಂಡಳಿಯವರು ತಿಳಿಸಿದ್ದಾರೆ.

ಉತ್ತಮ ಅಂಕಗಳನ್ನು ಗಳಿಸಿ ಶಾಲೆಗೆ ಕೀರ್ತಿ ತಂದ ಎಲ್ಲ ವಿದ್ಯಾರ್ಥಿಗಳಿಗೂ ಶಾಲಾ ಆಡಳಿತ ಅಧಿಕಾರಿಗಳಾದ ಬಿ.ಪಂಪಾಪತಿ, ಕಾರ್ಯದರ್ಶಿ ಸರೋಜಾ ಪಂಪಾಪತಿ, ಶಿಕ್ಷಕ ವೃಂದದವರು ವಿದ್ಯಾರ್ಥಿಗಳಿಗೆ ಅಭಿನಂದನೆ ತಿಳಿಸಿದ್ದಾರೆ.

ಏ.27, 28ರಂದು ನೀರು ವ್ಯತ್ಯಯ

ವಿಜಯನಗರ: ಹೊಸಪೇಟೆ ನಗರದ 2ನೇ ಹಂತದ ಜಲಶುದ್ಧೀಕರಣ ಘಟಕದಲ್ಲಿ ಪಂಪ್ ಹಾಗೂ ಮೋಟಾರ್ ದುರಸ್ತಿ ಕಾರ್ಯ ನಡೆಯುತ್ತಿದ್ದು, ಏ.27 ಮತ್ತು 28ರಂದು ಎರಡು ದಿನಗಳ ಕಾಲ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಹೊಸಪೇಟೆಯ 7,8,9,13,,14 ಹಾಗೂ 18 ರಿಂದ 35 ನೇ ವಾರ್ಡ್ ಗಳಲ್ಲಿ ನೀರು ಸರಬರಾಜು ವ್ಯತ್ಯಯ ಉಂಟಾಗಲಿದ್ದು ಸಾರ್ವಜನಿಕರು ಸಹಕರಿಸಬೇಕೆಂದು ಪೌರಾಯುಕ್ತ ಶಿವಕುಮಾರ್ ತಿಳಿಸಿದ್ದಾರೆ.

ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

ವಿಜಯನಗರ: ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮುತ್ತೂರು ಗ್ರಾಪಂ ಕೇಂದ್ರ ಸ್ಥಾನವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ ಪ್ರಕಾರ ಮುತ್ತೂರು ಗ್ರಾಮದಿಂದ ರಾಮೇಶ್ವರಬಂಡಿ ಗ್ರಾಮದ ತೆಲಗೋಳಿ ಕ್ರಾಸ್ ಗೆ ಬದಲಾವಣೆ ಹಾಗೂ ಮುತ್ತೂರು ಗ್ರಾಮ ಪಂಚಾಯಿತಿ ಹೆಸರನ್ನು ಮುತ್ತೂರು-ಕಿತ್ತೂರು ಗ್ರಾಪಂ ಎಂದು ಬದಲಾವಣೆ ಮಾಡಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಜೂನ್ 1ರ ಒಳಗಾಗಿ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಲಿಖಿತ ರೂಪದಲ್ಲಿ ಕಾರಣ ಸಹಿತ ದಾಖಲೆಗಳೊಂದಿಗೆ ಸಲ್ಲಿಸಬಹುದು. ಅಂತಿಮ ದಿನಾಂಕದ ನಂತರ ಸಲ್ಲಿಸಲಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಜಿಲ್ಲಾಧಿಕಾರಿ ಎಸ್ ಮನ್ನಿಕೇರಿ ತಿಳಿಸಿದ್ದಾರೆ.

ನೀರು ಪೂರೈಕೆ ವ್ಯತ್ಯಯ ಆಗದಂತೆ ನಿಗಾವಹಿಸಿ



ಕುರುಗೋಡು: ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವ ನಿಯಂತ್ರಿಸಲು ಜಿಲ್ಲಾಡಳಿತ ಕಾರ್ಯಪ್ರವೃತವಾಗಿದ್ದು, ತಾಲೂಕಿನ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯ ಆಗದಂತೆ ನಿಗಾವಹಿಸಬೇಕು ಎಂದು ತಹಶೀಲ್ದಾರ್ ನರಸಪ್ಪ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಟಾಸ್ಕ್ ಫೋರ್ಸ್ ಸಭೆಯಲ್ಲಿ ಕುಡಿಯುವ ನೀರು ಹಾಗೂ ಇತರ ಯೋಜನೆಗಳ ಪ್ರಗತಿ ಪರಿಶೀಲನಾ ಸಾಮಾನ್ಯ ಸಭೆ ಉದ್ದೇಶಿಸಿ ಅವರು ಮಾತನಾಡಿದರು.

'ತಾಲೂಕಿನಾದ್ಯಂತ ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಆದರೆ ತಕ್ಷಣ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಇತರ ಇಲಾಖೆ ಅಧಿಕಾರಿಗಳು ಸ್ಪಂದಿಸಿ. ಹಾಗೆಯೆ ಗ್ರಾಮಗಳಲ್ಲಿ ಇರುವ ಬೋರವೇಲ್ ಗಳು ಹಾಗೂ ಶುದ್ಧ ಕುಡಿಯುವ ನೀರಿನ ಘಟಕಗಳು ಕೆಟ್ಟು ನಿಂತಿದ್ದರೆ ಕೂಡಲೇ ಅವುಗಳನ್ನು ದುರಸ್ತಿಗೊಳಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಅದರ ಜತೆಗೆ ಮನೆಗಳಿಗೆ ಸರಬರಾಜು ಮಾಡುವ ಕುಡಿಯುವ ನೀರಿನ ಸ್ಯಾಂಪಲ್ ಗಳನ್ನು ಪರೀಕ್ಷಿಸಲು ಕ್ರಮಗಳನ್ನು ಕೈಗೊಳ್ಳಬೇಕು.

ಕಾಲುವೆಗಳಿಗೆ ನೀರು ಸ್ಥಗಿತವಾಗುವ ಮುನ್ನ ಕೆರೆಗಳನ್ನು ತುಂಬಿಸಿ ಸಮರ್ಪಕವಾಗಿ ನೀರು ಒದಗಿಸಬೇಕು ಎಂದು ತಿಳಿಸಿದರು.ಈ ವೇಳೆ ತಾಪಂ ಅಧಿಕಾರಿ ನಿರ್ಮಲ ಉಪತಹಶೀಲ್ದಾರ್ ವಿಜಯಕುಮಾರ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಸಿಬ್ಬಂದಿ ಇತರರು ಇದ್ದರು.

ಮಹಿಳಾ ಸಬಲೀಕರಣ ಅನುಪಮ ಜನಸೇವಾ ಟ್ರಸ್ಟ್‌ನ ಗುರಿ

ಹಗರಿಬೊಮ್ಮನಹಳ್ಳಿ: ಮಹಿಳಾ ಸಬಲೀಕರಣ ಹಾಗೂ ಬಡ ಜನರ ಸೇವೆ ಮಾಡುವ ಉದ್ದೇಶದಿಂದ ಅನುಪಮಾ ಜನಸೇವಾ ಟ್ರಸ್ಟ್ ಮಾಡಲಾಗಿದೆ ಎಂದು ಅನುಪಮಾ ಜನ ಸೇವಾ ಟ್ರಸ್ಟ್ ನ ಅಧ್ಯಕ್ಷ ಪವಾಡಿ ಸಣ್ಣ ಹನುಮಂತಪ್ಪ ತಿಳಿಸಿದರು.

ಗುರುವಾರ ನಡೆದ ಅನುಪಮಾ ಜನ ಸೇವಾ ಟ್ರಸ್ಟ್‌ನ ಪ್ರಥಮ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.ಜ.19ರಂದು ಟ್ರಸ್ಟ್ ನೋಂದಣಿ ಕಾರ್ಯ ಮುಗಿದಿದ್ದು ಟ್ರಸ್ಟ್ 11 ಜನ ಸದಸ್ಯರನ್ನು ಹೊಂದಿದೆ. ಬಡ ಜನರ ಸೇವೆ ಮಹಿಳಾ ಸಬಲೀಕರಣ ಸ್ವಯಂ ಉದ್ಯೋಗ ಕಲ್ಪಿಸುವುದರ ಜೊತೆಗೆ ಸ್ವಾವಲಂಬಿ ಬದುಕಿಗೆ ನೆರವು ನೀಡುವ ಉದ್ದೇಶ ಹೊಂದಿರುವುದಾಗಿ ತಿಳಿಸಿದರು.ಟ್ರಸ್ಟ್‌ನ ಉಪಾಧ್ಯಕ್ಷ ಯು ಸಿದ್ದೇಶ್, ಪ್ರಧಾನ ಕಾರ್ಯದರ್ಶಿ ಯು.ಕುಮಾರ್, ಸಹ ಕಾರ್ಯದರ್ಶಿಗಳಾದ ಜಿ.ದೊಡ್ಡ ಮಂಜಮ್ಮ, ಪಿ.ರಾಜಭಕ್ಷಿ, ಖಜಾಂಚಿ ಪಿ.ರಮೇಶ್ ಕಾರ್ಯಕಾರಿ ಸಮಿತಿ ಸದಸ್ಯರಾದ ಟಿ.ರಾಮಚಂದ್ರಪ್ಪ, ಎನ್. ಸೌಭಾಗ್ಯ, ಕೆ.ಸಾವಿತ್ರಮ್ಮ, ಪಿ.ಮಾಹಿಬೀ, ಕರುಣ್, ಇದ್ದರು.



ಕಾಂಗ್ರೆಸ್ ಮಹಿಳಾ ಮೀಸಲು ವಿರೋಧಿಯಲ್ಲ: ಕಮಲಾಕ್ಷಿ



ವಿಜಯನಗರ: ಕಾಂಗ್ರೆಸ್ ಮಹಿಳಾ ಮೀಸಲು ವಿರೋಧಿಯಲ್ಲ, ಈಗಲೂ ಕೇಂದ್ರ ಸರ್ಕಾರ ವಿಶೇಷ ಅಧಿವೇಶನ ಕರೆದು, ಹಾಲಿ 543 ಸ್ಥಾನಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡುವ ಸರಳ ತಿದ್ದುಪಡಿ ತರಲಿ, ಅದನ್ನು ಕಾಂಗ್ರೆಸ್ ಕೂಡ ಬೆಂಬಲಿಸಲಿದೆ ಎಂದು ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಕಮಲಾಕ್ಷಿ ರಾಜಣ್ಣ ಹೇಳಿದರು.

ಹೊಸಪೇಟೆಯ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ವಿಶೇಷವಾಗಿ ದಲಿತರು, ಹಿಂದುಳಿದ ವರ್ಗದವರು, ಅಲ್ಪ ಸಂಖ್ಯಾರು, ಮಹಿಳೆಯರಿಗೆ, ಶೋಷಿಸಿತವರಿಗೆ ಧಮನಿತರಿಗೆ ಸೈದ್ಧಾಂತಿಕವಾಗಿ ಹುಟ್ಟಿದ ಪಕ್ಷವಾಗಿದೆ.ಮಹಿಳಾ ಮಸೂದೆಯು ಸೋತ ನಂತರ ಪ್ರಧಾನಿ ಮೋದಿ ಸರಕಾರಿ ಯಂತ್ರಗಳನ್ನು ದುರುಪಯೋಗಪಡಿಸಿಕೊಂಡು, ವಿರೋಧ ಪಕ್ಷಗಳನ್ನು ಮಹಿಳಾ ವಿರೋಧಿ ಎಂದು ಸುಳ್ಳುಗಳಿಂದ ಕೂಡಿದ ಚುನಾವಣಾ ದ್ವೇಷ ಭಾಷಣ ಮಾಡಿದ್ದಾರೆ. ಸೋಲುವ ಮಸೂದೆಯನ್ನು ಮಂಡಿಸಿದ್ದು, ಚುನಾವಣಾ ಸಂದರ್ಭದಲ್ಲಿ ಈ ರೀತಿ ವಿರೋಧ ಪಕ್ಷಗಳಿಗೆ ಮಹಿಳಾ ವಿರೋಧಿ ಪಟ್ಟವನ್ನು ಕಟ್ಟಿ ಮಹಿಳಾ ಓಟುಗಳನ್ನು ಪಡೆಯಬಹುದು ಎಂಬ ತಂತ್ರಗಾರಿಕೆಯಲ್ಲಿ ಮೋದಿವರು ಇದ್ದಾರೆ. ಇದು ಎಂದಿಗೂ ಫಲಿಸುವುದಿಲ್ಲ ಎಂದರು.

ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಕಾರ್ಯದರ್ಶಿ ಕವಿತಾ ಈಶ್ವರ್ ಸಿಂಗ್ ಮಾತನಾಡಿ, ಕೇಂದ್ರ ಸರ್ಕಾರ ಕ್ಷೇತ್ರ ಪುನರ್ ವಿಂಗಡಣೆಯನ್ನು ಕೈಬಿಟ್ಟು ಮಹಿಳಾ ಮೀಸಲಾತಿಯನ್ನು ಮಾತ್ರ ಜಾರಿ ಮಾಡಲು ಮುಂದಾಗಲಿ, ಒಂದೊಮ್ಮೆ ಪ್ರಧಾನಿ ನರೇಂದ್ರ ಮೋದಿಯವರು ಮಹಿಳಾ ಮೀಸಲಾತಿ ಬಿಲ್‌ಪಾಸ್ ಮಾಡುವ ಮೂಲಕ ಮಹಿಳರ ಬಗ್ಗೆ ತಮ್ಮಗಿರುವ ಕಾಳಜಿಯನ್ನು ಪ್ರದರ್ಶಿಸಲಿ, ಒಂದೊಮ್ಮೆ ವಿಫಲವಾದಲ್ಲಿ ಮುಂದಿನ 2028ರ ಚುನಾವಣೆಯಲ್ಲಿ ನಾರಿಶಕ್ತಿ ಬಿಜೆಪಿಗೆ ತಕ್ಕ ಪಾಠ ಕಲಿಸಲಿದೆ ಎಂದು ಎಚ್ಚರಿಸಿದರು.

ಕಾಂಗ್ರೆಸ್ ನಾಯಕಿ ಎಂ.ಪಿ.ವೀಣಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್. ರಾಮಕೃಷ್ಣ, ನಗರಸಭೆ ಸದಸ್ಯರಾದ ಮುನ್ನಿಕಾಸಿಂ, ಕನಕಮ್ಮ, ಸ್ಥಳೀಯ ಪ್ರಮುಖರಾದ ಮುಮತ್ತಾಜ್, ಲಕ್ಷ್ಮೀ, ಇಂದುಮತಿ ಇತರರಿದ್ದರು.